ಮಂಗಳೂರು

ಬುಧವಾರ, 10 ಜೂನ್ 2026

ಸಂಪುಟ 48, ಸಂಚಿಕೆ 83 ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com

epaper.hosadigantha.com

Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಫಿಫಾ ವಿಶ್ವಕಪ್‌ಗೆ ಅಂಕಣ ಸಿದ್ಧ

ನಕಲಿ ಸಹಿ: ಮಮತಾ ನಿವಾಸದಲ್ಲಿ ಸಿಐಡಿ ಶೋಧ |೦೭ | ಕುವೈತ್ ದೊರೆಗೆ ಬೆಂಬಲ ಸೂಚಿಸಿದ ಮೋದಿ |೦೭ | ಇನ್ನು ಫುಟ್‌ಬಾಲ್ ಕಿಕ್ |೧೧

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಉತ್ತರಭಾದ್ರ

ದಿನದ ಮಾತು

ಕೆಲವೊಮ್ಮೆ ಬುದ್ಧಿ ಗೆಲುವು ಸಾಧಿಸುತ್ತದೆ. ಕೆಲವು ಬಾರಿ ಗೆಲುವೇ ಬುದ್ಧಿಯಾಗಿ ಬಿಡುತ್ತದೆ.

▲ ಕಣ್ಣದಾಸನ್

ಶ್ರಾದ್ಧದ ಪ್ರಕಾರಗಳು ಮತ್ತು ಅವುಗಳ ಮಹತ್ವ

ಪದ ಸಂಚಲನ

• ಡಾ. ವಿಶ್ವನಾಥ ಸುಂಕಸಾಳ

• ಪುಟ ೬

ಕಿರುಸುದ್ದಿ

ಇಂದು ಎನ್‌ಡಿಎ ಮಹಾಸಭೆ

• **ಹೊಸದಿಲ್ಲಿ:** ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ 12 ವರ್ಷಗಳನ್ನು ಪೂರ್ಣಗೊಳಿಸಿರುವ ಹಿನ್ನೆಲೆ ಹಾಗೂ ದೇಶದ ಅತಿ ದೀರ್ಘಾವಧಿ ನಿರಂತರವಾಗಿ ಸೇವೆ ಸಲ್ಲಿಸಿದ ಚುನಾಯಿತ ಪ್ರಧಾನಿಯಾಗಿ ಮೋದಿ ಹೊಸ ದಾಖಲೆ ನಿರ್ಮಿಸುತ್ತಿರುವ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (ಎನ್‌ಡಿಎ) ಬುಧವಾರ ರಾಜಧಾನಿಯಲ್ಲಿ ಮಹತ್ವದ ಸಭೆ ನಡೆಸಲಿದೆ.

ಗ್ರಾಮೀಣಾಭಿವೃದ್ಧಿಗೆ 1.25 ಲಕ್ಷ ಕೋಟಿ ರೂ.

• ಪುಟ ೦೭

ಪಂಜಾಬ್: ಉಗ್ರ ಜಾಲದ ಸಹಚರರಿಬ್ಬರ ಬಂಧನ

• ಪುಟ ೦೭

ವಾಯುಪಡೆ, ಸಿಆರ್‌ಪಿಎಫ್ ನಿಯೋಜನೆ

• ಪುಟ ೦೭

13ರಿಂದ ಮೋದಿ ಫ್ರಾನ್ಸ್, ಸ್ಲೋವಾಕಿಯಾ ಪ್ರವಾಸ

• ಪುಟ ೦೭

ಹಾರಂಗಿ ಜಲಾಶಯ ಖಾಲಿ

• ಪುಟ ೫

ಬಿಟ್ ಕಾಯಿನ್: ನಲಪಾಡ್ ವಿರುದ್ಧ ಚಾರ್ಜ್‌ಶೀಟ್

• ಪುಟ ೫

ಜಿ ರಾಮ್ ಜಿ ವೇತನ ಹೆಚ್ಚಿಸಿ: ಈಶ್ವರ್ ಖಂಡ್ರೆ

• ಪುಟ ೫



ಸುವೇಂದು ಸರ್ಕಾರಕ್ಕೆ ಬಹುಪರಾಕ್

• ಪುಟ ೦೭

ಸುದ್ದಿ ಸಮಗ್ರ

12 ವರ್ಷದ ಸಾಧನೆ ಬಿಚ್ಚಿಟ್ಟ ಪ್ರಧಾನಿ ನರೇಂದ್ರ ಮೋದಿ

ಪರಿವರ್ತನೆಯ ದಶಕ

ಹೊಸದಿಲ್ಲಿ: ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ 12 ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಕಳೆದ ಒಂದು ದಶಕಕ್ಕೂ ಹೆಚ್ಚು ಅವಧಿಯಲ್ಲಿ ದೇಶದಲ್ಲಿ ಸಂಭವಿಸಿದ ಪರಿವರ್ತನೆಗಳ ಕುರಿತು ಪ್ರಧಾನಿ ಮೋದಿ ಅವರು ಪಟ್ಟಿ ಮಾಡಿದ್ದಾರೆ. ಬಡವರ ಕಲ್ಯಾಣ, ಮೂಲಸೌಕರ್ಯ ಅಭಿವೃದ್ಧಿ, ಡಿಜಿಟಲ್ ಕ್ರಾಂತಿ, ಆರೋಗ್ಯ ಸೇವೆಗಳ ವಿಸ್ತರಣೆ, ಮಹಿಳಾ ಸಬಲೀಕರಣ ಹಾಗೂ ಮಧ್ಯಮ ವರ್ಗಕ್ಕೆ ತೆರಿಗೆ ಸಡಿಲಿಕೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸರ್ಕಾರ ಐತಿಹಾಸಿಕ ಸಾಧನೆಗಳನ್ನು ದಾಖಲಿಸಿದೆ ಎಂದು ಅವರು ಹೇಳಿದರು. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಸರಣಿ ಸಂದೇಶಗಳನ್ನು ಪ್ರಧಾನಿ ಪ್ರಕಟಿಸಿದ್ದಾರೆ.

➡ಪುಟ ೪



ಅಭಿವೃದ್ಧಿ ವೇಗ ಮುಂದುವರಿಕೆ

ದೇಶವನ್ನು 2047ರ ವೇಳೆಗೆ ವಿಕಸಿತ ಭಾರತವನ್ನಾಗಿ ರೂಪಿಸುವ ಗುರಿಯೊಂದಿಗೆ ಸರ್ಕಾರ ಮುಂದಿನ ದಿನಗಳಲ್ಲಿಯೂ ಅಭಿವೃದ್ಧಿಯ ವೇಗ ಮುಂದುವರಿಸಲಿದೆ ಎಂದು ಪ್ರಧಾನಿ ಹೇಳಿದರು. ಜನರ ಆಶೋತ್ತರಗಳಿಗೆ ತಕ್ಕಂತೆ ಸುಧಾರಣೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಮುಂದುವರಿಯಲಿದ್ದು, ಭಾರತವನ್ನು ವಿಶ್ವದ ಮುಂಚೂಣಿ ರಾಷ್ಟ್ರಗಳ ಸಾಲಿನಲ್ಲಿ ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ಸಂಕಲ್ಪವಿದೆ ಎಂದು ಅವರು ತಿಳಿಸಿದ್ದಾರೆ.



ರಕ್ಷಣೆಯಲ್ಲಿ ಆತ್ಮನಿರ್ಭರ

ರಕ್ಷಣಾ ಕ್ಷೇತ್ರದಲ್ಲಿಯೂ ಭಾರತ ಆತ್ಮನಿರ್ಭರದತ್ತ ವೇಗವಾಗಿ ಸಾಗುತ್ತಿದೆ ಎಂದು ಪ್ರಧಾನಿ ಹೇಳಿದರು. ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತ ಅಭಿಯಾನಗಳ ಮೂಲಕ ದೇಶೀಯ ಉತ್ಪಾದನೆಗೆ ಉತ್ತೇಜನ ನೀಡಲಾಗಿದ್ದು, ರಕ್ಷಣಾ ಉತ್ಪನ್ನಗಳ ರಫ್ತು ದಾಖಲೆ ಮಟ್ಟಕ್ಕೆ ಏರಿಕೆಯಾಗಿದೆ ಎಂದರು.

• ವಿಶೇಷ ಪುಟ ೨

ಮೋದಿ ಸರ್ಕಾರದ ಸಾಧನೆಗಳ ದಾಖಲೆ



ಕಳೆದ 12 ವರ್ಷಗಳಲ್ಲಿ ದೇಶದ ಜನರ ಜೀವನಮಟ್ಟ ಸುಧಾರಿಸುವ, ಬಡವರನ್ನು ಸಬಲಗೊಳಿಸುವ ಮತ್ತು ಅಭಿವೃದ್ಧಿಯನ್ನು ವೇಗಗೊಳಿಸುವ ಅನೇಕ ಕ್ರಮಗಳನ್ನು ಕೈಗೊಂಡಿದ್ದೇವೆ. ವಿಕಸಿತ ಭಾರತದ ಕನಸನ್ನು ನನಸಾಗಿಸಲು ಇದೇ ಉತ್ಸಾಹದೊಂದಿಗೆ ಮುಂದುವರಿಯುತ್ತೇವೆ.

■ ನರೇಂದ್ರ ಮೋದಿ, ಪ್ರಧಾನಿ

ಭರಪೂರ ಮೂಲಸೌಕರ್ಯ

ಮೂಲಸೌಕರ್ಯ ಕ್ಷೇತ್ರದಲ್ಲಿ ಕಳೆದ 12 ವರ್ಷಗಳಲ್ಲಿ ಅಭೂತಪೂರ್ವ ಅಭಿವೃದ್ಧಿ ಕಂಡುಬಂದಿದೆ ಎಂದು ಪ್ರಧಾನಿ ಉಲ್ಲೇಖಿಸಿದರು.

➡ಪುಟ ೪

ಬಾಂಬ್ ಸ್ಕ್ವಾಡ್ ಪರಿಶೀಲನೆ | ತೀವ್ರ ತನಿಖೆ

ಬೆಂಗಳೂರಿನಲ್ಲಿ ಭಾರೀ ಸ್ಫೋಟಕ ಸಾಮಗ್ರಿ ಪತ್ತೆ

• **ಬೆಂಗಳೂರು:** ಪ್ರಧಾನಿ ಮೋಟಿ ಭೇಟಿ ವೇಳೆ ಪತ್ತೆಯಾದ ಜಿಲೆಟಿನ್ ಕಡ್ಡಿಗಳ ಪ್ರಕರಣ ತನಿಖೆಯಲ್ಲಿರುವಾಗಲೇ, ಬೆಂಗಳೂರು ನಗರ ಹೊರವಲಯದ ಅವಲಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದೊಡ್ಡ ಪ್ರಮಾಣದ ಜಿಲೆಟಿನ್ ಸ್ಫೋಟಕ ಕಡ್ಡಿಗಳು, ಡಿಟೋನೇಟರ್‌ಗಳು ಪತ್ತೆಯಾಗಿರುವುದು ಆತಂಕಕ್ಕೆ ಕಾರಣವಾಗಿದೆ. ಇಷ್ಟು ದೊಡ್ಡ ಪ್ರಮಾಣದ ಸ್ಫೋಟಕಗಳು ಪತ್ತೆ ಆಗಿರುವುದರಿಂದ ಹಲವು ಅನುಮಾನಗಳು ಮೂಡಿವೆ.

ಈ ಹಿಂದೆ ಪ್ರಧಾನಿ ನರೇಂದ್ರ ಮೋದಿ ಹೋಗುವ ದಾರಿಯಲ್ಲೂ ಇದೇ ರೀತಿ ಜಿಲೆಟಿನ್ ಪತ್ತೆಯಾಗಿತ್ತು. ಇದೀಗ ಮತ್ತೆ ರಾಶಿ ರಾಶಿ ಜಿಲೆಟಿನ್ ಕಡ್ಡಿಗಳು ಹಾಗೂ ವೈರ್‌ಗಳು ಪತ್ತೆಯಾಗಿದೆ. ಸದ್ಯ ಜಿಲೆಟಿನ್ ಕಡ್ಡಿಗಳು ಮತ್ತು ವೈರ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಅವಲಹಳ್ಳಿಯ ಕಾಡಅಗ್ರಹಾರ ಬಳಿ ಪತ್ತೆ

ಪ್ರಕರಣ ದಾಖಲು: ಅಪಾರ ಪ್ರಮಾಣದಲ್ಲಿ ಸ್ಫೋಟಕಗಳು ಪತ್ತೆಯಾದ ಹಿನ್ನೆಲೆಯಲ್ಲಿ ಬಾಂಬ್ ಸ್ಕ್ವಾಡ್ ಸ್ಥಳ ಪರಿಶೀಲನೆ ನಡೆಸಿದೆ. ಸ್ಫೋಟಕ ವಸ್ತುಗಳ ಕಾಯ್ದೆಯ ಅಡಿಯಲ್ಲಿ ಪ್ರಕರಣ ದಾಖಲಿಸಿ, ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಇವು ಕೇವಲ ಕ್ವಾರಿ ಕೆಲಸಕ್ಕಾಗಿ ತರಲಾಗಿದೆ ಎಂಬ ಆರೋಪಿಗಳ ಹೇಳಿಕೆಯಲ್ಲಿ ಪೊಲೀಸರು ಇನ್ನೂ ಸಂಪೂರ್ಣವಾಗಿ ವಿಶ್ವಾಸ ಹೊಂದಿಲ್ಲ. ವಿಧ್ವಂಸಕ ಚಟುವಟಿಕೆ ನಡೆಸಲು ಇದನ್ನು ಸಂಗ್ರಹಿಸಿದ್ದಾರೆಯೇ ಎಂಬ ಅನುಮಾನವೂ ತನಿಖೆಯ ಮಹತ್ವದ ಭಾಗವಾಗಿದೆ. ಈ ಹಿಂದೆ (ಮೇ 10)ಕೂಡ ಪ್ರಧಾನಿ ನರೇಂದ್ರ ಮೋದಿ ಅವರು ಆರ್ಟ್ ಆಫ್ ಲಿವಿಂಗ್‌ನಲ್ಲಿ ನಡೆದ ಕಾರ್ಯಕ್ರಮಕ್ಕೆ ಆಗಮಿಸಿದ್ದಾಗ, ಅವರು ಸಂಚರಿಸಿದ ಮಾರ್ಗದಲ್ಲಿ ಇಂತಹ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು. ಆದ್ದರಿಂದ, ಈಗ ಪತ್ತೆಯಾದ ಜಿಲೆಟಿನ್‌ಗಳ ಹಿಂದೆ ಯಾರಿದ್ದಾರೆ? ಯಾವ ಉದ್ದೇಶಕ್ಕಾಗಿ ಇವುಗಳನ್ನು ಸಂಗ್ರಹಿಸಲಾಗಿದೆ? ನಿಜವಾಗಿಯೂ ಕ್ವಾರಿ ಕೆಲಸಕ್ಕಷ್ಟೇ ಇದನ್ನು ತರಲಾಗಿದೆಯೇ ಅಥವಾ ಬೇರೆ ದೊಡ್ಡ ಸಂಚು ಇದೆಯೇ ಎಂಬುದನ್ನು ಪೊಲೀಸರು ಆಳವಾಗಿ ಪರಿಶೀಲಿಸುತ್ತಿದ್ದಾರೆ. ಆ ಪ್ರಕರಣದ ತನಿಖೆ ಮುಗಿಯುವ ಮುನ್ನವೇ ಈಗ ಮತ್ತೆ ಅದೇ ಮಾದರಿಯ ಸ್ಫೋಟಕಗಳು ಸಿಕ್ಕಿರುವುದು ಆತಂಕಕ್ಕೆ ಕಾರಣವಾಗಿದೆ.



50 ಡಿಟೊನೇಟರ್, 225 ಜಿಲೆಟಿನ್ ಕಡ್ಡಿ

ಅವಲಹಳ್ಳಿಯ ಕಾಡಅಗ್ರಹಾರ ಬಳಿ ಅನುಮಾನಾಸ್ಪದ ಬಾಕ್ಸ್‌ಗಳು ಇವೆ ಎಂಬ ಸುದ್ದಿ ತಿಳಿಯುತ್ತಿದ್ದಂತೆ ಅವಲಹಳ್ಳಿ ಠಾಣೆ ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಬಾಕ್ಸ್‌ಗಳನ್ನು ತೆರೆದು ನೋಡಿದಾಗ ಅದರಲ್ಲಿ ಸ್ಫೋಟಕ ವಸ್ತುಗಳಾದ ಜಿಲೆಟಿನ್ ಕಡ್ಡಿಗಳು ಹಾಗೂ ಡಿಟೊನೇಟರ್ ಕಡ್ಡಿಗಳು ಪತ್ತೆಯಾಗಿವೆ. ಸುಮಾರು 225 ಜಿಲೆಟಿನ್ ಕಡ್ಡಿಗಳು ಮತ್ತು 50 ಡಿಟೊನೇಟರ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಈ ಸ್ಫೋಟಕ ವಸ್ತುಗಳನ್ನು ವೆಂಕಟರಾಮ ರೆಡ್ಡಿ ಎಂಬಾತ ಹಾಗೂ ಆತನ ಕೆಲಸಗಾರರ ಬಳಿ ಪತ್ತೆಹಚ್ಚಲಾಗಿದೆ. ಪ್ರಾಥಮಿಕ ವಿಚಾರಣೆಯಲ್ಲಿ ಆರೋಪಿಗಳು, ಇವುಗಳನ್ನು ಕಲ್ಲು ಕ್ವಾರಿ ಪ್ರದೇಶದಲ್ಲಿ ಬಂಡೆ ಒಡೆಯಲು ತರಿಸಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಇದಕ್ಕೆ ಸಂಬಂಧಿಸಿದ ಯಾವುದೇ ಅಧಿಕೃತ ಪರವಾನಗಿ ಅಥವಾ ದಾಖಲೆಗಳು ಪೊಲೀಸರಿಗೆ ಸಿಕ್ಕಿಲ್ಲ ಎಂದು ತಿಳಿದುಬಂದಿದೆ.


30 ಸ್ಥಳೀಯ ಅಮಾಯಕರ ನರಮೇಧ ಖಂಡಿಸಿದ ಭಾರತ

ಹತಾಶ ಪಾಕ್‌ನಿಂದ ಪಿಒಕೆನಲ್ಲಿ ಕ್ರೌರ್ಯ

• **ಹೊಸದಿಲ್ಲಿ:** ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಅಮಾಯಕ ನಾಗರಿಕರು ಮತ್ತು ಪ್ರತಿಭಟನಾಕಾರರ ಮೇಲೆ ಬಹಿರಂಗವಾಗಿ ಗುಂಡಿನ ದಾಳಿ ನಡೆಸಿದ ಪಾಕ್ ಸೇನೆಯ ಕ್ರೌರ್ಯವನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯವು (ಎಂಇಎ) ಮಂಗಳವಾರ ಕಟುವಾಗಿ ಖಂಡಿಸಿದೆ.

ಪಾಕಿಸ್ತಾನ ತನ್ನ ವೈಫಲ್ಯಗಳನ್ನು ಹೊರ ಜಗತ್ತಿನಿಂದ ಮರೆಮಾಚಲು ಮತ್ತು ಮಾನವ ಹಕ್ಕುಗಳ ಘೋರ ಉಲ್ಲಂಘನೆಯಿಂದ ಜಗತ್ತಿನ ಗಮನ ಬೇರೆಡೆ ಸೆಳೆಯಲು ಯತ್ನಿಸುತ್ತಿದೆ. ಇದೇ ಉದ್ದೇಶಕ್ಕೆ ನಿರಂತರ ಒಂದೇ ರೀತಿಯ ನಕಲಿ ಸುದ್ದಿ ಮತ್ತು ವಿಡಿಯೋಗಳನ್ನು ಹರಿಯಬಿಡುತ್ತಿದೆ ಎಂದು ವಿದೇಶಾಂಗ ವಕ್ತಾರ ರಣಧೀರ್ ಜೈಸ್ವಾಲ್ ಖಂಡಿಸಿದ್ದಾರೆ. ಮಾನವ ಹಕ್ಕುಗಳ ಘೋರ ಉಲ್ಲಂಘನೆ ಹಾಗೂ ಪಿಒಕೆನಲ್ಲಿ ಅದರ ಆಡಳಿತ ವೈಫಲ್ಯ ಮರೆಮಾಚಲು ಪಾಕಿಸ್ತಾನ ಹತಾಶ ಪ್ರಯತ್ನಗಳನ್ನು ಮಾಡುವಂತೆ ಗೋಚರಿಸುತ್ತದೆ ಎಂದು ಜೈಸ್ವಾಲ್ ಹೇಳಿದ್ದಾರೆ.

➡ಪುಟ ೪



ಏನಿದು ಜೆಎಎಸಿ?

ಜಂಟಿ ಆವಾಮಿ ಆ್ಯಕ್ಷನ್ ಸಮಿತಿ (ಜೆಎಎಸಿ), ಪಿಒಕೆನಲ್ಲಿ ಸ್ಥಳೀಯರ ಮೇಲೆ ಪಾಕ್ ಸೇನೆಯ ಹಿಂಸಾಚಾರ, ಪೊಲೀಸ್ ದೌರ್ಜನ್ಯ ವಿರೋಧಿಸಿ 2023ರ ಸೆಪ್ಟೆಂಬರ್‌ನಲ್ಲಿ ಸ್ಥಾಪಿಸಲಾದ ಸ್ಥಳೀಯ ಸಂಘಟನೆಯಾಗಿದೆ. ಈ ಸಂಘಟನೆಯಲ್ಲಿ ವ್ಯಾಪಾರಿಗಳು, ವಕೀಲರು, ಪೂರೈಕೆದಾರರು ಮತ್ತು ಸಾಮಾಜಿಕ ಹೋರಾಟಗಾರರೂ ಇದ್ದಾರೆ.

ಕಾಂಗ್ರೆಸ್‌ಗೆ ಆಘಾತ, ಚು.ಆಯೋಗದ ಎದುರು ಪ್ರತಿಭಟನೆ

ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕೃತ

• **ಭೋಪಾಲ್/ಹೊಸದಿಲ್ಲಿ:** ಮಧ್ಯಪ್ರದೇಶದಿಂದ ರಾಜ್ಯ ಸಭೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಮೀನಾಕ್ಷಿ ನಟರಾಜನ್ ಅವರ ನಾಮಪತ್ರವನ್ನು ಚುನಾವಣಾಧಿಕಾರಿಗಳು ತಿರಸ್ಕರಿಸಿರುವುದು ಕಾಂಗ್ರೆಸ್‌ಗೆ ಭಾರೀ ಹಿನ್ನಡೆಯಾಗಿ ಪರಿಣಮಿಸಿದೆ. ನಾಮಪತ್ರ ಸಲ್ಲಿಕೆ ವೇಳೆ ಬಾಕಿ ಇರುವ ಕ್ರಿಮಿನಲ್ ಪ್ರಕರಣದ ಮಾಹಿತಿಯನ್ನು ಪ್ರಮಾಣಪತ್ರದಲ್ಲಿ ಬಹಿರಂಗಪಡಿಸದ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ರಾಜ್ಯಸಭೆ ಚುನಾವಣೆಗೆ ಮುನ್ನ ಬಿಜೆಪಿ ಕುದುರೆ ವ್ಯಾಪಾರದ ಆತಂಕದ ಹಿನ್ನೆಲೆಯಲ್ಲಿ ಕಾಂಗ್ರೆಸ್ ತನ್ನ ಶಾಸಕರನ್ನು ಕರ್ನಾಟಕಕ್ಕೆ ಕಳುಹಿಸಿದ್ದ ವೇಳೆ ಈ ಬೆಳವಣಿಗೆ ನಡೆದಿದೆ. ನಾಮಪತ್ರ ತಿರಸ್ಕಾರವನ್ನು ಕಾಂಗ್ರೆಸ್ ತೀವ್ರವಾಗಿ ವಿರೋಧಿಸಿದ್ದು, ಇದು ಪ್ರಜಾಪ್ರಭುತ್ವದ ಮೇಲೆ ನಡೆದ ದಾಳಿ ಎಂದು ಆರೋಪಿಸಿದೆ. ಪಕ್ಷದ ಹಿರಿಯ ನಾಯಕ ಕೆ.ಸಿ.ವೇಣುಗೋಪಾಲ್ ನೇತೃತ್ವದ ನಿಯೋಗ ಚುನಾವಣಾಧಿಕಾರಿಗಳನ್ನು ಭೇಟಿ ಮಾಡಿ ಆಕ್ಷೇಪ ವ್ಯಕ್ತಪಡಿಸಿತು.

➡ಪುಟ ೪

ರಾಜ್ಯಸಭೆ ಚುನಾವಣೆಗೂ ಮುನ್ನ ಮಧ್ಯಪ್ರದೇಶದಲ್ಲಿ ರಾಜಕೀಯ ಸಂಚಲನ

ಯಾರು ಮೀನಾಕ್ಷಿ?

- ಮಧ್ಯಪ್ರದೇಶದ ಮಂದಸೌರ್ ಕ್ಷೇತ್ರದ ಮಾಜಿ ಲೋಕಸಭಾ ಸದಸ್ಯೆ
- ಕಾಂಗ್ರೆಸ್‌ನ ಹಿರಿಯ ಸಂಘಟನಾ ನಾಯಕಿ
- ಪ್ರಸ್ತುತ ತೆಲಂಗಾಣ ಕಾಂಗ್ರೆಸ್ ಉಸ್ತುವಾರಿ ಜವಾಬ್ದಾರಿ ನಿರ್ವಹಣೆ
- ರಾಜ್ಯಸಭೆಗೆ ಕಾಂಗ್ರೆಸ್ ಅಧಿಕೃತ ಅಭ್ಯರ್ಥಿಯಾಗಿ ಘೋಷಣೆಗೊಂಡಿದ್ದರು

ಬಿರುಕು ಸೃಷ್ಟಿಗೆ ಕೈ ಹುನ್ನಾರ

• **ಮಂಡ್ಯ:** ದೇವೇಗೌಡರ ಬಗ್ಗೆ ಕಾಂಗ್ರೆಸ್ಸಿಗರಿಗೆ ಈಗ ಅನುಕಂಪ ಬಂದಿದೆ. ಬಿಜೆಪಿ-ಜಾ.ದಳ ಮೈತ್ರಿಯಿಂದ ಭಯ ಶುರುವಾಗಿದೆ. ಈ ಹಿನ್ನೆಲೆಯಲ್ಲಿ ಮೈತ್ರಿಯಲ್ಲಿ ಬಿರುಕು ತರಲು ಕಾಂಗ್ರೆಸ್ ನಾಯಕರು ಪ್ರಯತ್ನಿಸುತ್ತಿದ್ದಾರೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು. ತಾಲೂಕಿನ ತಗ್ಗಹಳ್ಳಿ ಗ್ರಾಮದಲ್ಲಿ ಮಿಚಿಲಿನ್ ಇಂಡಿಯಾ ಪ್ರೈ.ಲಿ.ನ ಸಿಎಸ್ ಆರ್ ಅನುದಾನ 32.50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಶಾಲಾ ಕೊಠಡಿಗಳನ್ನು ಉದ್ಘಾಟಿಸಿ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು. ರಾಜ್ಯಸಭೆಗೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಅರ್ಜಿಯನ್ನೇ ಹಾಕಿಲ್ಲ. ದೇವೇಗೌಡರದ್ದು ಹೋರಾಟದ ಬದುಕು.



➡ಪುಟ ೪

ಕಾಂಗ್ರೆಸ್‌ನ ಮೊಸಳೆ ಕಣ್ಣೀರು ಬೇಡ: ಬಿವೈವಿ

• ಪುಟ ೪



ವಾರಕ್ಕೊಂದು ದಿನ ಮೌಲ್ಯಶಿಕ್ಷಣ ಕಡ್ಡಾಯ

▸ ನಂದಿನಿ ಎನ್.

ದಿಗಂತ ವಿಶೇಷ

• **ಬೆಂಗಳೂರು:** ಕೇವಲ ಪಠ್ಯಪುಸ್ತಕ ಜ್ಞಾನವಷ್ಟೇ ಅಲ್ಲದೇ, ಉತ್ತಮ ವ್ಯಕ್ತಿತ್ವ, ನೈತಿಕತೆ, ಸಾಮಾಜಿಕ ಹೊಣೆಗಾರಿಕೆ ಮತ್ತು ಜೀವನ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಉದ್ದೇಶದಿಂದ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ(ಡಿಎಸ್ಇಆರ್‌ಟಿ) ಮಹತ್ವದ ನಿರ್ಧಾರ ಕೈಗೊಂಡಿದ್ದು, ಶಾಲೆಗಳಲ್ಲಿ 1-10ನೇ ತರಗತಿಗಳವರೆಗೆ ವಾರಕ್ಕೆ ಒಂದು ದಿನ ಮೌಲ್ಯ ಶಿಕ್ಷಣವನ್ನು ಕಡ್ಡಾಯಗೊಳಿಸಿದೆ. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಮಾನಸಿಕ ಒತ್ತಡ, ಸಾಮಾಜಿಕ ಮಾಧ್ಯಮಗಳ ಪ್ರಭಾವ, ನೈತಿಕ ಮೌಲ್ಯಗಳ ಕುಸಿತ ಹಾಗೂ ಸಮಾಜಮುಖಿ ಚಿಂತನೆ ಕೊರತೆ ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ.



ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಅಂಕಗಳು ಮತ್ತು ಸ್ಪರ್ಧಾತ್ಮಕ ಸಾಧನೆಗಳಿಗೆ ಹೆಚ್ಚಿನ ಮಹತ್ವ ಸಿಗುತ್ತಿದ್ದು, ಜೀವನ ಮೌಲ್ಯಗಳು, ಮಾನವೀಯತೆ, ಸಹಾನುಭೂತಿ, ಶಿಸ್ತು, ಪರಿಸರ ಕಾಳಜಿ ಮತ್ತು ರಾಷ್ಟ್ರಪ್ರಜ್ಞೆ ಮೊದಲಾದ ಅಂಶಗಳು ಹಿನ್ನಡೆ ಅನುಭವಿಸುತ್ತಿವೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಉತ್ತಮ ನಾಗರಿಕರನ್ನಾಗಿ ರೂಪಿಸಲು ಮೌಲ್ಯ ಶಿಕ್ಷಣ ಅಗತ್ಯವಾಗಿದೆ.

➡ಪುಟ ೪



ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಬುಧವಾರ 10 ಜೂನ್ 2026, ಮಂಗಳೂರು

ಒಂದು ನೋಟದಲ್ಲಿ: ದಾಖಲೆ ಗುರುತಿಸುವ ಪ್ರಮುಖ ಪ್ರಥಮಗಳು



ರಕ್ಷಣೆ

ಆಮದು ರಾಷ್ಟ್ರದಿಂದ

38,400

ಕೋಟಿ ರೂ. ರಫ್ತು ರಾಷ್ಟ್ರದೆಡೆಗೆ
ಎ-ಸ್ಯಾಟ್ ಕ್ಷಿಪಣಿ ಕ್ಲಬ್ ಪ್ರವೇಶ
ಪಿಎಫ್‌ಬಿಆರ್ ಕ್ರಿಟಿಕಾಲಿಟಿ



ಭಯೋತ್ಪಾದನೆ

- ಸುಮಾರು 50 ವರ್ಷಗಳಲ್ಲಿ ಮೊದಲ ಬಾರಿಗೆ ಪಾಕ್ ನೆಲದೊಳಗೆ ಸೇನಾ ಕಾರ್ಯಾಚರಣೆ
- 370ನೇ ವಿಧಿ ನಿಷ್ಕ್ರಿಯ
- ಸಿಂಧೂ ಒಪ್ಪಂದ ಅಮಾನತು

ವಿದೇಶಾಂಗ

- ಜಿ-20 ಘೋಷಣೆಗೆ ಶೇ.100 ಒಮ್ಮತ
- ಗ್ಲೋಬಲ್ ಸೌತ್ ಧ್ವನಿಯಾಗಿ ನಾಯಕತ್ವ
- ವಿಶ್ವದ ಔಷಧಾಲಯ

ಆಡಳಿತ ನ್ಯಾಯ

ಬ್ರಿಟಿಷ್ ಕಾಲದ ಕಾನೂನು ಬದಲಿಗೆ ಮೊದಲ ಬಾರಿಗೆ ಸ್ವದೇಶಿ ಭಾರತೀಯ ನ್ಯಾಯ ಸಂಹಿತಾ ಸೇರಿದಂತೆ ಮೂರು ಹೊಸ ಕಾನೂನು





ರಾಷ್ಟ್ರ ಪ್ರಥಮ

> ಭಯೋತ್ಪಾದನೆ ವಿರುದ್ಧ ನಮ್ಮ ನೀತಿ ಶೂನ್ಯ ಸಹಿಷ್ಣುತೆ. ಭಾರತೀಯರ ರಕ್ತ ಚೆಲ್ಲಲು ಯತ್ನಿಸುವವರಿಗೆ ಅದೇ ಭಾಷೆಯಲ್ಲಿ ಉತ್ತರ ಸಿಗುತ್ತದೆ.
> ■ ನರೇಂದ್ರ ಮೋದಿ, ಪ್ರಧಾನಮಂತ್ರಿ

ಒಂದು ಸರ್ಕಾರವನ್ನು ಅಳೆಯುವ ಮಾನದಂಡಗಳು ಹಲವು. ಆದರೆ ಯಾವುದನ್ನು ಮೊದಲ ಬಾರಿಗೆ ಮಾಡಿತು ಎಂಬ ಪ್ರಶ್ನೆ ಇತಿಹಾಸದ ದೃಷ್ಟಿಯಿಂದ ಅತ್ಯಂತ ನಿರ್ಣಾಯಕವಾದದ್ದು. ಏಕೆಂದರೆ ಪ್ರಥಮ ಎಂಬುದು ಕೇವಲ ಒಂದು ಸಾಧನೆ ಅಲ್ಲ, ಅದು ಒಂದು ಮನಃಸ್ಥಿತಿಯ ಬದಲಾವಣೆಯ ಸಂಕೇತ. ಇದು ಸಾಧ್ಯವಿಲ್ಲ ಎಂಬ ದಶಕಗಳ ನಂಬಿಕೆಯನ್ನು ಇದು ಸಾಧ್ಯ ಎಂಬ ನಿರ್ಧಾರವಾಗಿ ಪರಿವರ್ತಿಸುವ ಕ್ಷಣವೇ ಪ್ರಥಮ. ಕಳೆದ ಹನ್ನೆರಡು ವರ್ಷಗಳಲ್ಲಿ ಕೇಂದ್ರ ಸರ್ಕಾರ ರಾಷ್ಟ್ರಪ್ರಥಮ (ನೇಷನ್ ಫಸ್ಟ್) ಎಂಬ ಮಂತ್ರವನ್ನು ಮುಂದಿಟ್ಟುಕೊಂಡು ಇಂಥ ಹಲವು ಪ್ರಥಮಗಳನ್ನು ದಾಖಲಿಸಿದೆ ಎಂಬುದು ಸರ್ಕಾರದ ಪ್ರತಿಪಾದನೆ.

ರಕ್ಷಣಾ ಕ್ಷೇತ್ರದ ಪ್ರಥಮಗಳು: ಆಮದು ರಾಷ್ಟ್ರದಿಂದ ರಫ್ತು ರಾಷ್ಟ್ರದೆಡೆಗೆ

ಭಾರತದ ರಕ್ಷಣಾ ಕ್ಷೇತ್ರ ದಶಕಗಳ ಕಾಲ ಆಮದು ಎಂಬ ಪದದಿಂದಲೇ ಗುರುತಿಸಿಕೊಂಡಿತ್ತು. ಯುದ್ಧ ವಿಮಾನ, ಫಿರಂಗಿ, ಮದ್ದುಗುಂಡು ಸೇರಿದಂತೆ ಬಹುತೇಕ ಎಲ್ಲವೂ ವಿದೇಶದಿಂದ ಬರುತ್ತಿತ್ತು. ಆ ಚಿತ್ರಣ ಬದಲಾಗಿರುವುದು ಈ ಹನ್ನೆರಡು ವರ್ಷಗಳ ಪ್ರಥಮಗಳಲ್ಲಿ ಪ್ರಮುಖವಾದದ್ದು ಎಂಬುದು ಸರ್ಕಾರದ ವಾದ. 2014ರಲ್ಲಿ ಸುಮಾರು 689 ಕೋಟಿ ರೂ.ನಷ್ಟಿದ್ದ ರಕ್ಷಣಾ ರಫ್ತು 2026ರ ವೇಳೆಗೆ ಸುಮಾರು 38,400 ಕೋಟಿ ರೂ.ಗೆ ತಲುಪಿದೆ. ಅಂದರೆ ಸುಮಾರು 56 ಪಟ್ಟು ಹೆಚ್ಚಳ. ಇದು ಭಾರತ ಮೊದಲ ಬಾರಿಗೆ ಶಸ್ತ್ರ ಆಮದು ಮಾಡಿಕೊಳ್ಳುವ ದೇಶದಿಂದ ರಫ್ತು ಮಾಡುವ ದೇಶವಾಗಿ ಗುರುತಿಸಿಕೊಂಡ ಕ್ಷಣ ಎಂದು ಬಣ್ಣಿಸಲಾಗಿದೆ.



ಪ್ರಥಮ ಎಂಬ ಮಂತ್ರ

ರಾಷ್ಟ್ರ ಪ್ರಥಮ ಎಂಬ ಪದ ಕೇವಲ ಒಂದು ಘೋಷಣೆಯಲ್ಲ, ಅದು ಕಳೆದ ಹನ್ನೆರಡು ವರ್ಷಗಳ ಆಡಳಿತದ ತಾತ್ವಿಕ ಆಧಾರ ಎಂದು ಸರ್ಕಾರ ಪ್ರತಿಪಾದಿಸುತ್ತದೆ. ರಕ್ಷಣಾ ರಫ್ತಿನಿಂದ ನಕ್ಸಲ್ ನಿರ್ಮೂಲನೆಯವರೆಗೆ, ಕಾಶ್ಮೀರದ ಏಕೀಕರಣದಿಂದ ಸ್ವದೇಶಿ ಕಾನೂನುಗಳವರೆಗೆ ಪ್ರತಿಯೊಂದು ಪ್ರಥಮವೂ ಇದು ಸಾಧ್ಯವಿಲ್ಲ ಎಂಬ ಹಳೆಯ ನಂಬಿಕೆಯನ್ನು ಮುರಿದ ಕ್ಷಣವಾಗಿದೆ.

ಮೋದಿ ಸರ್ಕಾರದ ಪ್ರಥಮಗಳ ದಾಖಲೆ

ಸ್ವಾತಂತ್ರ್ಯಾನಂತರ ಮೊದಲ ಬಾರಿಗೆ ಎಂಬ ಪದ ಭಾರತದ ರಾಜಕೀಯ ಮತ್ತು ಆಡಳಿತ ಇತಿಹಾಸದಲ್ಲಿ ಪದೇ ಪದೇ ಮೊಳಗಿದ ಹನ್ನೆರಡು ವರ್ಷಗಳಿವು. ಗಡಿಯಿಂದ ಸಂಸತ್ತಿನವರೆಗೆ, ಕಾಶ್ಮೀರದಿಂದ ಬಸ್ತಾರ್‌ವರೆಗೆ ಕೇಂದ್ರ ಸರ್ಕಾರದ ಪ್ರಥಮಗಳ ಒಂದು ವಿಶ್ಲೇಷಣಾತ್ಮಕ ಅವಲೋಕನ.

> ನನ್ನ ಸರ್ಕಾರ ತೆಗೆದುಕೊಳ್ಳುವ ಪ್ರತಿ ನಿರ್ಧಾರ, ಸಾಗುವ ಪ್ರತಿ ದಿಕ್ಕು ಒಂದೇ ಮಾನದಂಡದ ಮೇಲೆ ನಿಂತಿದೆ: ರಾಷ್ಟ್ರ ಪ್ರಥಮ.
> ■ ನರೇಂದ್ರ ಮೋದಿ, ಪ್ರಧಾನಮಂತ್ರಿ

ಬಂದೂಕಿನ ಬದಲು ಅಭಿವೃದ್ಧಿ

ನಕ್ಸಲ್ ನಿರ್ಮೂಲನೆ ಕೇವಲ ಭದ್ರತಾ ಯಶಸ್ಸಲ್ಲ, ಅದಕ್ಕೆ ಅಭಿವೃದ್ಧಿಯ ಆಯಾಮವೂ ಇದೆ. 2017ರಿಂದೀಚೆಗೆ ನಕ್ಸಲ್–ಪೀಡಿತ ಪ್ರದೇಶಗಳಲ್ಲಿ 15,100ಕ್ಕೂ ಹೆಚ್ಚು ಕಿ.ಮೀ ರಸ್ತೆ ನಿರ್ಮಾಣ, 9,600ಕ್ಕೂ ಹೆಚ್ಚು ಮೊಬೈಲ್ ಟವರ್‌ಗಳ ಮೂಲಕ ಸಂಪರ್ಕ, ಬ್ಯಾಂಕಿಂಗ್ ಸೇವೆಯೊಂದಿಗೆ 6,000ಕ್ಕೂ ಹೆಚ್ಚು ಅಂಚೆ ಕಚೇರಿಗಳು ಮತ್ತು ಸುಮಾರು 1,800 ಬ್ಯಾಂಕ್ ಶಾಖೆಗಳು ಆರಂಭವಾಗಿವೆ. 70 ವರ್ಷಗಳ ಕಾಲ ನಿರ್ಲಕ್ಷಿತವಾಗಿದ್ದ ಹಳ್ಳಿಗಳಿಗೆ ಈಗ ರಸ್ತೆ, 4ಜಿ, ಶಾಲೆ ಮತ್ತು ಮೂಲಸೌಕರ್ಯ ತಲುಪಿವೆ ಎಂಬುದು ಭದ್ರತೆ + ಅಭಿವೃದ್ಧಿ ಮಾದರಿಯ ಯಶಸ್ಸಿನ ಸಂಕೇತ ಎಂದು ಬಣ್ಣಿಸಲಾಗಿದೆ. ಎಲ್ಲಿ ಒಮ್ಮೆ ಗುಂಡಿನ ಮೊಳಗಿತ್ತೋ ಅಲ್ಲಿ ಈಗ ಅಭಿವೃದ್ಧಿಯ ಹಾಡು ಮೊಳಗುತ್ತಿದೆ. ಎಲ್ಲಿ ಭಯದ ರಾತ್ರಿಗಳಿದ್ದವೋ ಅಲ್ಲಿ ಈಗ ಭರವಸೆಯ ಕಿರಣ ಎಂಬ ಸಂಸತ್ತಿನಲ್ಲಿ ಆಡಿದ ಕಾವ್ಯಾತ್ಮಕ ನುಡಿ ಈ ಪರಿವರ್ತನೆಯ ಸಂಕೇತವಾಗಿದೆ.

ಬಾಹ್ಯಾಕಾಶ ಮತ್ತು ಪರಮಾಣು ಪ್ರಥಮ

ಮಿಷನ್ ಶಕ್ತಿಯ ಮೂಲಕ ಶತ್ರು ಉಪಗ್ರಹವನ್ನು ನಾಶಪಡಿಸುವ ನಿಖರ ಸಾಮರ್ಥ್ಯ ಪಡೆದು ಭಾರತ ಎ-ಸ್ಯಾಟ್ ಕ್ಷಿಪಣಿ ಹೊಂದಿರುವ ಆಯ್ದ ರಾಷ್ಟ್ರಗಳ ಗುಂಪಿಗೆ ಸೇರಿತು. ಸುಮಾರು 27,000 ಕೋಟಿ ರೂ. ವೆಚ್ಚದ 52–ಉಪಗ್ರಹಗಳ ರಕ್ಷಣಾ ವ್ಯವಸ್ಥೆ ಶತ್ರುಗಳ ಮೇಲೆ ನಿರಂತರ ಕಣ್ಗಾವಲಿಡುತ್ತದೆ ಎಂದು ಹೇಳಲಾಗಿದೆ. ಪರಮಾಣು ಕ್ಷೇತ್ರದಲ್ಲಿ, ಏಪ್ರಿಲ್ 2026ರಲ್ಲಿ ಕಲ್ಪಾಕಂನ ಪ್ರೊಟೋಟೈಪ್ ಫಾಸ್ಟ್ ಬ್ರೀಡರ್ ರಿಯಾಕ್ಟರ್ (ಪಿಎಫ್‌ಬಿಆರ್) ಕ್ರಿಟಿಕಾಲಿಟಿ ಸಾಧಿಸಿದ್ದು ಮಹತ್ವದ ಹೆಜ್ಜೆ. ಎರಡನೇ ಸ್ವದೇಶಿ ಪರಮಾಣು ಚಾಲಿತ ಬ್ಯಾಲಿಸ್ಟಿಕ್ ಕ್ಷಿಪಣಿ ಜಲಾಂತರ್ಗಾಮಿ ಐಎನ್‌ಎಸ್ ಅರಿಘಾತ್ ರಕ್ಷಣಾ ಪಡೆಗೆ ಸೇರಿದ್ದು, ಶತ್ರುವಿನ ದಾಳಿಯನ್ನು ಸಹಿಸಿಕೊಂಡು ನಂತರ ಪ್ರಬಲ ಪ್ರತಿದಾಳಿ ನಡೆಸುವ ತ್ರಿವಳಿ ಪರಮಾಣು ಸಾಮರ್ಥ್ಯವನ್ನು ಬಲಪಡಿಸಿದೆ. ಮಹಿಳಾ ಭಾಗವಹಿಸುವಿಕೆಯ ದೃಷ್ಟಿಯಿಂದಲೂ ಇದು ಪ್ರಥಮಗಳ ಅವಧಿ. 2014ರಲ್ಲಿ ಸುಮಾರು 3,000 ಇದ್ದ ಮಹಿಳಾ ಅಧಿಕಾರಿಗಳ ಸಂಖ್ಯೆ 2026ರ ವೇಳೆಗೆ 11,000 ದಾಟಿದೆ. ರಕ್ಷಣಾ ಸ್ಟಾರ್ಟ್‌ಅಪ್‌ಗಳು ಅತ್ಯಲ್ಪ ಎಂಬ ಸ್ಥಿತಿಯಿಂದ 1,000ಕ್ಕೂ ಹೆಚ್ಚಿನ ಸಂಖ್ಯೆಗೆ ಬೆಳೆದಿರುವುದು ಸ್ವದೇಶಿ ತಂತ್ರಜ್ಞಾನ ಪರಿಸರ ವ್ಯವಸ್ಥೆಯ ಸಂಕೇತ ಎಂದು ಬಿಂಬಿಸಲಾಗಿದೆ.

ಅಂಕಿ-ಅಂಶಗಳ ಕನ್ನಡಿ: ರಕ್ಷಣಾ ಕ್ಷೇತ್ರ (2014 - 2026)(ರೂ.ಗಳಲ್ಲಿ)

ಮಾನದಂಡ	2014	2026	ಬದಲಾವಣೆ
ರಕ್ಷಣಾ ರಫ್ತು	686 ಕೋಟಿ	38,400 ಕೋಟಿ	56 ಪಟ್ಟು
ರಕ್ಷಣಾ ಬಜೆಟ್	2.5 ಲಕ್ಷ ಕೋಟಿ	7.9 ಲಕ್ಷ ಕೋಟಿ	3.2 ಪಟ್ಟು
ರಕ್ಷಣಾ ಉತ್ಪಾದನೆ	46,000 ಕೋಟಿ	1.5 ಲಕ್ಷ ಕೋಟಿ	3.3 ಪಟ್ಟು
ಮದ್ದುಗುಂಡು ಸ್ವದೇಶೀಕರಣ	ಶೇ.32	ಶೇ. 90	2.8 ಪಟ್ಟು
ಮಹಿಳಾ ಅಧಿಕಾರಿಗಳು	3,000	11,000+	3.7 ಪಟ್ಟು

ಐವತ್ತು ವರ್ಷಗಳಲ್ಲಿ ಮೊದಲ ಬಾರಿಗೆ

ಉರಿ ದಾಳಿಯ ನಂತರದ ಸರ್ಜಿಕಲ್ ಸ್ಟ್ರೈಕ್ (2016), ಪುಲ್ವಾಮಾ ನಂತರದ ಬಾಲಾಕೋಟ್ ವಾಯುದಾಳಿ (2019) ಮತ್ತು ಆಪರೇಷನ್ ಸಿಂದೂರ (2025) ಈ ಮೂರೂ ಪ್ರಥಮಗಳ ಸರಣಿ. ಬಾಲಾಕೋಟ್ ದಾಳಿಯನ್ನು ಮೊದಲ ಬಾರಿಗೆ ಭಾರತ ಪಾಕಿಸ್ತಾನದ ನೆಲದೊಳಗೆ ಜೈಷ್–ಎ–ಮೊಹಮ್ಮದ್ ಶಿಬಿರಗಳ ಮೇಲೆ ನಡೆಸಿದ ವಾಯುದಾಳಿಯಾಗಿದೆ. ಆಪರೇಷನ್ ಸಿಂದೂರದ ವೇಳೆ ಸುಮಾರು 50 ವರ್ಷಗಳಲ್ಲಿ ಮೊದಲ ಬಾರಿಗೆ ಭಾರತೀಯ ಸೇನೆಯ ಕಾರ್ಯಾಚರಣೆ ಪಾಕಿಸ್ತಾನದ ಒಳಭಾಗ ತಲುಪಿತು. 100ಕ್ಕೂ ಹೆಚ್ಚು ಭಯೋತ್ಪಾದಕ ಶಿಬಿರಗಳು ಮತ್ತು 9 ಅಡಗುತಾಣಗಳು ನಾಶವಾದವು, 11 ಸೇನಾ ಠಾಣೆಗಳ ಮೇಲೆ ನಿಖರ ದಾಳಿ ನಡೆಯಿತು.

ರೆಡ್ ಕಾರಿಡಾರ್‌ನಿಂದ ಗ್ರೀನ್ ಗ್ರೋಥ್ ಝೋನ್: ಶೂನ್ಯ ನಕ್ಸಲ್ ಜಿಲ್ಲೆ

ಭಾರತ ನಕ್ಸಲ್‌ಮುಕ್ತ ಎಂಬ ಘೋಷಣೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 2026ರ ಮಾರ್ಚ್ 30ರಂದು ಲೋಕಸಭೆಯಲ್ಲಿ ಈ ಘೋಷಣೆ ಮಾಡಿದರು. ಏಪ್ರಿಲ್ 2026ರಿಂದ ಯಾವುದೇ ಜಿಲ್ಲೆ ಎಲ್‌ಡಬ್ಲ್ಯೂಇ –ಪೀಡಿತ (ಎಡಪಂಥೀಯ ಉಗ್ರವಾದ ಪೀಡಿತ) ಆಗಿ ಉಳಿದಿಲ್ಲ ಎಂದು ಗೃಹ ಸಚಿವಾಲಯ ಎಲ್ಲ ರಾಜ್ಯಗಳಿಗೆ ತಿಳಿಸಿದೆ. 2014ರಲ್ಲಿ 126 ಇದ್ದ ಎಲ್‌ಡಬ್ಲ್ಯೂಇ –ಪೀಡಿತ ಜಿಲ್ಲೆಗಳ ಸಂಖ್ಯೆ 2026ರ ವೇಳೆಗೆ ಶೂನ್ಯಕ್ಕಿಳಿದಿರುವುದೇ ಇಲ್ಲಿನ ಕೇಂದ್ರಬಿಂದು.



ಪಶುಪತಿಯಿಂದ ತಿರುಪತಿವರೆಗೆ ಚಾಚಿದ್ದ ರೆಡ್ ಕಾರಿಡಾರ್

ಒಂದು ಕಾಲದಲ್ಲಿ ಪಶುಪತಿಯಿಂದ ತಿರುಪತಿಯವರೆಗೆ ಚಾಚಿಕೊಂಡಿದ್ದ ರೆಡ್ ಕಾರಿಡಾರ್ ಅನ್ನು ಸಂಪೂರ್ಣ ಕಿತ್ತುಹಾಕಲಾಗಿದೆ. 50ಕ್ಕೂ ಹೆಚ್ಚು ವರ್ಷಗಳಲ್ಲಿ ಮೊದಲ ಬಾರಿಗೆ ಭಾರತದ ಮುಖ್ಯಭೂಮಿಯಲ್ಲಿ ಯಾವುದೇ ನಕ್ಸಲ್–ನಿಯಂತ್ರಿತ ಪ್ರದೇಶ ಉಳಿದಿಲ್ಲ ಎಂಬುದು ಇಲ್ಲಿನ ಪ್ರಮುಖ ಪ್ರಥಮ. 2024ರಲ್ಲಿ ಛತ್ತೀಸ್‌ಘಢದಲ್ಲಿ ಒಂದೇ ವರ್ಷದಲ್ಲಿ ಅತಿ ಹೆಚ್ಚು 290 ನಕ್ಸಲರು ಹತರಾದರು. 2025ರ 21 ದಿನಗಳ ಕಾರೆಗುಟ್ಟ ಗುಡ್ಡ ಕಾರ್ಯಾಚರಣೆಯಲ್ಲಿ 31 ಕುಖ್ಯಾತ ನಕ್ಸಲರನ್ನು ಒಬ್ಬ ಸೈನಿಕನೂ ಹುತಾತ್ಮನಾಗದೆ ನಿರ್ಮೂಲನೆ ಮಾಡಲಾಗಿದೆ. ತೆಲಂಗಾಣ–ಛತ್ತೀಸ್‌ಘಢ ಗಡಿಯ 50 ಕಿ.ಮೀ ಉದ್ದ, 37 ಕಿ.ಮೀ ಅಗಲದ ಗುಡ್ಡದ ಮೇಲೆ ನಡೆದ ಆಪರೇಷನ್ ಬ್ಲ್ಯಾಕ್ ಫಾರೆಸ್ಟ್ (2025) ಈ ಸಾಲಿನ ಮಹತ್ವದ ಕಾರ್ಯಾಚರಣೆ.

ಬ್ರಿಟಿಷ್ ಕಾಲದ ಕಾನೂನುಗಳಿಗೆ ವಿದಾಯ

ಆಡಳಿತ–ನ್ಯಾಯ ಕ್ಷೇತ್ರದಲ್ಲಿ ದಾಖಲೆ ದೊಡ್ಡ ಪ್ರಥಮವೊಂದು ರಚನೆಯಾಗಿದೆ. 150 ವರ್ಷಗಳಷ್ಟು ಹಳೆಯ ಬ್ರಿಟಿಷ್ ಕಾಲದ ಕಾನೂನುಗಳ ಬದಲಿಗೆ ಭಾರತೀಯ ನ್ಯಾಯ ಸಂಹಿತಾ, ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮದಂಥ ಮೊದಲ ಬಾರಿಗೆ ಭಾರತ ತನ್ನದೇ ಕಾನೂನುಗಳನ್ನು ಪಡೆದಿದೆ. 1860ರ ಭಾರತೀಯ ದಂಡ ಸಂಹಿತೆಯ 511 ಸೆಕ್ಷನ್‌ಗಳ ಬದಲಿಗೆ ಈಗ 358 ಸೆಕ್ಷನ್‌ಗಳಿವೆ. 7 ವರ್ಷ ಅಥವಾ ಹೆಚ್ಚಿನ ಶಿಕ್ಷೆಯ ಪ್ರತಿ ಅಪರಾಧಕ್ಕೂ ವಿಧಿವಿಜ್ಞಾನ (ಫೋರೆನ್ಸಿಕ್) ತನಿಖೆಯನ್ನು ಕಡ್ಡಾಯಗೊಳಿಸಿರುವುದು, ತನಿಖೆ–ಆರೋಪಪಟ್ಟಿ–ತೀರ್ಪಿಗೆ ಕಾಲಮಿತಿ ನಿಗದಿ ಮಾಡಿರುವುದು ಶಿಕ್ಷೆ ಅಲ್ಲ, ನ್ಯಾಯ ಎಂಬ ಆಶಯದ ಪ್ರಥಮ ಎಂದು ಬಣ್ಣಿಸಲಾಗಿದೆ. ಪ್ರಧಾನಿ ಮೊದಲ ಬಾರಿಗೆ ಸ್ವದೇಶಿ ತೇಜಸ್ ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ್ದು ಆತ್ಮನಿರ್ಭರ ಸಂಕೇತದ ಪ್ರಥಮ ಕ್ಷಣ ಎಂದೂ ದಾಖಲೆ ಗುರುತಿಸುತ್ತದೆ.



ವ್ಯಾಪಾರ ಒಪ್ಪಂದಗಳು ಮತ್ತು ಜಾಗತಿಕ ನೆರವು

ರಷ್ಯಾ–ಉಕ್ರೇನ್ ಸಂಘರ್ಷದ ವೇಳೆ ಆಪರೇಷನ್ ಗಂಗಾ ಮತ್ತು ಕೋವಿಡ್–19 ಸಾಂಕ್ರಾಮಿಕದ ವೇಳೆ ವ್ಯಾಕ್ಸಿನ್ ಮೈತ್ರಿಯ ಮೂಲಕ 99 ರಾಷ್ಟ್ರಗಳಿಗೆ 30 ಕೋಟಿಗೂ ಹೆಚ್ಚು ಲಸಿಕೆ ಪೂರೈಸಿ ಭಾರತ ವಿಶ್ವದ ಔಷಧಾಲಯ ಎಂದು ಗುರುತಿಸಿಕೊಂಡಿದೆ. ಭಾರತ–ನ್ಯೂಜಿಲ್ಯಾಂಡ್ ಮುಕ್ತ ವ್ಯಾಪಾರ ಒಪ್ಪಂದದಲ್ಲಿ ಶೇ.100 ಸುಂಕ ಸಾಲುಗಳ ನಿರ್ಮೂಲನೆ, ಭಾರತ–ಐರೋಪ್ಯ ಒಕ್ಕೂಟ ಎಫ್‌ಟಿಎ ಅಡಿ ಮೌಲ್ಯದ ದೃಷ್ಟಿಯಿಂದ ಶೇ.99 ವ್ಯಾಪಾರಕ್ಕೆ ಸುಂಕ ರಿಯಾಯಿತಿ, 2026ರ ಹಾರ್ಮುಜ್ ಬಿಕ್ಕಟ್ಟಿನ ವೇಳೆ ಸಕ್ರಿಯ ರಾಜತಾಂತ್ರಿಕತೆಯ ಮೂಲಕ ತೈಲ ಪೂರೈಕೆಯಲ್ಲಿ ಅಡಚಣೆಯಾಗದಂತೆ ನೋಡಿಕೊಂಡಿದ್ದು ಇವೆಲ್ಲ ಆರ್ಥಿಕ ರಾಜತಾಂತ್ರಿಕತೆಯ ಪ್ರಥಮಗಳ ಸಾಲಿನಲ್ಲಿವೆ. 2014–25ರ ಅವಧಿಯಲ್ಲಿ 70 ಲಕ್ಷ ಕೋಟಿ ರೂ.ಗೂ ಹೆಚ್ಚು ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ಮತ್ತು 2024–25ರ ಆರ್ಥಿಕ ವರ್ಷದಲ್ಲಿ ಸುಮಾರು 13 ಲಕ್ಷ ಕೋಟಿ ರೂ. ವಿದೇಶಿ ರವಾನೆ (ರೆಮಿಟನ್ಸ್) ಪಡೆದು ವಿಶ್ವದಲ್ಲೇ ಅತಿ ಹೆಚ್ಚು ರೆಮಿಟನ್ಸ್ ಪಡೆಯುವ ದೇಶ ಎಂಬ ಸ್ಥಾನ ಪಡೆದಿರುವುದನ್ನೂ ದಾಖಲೆ ಪ್ರಸ್ತಾಪಿಸುತ್ತದೆ.



ವಿದೇಶಾಂಗ ನೀತಿ ಮತ್ತು ಆಡಳಿತ ಸುಧಾರಣೆಯ ಪ್ರಥಮಗಳು

ವಿದೇಶಾಂಗ ನೀತಿಯ ಕ್ಷೇತ್ರದಲ್ಲಿ ಏಕೆ ಭಾರತ? ಎಂಬ ಪ್ರಶ್ನೆ ಭಾರತ ಏಕೆ ಬೇಡ? ಎಂಬ ಆತ್ಮವಿಶ್ವಾಸದ ಹೇಳಿಕೆಯಾಗಿ ಬದಲಾಗಿದೆ. 2023ರ ಹೊಸದಿಲ್ಲಿ ಜಿ–20 ಶೃಂಗದಲ್ಲಿ ನಾಯಕರ ಘೋಷಣೆಗೆ ಶೇ. 100 ಒಮ್ಮತ ಸಾಧಿಸಿದ್ದು ವಿಭಜಿತ ಜಾಗತಿಕ ವ್ಯವಸ್ಥೆಯಲ್ಲಿ ಭಾರತದ ನಾಯಕತ್ವದ ಪ್ರಥಮ ಎಂದು ಗುರುತಿಸಲಾಗಿದೆ. ಗ್ಲೋಬಲ್ ಸೌತ್‌ನ ಧ್ವನಿಯಾಗಿ 125 ಅಭಿವೃದ್ಧಿಶೀಲ ರಾಷ್ಟ್ರಗಳ ಸಮಸ್ಯೆಗಳನ್ನು ಪ್ರತಿನಿಧಿಸಲು ವಾಯ್ಸ್ ಆಫ್ ಗ್ಲೋಬಲ್ ಸೌತ್ ಶೃಂಗಗಳನ್ನು ಆಯೋಜಿಸಿದ್ದು ಮತ್ತೊಂದು ಮೊದಲು.



ಸಿಂಧೂ ಜಲ ಒಪ್ಪಂದ ತಡೆ- ಒಂದು ನೀತಿ-ಪಲ್ಲಟ

ನೀರಿನ ಭದ್ರತೆಯ ವಿಷಯದಲ್ಲಿ ದಾಖಲೆ ಒಂದು ಸ್ಪಷ್ಟ ಪ್ರಥಮವನ್ನು ಮುಂದಿಡುತ್ತದೆ. ಹಿಂದೆ ಭಯೋತ್ಪಾದಕ ದಾಳಿಗಳ ನಂತರವೂ ಸಿಂಧೂ ಜಲ ಒಪ್ಪಂದ ಮುಂದುವರಿಯುತ್ತಿತ್ತು. ಈಗ ಆ ಒಪ್ಪಂದವನ್ನು ಅಮಾನತಿನಲ್ಲಿ (ಅಬೆಯನ್ಸ್) ಇರಿಸಲಾಗಿದೆ. ಮಾತು ಮತ್ತು ಭಯೋತ್ಪಾದನೆ ಜೊತೆಗೆ ಸಾಗಲಾರವು, ವ್ಯಾಪಾರ ಮತ್ತು ಭಯೋತ್ಪಾದನೆ ಜೊತೆಗೆ ಸಾಗಲಾರವು, ನೀರು ಮತ್ತು ರಕ್ತ ಒಟ್ಟಿಗೆ ಹರಿಯಲಾರವು ಎಂಬ ಪ್ರಧಾನಿಯ ಮಾತು ಈ ನೀತಿಯ ಸಾರಾಂಶವಾಗಿದೆ. ಇದರ ಜೊತೆಗೆ ಪ್ರಹಾರ್ ಎಂಬ ಮೊದಲ ಸಮಗ್ರ ರಾಷ್ಟ್ರೀಯ ಭಯೋತ್ಪಾದನಾ–ವಿರೋಧಿ ಕಾರ್ಯತಂತ್ರ ಮತ್ತು ಮಿಷನ್ ಸುದರ್ಶನ ಚಕ್ರ ಎಂಬ ಸಮಗ್ರ ಭದ್ರತಾ ವ್ಯವಸ್ಥೆಯ ಕೆಲಸ ಆರಂಭವಾಗಿರುವುದನ್ನೂ ಪ್ರಸ್ತಾಪಿಸಲಾಗಿದೆ. ಜಮ್ಮು–ಕಾಶ್ಮೀರದ ಚಿತ್ರಣವೂ ಐತಿಹಾಸಿಕವಾಗಿ ಬದಲಾಗಿದೆ. 2004–14ರ ಅವಧಿಯ 7,200ಕ್ಕೂ ಹೆಚ್ಚು ಭಯೋತ್ಪಾದಕ ಘಟನೆಗಳಿಗೆ ಹೋಲಿಸಿದರೆ 2014–25ರ ಅವಧಿಯಲ್ಲಿ 2,407 ಘಟನೆಗಳು ದಾಖಲಾಗಿವೆ. 2023ರಿಂದ ಏಪ್ರಿಲ್ 2026ರವರೆಗೆ ಸಂಘಟಿತ ಕಲ್ಲೆಸೆತ ಶೂನ್ಯ ಮತ್ತು ಸಂಘಟಿತ ಬಂದ್/ಮುಷ್ಕರಗಳೂ ಸಂಪೂರ್ಣ ನಿಂತಿವೆ. 370ನೇ ವಿಧಿಯನ್ನು ನಿಷ್ಕ್ರಿಯಗೊಳಿಸಿ ಮೊದಲ ಬಾರಿಗೆ ಜಮ್ಮು–ಕಾಶ್ಮೀರವನ್ನು ಸಂಪೂರ್ಣ ಏಕೀಕರಣಗೊಳಿಸಿದ್ದು ಮತ್ತೊಂದು ಪ್ರಥಮ. ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಶಿಕ್ಷಾ ಪ್ರಮಾಣ ಶೇ.92 ದಾಟಿದ್ದು, ವಿಶ್ವದ ಭಯೋತ್ಪಾದನಾ–ವಿರೋಧಿ ಸಂಸ್ಥೆಗಳಲ್ಲೇ ಅತ್ಯುನ್ನತ ಎಂದು ದಾಖಲೆ ಪ್ರತಿಪಾದಿಸುತ್ತದೆ.



> ನಮ್ಮ ಸಶಸ್ತ್ರ ಪಡೆಗಳಿಗೆ ಸಾಮರ್ಥ್ಯವೂ ಇದೆ, ತಂತ್ರವೂ ಇದೆ. ಯಾರಾದರೂ ದಾಳಿ ಮಾಡಲು ಯತ್ನಿಸಿದರೆ ಶತ್ರುವಿಗೆ ಅದೇ ಭಾಷೆಯಲ್ಲಿ ಉತ್ತರ ಕೊಡುವುದು ಹೇಗೆ ಎಂದು ಮೂರೂ ಪಡೆಗಳಿಗೂ ಚೆನ್ನಾಗಿ ಗೊತ್ತಿದೆ.
> ■ ನರೇಂದ್ರ ಮೋದಿ, ಪ್ರಧಾನಮಂತ್ರಿ

ಭಯೋತ್ಪಾದನೆ ವಿರುದ್ಧ: ಗಡಿ ದಾಟಿದ ಪ್ರಥಮ ನೀತಿ

ಭಯೋತ್ಪಾದನೆ ವಿರುದ್ಧದ ಪ್ರಥಮಗಳು ದಾಖಲೆಯ ಅತ್ಯಂತ ಗಮನ ಸೆಳೆಯುವ ಭಾಗ. 2014ರ ಆಗ ಮತ್ತು 2026ರ ಈಗ ನಡುವಿನ ವ್ಯತ್ಯಾಸವನ್ನು ಈಗ ಗುರುತಿಸಬಹುದು. 2014ರ ಹಿಂದೆ ದಾಳಿಯ ನಂತರ ಕೇವಲ ರಾಜತಾಂತ್ರಿಕ ಪತ್ರವ್ಯವಹಾರ ನಡೆಯುತ್ತಿತ್ತು, 2026ರ ಹೊಸ ಸಾಮಾನ್ಯ (ನ್ಯೂ ನಾರ್ಮಲ್) ಎಂದರೆ ನಿರ್ಣಾಯಕ ಮತ್ತು ತ್ವರಿತ ಪ್ರತಿದಾಳಿ. ಯಾವುದೇ ಪರಮಾಣು ಬೆದರಿಕೆಯನ್ನು ಸಹಿಸದಿರುವುದು ಮೋದಿ ಆಡಳಿತ ಕಾಲದ ಹೊಸ ದೃಢ ನೀತಿ.





ತೇಜಸ್‌ನಿಂದ ಬ್ರಹ್ಮೋಸ್‌ವರೆಗೆ

ಈ ಪ್ರಥಮಗಳ ಸಾಲಿನಲ್ಲಿ ಹಲವು ನಿರ್ದಿಷ್ಟ ಮೈಲಿಗಲ್ಲುಗಳಿವೆ. 83 ತೇಜಸ್ ಎಂಕೆ-1ಎ ಯುದ್ಧ ವಿಮಾನಗಳಿಗೆ ನೀಡಲಾದ ಆದೇಶ ಇದುವರೆಗಿನ ಅತಿ ದೊಡ್ಡ ಸ್ವದೇಶಿ ಯುದ್ಧ ವಿಮಾನ ಆದೇಶವಾಗಿದೆ. ಬ್ರಹ್ಮೋಸ್ ಏರೋಸ್ಪೇಸ್‌ನ ಆದಾಯ 2025-26ರ ಆರ್ಥಿಕ ವರ್ಷದಲ್ಲಿ 5,200 ಕೋಟಿ ರೂ. ತಲುಪಿದ್ದು, ಸುಮಾರು 4,000 ಕೋಟಿ ರೂ. ಮೌಲ್ಯದ ರಫ್ತು ಆದೇಶಗಳು ಬಂದಿವೆ. 41 ಆರ್ಡ್‌ನೆನ್ಸ್ ಕಾರ್ಖಾನೆಗಳನ್ನು 7 ರಕ್ಷಣಾ ಸಾರ್ವಜನಿಕ ವಲಯ ಸಂಸ್ಥೆಗಳಾಗಿ (ಡಿಪಿಎಸ್‌ಯು) ಪುನರ್‌ರಚಿಸಲಾಗಿದೆ. ಇದು ಸ್ವಾತಂತ್ರ್ಯಾನಂತರದ ರಕ್ಷಣಾ ಉತ್ಪಾದನಾ ರಚನೆಯಲ್ಲಿನ ಒಂದು ಬೃಹತ್ ಬದಲಾವಣೆಯಾಗಿದೆ.

ಕಿರುಸುದ್ದಿ

2990 ಪ್ಯಾಕೆಟ್ ತಂಬಾಕು ಉತ್ಪನ್ನ ಸಹಿತ ವ್ಯಕ್ತಿ ಸೆರೆ

ಮಂಜೇಶ್ವರ: ಗೋಣಿ ಚೀಲದಲ್ಲಿ ತುಂಬಿಸಿ ಮಾರಾಟಕ್ಕೆ ಕೊಂಡೊಯ್ಯುತ್ತಿದ್ದ ಭಾರೀ ಪ್ರಮಾಣದ ತಂಬಾಕು ಉತ್ಪನ್ನಗಳನ್ನು ವಶಪಡಿಸಿ ಓರ್ವನನ್ನು ಬಂಧಿಸಲಾಗಿದೆ. ಉತ್ತರಪ್ರದೇಶ ನಿವಾಸಿ, ಪ್ರಸ್ತುತ ಕುಂಜತ್ತೂರು ಮಾಸ್ಕೋ ಹಾಲ್ ಬಳಿ ವಾಸಿಸುವ ಭರತ್ ಸೋಂಕಾರ್ (30) ಎಂಬಾತನನ್ನು ಮಂಜೇಶ್ವರ ಎಸ್‌ಐ ಶಬರಿಕೃಷ್ಣ ನೇತೃತ್ವದ ತಂಡವು ಬಂಧಿಸಿದೆ. ಬಂಧಿತನಿಂದ ವಿವಿಧ ರೀತಿಯ 2990 ಪ್ಯಾಕೆಟ್ ತಂಬಾಕು ಉತ್ಪನ್ನಗಳನ್ನು ವಶಪಡಿಸಲಾಗಿದೆ.

ಕುಂಜತ್ತೂರಿನಲ್ಲಿ ಎಸ್‌ಐ ನೇತೃತ್ವದಲ್ಲಿ ಗಸ್ತು ನಡೆಸುತ್ತಿದ್ದಾಗ ಭರತ್ ಸೋಂಕಾರ್ ಸಂಶಯಾಸ್ಪದ ರೀತಿಯಲ್ಲಿ ಪತ್ತೆಯಾಗಿದ್ದನು. ಆತನ ಕೈಯ್ಯಲ್ಲಿದ್ದ ಗೋಣಿ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ ತಂಬಾಕು ಉತ್ಪನ್ನಗಳು ಕಂಡುಬಂದವು. ಅವುಗಳನ್ನು ಮಾರಾಟಕ್ಕಾಗಿ ಆರೋಪಿ ಕೊಂಡೊಯ್ಯುತ್ತಿದ್ದನೆಂದು ತನಿಖೆಯಲ್ಲಿ ತಿಳಿದು ಬಂದಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ.

ಬಾಲಕಿಗೆ ಲೈಂಗಿಕ ಕಿರುಕುಳ: ಆರೋಪಿ ಬಂಧನ

ಕಾಸರಗೋಡು: ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ದೂರಿನಂತೆ ಚಂದೇರ ಪೊಲೀಸರು ತೃಕ್ಕರೀಪುರ ಮಣಿಯೋಡ್ ನಿವಾಸಿ ಬಿ.ಶಾಜಿ (45) ಎಂಬಾತನನ್ನು ಬಂಧಿಸಿ ಪೋಕ್ಸೋ ಕೇಸು ದಾಖಲಿಸಿ ಕೊಂಡಿದ್ದಾರೆ. ಲೈಂಗಿಕ ಕಿರುಕುಳಕ್ಕೊಳಗಾದ ಬಾಲಕಿಯು ಹೆತ್ತವರಿಗೆ ವಿಷಯ ತಿಳಿಸಿದ್ದಳು. ಬಳಿಕ ಪೊಲೀಸರಿಗೆ ದೂರು ನೀಡಲಾಯಿತು. ಪೊಲೀಸರು ನೇರವಾಗಿ ಬಾಲಕಿಯ ಹೇಳಿಕೆಯನ್ನು ದಾಖಲಿಸಿಕೊಂಡಿದ್ದಾರೆ.

ದ.ಕ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆ | ಜಿಲ್ಲಾಧಿಕಾರಿ ಸ್ಪಷ್ಟ ಸೂಚನೆ

ಜಂಕ್ಷನ್, ವೃತ್ತಗಳಲ್ಲಿ ಸಂಚಾರ ಸುಗಮ ಕ್ರಮ

ಮಂಗಳೂರು: ಮಂಗಳೂರು ನಗರ ಹಾಗೂ ಜಿಲ್ಲೆಯ ವಿವಿಧ ಕಡೆಗಳಲ್ಲಿ ಜಂಕ್ಷನ್ ಹಾಗೂ ವೃತ್ತಗಳಲ್ಲಿ ಸುಗಮ ಸಂಚಾರಕ್ಕೆ ಸ್ಥಳೀಯ ನಗರ ಸಂಸ್ಥೆ ಹಾಗೂ ಪೊಲೀಸ್ ಇಲಾಖೆ ಜಂಟಿಯಾಗಿ ಪರಿಶೀಲಿಸಿ ಕ್ರಮಕೈಗೊಳ್ಳುವಂತೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಸೂಚಿಸಿದ್ದಾರೆ.

ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಹಲವು ಜಂಕ್ಷನ್, ವೃತ್ತಗಳಲ್ಲಿ ಹಾಗೂ ಮುಖ್ಯ ರಸ್ತೆಗಳಲ್ಲಿ ಪಾರ್ಕಿಂಗ್, ಒತ್ತುವರಿ, ಬೀದಿ ವ್ಯಾಪಾರದಿಂದ ಸುಗಮ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ಹಲವು ದೂರುಗಳು ಬಂದಿವೆ. ಸಂಚಾರ ನಿಯಂತ್ರಣಕ್ಕೆ ಕ್ರಮ ಕೈಗೊಂಡರೂ, ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವ ಗಮನಕ್ಕೆ ಬಂದಿರುತ್ತದೆ. ಈ ನಿಟ್ಟಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳು, ಆರ್.ಟಿ.ಓ., ಪೊಲೀಸ್ ಇಲಾಖೆಯೊಂದಿಗೆ ಜಂಟಿಯಾಗಿ ಪರಿಶೀಲಿಸಿ ಕೈಗೊಂಡು ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡುವಂತೆ ಜಿಲ್ಲಾಧಿಕಾರಿಗಳು ತಿಳಿಸಿದರು.

ಸಭೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಅಬ್ದುಲ್ಲಾ ಜಾವಿದ್ ಅಝ್ಮಿ ಮಾತನಾಡಿ, ರಾಷ್ಟ್ರೀಯ ಹೆದ್ದಾರಿಯಲ್ಲಿ ಹಳೆಯಂಗಡಿಯಿಂದ ತಲಪಾಡಿಯವರೆಗೆ ಪ್ರಮುಖ ಜಂಕ್ಷನ್ ವೃತ್ತಗಳಲ್ಲಿ ಸಂಚಾರ



ನಿಯಂತ್ರಣಕ್ಕೆ ಹಲವಾರು ಕ್ರಮ ಕೈಗೊಳ್ಳಲಾಗಿದೆ. ಟ್ರಾಫಿಕ್ ಸಿಗ್ನಲ್, ಝೀಬ್ರಾ ಮಾರ್ಕಿಂಗ್, ವೇಗ ನಿಯಂತ್ರಕ ಸೇರಿದಂತೆ ವಾಹನಗಳ ಸುಗಮ ಸಂಚಾರ ಹಾಗೂ ಸಾರ್ವಜನಿಕರ ಓಡಾಟಕ್ಕೆ ಅನುಕೂಲವಾಗುವಂತೆ ಪ್ರಮುಖ ಕ್ರಮ ಕೈಗೊಳ್ಳಲಾಗಿದೆ. ರಸ್ತೆ ಅಪಘಾತಗಳಿಗೆ ಕಾರಣವಾಗುತ್ತಿದ್ದ ಡಿವೈಡರ್ ಕ್ರಾಸಿಂಗ್‌ಗಳನ್ನು ಹಲವಡೆ ಮುಚ್ಚಲಾಗಿದೆ ಎಂದು ತಿಳಿಸಿದರು.

ಬೈಕಂಪಾಡಿ ಕೈಗಾರಿಕಾ ಪ್ರದೇಶಕ್ಕೆ ರಾಷ್ಟ್ರೀಯ ಹೆದ್ದಾರಿಯಿಂದ ಪ್ರವೇಶಿಸಲು ಅಂಡರ್‌ಪಾಸ್ ಕಾಮಗಾರಿ ಪ್ರಗತಿಯಲ್ಲಿದೆ. ನಂತೂರು ಜಂಕ್ಷನ್ ಅಗಲೀಕರಣವು ನಡೆಯುತ್ತಿದ್ದು, ಕೆಪಿಟಿಯಿಂದ ನಂತೂರುವರೆಗೆ ಸರ್ವಿಸ್ ರಸ್ತೆ ಕಾಮಗಾರಿ ನಡೆಯುತ್ತಿದೆ ಎಂದು ತಿಳಿಸಿದರು.

ಕಲ್ಲಾಪು, ಜೆಪ್ಪಿನಮೊಗರು, ತೊಕ್ಕೊಟ್ಟು ಜಂಕ್ಷನ್‌ನಲ್ಲಿ ಹೆದ್ದಾರಿ ಒತ್ತುವರಿ ಮಾಡಿ ವ್ಯಾಪಾರ ಮಾಡುವುದನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಸಮಿತಿ ಸದಸ್ಯರು ಸಭೆಗೆ ತಿಳಿಸಿದರು.

ಮೀನು ಲಾರಿ ನೀರು ಸೋರಿಕೆ

ನಗರದಲ್ಲಿ ಸಂಚರಿಸುತ್ತಿರುವ ಮೀನಿನ ಲಾರಿಗಳಿಂದ ನೀರು ಸೋರಿಕೆಯಾಗಿ ದುರ್ವಾಸನೆ ಮತ್ತು ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ನಿರಂತರ ದೂರುಗಳು ಬರುತ್ತಿರುವ ಹಿನ್ನೆಲೆಯಲ್ಲಿ ಮೀನಿನ ಕಾರ್ಖಾನೆ ಹಾಗೂ ಉದ್ಯಮಿಗಳ ಸಭೆಯನ್ನು ಪೊಲೀಸ್ ಇಲಾಖೆ ನಡೆಸಲಾಗಿದೆ. ಪ್ರಸ್ತುತ ಕೇರಳದಲ್ಲಿ ರಾಷ್ಟ್ರೀಯ ಹೆದ್ದಾರಿಯ ಅಲ್ಲಲ್ಲಿ ಮೀನಿನ ಲಾರಿಗಳ ನೀರುಗಳನ್ನು ವಿಸರ್ಜಿಸಲು ಸೆಪ್ಟಿಕ್ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದೆ. ಇದೇ ರೀತಿ ಜಿಲ್ಲೆಯ ತಲಪಾಡಿ ಮತ್ತು ಮುಲ್ಕಿಯಲ್ಲಿ ಸೆಪ್ಟಿಕ್ ಟ್ಯಾಂಕ್ ನಿರ್ಮಿಸಿದರೆ ತ್ಯಾಜ್ಯ ನೀರನ್ನು ಅಲ್ಲಿ ವಿಸರ್ಜಿಸಿ ರಸ್ತೆಯಲ್ಲಿ ನೀರು ಸೋರಿಕೆಯನ್ನು ತಡೆಗಟ್ಟಬಹುದು ಎಂದು ಉದ್ಯಮಿಗಳು ತಿಳಿಸಿದ್ದಾರೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು ಎಂದು ಟ್ರಾಫಿಕ್ ಪೊಲೀಸ್ ಅಧಿಕಾರಿಗಳು ಸಭೆಗೆ ತಿಳಿಸಿದರು.

ನಗರದ ಪಂಪ್‌ವೆಲ್‌ನಲ್ಲಿ ಬಸ್‌ಸ್ಟ್ಯಾಂಡ್ ನಿರ್ಮಿಸಲು ಕಾದಿರಿಸಲಾಗಿರುವ 7 ಎಕರೆ ಜಮೀನಿನಲ್ಲಿ 2 ಎಕರೆ ಕೆ.ಎಸ್.ಆರ್.ಟಿ.ಸಿಗೆ ಹಾಗೂ ಉಳಿದ 5 ಎಕರೆ ಖಾಸಗಿ ಬಸ್ ಸ್ಟ್ಯಾಂಡ್ ನಿರ್ಮಿಸಲು ಕ್ರಮ ಕೈಗೊಳ್ಳಬೇಕು. ಮಂಗಳೂರು ನಗರದ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸುವ ಈ ಮಹತ್ವದ ಯೋಜನೆಗೆ ಮಹಾನಗರಪಾಲಿಕೆ ಹಾಗೂ ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳು ವಿಳಂಬವಿಲ್ಲದೆ ಕ್ರಮಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ನಿರ್ದೇಶಿಸಿದರು.

ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ಅರುಣ್ ಕೆ. ಮಾತನಾಡಿ, ನಿರಂತರ ಅಪಘಾತಗಳಿಗೆ ಕಾರಣವಾಗುತ್ತಿರುವ ಪ್ರಮುಖ ಸ್ಥಳಗಳ ಬಗ್ಗೆ ಪೊಲೀಸ್ ಇಲಾಖೆಯಿಂದ ರಾಷ್ಟ್ರೀಯ ಹೆದ್ದಾರಿ ಮತ್ತು ಲೋಕೋಪಯೋಗಿ ಇಲಾಖೆ ವರದಿ ನೀಡಲಾಗಿದ್ದು, ಕೂಡಲೇ ಇಲ್ಲಿನ ಸಂಚಾರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಮಂಗಳೂರು ಉಪವಿಭಾಗಾಧಿಕಾರಿ ಮೀನಾಕ್ಷಿ ಆರ್ಯ, ಲೋಕೋಪಯೋಗಿ ಇಲಾಖೆ ಕಾರ್ಯಕಾರಿ ಅಭಿಯಂತರ ರಾಘವೇಂದ್ರ ನಾಯ್ಕ್, ಮಂಗಳೂರು ನಗರ ವ್ಯಾಪ್ತಿಯ ಸಂಚಾರಿ ಪೊಲೀಸ್ ಇನ್‌ಸ್ಪೆಕ್ಟರ್‌ಗಳು ಉಪಸ್ಥಿತರಿದ್ದರು.

384 ಡ್ರೈವಿಂಗ್ ಲೈಸೆನ್ಸ್ ರದ್ದು

ಪೊಲೀಸ್ ಇಲಾಖೆ ಹಾಗೂ ಆರ್.ಟಿ.ಓ.ಯಿಂದ ತಪಾಸಣೆ ನಡೆಸಿ, 2025ರಿಂದ 2026 ಎಪ್ರಿಲ್ 30ರವರೆಗೆ ಮದ್ಯ ಸೇವಿಸಿ ವಾಹನ ಚಾಲನೆ ಮಾಡಿದ ಬಗ್ಗೆ 1855 ಪ್ರಕರಣಗಳು, ಶಾಲಾ ವಾಹನಗಳಲ್ಲಿ ಮಿತಿಮೀರಿ ಮಕ್ಕಳನ್ನು ಸಾಗಿಸಿರುವ 99 ಪ್ರಕರಣಗಳು, ಟಿಂಟೆಡ್ ಗ್ಲಾಸ್ ಅಳವಡಿಸಿದ 12 ಪ್ರಕರಣಗಳು, ಕರ್ಕಶ ಹಾರ್ನ್ ವಿರುದ್ಧ 201 ಕೇಸ್‌ಗಳು ಹಾಗೂ ಮಿತಿಮೀರಿದ ಭಾರ ಸಾಗಿಸಿದ 184 ಪ್ರಕರಣಗಳನ್ನು ದಾಖಲಿಸಿ ದಂಡವ ವಸೂಲಿ ಮಾಡ ಲಾಗಿದೆ. ಅದೇ ರೀತಿ 2025 ರಿಂದ ಇದುವರೆಗೆ ಜಿಲ್ಲೆಯಲ್ಲಿ 433 ಮಾರಣಾಂತಿಕ ಅಪಘಾತ ಪ್ರಕರಣಗಳು ವರದಿ ಯಾಗಿದ್ದು, ಈ ಸಂಬಂಧ 384 ಡ್ರೈವಿಂಗ್ ಲೈಸೆನ್ಸ್‌ಗಳನ್ನು ರದ್ದುಪಡಿಸಲಾ ಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಹನಿ ಟ್ರ್ಯಾಪ್, ಬ್ಲ್ಯಾಕ್‌ಮೇಲ್ ಪ್ರಕರಣದಲ್ಲಿ ಸ್ಥಳೀಯ ಯೂತ್ ಕಾಂಗ್ರೆಸ್ ಪದಾಧಿಕಾರಿ

ಕೈ ಯುವ ನಾಯಕರ ನೈತಿಕ ಅಧಃಪತನಕ್ಕೆ ಕನ್ನಡಿ: ಮಲ್ಯ

ಮಂಗಳೂರು: ಮಂಗಳೂರಿನಲ್ಲಿ ಉದ್ಯಮಿಯೊಬ್ಬರನ್ನು ಹನಿ ಟ್ರ್ಯಾಪ್ ಮತ್ತು ಬ್ಲ್ಯಾಕ್ ಮೇಲ್ ಮಾಡುವ ಮೂಲಕ ಸುಮಾರು 2.77 ಕೋಟಿ ರೂ. ವಸೂಲಿ ಮಾಡಿರುವ ಘೋರ ಅಪರಾಧ ಪ್ರಕರಣದಲ್ಲಿ ಸ್ಥಳೀಯ ಯೂತ್ ಕಾಂಗ್ರೆಸ್ ಪದಾಧಿಕಾರಿ ನಿಜಾಮ್ ಮತ್ತು ಆತನ ಸಹಚರ ಜಿತೇಶ್ ಬಂಧನಕ್ಕೊಳಗಾಗಿರುವುದು ಇಡೀ ಸಮಾಜವೇ ತಲೆತಗ್ಗಿಸುವಂತದ್ದಾಗಿದೆ. ಉರ್ವ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಈ ಪ್ರಕರಣದ ವಿವರಗಳು ಅತ್ಯಂತ ಆಘಾತಕಾರಿಯಾಗಿದ್ದು, ಕಾಂಗ್ರೆಸ್ ಯುವ ನಾಯಕರ ನೈತಿಕ ಅಧಃಪತನ ಮತ್ತು ಕ್ರಿಮಿನಲ್ ಮನಸ್ಥಿತಿಯನ್ನು ರಾಜ್ಯದ ಜನತೆಯ ಮುಂದೆ ಬಿಚ್ಚಿಟ್ಟಿದೆ. ಉದ್ಯಮಿಯೊಬ್ಬರ ಅಸಹಾಯಕತೆಯನ್ನು ಬಂಡವಾಳ ಮಾಡಿಕೊಂಡು, ಸುಲಿಗೆಕೋರರೊಂದಿಗೆ ಕೈಜೋಡಿಸಿ ಕೋಟ್ಯಾಂತರ ರೂಪಾಯಿ ಲೂಟಿ ಮಾಡಿರುವ ಯೂತ್ ಕಾಂಗ್ರೆಸ್ ನಾಯಕನ ನಡೆ ಖಂಡನೀಯವಾಗಿದೆ ಎಂದು ಬಿಜೆಪಿ ಯುವಮೋರ್ಚಾ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ನಂದನ್ ಮಲ್ಯ ಹೇಳಿದ್ದಾರೆ.



ಈ ಇಡೀ ಪ್ರಕರಣದಲ್ಲಿ ಆರೋಪಿಗಳು ನಡೆಸಿರುವ ವಂಚನೆಯ ಜಾಲ ಅತ್ಯಂತ ವ್ಯವಸ್ಥಿತ ಮತ್ತು ಕ್ರೂರವಾದುದಾಗಿದೆ. ಸಂತ್ರಸ್ತ ಉದ್ಯಮಿ ತನಗೆ ಎದುರಾದ ಬ್ಲ್ಯಾಕ್‌ಮೇಲ್ ಸಮಸ್ಯೆಯಿಂದ ಪಾರಾಗಲು ಸಹಾಯ ಕೋರಿ ಯೂತ್ ಕಾಂಗ್ರೆಸ್ ಪದಾಧಿಕಾರಿ ನಿಜಾಮ್‌ನನ್ನು ಸಂಪರ್ಕಿಸಿದಾಗ, ಆತ ಸಂತ್ರಸ್ತನಿಗೆ ನೆರವಾಗುವ ಬದಲು ತಾನೇ ಸ್ವತಃ ಬ್ಲ್ಯಾಕ್‌ಮೇಲ್ ಜಾಲದಸೂತ್ರಧಾರನಾಗಿಬದಲಾಗಿದ್ದಾನೆ. ಅದಕ್ಕಿಂತಲೂ ಮಿಗಿಲಾಗಿ, ಸಹಚರ ಜಿತೇಶ್ 2024ರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂಬ ಸುಳ್ಳು ಕಥೆಯನ್ನು ಸೃಷ್ಟಿಸಿ, ನಕಲಿ ಶವಸಂಸ್ಕಾರದ ಫೋಟೋಗಳು ಮತ್ತು ಉದ್ಯಮಿಯ ಹೆಸರಿರುವ ನಕಲಿ ಡೆತ್‌ನೋಟ್ ತೋರಿಸಿ ಸಂತ್ರಸ್ತನನ್ನು ಕಾನೂನು ಕ್ರಮದ ಹೆಸರಿನಲ್ಲಿ ಹೆದರಿಸಲಾಗಿದೆ. ಮಾನಹಾನಿ ಮತ್ತು ಜೈಲು ಶಿಕ್ಷೆಯ ಭೀತಿಯಿಂದ ಉದ್ಯಮಿ ಕಳೆದ ಎರಡು ವರ್ಷಗಳಿಂದ ಕೋಟ್ಯಂತರ ರೂ. ನೀಡುತ್ತಾ ಬಂದಿದ್ದು, ಕೊನೆಗೆ ಜಿತೇಶ್ ಜೀವಂತವಾಗಿರುವುದನ್ನು ಕಂಡು ಪೊಲೀಸರ ಮೊರೆ ಹೋಗಿದ್ದಾರೆ.ಇದು ಕೇವಲ ವೈಯಕ್ತಿಕ ಅಪರಾಧವಲ್ಲ, ಬದಲಿಗೆ ರಾಜಕೀಯ ಅಧಿಕಾರ ಮತ್ತು ಪ್ರಭಾವವನ್ನು ಬಳಸಿಕೊಂಡು ಸಾರ್ವಜನಿಕರನ್ನು ಬೆದರಿಸುವ ವ್ಯವಸ್ಥಿತ ಕ್ರಿಮಿನಲ್ ಜಾಲವಾಗಿದೆ. ಮಂಗಳೂರಿನ ಶಾಂತಿಪ್ರಿಯ ನಾಗರಿಕರು ಮತ್ತು ಉದ್ಯಮಿಗಳು ಇಂತಹ ರಾಜಕೀಯ ಗೂಂಡಾಗಿರಿಯ ನೆರಳಿನಲ್ಲಿ ಬದುಕುವಂತಾಗಿರುವುದು ದುರದೃಷ್ಟಕರ ಎಂದು ಯುವ ಮೋರ್ಚಾ ತೀವ್ರ ಕಳವಳ ವ್ಯಕ್ತಪಡಿಸುತ್ತದೆ ಎಂದು ಅವರು ಹೇಳಿದ್ದಾರೆ.

ಪ್ರಕರಣದ ಬಗ್ಗೆ ಪೊಲೀಸ್ ಇಲಾಖೆ ಶೀಘ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಬೇಕು ಬಿಜೆಪಿ ಯುವ ಮೋರ್ಚಾ ಬೀದಿಗಿಳಿದು ಉಗ್ರ ಹೋರಾಟ ನಡೆಸಲಿದೆ ಎಂದು ಅವರು ಎಚ್ಚರಿಸಿದ್ದಾರೆ.

ಅಮಾಯಕ ಕಾರ್ಯಕರ್ತರನ್ನು ಟಾರ್ಗೆಟ್ ಮಾಡುತ್ತಿರುವುದು ಖಂಡನೀಯ: ಕುತ್ಯಾರು

ಉಡುಪಿ: ಕೇವಲ ಪ್ರಚಾರದ ತೆವಲಿನಿಂದ ದೇಶ ಭಕ್ತ ಸಂಘಟನೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಗ್ಗೆ ನಿರಂತರ ಕೀಳು ಮಟ್ಟದ ಹೇಳಿಕೆಗಳನ್ನು ನೀಡುತ್ತಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರು ಕಾರ್ಕಳದ ಓರ್ವ ಸಾಮಾನ್ಯ ಕಾರ್ಯಕರ್ತನ ಮೇಲೆ ವಿನಾಕಾರಣ ಅಟ್ರೋಸಿಟಿ ಪ್ರಕರಣ ದಾಖಲಿಸಿ ಬಂಧಿಸಿರುವುದು ಖಂಡನೀಯ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ತಿಳಿಸಿದ್ದಾರೆ.



ತಾನೋರ್ವ ಜವಾಬ್ದಾರಿಯುತ ಸಚಿವ ಎನ್ನುವುದನ್ನು ಮರೆತು ದೇಶದ ಪ್ರಧಾನಿ ಹಾಗೂ ಆರ್.ಎಸ್.ಎಸ್. ಕುರಿತು ಮನಬಂದಂತೆ ಮಾತನಾಡುವ ಪ್ರಿಯಾಂಕ್ ಖರ್ಗೆ ನೀಡುತ್ತಿರುವ ಅಸಂಬದ್ಧ ಹೇಳಿಕೆಗಳಿಗೆ ಅದೇ ದಾಟಿಯಲ್ಲಿ ಜನ ಸಾಮಾನ್ಯರು ಹಾಗೂ ಕಾರ್ಯಕರ್ತರು ಸಾಮಾಜಿಕ ಜಾಲತಾಣಗಳಲ್ಲಿ ಉತ್ತರ ನೀಡುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಆತ ನೀಡಿದ ಉತ್ತರದಲ್ಲಿ ಅಟ್ರೋಸಿಟಿ ಪ್ರಕರಣ ದಾಖಲಿಸುವಂತಹ ಯಾವುದೇ ಅಂಶಗಳು ಇಲ್ಲದೇ ಇದ್ದರೂ ತನ್ನ ಸ್ವಯಂ ಪ್ರತಿಷ್ಠೆಗಾಗಿ ರಾಜ್ಯ ಗೃಹ ಇಲಾಖೆಯನ್ನು ಖರ್ಗೆ ಅವರು ದುರುಪಯೋಗ ಪಡಿಸಿಕೊಂಡಿರುವಂತೆ ಕಂಡುಬರುತ್ತಿದೆ. ಇಂತಹ ಕ್ಷುಲ್ಲಕ ನಡೆಗಳಿಂದ ಸಾಮಾನ್ಯ ಕಾರ್ಯಕರ್ತರನ್ನು ಹೆದರಿಸಬಹುದು ಎಂದು ಅವರು ಅಂದುಕೊಂಡಿದ್ದರೆ ಅದು ಖರ್ಗೆ ಅವರ ಭ್ರಮೆಯಾಗಿದೆ. ಪ್ರಕರಣದ ಸತ್ಯಾಸತ್ಯತೆಯನ್ನು ಪುನರ್ ಪರಿಶೀಲಿಸಿ ಸಾಮಾನ್ಯ ಕಾರ್ಯಕರ್ತನ ಮೇಲೆ ವಿನಾಕಾರಣ ದಾಖಲಿಸಿರುವ ಅಟ್ರೋಸಿಟಿ ಪ್ರಕರಣವನ್ನು ತೆರವುಗೊಳಿಸಿ ನ್ಯಾಯ ಸಮ್ಮತವಾಗಿ ಪ್ರಕರಣವನ್ನು ಇತ್ಯರ್ಥಗೊಳಿಸಬೇಕು ಎಂದು ಅಗ್ರಹಿಸಿದ್ದಾರೆ.

ಕೊಡಗಿಗೆ ಮುಂಗಾರಿನ ಪ್ರವೇಶ | ರಕ್ಷಣೆಗೆ ಬಂದಿಳಿದ ಎನ್‌ಡಿಆರ್‌ಎಫ್ ತಂಡ

ಈ ಬಾರಿ ರಕ್ಷಕರಿಗೆ ಸಾಥ್ ನೀಡಲಿದೆ 'ಹನಿ'!

ಮಡಿಕೇರಿ: ಕೊಡಗು ಜಿಲ್ಲೆಗೆ ಮುಂಗಾರು ಪ್ರವೇಶಿಸಿರುವ ಬೆನ್ನಲ್ಲೇ ರಾಷ್ಟ್ರೀಯ ವಿಪತ್ತು ನಿರ್ವಹಣಾಪಡೆ(ಎನ್‌ಡಿಆರ್‌ಎಫ್) ಕೂಡಾ ನಗರಕ್ಕೆ ಆಗಮಿಸಿದ್ದು, ಇಲ್ಲಿನ ಮಹದೇವಪೇಟೆಯಲ್ಲಿರುವ ಕೆಐಸಿಎಂ ವಸತಿಗೃಹದಲ್ಲಿ ವಾಸ್ತವ್ಯ ಹೂಡಿದೆ.

ಬೆಂಗಳೂರಿನ ಆರ್‌ಆರ್‌ಸಿ 10ನೇ ಬೆಟಾಲಿಯನ್‌ನ ಇನ್ಸ್‌ಪೆಕ್ಟರ್ ರಾಮ್ ಭಜ್ ಅವರ ನೇತೃತ್ವದಲ್ಲಿ 30 ಮಂದಿಯ ತಂಡ ಈ ಬಾರಿ ಕೊಡಗಿಗೆ ಆಗಮಿಸಿದ್ದು, ಮರಕತ್ತರಿಸುವ ಯಂತ್ರ, ರ್‍ಯಾಫ್ಟ್‌ಗಳು, ವಿವಿಧ ಮಾದರಿಯ ಹಗ್ಗಗಳು, ಟೆಂಟ್‌ಗಳು, ಜೀವರಕ್ಷಕ ಜಾಕೆಟ್‌ಗಳು, ಸರ್ಚ್ ಲೈಟ್‌ಗಳು, ಆಕ್ಸಿಜನ್ ಜನರೇಟರ್‌ಗಳು, ಜೀವರಕ್ಷಕ ಔಷಧಗಳು, ಸಿಗ್ನಲ್ ಯೂನಿಟ್‌ಗಳು ಹೀಗೆ ಅನೇಕ ರಕ್ಷಣಾ ಸಾಮಾಗ್ರಿಗಳನ್ನು ಈ ತಂಡ ಹೊಂದಿದೆ.

'ಹನಿ' ಸಾಥ್: ಈ ಬಾರಿ 'ಹನಿ' ಎಂಬ ಶ್ವಾನವೂ ತಂಡದಲ್ಲಿರುವುದು ವಿಶೇಷವಾಗಿದ್ದು, ಈ ಶ್ವಾನವು ಭೂಕುಸಿತದ ವೇಳೆ ಮಣ್ಣಿನಡಿ ಸಿಲುಕಿಕೊಂಡಿರುವ ಮನುಷ್ಯರನ್ನು ಹುಡುಕಲು ಸಹಾಯ ಮಾಡಲಿರುವುದಾಗಿ ಹೇಳಲಾಗಿದೆ.

ಮುಂಗಾರು ಅವಧಿಯಲ್ಲಿ ಜಿಲ್ಲೆಯಲ್ಲಿ



ಸಂಭವಿಸಬಹುದಾದ ಭೂಕುಸಿತ, ಪ್ರವಾಹ ಹಾಗೂ ಮತ್ತಿತ್ತರ ಸೂಕ್ಷ್ಮ ಪ್ರದೇಶಗಳಿಗೆ ತೆರಳಿ ಈ ತಂಡ ವೀಕ್ಷಿಸಲಿದ್ದು, ಮುಂದೆ ಅನಾಹುತ ಸಂಭವಿಸಿದಾಗ ಕೈಗೊಳ್ಳಬಹುದಾದ ರಕ್ಷಣಾ ಕಾರ್ಯಾಚರಣೆ ಬಗ್ಗೆ ಯೋಜನೆ ರೂಪಿಸಲಿದೆ. ಜೊತೆಗೆ, ಕೆಲವೆಡೆ ಅಣಕು ಕಾರ್ಯಾಚರಣೆ ನಡೆಸಿ ಮುಂದೆ ಎದುರಾಗಬಹುದಾದ ವಿಪತ್ತಿನ ಸನ್ನಿವೇಶ ಎದುರಿಸಲು ಸಿದ್ಧತೆ ಮಾಡಿಕೊಳ್ಳಲಿದೆ.

ಈ ತಂಡದ ಸದಸ್ಯರು ಸೋಮವಾರ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರನ್ನು ಭೇಟಿ ಮಾಡಿ ವರದಿ ಮಾಡಿಕೊಳ್ಳುವುದರೊಂದಿಗೆ, ತಮ್ಮ ಕಾರ್ಯವಿಧಾನಗಳ ಬಗ್ಗೆ ವಿವರಿಸಿದರು.

ಕೊಡಗು ಜಿಲ್ಲಾ ವಿಪತ್ತು ನಿರ್ವಹಣಾ ಪರಿಣತ ಅನನ್ಯ ವಾಸುದೇವ ಅವರು ಈ ತಂಡವನ್ನು ಸ್ವಾಗತಿಸಿದರು. ಕೇರಳದ ವಯನಾಡಿನಲ್ಲಿ ಸಂಭವಿಸಿದ ಭೀಕರ ಭೂಕುಸಿತದ ವೇಳೆ ಕಾರ್ಯಾಚರಣೆ ನಡೆಸಿದ್ದ ಈ ತಂಡ, ಮಳೆಗಾಲ ಮುಗಿಯುವವರೆಗೂ ಜಿಲ್ಲೆಯಲ್ಲಿ ತಂಗಲಿದೆ.

ಇಂದೋ ನಾಳೆಯೋ ಸ್ಥಿತಿಯಲ್ಲಿ ಮನೆ | ಒಪ್ಪೊತ್ತಿನ ಊಟಕ್ಕೂ ಪರದಾಟ

ರಘು ಖಾರ್ವಿ ಬದುಕಿಗೆ ಬೇಕಿದೆ ಭದ್ರತೆ

ಕುಂದಾಪುರ : ಈಗಲೋ, ಆಗಲೋ ಬೀಳುವ ಸ್ಥಿತಿಯಲ್ಲಿರುವ ಮನೆ, ಒಪ್ಪೊತ್ತಿನ ಊಟಕ್ಕೂ ಪರದಾಟ, ದುಡಿಯುವ ಕೈಗಳಿಲ್ಲದೆ ಜೀವನ ಸಾಗಿಸಲು ಪರದಾಟ. ಇದು ಗಂಗೊಳ್ಳಿಯ ಬಡ ಮೀನುಗಾರಿಕಾ ಕುಟುಂಬವೊಂದರ ಚಿಂತಾಜನಕ ಪರಿಸ್ಥಿತಿ.

ಗಂಗೊಳ್ಳಿ ಗ್ರಾಮದ ಬಲ್ಲಾಡಿಹಿತ್ಲು ಎಂಬಲ್ಲಿ ವಾಸಿಸುತ್ತಿರುವ ರಘು ಖಾರ್ವಿ ಅವರ ಬಡ ಕುಟುಂಬ ಚಿಂತಾಜನಕ ಸ್ಥಿತಿಯಲ್ಲಿದೆ. ಚಿಕ್ಕ ಪ್ರಾಯದಲ್ಲೇ ತಂದೆ, ತಾಯಿಯನ್ನು ಕಳೆದುಕೊಂಡಿರುವ ರಘು ಖಾರ್ವಿ ಸಹಿತ ಮೂವರು ಬಲ್ಲಾಡಿಹಿತ್ಲು ಎಂಬಲ್ಲಿ ಮುರುಕಲು ಮನೆಯಲ್ಲಿ ವಾಸಿಸುತ್ತಿದ್ದು, ರಘು ಖಾರ್ವಿ ಚಿಪ್ಪು ಕೆಲಸಕ್ಕೆ ಮತ್ತು ಮೀನುಗಾರಿಕೆ ನಡೆಸಿ ಕುಟುಂಬದ ನಿರ್ವಹಣೆ ಮಾಡುತ್ತಿದ್ದರು. ಅನಾರೋಗ್ಯದಿಂದ ಬಳಲುತ್ತಿದ್ದ ಇವರ ಅಣ್ಣ ಶಿವಾನಂದ ಇತ್ತೀಚೆಗೆ ಮೃತಪಟ್ಟಿದ್ದು, ತಂಗಿ ಶಾಂತಿ ಎಂಬಾಕೆ ಮಾನಸಿಕ ಅಸ್ವಸ್ಥರಾಗಿ ಹಾಸಿಗೆ ಹಿಡಿದ್ದಾಳೆ. ಅಣ್ಣನ ನಿಧನದ ಬಳಿಕ ರಘು ಕೂಡ ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದು, ಮನೆಯಲ್ಲಿ ಒಪ್ಪೊತ್ತಿನ ಊಟಕ್ಕೂ ಪರದಾಡುವ ಸ್ಥಿತಿ ಉದ್ಭವಿಸಿದೆ.

ಇವರು ವಾಸಿಸುತ್ತಿರುವ ಮನೆ ಕೂಡ ಇಂದೋ ನಾಳೆಯೋ ಎಂಬ ಸ್ಥಿತಿಯಲ್ಲಿದೆ. ಮನೆ ಶಿಥಿಲಾವಸ್ಥೆಯಲ್ಲಿದ್ದು, ವಾಸಿಸಲು ಯೋಗ್ಯವಲ್ಲದ ಸ್ಥಿತಿಯಲ್ಲಿದೆ. ಕುಟುಂಬದ ನಿರ್ವಹಣೆ ಮಾಡುತ್ತಿದ್ದ ರಘು ಖಾರ್ವಿ ಅನಾರೋಗ್ಯದಿಂದ ಕೆಲಸಕ್ಕೆ ಹೋಗಲು ಸಾಧ್ಯವಾಗುತ್ತಿಲ್ಲ. ಹಾಸಿಗೆ ಹಿಡಿದಿರುವ ಶಾಂತಿ ಅವರಿಗೆ ಸುತ್ತಮುತ್ತಲಿನ ಮನೆಯವರು ಆಹಾರ, ಬಟ್ಟೆ ಮೊದಲಾದವುಗಳನ್ನು ನೀಡುತ್ತಿದ್ದು, ಇವಳ



ರಘು ಖಾರ್ವಿ ವಾಸಿಸುತ್ತಿರುವ ಶಿಥಿಲಾವಸ್ಥೆಯಲ್ಲಿರುವ ಮನೆ

ಸಹಾಯ ಮಾಡಲಿಚ್ಛಿಸುವವರು..

ಸಹಾಯ ಮಾಡಲಿಚ್ಛಿಸುವ ದಾನಿಗಳು ಕೆನರಾ ಬ್ಯಾಂಕ್ ಗಂಗೊಳ್ಳಿ ಶಾಖೆಯಲ್ಲಿನ ರಘು ಖಾರ್ವಿ ಅವರ ಉಳಿತಾಯ ಖಾತೆ ಸಂಖ್ಯೆ : 110002179796 ಐಎಫ್‌ಸಿ ಕೋಡ್ ಸಿಎನ್‌ಆರ್ ಬಿ0000604 ಜಮೆ ಮಾಡಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 8747084737 ಅಥವಾ 8150903892 ಸಂಪರ್ಕಿಸಬಹುದು.

ಚಾಕರಿ ಮಾಡಲು ಯಾರೂ ಇಲ್ಲದಿರುವುದರಿಂದ ಸಮಸ್ಯೆ ಸೃಷ್ಟಿಯಾಗಿದೆ. ಮನೆಯಲ್ಲಿರುವ ಇಬ್ಬರು ಕೂಡ ಅನಾರೋಗ್ಯಕ್ಕೆ ತುತ್ತಾಗಿರುವುದು ಕುಟುಂಬ ನಿರ್ವಹಣೆ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ.

ಇತ್ತೀಚಿಗೆ ಮೃತಪಟ್ಟ ಶಿವಾನಂದ ಅವರ ಅಂತ್ಯಕ್ರಿಯೆಗೂ ಪರಿಸರದವರು ಹಣ ಹೊಂದಿಸಬೇಕಾದ ಪರಿಸ್ಥಿತಿ, ಇಬ್ಬರಿಗೂ ಸರಿಯಾದ ವಸತಿ ಇಲ್ಲದೆ ಮುಂದಿನ ಅವರ ಬದುಕು ಪ್ರಶ್ನಾರ್ಥಕವಾಗಿದೆ. ಈ ಬಡ ಕುಟುಂಬ ಸಹೃದಯೀ ದಾನಿಗಳ ನೆರವು ಯಾಚಿಸುತ್ತಿದೆ. ಸಂಕಷ್ಟದ ಸ್ಥಿತಿಯಲ್ಲಿರುವ ಈ ಕುಟುಂಬಕ್ಕೆ ನೆಲೆ ಒದಗಿಸಲು ಈಗ ವಾಸಿಸುತ್ತಿರುವ ಮನೆಯ ದುರಸ್ತಿ ಅಥವಾ ಹೊಸ ಮನೆಯೊಂದನ್ನು ನಿರ್ಮಿಸಬೇಕಿದೆ. ಅನಾರೋಗ್ಯದಿಂದ ಬಳಲುತ್ತಿರುವ ಮನೆಯ ಸದಸ್ಯರ ವೈದ್ಯಕೀಯ ಚಿಕಿತ್ಸೆ ವೆಚ್ಚ ಹಾಗೂ ಇನ್ನಿತರ ಖರ್ಚುಗಳನ್ನು ಹೊಂದಿಸಲು ಪರದಾಡುತ್ತಿರುವ ಈ ಕುಟುಂಬಕ್ಕೆ ತುರ್ತು ಮಾನವೀಯ ನೆರವಿನ ಅವಶ್ಯಕತೆ ಇದೆ.

ಆಲೆಮಾರಿ ಸಮುದಾಯದ ಏಳ್ಗೆಗೆ ಕಾರ್ಯಸಿದ್ಧರಾಗಿ: ದುರ್ಗಾದಾಸ್



• **ಬೆಂಗಳೂರು:** ಸ್ವಾಭಿಮಾನಿ, ಧರ್ಮನಿಷ್ಠ ಮತ್ತು ದೇಶಭಕ್ತ ಆಲೆಮಾರಿ ಸಮುದಾಯವು ನಮ್ಮ ಸಹೋದರರೇ ಆಗಿದ್ದಾರೆ. ಅವರ ಏಳಿಗೆಗೆ ಕೆಲಸ ಮಾಡಲು ನಾವೆಲ್ಲರೂ ಸಿದ್ಧರಾಗಬೇಕು ಎಂದು ಅಖಿಲ ಭಾರತ ಘುಮಂತು ಕಾರ್ಯ ಪ್ರಮುಖ್ ದುರ್ಗಾದಾಸ್ ವ್ಯಾಸ್ ಕರೆ ನೀಡಿದ್ದಾರೆ.

ನಗರದ ಉತ್ತುಂಗ ಸಭಾಂಗಣದಲ್ಲಿ ನಡೆದ ಘುಮಂತು ಕಾರ್ಯ (ಆಲೆಮಾರಿ, ಅರೆ ಆಲೆಮಾರಿ ಮತ್ತು ವಿಮುಕ್ತ ಬುಡಕಟ್ಟು ಸಮುದಾಯದ ಕಾರ್ಯ) ಕರ್ನಾಟಕ ದಕ್ಷಿಣ ಪ್ರಾಂತದ ಪ್ರಾಂತ ಬೈಠಕ್‌ನಲ್ಲಿ ಅವರು ಮಾತನಾಡಿದರು. ದೇಶದಲ್ಲಿ ಆಲೆಮಾರಿ ಸಮುದಾಯಕ್ಕೆ ಸೇರಿದ 15 ಕೋಟಿ ಜನಸಂಖ್ಯೆಯಿದೆ. ಈ ಪೈಕಿ 4 ಕೋಟಿ ಜನರು ದಯನೀಯ ಸ್ಥಿತಿಯಲ್ಲಿದ್ದಾರೆ. ಆಲೆಮಾರಿ ಸಮುದಾಯಕ್ಕೂ ಇತಿಹಾಸವಿದೆ. ಸ್ವಾತಂತ್ರ್ಯ ಹೋರಾಟದಲ್ಲಿಯೂ ಅವರು ಭಾಗಿಯಾಗಿದ್ದಾರೆ. ಆದರೆ, ಈ ಇತಿಹಾಸವನ್ನು ಎಲ್ಲಿಯೂ ದಾಖಲಿಸಿಲ್ಲ. ಆಲೆಮಾರಿ ಸಮುದಾಯದ ಇತಿಹಾಸಕ್ಕೆ ಮನ್ನಣೆಯನ್ನೂ ಕೊಟ್ಟಿಲ್ಲ. ಬ್ರಿಟಿಷರ ಕಾಲದಲ್ಲಿ ಆಲೆಮಾರಿ ಸಮುದಾಯಗಳನ್ನು ಅಧಿಸೂಚಿತ ಬುಡಕಟ್ಟು ಜನಾಂಗಗಳು (ನೋಟಿಫೈಡ್ ಟ್ರೈಬ್ಸ್) ಎಂದು ಗುರುತಿಸಿ ಅವರನ್ನು ಅತ್ಯಂತ ಕೀಳಾಗಿ ನಡೆಸಿಕೊಳ್ಳಲಾಗಿತ್ತು ಎಂದು ವಿವರಿಸಿದರು.

ಆಲೆಮಾರಿ ಸಮುದಾಯವು ದೇಶದ ಇತರೆಲ್ಲ ಸಮುದಾಯ, ವರ್ಗಗಳ ಅವಶ್ಯಕತೆಗಾಗಿ ಅಲೆಮಾರಿಗಳಾಗಿದ್ದಾರೆ. ಸ್ವಾತಂತ್ರ್ಯಾನಂತರ 1952ರಲ್ಲಿ ಕೆಲವು ಸಮುದಾಯಗಳನ್ನು ಅಧಿಸೂಚನೆ ಯಿಂದ ತೆಗೆದುಹಾಕಲಾಯಿತು. ಇದರಿಂದ ಆಲೆಮಾರಿ, ಅರೆ ಆಲೆಮಾರಿ ಮತ್ತು ವಿಮುಕ್ತ ಬುಡಕಟ್ಟು ಸಮುದಾಯ ಎಂದು ವಿಂಗಡಣೆಯಾಯಿತು ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ವು ಇಡೀ ಸಮಾಜ ನಮ್ಮದು ಎಂಬ ನೆಲೆಯಲ್ಲಿ ನಾಲ್ಕು ವರ್ಷಗಳ ಹಿಂದೆ ಆಲೆಮಾರಿ ಸಮುದಾಯಗಳ ಮಧ್ಯೆ ಘುಮಂತು ಕಾರ್ಯ ಪ್ರಾರಂಭಿಸಿದೆ. ಆಲೆಮಾರಿ ಸಮುದಾಯದ ಈಗಿನ ಸ್ಥಿತಿಯನ್ನು ಇನ್ನಷ್ಟು ಉತ್ತಮಗೊಳಿಸಲು ಉಳ್ಳವರು ಅವಶ್ಯಕತೆ ಇದ್ದವರಿಗೆ ಸಹಾಯ ಮಾಡಲು, ಸರ್ಕಾರದ ಅನೇಕ ಯೋಜನೆಗಳನ್ನು ಅವರಿಗೆ ದೊರಕಿಸುವುದಕ್ಕಾಗಿ, ಆರೋಗ್ಯ, ಶಿಕ್ಷಣ ಮತ್ತು ಕೌಶಲಾಭಿವೃದ್ಧಿ ಇತ್ಯಾದಿಗಳನ್ನು ತಳಮಟ್ಟದ ಸಮುದಾಯಗಳಿಗೆ ತಲುಪಿಸುವುದಕ್ಕಾಗಿ ಕೆಲಸ ಮಾಡುತ್ತಿದೆ ಎಂದು ದುರ್ಗಾದಾಸ್ ತಿಳಿಸಿದರು.

ಇದಕ್ಕಾಗಿ ಘುಮಂತು ಕಾರ್ಯದಲ್ಲಿ ಆರು ಕೆಲಸಗಳು ಪ್ರಾರಂಭವಾಗಿವೆ. ಈಗಾಗಲೇ 2 ಲಕ್ಷಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ದಾಖಲೆ ಪತ್ರಗಳನ್ನು ಕೊಡಿಸಲಾಗಿದೆ. ಶಿಕ್ಷಣ ಸವಲತ್ತು, ವಿದ್ಯಾರ್ಥಿವೇತನ ಒದಗಿಸಲಾಗುತ್ತಿದೆ. ಆದರೆ, ಹೊರಗಿನಿಂದ ಬಂದವರಿಗೆ ಎಲ್ಲಾ ಸೌಲಭ್ಯ ಸಿಗುತ್ತಿದೆ. ಅವರ ಬಳಿ ಆಧಾರ್ ಕಾರ್ಡ್, ಗ್ಯಾಸ್ ಸಂಪರ್ಕ, ಪಡಿತರಚೀಟಿ ಎಲ್ಲವೂ ಇದೆ. ವಿಪರ್ಯಾಸವೆಂದರೆ, ಆಲೆಮಾರಿ ಸಮುದಾಯಕ್ಕೆ ಶಕ್ತಿ ಇಲ್ಲದಿರುವುದರಿಂದ ಅವರು ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಎಲ್ಲರೂ ಅವರ ಏಳಿಗೆಗಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

ಸಭೆಯಲ್ಲಿ ಚಿತ್ರದುರ್ಗದ ಅಖಿಲ ಭಾರತ ಯಾದವ ಮಹಾ ಸಂಸ್ಥಾನದ ಶ್ರೀ ಕೃಷ್ಣ ಜಗದ್ಗುರು ಯಾದವಾನಂದ ಸ್ವಾಮೀಜಿ ಭಾಗವಹಿಸಿ ಆಶೀರ್ವಚನ ನೀಡಿದರು. ಆರ್‌ಎಸ್‌ಎಸ್ ದಕ್ಷಿಣ ಪ್ರಾಂತ ಪ್ರಚಾರಕ್ ಗುರುಪ್ರಸಾದ್ ಸಮಾರೋಪ ಭಾಷಣ ಮಾಡಿದರು. ಆರ್‌ಎಸ್‌ಎಸ್ ಪ್ರಾಂತ ಸಂಚಾಲಕ ಉಮಾಪತಿ, ಘುಮಂತು ಕಾರ್ಯ ಕರ್ನಾಟಕ ದಕ್ಷಿಣ ಪ್ರಾಂತದ ಸಂಯೋಜಕ್ ಗುರುಗಣೇಶ್ ಉಪಸ್ಥಿತರಿದ್ದರು.

ಇದೇ ವೇಳೆ ಆಲೆಮಾರಿ ಸಮುದಾಯದ ಕಿರು ಪರಿಚಯದ ಪತ್ರಕ ಬಿಡುಗಡೆ ಮಾಡಲಾಯಿತು. ಬೈಠಕ್‌ನಲ್ಲಿ ಕರ್ನಾಟಕ ರಾಜ್ಯ ಪಾಣಾರ ಯಾನೆ ನಲಿಕೆ ಸಮಾಜದ ಸೇವಾ ಸಂಘದ ರಾಜ್ಯಾಧ್ಯಕ್ಷ ದೈವ ನರ್ತಕ ದಯಾನಂದ ಎಸ್., ಸಾಗರದ ಉಮಾ, ವಕೀಲ ರವಿ ಮಾವಿನಕುಂಟೆ ಭಾಗವಹಿಸಿದ್ದರು.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಜನರನ್ನು ವಿಭಜಿಸುವ ಸನಾತನ ಧರ್ಮವನ್ನು ರದ್ದು ಮಾಡಬೇಕು
– ಉದಯನಿಧಿ ಸ್ಟಾಲಿನ್

– ಪೋಲೀಸರು ನಿಜವಾದ ಕಳ್ಳನನ್ನು ಹಿಡಿಯುವ ಬದಲು ರಾಜಕೀಯ ಒತ್ತಡದಿಂದ ಯಾರೋ ನಿರಪರಾಧಿಯನ್ನು ಬಂಧಿಸಿದಂತಿದೆ ಈ ಆರೋಪ.ನಿಮಗೆ ಧೈರ್ಯವಿದ್ದರೆ ಭಾರತ ಪಾಕಿಸ್ತಾನ ವಿಭಜನೆಗೆ ಕಾರಣರಾದ ಮತೀಯರ ಬಗ್ಗೆ ಮಾತನಾಡಿ!

ದಿನ ಭವಿಷ್ಯ

ಮೇಷ
ತುಸು ಕ್ಲಿಷ್ಟಕರ ದಿನ. ವೃತ್ತಿ ಒತ್ತಡ ದೈಹಿಕ ಸುಸ್ತಿಗೂ ಕಾರಣವಾದೀತು. ಕೆಲ ವಿಷಯ ಮಾನಸಿಕ ಗೊಂದಲ ಸೃಷ್ಟಿಸುವುದು.

ವೃಷಭ
ನಿಮ್ಮ ಕಾರ್ಯ ಸಾಧಿಸಲ್ಪಡಲಿದೆ. ಆದರೆ ವಿಳಂಬವಾಗಿ. ಸಂಬಂಧದಲ್ಲಿ ಒಡಕು. ತೈಲಖಾದ್ಯ ಆರೋಗ್ಯ ಕೆಡಿಸಬಹುದು.

ಮಿಥುನ
ವೃತ್ತಿಯಲ್ಲಿ ತೊಡಕು. ಹೆಚ್ಚಿನ ಅವಕಾಶ ಸಿಗದು. ಮೇಲಧಿಕಾರಿ ಜತೆ ಉದ್ವಿಗ್ನತೆ. ವಾದ ಮಾಡಲು ಹೋಗಬೇಡಿ. ಸಹನೆ ಕಾಯ್ದುಕೊಳ್ಳಿ.

ಕಟಕ
ಧೈರ್ಯಗೆಡಬೇಡಿ. ಎಂತಹ ಪ್ರತಿಕೂಲ ಪರಿಸ್ಥಿತಿ ಎದುರಾದರೂ ದೇವರ ಕೃಪೆ ನಿಮಗಿದೆ. ಶಾಂತಿ, ಸಹನೆ ಕಾಯ್ದುಕೊಳ್ಳಿ. ಎಲ್ಲ ಸರಿಯಾಗಲಿದೆ.

ಸಿಂಹ
ಕಾರ್ಯಶೈಲಿಯಲ್ಲಿ ಬದಲಾವಣೆ ಸಂಭವ. ನಿರೀಕ್ಷೆಗಿಂತ ಹೆಚ್ಚು ಕೆಲಸದ ಒತ್ತಡ. ಸಂಜೆ ವೇಳೆಗೆ ಎಲ್ಲ ಸುಸೂತ್ರ. ಮೆಚ್ಚುಗೆ ಪಡೆಯುವಿರಿ.

ಕನ್ಯಾ
ವೃತ್ತಿ ಕಾರ್ಯದಲ್ಲಿ ಪೂರ್ಣ ಮಗ್ನರು. ಇತರ ವಿಷಯಕ್ಕೆ ಗಮನ ಹರಿಯದು. ಕುಟುಂಬದ ಸಮಸ್ಯೆಗೂ ಗಮನ ಕೊಡಿ. ಆರ್ಥಿಕ ಒತ್ತಡ.

ತುಲಾ
ವೃತ್ತಿಯಲ್ಲಿ ಏರಿಳಿತ ಎದುರಿಸುವಿರಿ. ಲಕ್ಷ್ಯ ಕಡಿಮೆ ಮಾಡದಿರಿ. ಧಾರ್ಮಿಕ ಕ್ಷೇತ್ರ ಭೇಟಿ ನಿರಾಳತೆ ತರುವುದು. ಆರ್ಥಿಕ ಹಿನ್ನಡೆ.

ವೃಶ್ಚಿಕ
ಕಠಿಣ ದಿನ. ಹೆಚ್ಚು ಹೊಣೆಗಾರಿಕೆ. ಉತ್ಸಾಹ ತರುವ ಇತರ ಕಾರ್ಯದಲ್ಲಿ ತೊಡಗಿ. ಆರ್ಥಿಕ ಪ್ರಗತಿ ನಿರೀಕ್ಷಿಸಿದಷ್ಟು ಆಗದು.

ಧನು
ಹೆಚ್ಚು ಪರಿಶ್ರಮ ಪಟ್ಟು ನಿಮ್ಮ ಸಾಮರ್ಥ್ಯ ತೋರ್ಪಡಿಸಿ. ಟೀಕೆಗಳಿಗೆ ಉತ್ತರ ಕೊಡಿ. ಕೆಲವರಿಗೆ ಕಾಲು, ಸೊಂಟ ನೋವು ಕಾಡಬಹುದು.

ಮಕರ
ಉತ್ಸಾಹಪೂರ್ಣ ದಿನ. ಕಾರ್ಯ ಸಫಲತೆ. ಸಂಗಾತಿ ಜತೆಗಿನ ಭಿನ್ನಮತ ಬಗೆಹರಿಸಿ. ಖರ್ಚು ಕಡಿಮೆ ಮಾಡಲು ಯೋಜನೆ ಹಾಕಿ.

ಕುಂಭ
ವೃತ್ತಿ ಮತ್ತು ಮನೆಯಲ್ಲಿ ಕಠಿಣ ದಿನ. ಸುಗಮವಾಗಿ ಸಾಗದು. ಅನಿರೀಕ್ಷಿತ ಪಯಣ. ಕ್ಲಪ್ತ ಕಾಲದಲ್ಲಿ ಆಹಾರ ಸೇವಿಸಿ. ಆರೋಗ್ಯ ಕಾಯ್ದುಕೊಳ್ಳಿ.

ಮೀನ
ಯೋಜಿಸಿ ಕಾರ್ಯ ಎಸಗಿ. ಇಲ್ಲವಾದರೆ ಒತ್ತಡಕ್ಕೆ ಸಿಲುಕುವಿರಿ. ಸಣ್ಣಪುಟ್ಟ ಚಿಂತೆ ಸದಾ ಕಾಡುತ್ತಿರುತ್ತದೆ. ಆಂಜನೇಯನ ಭಜಿಸಿ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 8,5,1,7

ಸರ್ಕಾರದ ಯೋಜನೆ ಪರಿಣಾಮಕಾರಿ ಅನುಷ್ಠಾನಕ್ಕೆ ಪರಮೇಶ್ವರ ಸೂಚನೆ

ಯುವಕರಿಗೆ ಉತ್ತೇಜನ

• **ಬೆಂಗಳೂರು:** ಗ್ರಾಮೀಣ ಮತ್ತು ಪಾರಂ ಪರಿಕ ಕ್ರೀಡೆಗಳಿಗೆ ಹೆಚ್ಚಿನ ಆದ್ಯತೆ ನೀಡುವ ಯುವಕರಿಗೆ ಉತ್ತೇಜನ ನೀಡಬೇಕು ಎಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಹೇಳಿದರು.

ಮಂಗಳವಾರ ವಿಧಾನಸೌಧದಲ್ಲಿ ನಡೆದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಮುಜರಾಯಿ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿ, ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿದರು. ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಸೂಚನೆ ನೀಡಿದರು. ಕ್ರೀಡಾ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಸರ್ಕಾರದಿಂದ ನೀಡಲಾಗುವ ವಿವಿಧ ಪ್ರಶಸ್ತಿಗಳ ಕುರಿತು ಸಭೆಯಲ್ಲಿ ಚರ್ಚಿಸಿದರು. ಸಾಧಕರಿಗೆ ನೀಡಬೇಕಿರುವ ಕ್ರೀಡಾ ಪ್ರಶಸ್ತಿಗಳನ್ನು ಯಾವುದೇ ಕಾರಣಕ್ಕೂ ಬಾಕಿ ಉಳಿಸಬಾರದು. ಅರ್ಹ ಕ್ರೀಡಾಪಟುಗಳನ್ನು ಪಾರದರ್ಶಕವಾಗಿ ಗುರುತಿಸಿ, ಪ್ರಶಸ್ತಿಗಳನ್ನು ನೀಡುವ ಮೂಲಕ ಅವರ ಸಾಧನೆಯನ್ನು ಗೌರವಿಸುವ ಕೆಲಸವಾಗಬೇಕು. ಇದು ಇತರ ಯುವ ಕ್ರೀಡಾಪಟುಗಳಿಗೂ ಪ್ರೇರಣೆಯಾಗಲಿದೆ ಎಂದು ಅವರು ಹೇಳಿದರು.

ಒಲಂಪಿಕ್, ಏಷ್ಯಾನ್ ಗೇಮ್ಸ್, ಕಾಮನ್ವೆಲ್ತ್ ಗೇಮ್ಸ್ ಸೇರಿದಂತೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ರಾಜ್ಯಕ್ಕೆ ಕೀರ್ತಿ ತಂದ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದ ವಿವಿಧ ಇಲಾಖೆಯಲ್ಲಿನ ಹುದ್ದೆಗಳಿಗೆ ನೇಮಕ ಮಾಡುವ ಮೂಲಕ, ಕ್ರೀಡಾಪಟುಗಳಿಗೆ ಉತ್ತೇಜನ ಸರ್ಕಾರದ ಜವಾಬ್ದಾರಿ ಎಂದು ತಿಳಿಸಿದರು.



ಗ್ರಾಮೀಣ ಭಾಗದಲ್ಲಿ ಅನೇಕ ಪ್ರತಿಭಾವಂತ ಕ್ರೀಡಾಪಟುಗಳಿದ್ದು, ಅವರಿಗೆ ಸೂಕ್ತ ತರಬೇತಿ, ಆರ್ಥಿಕ ನೆರವು ಮತ್ತು ಸ್ಪರ್ಧಾತ್ಮಕ ಅವಕಾಶಗಳನ್ನು ಒದಗಿಸಿದರೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಅಲ್ಲದೆ, ರಾಜ್ಯದ ಸಾಂಪ್ರದಾಯಿಕ ಕ್ರೀಡೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ವಿಶೇಷ ಕಾರ್ಯಕ್ರಮ ರೂಪಿಸಬೇಕು.
■ **ಡಾ.ಜಿ.ಪರಮೇಶ್ವರ್,** ಉಪಮುಖ್ಯಮಂತ್ರಿ

ಭಕ್ತರಿಗೆ ದೇವಸ್ಥಾನದಲ್ಲಿ ಸೌಲಭ್ಯ ಕಲ್ಪಿಸಿ: ಮುಜರಾಯಿ ಇಲಾಖೆಯ ಆಡಳಿತಾತ್ಮಕ ವಿಚಾರಗಳ ಕುರಿತು ಸಮಗ್ರವಾಗಿ ಪರಿಶೀಲನೆ ನಡೆಸಿದರು. ರಾಜ್ಯದ ಮುಜರಾಯಿ ಇಲಸಖೆಗೆ ಒಳಪಡುವ ದೇವಸ್ಥಾನಗಳ ನಿರ್ವಹಣೆ, ಭಕ್ತರಿಗೆ ಒದಗಿಸಲಾಗುತ್ತಿರುವ ಸೌಕರ್ಯಗಳು ಹಾಗೂ ಇಲಾಖೆಯ ಕಾರ್ಯಕ್ಷಮತೆಯನ್ನು ಮತ್ತಷ್ಟು ಸುಧಾರಿಸಬೇಕು. ಖಾಲಿ ಇರುವ 235 ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪ್ರಾರಂಭಿಸಬೇಕು. ಈ ನಿಟ್ಟಿನಲ್ಲಿ ಇಲಾಖೆಯ ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ನಿಗದಿತ ಸಮಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಂದಾಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಪ್ರಧಾನ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಕುಮಾರ್, ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ನಿರ್ದೇಶಕ ಬಸವರಾಜೇಂದ್ರ ಹಾಗೂ ಮುಜರಾಯಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮೋದಿ ಯಶಸ್ಸಿಗೆ ಇಂದು ರಾಜ್ಯದೆಲ್ಲೆಡೆ ವಿಶೇಷ ಪೂಜೆ

• **ಬೆಂಗಳೂರು:** ಪ್ರಧಾನಮಂತ್ರಿ ಮೋದಿ ಅವರು ಚುನಾಯಿತ ಪ್ರಧಾನಿಗಳಾಗಿ ಕಳೆದ 12 ವರ್ಷಗಳಿಂದ ಪ್ರಧಾನ ಸೇವಕರಾಗಿ ಕೆಲಸ ನಿರ್ವಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಜೂ. 10ರಂದು ಇಡೀ ರಾಜ್ಯದಾದ್ಯಂತ ಎಲ್ಲ ದೇವಸ್ಥಾನಗಳಲ್ಲಿ ಮೋದಿ ಅವರ ಆಯಸ್ಸು, ಆರೋಗ್ಯ ವೃದ್ಧಿಗಾಗಿ ಪೂಜೆ ನೆರವೇರಿಸಲಾಗುವುದೆಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ ತಿಳಿಸಿದ್ದಾರೆ.



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಮಲ್ಲೇಶ್ವರದಲ್ಲಿ ಪೂಜೆ ನೆರವೇರಿಸಲಿದ್ದಾರೆ. ಶಾಸಕ ಡಾ.ಸಿ. ಎನ್.ಅಶ್ವತ್ಥನಾರಾಯಣ ಉಪಸ್ಥಿತರಿರುವರು. ರಾಜ್ಯ ಉಸ್ತುವಾರಿ ಡಾ.ರಾಧಾ ಮೋಹನ್ ದಾಸ್ ಅಗ್ರವಾಲ್ ಅವರು ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ, ಸಹ ಉಸ್ತುವಾರಿ ಸುಧಾಕರ ರೆಡ್ಡಿ ಮಲ್ಲೇಶ್ವರದಲ್ಲಿ ಪೂಜೆ ನೆರವೇರಿಸಲಿದ್ದಾರೆ. ವಿಪಕ್ಷ ನಾಯಕ ಆರ್.ಅಶೋಕ ಬನಶಂಕರಿಯಲ್ಲಿ ಪೂಜೆ ಸಲ್ಲಿಸುವರು ಎಂದರು.

ಮೋದಿ ಅವರು 4,398 ದಿನಗಳ ಯಶಸ್ವಿ ಆಡಳಿತದ ಮೂಲಕ ದೇಶದ ಜನರ ಸೇವೆ ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಆಯುಸ್ಸು, ಆರೋಗ್ಯ ವೃದ್ಧಿಗಾಗಿ ಪೂಜೆ ನಡೆಸಲಾಗುತ್ತಿದೆ. ಶಾಸಕ ಗೋಪಾಲಯ್ಯ ಅವರು ಮಹಾಲಕ್ಷ್ಮಿ ಲೇಔಟ್‌ನ ಶ್ರೀ ವೀರಾಂಜನೇಯ ದೇವಸ್ಥಾನದಲ್ಲಿ, ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಶಾಂತಿನಗರ ಕೆಂಪಮ್ಮ ದೇವಸ್ಥಾನದಲ್ಲಿ ಪೂಜೆಯಲ್ಲಿ ಭಾಗವಹಿಸುವರು ಎಂದು ತಿಳಿಸಿದ್ದಾರೆ.

ಇಂದು ಮುಖ್ಯಮಂತ್ರಿ ಡಿಕೆಶಿ ದಿಲ್ಲಿಗೆ

• **ಬೆಂಗಳೂರು:** ಎರಡು ದಿನಗಳ ಕಾಲ ಸಿಎಂ ಡಿ.ಕೆ ಶಿವಕುಮಾರ್, ಡಿಸಿಎಂ ಪರಮೇಶ್ವರ್ ದಿಲ್ಲಿಗೆ ಪ್ರಯಾಣಿಸುತ್ತಿದ್ದು, ಬುಧವಾರ ಬೆಳಗ್ಗೆ ಬೆಂಗಳೂರಿನಿಂದ ತೆರಳಲಿರುವ ಅವರು, ಮಧ್ಯಾಹ್ನ ಎಐಸಿಸಿ ನಾಯಕರನ್ನು ಭೇಟಿ ಮಾಡಲಿದ್ದು, ಬಳಿಕ ಎಐಸಿಸಿ, ಎನ್‌ಎಸ್‌ಯುಐ, ಇಂಡಿಯನ್ ಯೂತ್ ಕಾಂಗ್ರೆಸ್ ಮತ್ತು ಆಲ್ ಇಂಡಿಯಾ ಮಹಿಳಾ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡಲಿದ್ದಾರೆ. ಸಂಜೆ 7.30ಕ್ಕೆ ಹಿರಿಯ ಐಎಸ್ ಅಧಿಕಾರಿಗಳ ಜತೆಗೆ ಕರ್ನಾಟಕ ಭವನದಲ್ಲಿ ಭೋಜನ ಕೂಟದಲ್ಲಿ ಭಾಗಿಯಾಗಲಿರುವ ಅವರು, ಗುರುವಾರ ನೀತಿ ಆಯೋಗದ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಹೈನಿಂದ 15 ದಿನಗಳ ತುರ್ತು ಪೆರೋಲ್ ಮಂಜೂರು

• **ಬೆಂಗಳೂರು:** ಮರಣಶೈಯ್ಯೆಯಲ್ಲಿರುವ 97 ವರ್ಷದ ತಾತನನ್ನು ಕಂಡು ಕೊನೆಘಳಿಗೆಯಲ್ಲಿ ಆತನ ಬಳಿ ಇದ್ದು ಆರೈಕೆ ಮಾಡಲು, ಜೀವಾವಧಿ ಶಿಕ್ಷೆಗೆ ಒಳಗಾಗಿ ಸದ್ಯ ಜೈಲಿನಲ್ಲಿರುವ ಮೊಮ್ಮಗನಿಗೆ ಮಾನವೀಯತೆಯ ಆಧಾರದಲ್ಲಿ ಹೈಕೋರ್ಟ್ ಮಂಗಳವಾರ 15 ದಿನಗಳ ತುರ್ತು ಪೆರೋಲ್ ಮಂಜೂರು ಮಾಡಿದೆ. ತನ್ನ ತಂದೆ ಮರಣಶೈಯ್ಯೆಯಲ್ಲಿದ್ದು ಆತನನ್ನು ಕಾಣಲು ಮೊಮ್ಮಗನಿಗೆ ಪೆರೋಲ್ ಮಂಜೂರು ಮಾಡಬೇಕು ಎಂದು ಜೀವಾವಧಿ ಶಿಕ್ಷೆಗೊಳಗಾಗಿ ಮೈಸೂರು ಕೇಂದ್ರ ಕಾರಾಗೃಹದಲ್ಲಿರುವ ಎನ್.ಡಿ ನವೀನ್ ಅಲಿಯಾಸ್ ಸಬ್ಬಿಡಿ ನವೀನ್ ತಂದೆ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕು ನುಗ್ಗೇಹಳ್ಳಿ ಗ್ರಾಮದ ಎನ್.ಎನ್. ದೇವರಾಜು ಎಂಬುವರು ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠವು 15 ದಿನಗಳ ತುರ್ತು ಪೆರೋಲ್ ಮಂಜೂರು ಮಾಡಿ ಆದೇಶಿಸಿದೆ. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಕೊಲೆ ಪ್ರಕರಣದಲ್ಲಿ ನವೀನ್‌ಗೆ 2024ರ ಡಿ.18ರಂದು ಜೀವಾವಧಿ ಶಿಕ್ಷೆಯಾಗಿದೆ. ಅದಕ್ಕೂ ಮೊದಲು 2022ರ ಅಕ್ಟೋಬರ್ 2ರಿಂದ ಆತ ಜೈಲಿನಲ್ಲಿದ್ದಾನೆ. ಈಗ ಆತನ 97 ವರ್ಷದ ತಾತ ಮರಣಶೈಯ್ಯೆಯಲ್ಲಿದ್ದು, ತಾತನನ್ನು ಕಾಣಲು ಪೆರೋಲ್ ಮಂಜೂರು ಮಾಡಬೇಕು ಎಂದು ಕೋರಿದರು. ಇದಕ್ಕೆ ಸರ್ಕಾರದ ಪರ ವಕೀಲರು ಈ ಹಿಂದೆ ಅಪರಾಧಿಗೆ ಮೂರು ಬಾರಿ ಪೆರೋಲ್ ಮಂಜೂರು ಮಾಡಲಾಗಿದೆ.

ದೇವೇಗೌಡರ ಬಗ್ಗೆ ಕಾಳಜಿ ಹಾಸ್ಯಾಸ್ಪದ: ಬಿವೈವಿ

ಕಾಂಗ್ರೆಸ್‌ನ ಮೊಸಳೆ ಕಣ್ಣೀರು ಬೇಡ

• **ಬೆಂಗಳೂರು:** ದೇಶದ ಪ್ರಧಾನಿಯಾಗಿದ್ದ ಎಚ್.ಡಿ. ದೇವೇಗೌಡ ಅವರನ್ನು ಆ ಹುದ್ದೆಯಿಂದ ಕೆಳಗಿಸಿದ ಕುಖ್ಯಾತಿಯಿರುವ ಕಾಂಗ್ರೆಸ್‌ನವರು ಅವರ ಕುರಿತು ಮೊಸಳೆ ಕಣ್ಣೀರು ಸುರಿಸುವ ಅವಶ್ಯಕತೆ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಕರ್ನಾಟಕದ ಕಾಂಗ್ರೆಸ್ ಪಕ್ಷದ ಉಸ್ತುವಾರಿ ಸುರ್ಜೇವಾಲ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ದೇವೇಗೌಡರ ಕುರಿತು ಮೊಸಳೆ ಕಣ್ಣೀರು ಸುರಿಸುವ ಅಗತ್ಯವಿಲ್ಲ ಎಂದಿದ್ದಾರೆ.

ಪ್ರಧಾನಮಂತ್ರಿ ಸ್ಥಾನವನ್ನು ಅಲಂಕರಿಸಿ, ಹೆಮ್ಮೆಯ ಕನ್ನಡಿಗ ಎನಿಸಿಕೊಂಡಿರುವ ಎಚ್.ಡಿ. ದೇವೇಗೌಡ ಅವರನ್ನು ಪ್ರಧಾನಿ ಪದವಿಯಿಂದ ಕೆಳಗಿಳಿಸಿದ ಕುಖ್ಯಾತಿ ಕಾಂಗ್ರೆಸ್ ಪಕ್ಷದ ಮೇಲಿರುವುದನ್ನು ಕಾಂಗ್ರೆಸ್ ಮುಂದಾಳುಗಳು ಮರೆತಂತಿದೆ. ಜನತಾದಳ ಪಕ್ಷವನ್ನು ಇಬ್ಭಾಗ ಮಾಡಲು ಯತ್ನಿಸಿದ್ದು ಕಾಂಗ್ರೆಸ್. ಈ ನೋವು ದೇವೇಗೌಡರನ್ನು ರಾಜಕೀಯ ಜೀವನದುದ್ದಕ್ಕೂ ಕಾಡಿದೆ. ಇಷ್ಟಾಗಿಯೂ ಕೊಳಕು ರಾಜಕಾರಣ ಮಾಡುವುದನ್ನು ನಿಲ್ಲಿಸದ ಕಾಂಗ್ರೆಸ್ಸಿಗರು, ದೇವೇಗೌಡರ ಕುರಿತು ಕೃತಕ ಕಾಳಜಿಯ ಮಾತನಾಡುತ್ತಿರುವ ಪರಿ ಹಾಸ್ಯಾಸ್ಪದವಾಗಿದೆ ಎಂದು ಟೀಕಿಸಿದ್ದಾರೆ.

ಬಿಜೆಪಿಯು ದೇವೇಗೌಡರನ್ನು ಅತ್ಯಂತ ಗೌರವದಿಂದ ನಡೆಸಿಕೊಂಡಿದೆ. ಭಾರತದ ಸಮಗ್ರತೆ ಉಳಿಯಬೇಕಾದರೆ, ಅಭಿವೃದ್ಧಿ ಹೊಂದಬೇಕಾದರೆ ಅದು ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಿಂದ ಮಾತ್ರ ಸಾಧ್ಯ ಎಂಬ ನಂಬಿಕೆಯಿಂದ ದೇವೇಗೌಡ ಅವರು ಬಿಜೆಪಿಯನ್ನು ಬೆಂಬಲಿಸಿ, ಎನ್‌ಡಿಎಗೆ ತಮ್ಮ ಜೆಡಿಎಸ್ ಪಕ್ಷವನ್ನು ಸೇರಿಸಿದ್ದಾರೆ. ಇದನ್ನು ಕಂಡು ಸಹಿಸಲಾಗದ ಸ್ಥಿತಿಯಲ್ಲಿರುವ ಕಾಂಗ್ರೆಸ್ಸಿಗರು ದೇವೇಗೌಡರ ಹೆಸರನ್ನು ಬಳಸಿಕೊಂಡು ರಾಜಕಾರಣ ಮಾಡಲು ಹೊರಟಿರುವುದು ನಾಚಿಗೇಡಿತನದ ಪರಮಾವಧಿ ಎಂದು ಆಕ್ಷೇಪಿಸಿದ್ದಾರೆ.

ಬಿರುಕು ಸೃಷ್ಟಿಗೆ ಕೈ ಹುನ್ನಾರ

ಪುಟ ೧➡ ಅಧಿಕಾರಕ್ಕಾಗಿ ಇನ್ನೊಬ್ಬರ ಮನೆ ಬಾಗಿಲಿಗೆ ಹೋಗಿಲ್ಲ. ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಪ್ರಧಾನಿ ಸ್ಥಾನವನ್ನೇ ಬಿಟ್ಟು ಬಂದರು ಎಂದರು. ಕಳೆದ ಬಾರಿ ದೇವೇಗೌಡರ ಅವಿರೋಧ ಆಯ್ಕೆಗೆ ಕಾಂಗ್ರೆಸ್ ಬೆಂಬಲ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಎಚ್‌ಡಿಕೆ, ದೇವೇಗೌಡರ ವಿರುದ್ಧ ಇನ್ನೊಬ್ಬ ಅಭ್ಯರ್ಥಿ ನಿಲ್ಲುವ ಅವಕಾಶ ಇರಲಿಲ್ಲ. ದೇವೇಗೌಡರು ಕಾಂಗ್ರೆಸ್ ಬೆಂಬಲದಿಂದ ರಾಜ್ಯಸಭೆಗೆ ಹೋಗಲಿಲ್ಲ. ಕಳೆದ ಬಾರಿ ದೇವೇಗೌಡರನ್ನು ರಾಜ್ಯಸಭೆಗೆ ಅಭ್ಯರ್ಥಿ ಮಾಡಿ, ನಾವು ಅಭ್ಯರ್ಥಿ ಹಾಕಲ್ಲ ಎಂದು ಯಡಿಯೂರಪ್ಪನವರೇ ಕರೆ ಮಾಡಿ ತಿಳಿಸಿದರು. ಅದಾದ ಬಳಿಕ ನಾನು ಒತ್ತಾಯ ಮಾಡಿ ಅಭ್ಯರ್ಥಿ ಮಾಡಿದ್ದು ಎಂದು ಹೇಳಿದರು. ದೇವೇಗೌಡರಿಗೆ ಟಿಕೆಟ್ ತಪ್ಪಿಸಿ ಒಕ್ಕಲಿಗರಿಗೆ ಬಿಜೆಪಿ ಅನ್ಯಾಯ ಮಾಡಿದೆ ಎಂಬ ಕಾಂಗ್ರೆಸ್ ಆರೋಪದಲ್ಲಿ ಹುರುಳಿಲ್ಲ. ಒಕ್ಕಲಿಗ ಮುಖ್ಯಮಂತ್ರಿ ಇರಬೇಕಾದರೆ ರಾಜ್ಯಸಭೆ ತಗೊಂಡು ಏನ್ಮಾಡ್ತೀರಾ ಎಂದು ಪ್ರಶ್ನಿಸಿದರು.

ಅವರ ಹಿರಿತನ, ಸೇವೆ ಉಲ್ಲೇಖಿಸಿ ಸಂಸತ್ತಿನಲ್ಲಿ ಸ್ವತಃ ಪ್ರಧಾನ ಮಂತ್ರಿಗಳೇ ಭಾವುಕವಾಗಿ ಮಾತನಾಡಿ ಅವರ ಕೊಡುಗೆ, ಸಾಧನೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ರಾಷ್ಟ್ರವನ್ನು ಮುನ್ನಡೆಸುವ ನಿಟ್ಟಿನಲ್ಲಿ ಅವರ ಮಾರ್ಗದರ್ಶನ ಸದಾ ನಮಗೆ ಬೇಕೆಂದು ಹೇಳಿದ್ದಾರೆ. ಈ ನಿಟ್ಟಿನಲ್ಲಿ ಅತ್ಯುತ್ತಮ ರಾಜಕೀಯ ಹಾಗೂ ವ್ಯಕ್ತಿಗತ ಗೌರವಗಳ ಬಾಂಧವ್ಯವಿರುವ ದೇವೇಗೌಡರೊಂದಿಗಿನ ಸಂಬಂಧಕ್ಕೆ ಹುಳಿ ಹಿಂಡುವ ಮಾತುಗಳು ಕಾಂಗ್ರೆಸ್ಸಿಗರ ವಿಕೃತ ನಡೆ ಎನ್ನುವುದನ್ನು ಕರ್ನಾಟಕದ ಜನತೆ ಅರ್ಥೈಸಿಕೊಳ್ಳದಷ್ಟು ಮುಗ್ಧರಲ್ಲ ಎನ್ನುವ ತಿಳಿವಳಿಕೆ ಕಾಂಗ್ರೆಸ್ಸಿಗರಿಗಿರಲಿ ಎಂದು ತಿಳಿಸಿದ್ದಾರೆ.

ಭಾರತದಿಂದ 12 ಅಣ್ವಸ್ತ್ರ ನಿಯೋಜನೆ: ಸಿಪ್ರಿ ವರದಿ

• **ಹೊಸದಿಲ್ಲಿ:** ಭಾರತ ಇತಿಹಾಸದಲ್ಲೇ ಮೊದಲ ಬಾರಿಗೆ 12 ಅಣ್ವಸ್ತ್ರಗಳನ್ನು ಕಾರ್ಯಾಚರಣೆಗೆ ಸನ್ನದ್ಧ ಸ್ಥಿತಿಯಲ್ಲಿ ನಿಯೋಜಿಸಿದೆ ಎಂದು ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಸಿಪ್ರಿ) ಬಿಡುಗಡೆ ಮಾಡಿದ ವರದಿಯಲ್ಲಿ ತಿಳಿಸಿದೆ. ಅಣ್ವಸ್ತ್ರಗಳು, ಅವುಗಳನ್ನು ಉಡಾವಣೆ ಮಾಡುವ ವ್ಯವಸ್ಥೆಗಳನ್ನು ಶಾಂತಿಕಾಲದಲ್ಲಿ ಪ್ರತ್ಯೇಕ ದಾಸ್ತಾನುಗಳಲ್ಲಿ ಇರಿಸುವ ದಶಕಗಳ ಹಳೆ ನೀತಿಯಿಂದ ಭಾರತ ಹಿಂದೆ ಸರಿದಿದೆ ಎಂದು ಈ ಜಾಗತಿಕ ಶಸ್ತ್ರಾಸ್ತ್ರ ನಿಗಾ ಸಂಸ್ಥೆ ಬಹಿರಂಗಪಡಿಸಿದೆ. ಹೊಸದಾಗಿ ನಿಯೋಜಿಸಲಾದ 12 ಅಣ್ವಸ್ತ್ರಗಳನ್ನು ಉಡಾವಣಾ ವ್ಯವಸ್ಥೆಗಳೊಂದಿಗೆ ಜೋಡಿಸಲಾಗಿದೆ ಅಥವಾ ಸಕ್ರಿಯ ಪಡೆಗಳಿರುವ ನೆಲೆಗಳಲ್ಲಿ ಇರಿಸಲಾಗಿದೆ.

ದಾಸ್ತಾನು ಹೆಚ್ಚಳ: ಭಾರತದ ಶಸ್ತ್ರಾಗಾರವನ್ನು ಈಗ ಕೇವಲ ದಾಸ್ತಾನು ಎಂದು ಪರಿಗಣಿಸುವ ಬದಲಿಗೆ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ ಎಂದು ವರ್ಗೀಕರಿಸಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಭಾರತದ ಅಣ್ವಸ್ತ್ರಗಳ ಸಂಖ್ಯೆಯಲ್ಲಿ ಸಣ್ಣ ಪ್ರಮಾಣದ ಏರಿಕೆಯಾಗಿದ್ದು, ಜನವರಿ ಹೊತ್ತಿಗೆ ಈ ದಾಸ್ತಾನು ಸುಮಾರು 190ಕ್ಕೆ ತಲುಪಿದೆ ಎಂದು ವರದಿ ಅಂದಾಜಿಸಿದೆ. ಈ ಆಯುಧಗಳನ್ನು ನೆಲದಿಂದ ಉಡಾಯಿಸಬಹುದಾದ ಕ್ಷಿಪಣಿಗಳು, ಯುದ್ಧವಿಮಾನಗಳು ಮತ್ತು ಬ್ಯಾಲಿಸ್ಟಿಕ್ ಕ್ಷಿಪಣಿ ಜಲಾಂತರ್ಗಾಮಿಗಳಿಗೆ, ಅಂದರೆ ತ್ರಿವಳಿ ರಕ್ಷಣಾ ವ್ಯವಸ್ಥೆಗೆ ನಿಯೋಜಿಸಲಾಗಿದೆ. ಭಾರತ ಇತ್ತೀಚೆಗೆ ಕ್ಷಿಪಣಿಗಳನ್ನು ಕ್ಯಾನಿಸ್ಟರ್‌ಗಳಲ್ಲಿ (ವಿಶೇಷ ಕವಚ) ಇರಿಸಲು ಮತ್ತು ಸಮುದ್ರದಲ್ಲಿ ಗಸ್ತುಗಳನ್ನು ನಡೆಸಲು ಮುಂದಾಗಿದೆ. ಭೂಗತ ಕ್ಷಿಪಣಿ ಸೈಲೋಗಳು ಮತ್ತು ಹೊಸ ಪರಮಾಣು ಜಲಾವೃತ ನೌಕೆಗಳಲ್ಲಿ ಸದಾ ಸಿದ್ಧವಿರುವ ಶಸ್ತ್ರಾಸ್ತ್ರಗಳನ್ನು ಇರಿಸುತ್ತಿರುವುದು ಶಾಂತಿಕಾಲದಲ್ಲೂ ಸನ್ನದ್ಧತೆ ಹೆಚ್ಚಿಸುವ ಸೂಚನೆಯಾಗಿದೆ.

ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕೃತ

ಪುಟ ೧➡ ಆದರೆ ಅಧಿಕಾರಿಗಳು ತಮ್ಮ ನಿರ್ಧಾರವನ್ನು ಬದಲಾಯಿಸಲಿಲ್ಲ. ಹೀಗಾಗಿ, ಆಯೋಗದ ಕಚೇರಿ ಮುಂದೆ ಕೈ ನಾಯಕರು ಪ್ರತಿಭಟನೆ ನಡೆಸಿದ್ದಾರೆ. ಕಾಂಗ್ರೆಸ್ ನಾಯಕರು, ಪ್ರಕರಣದ ಕುರಿತು ಕೇವಲ ನೋಟಿಸ್ ನೀಡಿರುವ ಹಂತದಲ್ಲಿದ್ದಾಗ ಅದನ್ನು ಬಹಿರಂಗಪಡಿಸುವ ಕಡ್ಡಾಯ ನಿಯಮ ಇಲ್ಲ ಎಂದು ವಾದಿಸಿದ್ದಾರೆ. ಆದಾಗ್ಯೂ ಚುನಾವಣಾಧಿಕಾರಿಗಳು ಮಾಹಿತಿಯನ್ನು ಮರೆಮಾಚಲಾಗಿದೆ ಎಂಬ ಆಕ್ಷೇಪವನ್ನು ಪರಿಗಣಿಸಿ ನಾಮಪತ್ರ ತಿರಸ್ಕರಿಸಿದ್ದಾರೆ. ಈ ಬೆಳವಣಿಗೆಯಿಂದ ಮಧ್ಯಪ್ರದೇಶದ ರಾಜ್ಯಸಭೆ ಚುನಾವಣೆ ಇನ್ನಷ್ಟು ಕುತೂಹಲ ಕೆರಳಿಸಿದ್ದು, ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಹೊಸ ರಾಜಕೀಯ ವಾಕ್ಸಮರಕ್ಕೂ ಕಾರಣವಾಗಿದೆ. ನಾಮಪತ್ರ ತಿರಸ್ಕಾರದ ವಿರುದ್ಧ ಕಾನೂನು ಹೋರಾಟ ನಡೆಸುವ ಸಾಧ್ಯತೆಯನ್ನು ಕಾಂಗ್ರೆಸ್ ಪರಿಶೀಲಿಸುತ್ತಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಹತಾಶ ಪಾಕ್‌ನಿಂದ ಪಿಒಕೆನಲ್ಲಿ ಕ್ರೌರ್ಯ

ಪುಟ ೧➡ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಪೊಲೀಸ್ ದೌರ್ಜನ್ಯ ಮಿತಿಮೀರಿದ್ದು, ವರದಿಗಳನ್ನು ನೋಡಿದ್ದೇವೆ. ವರದಿಗಳ ಪ್ರಕಾರ, ಹಲವು ಅಮಾಯಕ ನಾಗರಿಕರು ಮತ್ತು ಪ್ರತಿಭಟನಾಕಾರರು ಗುಂಡಿನ ದಾಳಿಯಲ್ಲಿ ಕೊಲ್ಲಲ್ಪಟ್ಟಿದ್ದಾರೆ, ಇನ್ನೂ ಹಲವರು ಗಾಯಗೊಂಡಿದ್ದಾರೆಂಬ ಸತ್ಯವನ್ನು ಜೈಸ್ವಾಲ್ ಉಲ್ಲೇಖಿಸಿದ್ದಾರೆ.

ಪಾಕ್ ರಾಜಕೀಯ ಕುತಂತ್ರ: ಪಿಒಕೆ ಮೇಲೆ ರಾಜಕೀಯ ನಿಯಂತ್ರಣ ಹೇರುವ ಉದ್ದೇಶದಿಂದ ಜುಲೈ 27ರಂದು ನಡೆಯಲಿರುವ ಶಾಸನಸಭೆ ಚುನಾವಣೆಯಲ್ಲಿ ನಿರಾಶ್ರಿತರಿಗೆ 12 ಸ್ಥಾನಗಳನ್ನು ಕಾಯ್ದಿರಿಸಲು ಪಾಕ್ ಯೋಜನೆ ಹಾಕಿತ್ತು. ಪಿಒಕೆನಲ್ಲಿ ಮಾನವ ಹಕ್ಕುಗಳನ್ನು ಪ್ರತಿಪಾದಿಸುವ ಜೆಎಎಸಿಯನ್ನೇ ಭಯೋತ್ಪಾದಕ ಸಂಘಟನೆಯೆಂದು ಘೋಷಿಸಿದ ಪಾಕ್ ಸರ್ಕಾರ, ಜೂ.6ರಂದು ಸಂಘಟನೆಯ ಮೇಲೆ ನಿಷೇಧ ಹೇರಿತ್ತು. ಜೂ.7ರಿಂದ ಜೆಎಎಸಿ ಸದಸ್ಯರು ಚುನಾವಣೆ ಹಿನ್ನೆಲೆಯಲ್ಲಿ ಬೀದಿ ಗಿಳಿದು ಪ್ರತಿಭಟನೆ ಆರಂಭಿಸಿದ್ದು, ಹಿಂಸಾಚಾರದಲ್ಲಿ 30 ಪ್ರತಿಭಟನಾಕಾರರು ಮೃತಪಟ್ಟಿದ್ದು, 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಪರಿವರ್ತನೆಯ ದಶಕ

ಪುಟ ೧➡ 'ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣ' ಎಂಬ ಧ್ಯೇಯದೊಂದಿಗೆ ಸರ್ಕಾರ ಕಾರ್ಯನಿರ್ವಹಿಸಿದ್ದು, ದೇಶದ ಪ್ರತಿ ವರ್ಗದ ಜನರ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರಲು ಪ್ರಯತ್ನಿಸಿದೆ ಎಂದು ಹೇಳಿದರು. ಕಳೆದ 12 ವರ್ಷಗಳಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿದ್ದು, ವಿಶ್ವದ ಪ್ರಮುಖ ಆರ್ಥಿಕ ಶಕ್ತಿಗಳ ಸಾಲಿನಲ್ಲಿ ಸ್ಥಾನ ಗಿಟ್ಟಿಸಿಕೊಂಡಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕೋಟ್ಯಂತರ ಜನರಿಗೆ ಉಚಿತ ಆಹಾರ ಧಾನ್ಯ ವಿತರಣೆ, ಪ್ರಧಾನ ಮಂತ್ರಿ ಜನಧನ್ ಯೋಜನೆ ಮೂಲಕ ಬ್ಯಾಂಕಿಂಗ್ ಸೇವೆಗಳ ವ್ಯಾಪಕ ವಿಸ್ತರಣೆ, ಆಯುಷ್ಮಾನ್ ಭಾರತ್ ಯೋಜನೆಯಲ್ಲಿ ಆರೋಗ್ಯ ರಕ್ಷಣೆ, ಪ್ರಧಾನಮಂತ್ರಿ ಆವಾಸ್ ಯೋಜನೆಯಲ್ಲಿ ಮನೆಗಳ ನಿರ್ಮಾಣ ಹಾಗೂ ಜಲ್ ಜೀವನ್ ಮಿಷನ್ ಮೂಲಕ ಗ್ರಾಮೀಣ ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕ ಒದಗಿಸಿರುವುದನ್ನು ಪ್ರಧಾನಿ ಪ್ರಮುಖ ಸಾಧನೆಗಳಾಗಿ ಉಲ್ಲೇಖಿಸಿದರು.

ಭಾರೀ ತೆರಿಗೆ ವಿನಾಯಿತಿ: ಮಧ್ಯಮ ವರ್ಗದ ಹಿತದೃಷ್ಟಿ ಯಿಂದ ಕೇಂದ್ರ ಸರ್ಕಾರ ಹಲವು ನಿರ್ಧಾರಗಳನ್ನು ಕೈಗೊಂಡಿದೆ ಎಂದು ಹೇಳಿದ ಮೋದಿ, ಹೊಸ ತೆರಿಗೆ ವ್ಯವಸ್ಥೆಯಲ್ಲಿ ವಾರ್ಷಿಕ 12.75 ಲಕ್ಷ ರೂ.ವರೆಗೆ ಆದಾಯ ಹೊಂದಿರುವವರಿಗೆ ಪರಿಣಾಮಕಾರಿ ತೆರಿಗೆ ವಿನಾಯಿತಿ ನೀಡಿರುವುದನ್ನು ವಿಶೇಷ ವಾಗಿ ಪ್ರಸ್ತಾಪಿಸಿದರು. ಇದರಿಂದ ಮಧ್ಯಮ ವರ್ಗದ ಕುಟುಂಬಗಳ ಉಳಿತಾಯ ಹೆಚ್ಚಾಗಲಿದ್ದು, ದೇಶೀಯ ಬಳಕೆ ಮತ್ತು ಹೂಡಿಕೆ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ ಎಂದರು. ಡಿಜಿಟಲ್ ಇಂಡಿಯಾ ಅಭಿಯಾನ ದೇಶದ ಆಡಳಿತ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ತಂದಿದೆ ಎಂದು ಪ್ರಧಾನಿ ಹೇಳಿದರು. ಯುಪಿಐ ಆಧಾರಿತ ಡಿಜಿಟಲ್ ವಹಿವಾಟು ವಿಶ್ವದ ಗಮನ ಸೆಳೆದಿದ್ದು, ಇಂದು ಭಾರತ ಜಾಗತಿಕ ಡಿಜಿಟಲ್ ಪಾವತಿ ಕ್ಷೇತ್ರದಲ್ಲಿ ಮುಂಚೂಣಿಯ ರಾಷ್ಟ್ರವಾಗಿ ಹೊರಹೊಮ್ಮಿದೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಡಿಜಿಟಲ್ ಸೇವೆ ವಿಸ್ತರಿಸಿರುವುದರಿಂದ ಪಾರದರ್ಶಕತೆ ಮತ್ತು ಸುಗಮ ಸೇವಾ ವಿತರಣೆಗೆ ನೆರವಾಗಿದೆ ಎಂದು ಅವರು ತಿಳಿಸಿದರು.

ಭರಪೂರ ಮೂಲಸೌಕರ್ಯ

ಪುಟ ೧➡ ಹೊಸ ರಾಷ್ಟ್ರೀಯ ಹೆದ್ದಾರಿಗಳು, ವಂದೇ ಭಾರತ್ ರೈಲುಗಳ ಜಾಲ, ಆಧುನಿಕ ವಿಮಾನ ನಿಲ್ದಾಣಗಳು, ಬಂದರುಗಳ ವಿಸ್ತರಣೆ ಹಾಗೂ ವೇಗದ ಸಂಪರ್ಕ ವ್ಯವಸ್ಥೆಗಳು ದೇಶದ ಆರ್ಥಿಕ ಬೆಳವಣಿಗೆಗೆ ಬಲ ತುಂಬಿವೆ. ಈ ಯೋಜನೆಗಳು ಉದ್ಯೋಗ ಸೃಷ್ಟಿ ಹಾಗೂ ಹೂಡಿಕೆ ಆಕರ್ಷಣೆಯಲ್ಲಿಯೂ ಮಹತ್ವದ ಪಾತ್ರ ವಹಿಸಿವೆ ಎಂದು ಅವರು ಹೇಳಿದರು. ಮಹಿಳೆಯರ ಸಬಲೀಕರಣಕ್ಕೂ ಸರ್ಕಾರ ವಿಶೇಷ ಆದ್ಯತೆ ನೀಡಿದೆ ಎಂದು ಮೋದಿ ಹೇಳಿದರು. ಉಜ್ವಲಾ ಯೋಜನೆ, ಮಾತೃತ್ವ ಸೌಲಭ್ಯಗಳ ವಿಸ್ತರಣೆ, ಮಹಿಳಾ ಸ್ವಸಹಾಯ ಸಂಘಗಳಿಗೆ ನೆರವು ಹಾಗೂ ಮಹಿಳಾ ಮೀಸಲಾತಿ ಮಸೂದೆ ಜಾರಿಯಂತಹ ಕ್ರಮಗಳು ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿವೆ ಎಂದು ಅಭಿಪ್ರಾಯಪಟ್ಟರು.

ವಾರಕ್ಕೊಂದು ದಿನ ಮೌಲ್ಯಶಿಕ್ಷಣ ಕಡ್ಡಾಯ

ಪುಟ ೧➡ ಕಳೆದ ಶೈಕ್ಷಣಿಕ ವರ್ಷದ ದ್ವಿತೀಯಾರ್ಧದಲ್ಲಿ ಪ್ರಾಯೋಗಿಕವಾಗಿ ಆರಂಭಗೊಂಡಿದ್ದ ಮೌಲ್ಯ ಶಿಕ್ಷಣಕ್ಕೆ ಈ ವರ್ಷ ಮತ್ತಷ್ಟು ಬಲ ನೀಡಲಾಗಿದ್ದು, ಈ ಹಿಂದೆ ಡಿಜಿಟಲ್ ಪುಸ್ತಕಗಳ ಮೂಲಕ ಬೋಧನೆ ನಡೆದಿದ್ದರೆ, ಇದೀಗ ಮುದ್ರಿತ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತಿದೆ. ಶಾಲಾ ವೇಳಾಪಟ್ಟಿಯಲ್ಲಿಯೇ ಪ್ರತ್ಯೇಕ ಅವಧಿಯನ್ನು ಮೀಸಲಿಡುವ ಮೂಲಕ ಇದನ್ನು ಶಿಕ್ಷಣದ ಅವಿಭಾಜ್ಯ ಅಂಗವನ್ನಾಗಿ ರೂಪಿಸಲಾಗಿದೆ.

ಮೌಲ್ಯ ಶಿಕ್ಷಣವನ್ನು ಪ್ರತ್ಯೇಕ ವಿಷಯವನ್ನಾಗಿ ಬೋಧಿಸುವ ಬದಲಿಗೆ ಗಣಿತ, ವಿಜ್ಞಾನ ಮತ್ತು ಸಮಾಜವಿಜ್ಞಾನ ಪಠ್ಯಗಳೊಂದಿಗೆ ಸೇರಿರುವುದು ಈ ಯೋಜನೆಯ ವಿಶೇಷತೆ. ಉದಾಹರಣೆಗೆ ಭಾಷಾ ಪಾಠಗಳಲ್ಲಿ ಗೌರವ ಮತ್ತು ವೈವಿಧ್ಯತೆ ಕುರಿತು ಚಟುವಟಿಕೆಗಳನ್ನು ಸೇರಿಸಲಾಗಿದೆ. ಗಣಿತದಲ್ಲಿ ಹೊಣೆಗಾರಿಕೆ ಎಂಬ ಉಪಮೌಲ್ಯದೊಂದಿಗೆ ಜೀವನ ಮೌಲ್ಯಗಳನ್ನು ಸೇರ್ಪಡಿಸುವ ಚಟುವಟಿಕೆಗಳು ಹೊಂದಿವೆ. ಇದರೊಂದಿಗೆ ವಿದ್ಯಾರ್ಥಿಗಳಲ್ಲಿ ಮೌಲ್ಯ ಶಿಕ್ಷಣದಿಂದ ಉಂಟಾಗುವ ಸಕಾರಾತ್ಮಕ ವರ್ತನಾ ಬದಲಾವಣೆಗಳನ್ನು ಅವಲೋಕಿಸಿ ಅದನ್ನು ಸಮಗ್ರ ಪ್ರಗತಿ ಪತ್ರದಲ್ಲಿ ದಾಖಲಿಸಬೇಕಿದೆ.

ಏಕೆ ಅಗತ್ಯವಾಯಿತು ಮೌಲ್ಯ ಶಿಕ್ಷಣ?: ಇತ್ತೀಚಿನ ವರ್ಷಗಳಲ್ಲಿ ಶಾಲಾ ಹಂತದಲ್ಲಿಯೇ ಶಿಸ್ತು ಸಮಸ್ಯೆಗಳು, ಸೈಬರ್ ಕಿರುಕುಳ, ಮಾದಕ ವಸ್ತುಗಳ ಆಕರ್ಷಣೆ, ಹಿಂಸಾತ್ಮಕ ಪ್ರವೃತ್ತಿಗಳು ಮತ್ತು ಸಾಮಾಜಿಕ ಜವಾಬ್ದಾರಿಯ ಕೊರತೆ ಕಂಡುಬರುತ್ತಿದೆ. ಕೇವಲ ಶೈಕ್ಷಣಿಕ ಸಾಧನೆಗಳಿಂದ ಸಮಾಜಕ್ಕೆ ಉತ್ತಮ ನಾಗರಿಕರನ್ನು ರೂಪಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ.

ಅದರೊಂದಿಗೆ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಕೂಡ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆ, ವ್ಯಕ್ತಿತ್ವ ವಿಕಸನ ಮತ್ತು ಮೌಲ್ಯಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಈ ಶಿಫಾರಸ್ಸುಗಳ ಅನುಸಾರ ರಾಜ್ಯ ಸರ್ಕಾರವೂ ಮೌಲ್ಯ ಶಿಕ್ಷಣವನ್ನು ಶಿಕ್ಷಣದ ಅವಿಭಾಜ್ಯ ಅಂಗವನ್ನಾಗಿ ಮಾಡಲು ಮುಂದಾಗಿದೆ.

ಮೌಲ್ಯ ಶಿಕ್ಷಣಕ್ಕೆ ಶಾಲಾ ವೇಳಾಪಟ್ಟಿಯಲ್ಲಿ ಪ್ರತಿ ತರಗತಿಗೆ ಒಂದು ಅವಧಿಯನ್ನು ನಿಗದಿಪಡಿಸಲಾಗಿದ್ದು, ವಿದ್ಯಾರ್ಥಿಗಳು ಮೌಲ್ಯಗಳನ್ನು ಅಳವಡಿಸಿಕೊಳ್ಳುತ್ತಿರುವ ಬಗ್ಗೆ ಅವರ ವರ್ತನೆಯಲ್ಲಾಗುತ್ತಿರುವ ಸಕಾರಾತ್ಮಕ ಬದಲಾವಣೆಯ ಬಗ್ಗೆ ನಿರಂತರ ಅನುಪಾಲನೆ ಮಾಡಲಾಗುವುದು.
■ **ಅನಿತಾ ವಿ. ನಾಜರೆ,** ನಿರ್ದೇಶಕಿ (ಪ್ರಭಾರ), ಡಿಎಸ್‌ಇಆರ್‌ಟಿ

ಬಿಟ್‌ಕಾಯಿನ್: ನಲಪಾಡ್ ವಿರುದ್ಧ ಎಸ್‌ಐಟಿ ಚಾರ್ಜ್‌ಶೀಟ್

ಬೆಂಗಳೂರು: ತುಮಕೂರಿನ ಖಾಸಗಿ ಕಂಪನಿಯ ಬಿಟ್‌ಕಾಯಿನ್ ಕಳವು ಕೃತ್ಯದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯಿಂದ ಯುವ ಕಾಂಗ್ರೆಸ್ ಮುಖಂಡ ಮೊಹಮ್ಮದ್ ನಲಪಾಡ್‌ಗೆ ಪಾಲು ಸಿಕ್ಕಿದೆ ಎಂದು ಎಸ್‌ಐಟಿ ಸಲ್ಲಿಸಿರುವ



ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿದೆ. ಇದರಿಂದಾಗಿ ಮೊಹಮ್ಮದ್ ನಲಪಾಡ್‌ಗೆ ಸಂಕಷ್ಟ ಎದುರಾಗಿದೆ.

ಬಿಟ್ ಕಾಯಿನ್ ಪ್ರಕರಣದ ಸಂಬಂಧ ನ್ಯಾಯಾಲಯಕ್ಕೆ ವಿಶೇಷ ತನಿಖಾ ತಂಡ (ಎಸ್‌ಐಟಿ) ನಲಪಾಡ್ ವಿರುದ್ಧ ಆರೋಪಪಟ್ಟಿ ಸಲ್ಲಿಸಿದೆ. ಈ ಆರೋಪ ಪಟ್ಟಿಯಲ್ಲಿ, ನಲಪಾಡ್ ಜೊತೆ ಅವರ ಆಪ್ತ ಸ್ನೇಹಿತರ ಹೆಸರೂ ಹಗರಣದಲ್ಲಿ ಪ್ರಸ್ತಾಪವಾಗಿದೆ. 2017ರಲ್ಲಿ ಬಿಟ್ ಕಾಯಿನ್ ಟ್ರೇಡಿಂಗ್ ಕಂಪನಿಯಾದ ತುಮಕೂರಿನ ಖಾಸಗಿ ಕಂಪನಿ ಶ್ರೀಕಿ ಗ್ಯಾಂಗ್ ದೋಚಿತ್ತು.

ಈ ಬಗ್ಗೆ ತುಮಕೂರಿನ ಹೊಸ ಬಡಾವಣೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಪ್ರಕರಣದ ತನಿಖೆ ಪೂರ್ಣಗೊಳಿಸಿದ ಎಸ್ ಐಟಿ ಅಧಿಕಾರಿಗಳು, ಕೆಲ ದಿನಗಳ ಹಿಂದೆ ಹ್ಯಾಕರ್ ಶ್ರೀಕಿ ಮತ್ತು ಆತನ ಸ್ನೇಹಿತ ರಾಬಿನ್ ವಂಡೇವಾಲಾ, ಮೊಹಮ್ಮದ್ ನಲಪಾಡ್ ಸೇರಿದ ಇತರರ ವಿರುದ್ಧ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದೆ ಎಂದು ತಿಳಿದು ಬಂದಿದೆ.

ಹಣ ವರ್ಗಾವಣೆ ಆರೋಪದಲ್ಲಿ ಜಾರಿ ನಿರ್ದೇಶನಾಲಯ (ಇಡಿ) ತನಿಖೆ ನಡೆಸುತ್ತಿದ್ದು, ಇತ್ತೀಚೆಗೆ ನಲಪಾಡ್ ಮನೆ ಮೇಲೆ ಈ ಸಂಬಂಧ ದಾಳಿಯೂ ನಡೆಸಿತು. ಇದರ ಬೆನ್ನಲ್ಲೇ ಎಸ್‌ಐಟಿ ಚಾರ್ಜ್ ಶೀಟ್ ಸಲ್ಲಿಸಿದೆ. ತುಮಕೂರಿನ ಖಾಸಗಿ ಕಂಪನಿಯ ಬಿಟ್ ಕಾಯಿನ್ ಕಳವು ಕೃತ್ಯದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯಿಂದ ನಲಪಾಡ್‌ಗೆ ಪಾಲು ಸಿಕ್ಕಿದೆ ಎಂದು ಎಸ್‌ಐಟಿ ಉಲ್ಲೇಖಿಸಿದೆ.

ಅಂತಿಮ ದರ್ಶನ



ಭಾನುವಾರ ರಾತ್ರಿ ಹೃದಯಾಘಾತದಿಂದ ನಿಧನರಾದ ಎಐಸಿಸಿ ಕಾರ್ಯದರ್ಶಿ, ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸೂರಜ್ ಹೆಗ್ಡೆ ಅವರಿಗೆ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅಂತಿಮ ನಮನ ಸಲ್ಲಿಸಿದರು. ಈ ವೇಳೆ ಸಿಎಂ ಡಿ.ಕೆ. ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ ಇದ್ದರು. ಸಂಜೆ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಜೂನ್‌ನಲ್ಲಿ ತುಂಬಿ ತುಳುಕುತ್ತಿದ್ದ ಹಾರಂಗಿ ಜಲಾಶಯ ಈಗ ಖಾಲಿ

ಮಡಿಕೇರಿ: ಜಿಲ್ಲೆಯ ಪ್ರಮುಖ ಜಲಾಶಯವಾದ ಹಾರಂಗಿ ಅಣೆಕಟ್ಟೆಯು ಕಳೆದ ಸಾಲಿನ ಜೂನ್ ಮೊದಲ ವಾರದಲ್ಲೇ ಶೇ.90ರಷ್ಟು ಭರ್ತಿಯಾಗಿತ್ತು.

ಅಲ್ಲದೆ ಅಣೆಕಟ್ಟೆಯ ಸುರಕ್ಷತೆ ದೃಷ್ಟಿಯಿಂದ ಮತ್ತು ಜೂನ್, ಜುಲೈ ತಿಂಗಳಲ್ಲಿ ಹೆಚ್ಚು ಮಳೆ ಬೀಳುವ ಮುನ್ಸೂಚನೆಯ ಹಿನ್ನೆಲೆಯಲ್ಲಿ ನದಿಗೆ ನೀರನ್ನು ಹರಿಸಲಾಗುತ್ತಿತ್ತು. ಆದರೆ ಈ ಸಾಲಿನಲ್ಲಿ



ಮುಂಗಾರು ಮಳೆಯಲ್ಲಿ ಹಿನ್ನಡೆಯಾಗಿರುವುದರಿಂದ ಅಣೆಕಟ್ಟೆಯ ನೀರಿನ ಸಂಗ್ರಹ ತೀರಾ ಕಡಿಮೆ ಇದ್ದು, ಜಲಾಶಯ ಖಾಲಿ ಖಾಲಿಯಾಗಿ ಗೋಚರಿಸುತ್ತಿದೆ. ಕಳೆದ ಸಾಲಿನಲ್ಲಿ ಜೂನ್ ಮೊದಲ ವಾರದಲ್ಲಿ ಅಣೆಕಟ್ಟೆಯಲ್ಲಿ 6.50. ಟಿ.ಎಂ.ಸಿ. ನೀರು ಸಂಗ್ರಹವಾಗಿತ್ತು. ಕಳೆದ ಬಾರಿ ಮೇ ತಿಂಗಳಲ್ಲೇ ಹೆಚ್ಚು ಮಳೆ ಬಿದ್ದ ಕಾರಣದಿಂದಾಗಿ ಅಣೆಕಟ್ಟೆಯ ಒಳ ಹರಿವು 1,800 ಕ್ಯುಸೆಕ್ಸ್‌ಗಿಂತಲೂ ಅಧಿಕವಾಗಿತ್ತು.

ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗಿದ್ದರಿಂದ ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹ ಹೆಚ್ಚಾಗಿ ಜೂನ್ ಮೊದಲ ವಾರದಲ್ಲೇ ವಿದ್ಯುತ್ ಘಟಕದ ಮೂಲಕ ನದಿಗೆ 1600 ಕ್ಯುಸೆಕ್ಸ್ ನೀರನ್ನು ಹರಿಸಲಾಗಿತ್ತು. ಆದರೆ ಈ ಸಾಲಿನಲ್ಲಿ ಮಳೆಯ ಪ್ರಮಾಣ ತೀರಾ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಪ್ರಸಕ್ತ ಅಣೆಕಟ್ಟೆಯ ನೀರಿನ ಮಟ್ಟ ಕೇವಲ 2.97 ಟಿ.ಎಂ.ಸಿ.ಗೆ ಇಳಿದಿದೆ. ದಿನಂಪ್ರತಿ ಕೇವಲ 200 ಕ್ಯುಸೆಕ್ಸ್ ನೀರನ್ನು ಮಾತ್ರ ನದಿಗೆ ಹರಿಸಲಾಗುತ್ತಿದೆ. ಜಲಾಶಯದ ಸುರಕ್ಷತೆಯ ದೃಷ್ಟಿಯಿಂದ ಕಾವೇರಿ ನೀರಾವರಿ ನಿಗಮದ ಸೂಚನೆಯಂತೆ ನೀರಾ ವರಿ ಇಲಾಖೆಯಿಂದ ಅಣೆಕಟ್ಟೆಯ ಮುಖ್ಯ ಕ್ರಸ್ಟ್ ಗೇಟ್‌ಗಳ ದುರಸ್ತಿ ಸೇರಿದಂತೆ ಮುನ್ನೆಚ್ಚರಿಕೆ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಅಣೆಕಟ್ಟೆಯ ಸಂಪೂರ್ಣವಾಗಿ ಭರ್ತಿಯಾದ ಸಂಧರ್ಭದಲ್ಲಿ ನೀರಾವರಿ ಸಲಹಾ ಸಮಿತಿ ಸಭೆಯ ನಂತರ ಮುಂದಿನ ಹಂಗಾಮು ಬೆಳೆಗೆ ನೀರು ಹರಿಸಲಾಗುವುದು ಎಂದು ಅಣೆಕಟ್ಟೆಯ ಉಸ್ತುವಾರಿ ಕಿರಣ್ ದೇವಯ್ಯ ಮಾಹಿತಿ ನೀಡಿದ್ದಾರೆ.

ಕಿರುಸುದ್ದಿ

ಕಾರ್ತಿಕ್ ಘೋರ್ಪಡೆ ನಿಧನಕ್ಕೆ ಗಣ್ಯರ ಸಂತಾಪ

ಸಂಡೂರು: ಇಲ್ಲಿನ ಬಿಜೆಪಿ ಹಿರಿಯ ಮುಖಂಡ, ಸಂಡೂರು ಘೋರ್ಪಡೆ ರಾಜವಂಶಸ್ಥರಾದ ಕಾರ್ತಿಕೇಯ ಮುರಾರಿರಾವ್ ಘೋರ್ಪಡೆ(66) ಅವರು ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರಿಗೆ ಪತ್ನಿ ಸೇರಿದಂತೆ ಇಬ್ಬರು ಪುತ್ರಿಯರಿದ್ದು, ಅನೇಕ ಬಂಧು ಬಳಗವನ್ನು ಅಗಲಿದ್ದಾರೆ. ಕಾರ್ತಿಕ್ ಘೋರ್ಪಡೆ ಅವರ ಅಕಾಲಿಕ ನಿಧನದ ಸುದ್ದಿ ತೀವ್ರ ಆಘಾತವನ್ನುಂಟು ಮಾಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ. ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ, ನಗರ ಕ್ಷೇತ್ರದ ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ, ಎಮ್ಮೆಲ್ಸಿ ವೈ. ಎಂ.ಸತೀಶ್, ಮಾಜಿ ಸಚಿವ ಬಿ.ಶ್ರೀರಾಮುಲು, ಮಾಜಿ ಸಂಸದ ಸಣ್ಣ ಫಕೀರಪ್ಪ, ಎಸ್ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಜಿ.ಟಿ.ಪಂಪಾಪತಿ, ಮಾಜಿ ಶಾಸಕರಾದ ಎಂ.ಎಸ್. ಸೋಮಲಿಂಗಪ್ಪ, ಟಿ.ಎಚ್.ಸುರೇಶ್ ಬಾಬು ಸೇರಿದಂತೆ ಸಂಡೂರಿನ ಕಾರ್ತಿಕ್ ಕಾಳೆ, ಸಂಡೂರು ರಮೇಶ್ ಅನೇಕ ಗಣ್ಯರು, ಸ್ಮಯರ್ ಉಕ್ಕು ಕಾರ್ಖಾನೆ ಎಲ್ಲ ಸಿಬ್ಬಂದಿ, ಶಿಕ್ಷಣ ಸಂಸ್ಥೆಯ ಎಲ್ಲ ಸಿಬ್ಬಂದಿ, ಸಂತಾಪ ಸೂಚಿಸಿದ್ದಾರೆ.

ಮಹಿಳೆ ಮೇಲೆ ಅತ್ಯಾಚಾರ: ಹತ್ತು ಮಂದಿ ಬಂಧನ

ದಾವಣಗೆರೆ: ಚನ್ನಗಿರಿ ತಾಲೂಕಿನಲ್ಲಿ ಜಮೀನೊಂದರಲ್ಲಿ 41 ವರ್ಷದ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಆಕೆ ಖಾಸಗಿ ಫೋಟೋ ಹಾಗೂ ವಿಡಿಯೋ ಚಿತ್ರೀಕರಿಸಿ ಹರಿಬಿಟ್ಟ ಆರೋಪದಲ್ಲಿ ಓರ್ವ ಅಪ್ರಾಪ್ತ ಸೇರಿದಂತೆ 10 ಮಂದಿ ವಿರುದ್ಧ ಬಸವಾಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪತಿ ಕುಡಿದು ಬಂದಿದ್ದರಿಂದ ಮುನಿಸಿಕೊಂಡ ಮಹಿಳೆಯು ಜೂ.3ರಂದು ಸಂಜೆ 7 ಗಂಟೆ ಸುಮಾರಿಗೆ ಗಂಡನ ಊರಿನಿಂದ ತನ್ನ ತವರಿಗೆ ಹೊರಟಿದ್ದಳು. ಅದೇ ಗ್ರಾಮದ ಚಿಕನ್ ಅಂಗಡಿ ಬಳಿ ಅಳುತ್ತಾ ಬರುತ್ತಿದ್ದ ಸಂತ್ರಸ್ತೆಯನ್ನುಯುವಕನೋರ್ವ ಮಾತನಾಡಿಸಿ ತಂಪು ಪಾನೀಯ ಕುಡಿಸಿದ್ದಾನೆ. ಅಷ್ಟರಲ್ಲಿ ಆಕೆಗೆ ಮತ್ತು ಬಂದಂತಾಗಿದ್ದು, ಜೊತೆಗಿದ್ದ ಇನ್ನೊಬ್ಬನೊಂದಿಗೆ ಮನೆಗೆ ಬಿಡುವುದಾಗಿ ಹೇಳಿ ಬೈಕ್‌ನಲ್ಲಿ ಕೂರಿಸಿಕೊಂಡು, ಜಮೀನೊಂದಕ್ಕೆ ಕರೆದೊಯ್ದಿದ್ದರು. ಜೂ.8ರಂದು ಆಕೆಯ ಅಣ್ಣನ ಮಗ ಕರೆ ಮಾಡಿ, ಫೋಟೋ, ವಿಡೀಯೋ ಮೊಬೈಲ್‌ಗಳಲ್ಲಿ ಹರಿದಾಡುತ್ತಿರುವ ಸಂಗತಿ ತಿಳಿಸಿದ್ದಾನೆ. ಆಗ ಜೂ. 3ರಂದು ರಾತ್ರಿ ನಡೆದ ಘಟನೆ ಬಗ್ಗೆ ಆಕೆ ಗಮನಕ್ಕೆ ತಂದಿದ್ದಾಳೆ. ಆಗ ಮಹಿಳೆ ಅಣ್ಣನ ಮಗ ಯಲೋದಹಳ್ಳಿಯ ಇಸ್ತ್ರೀ ನಾಗರಾಜ ಎಂಬಾತನ ಬಳಿ ಹೋಗಿ ವಿಚಾರಿಸಿದಾಗ ಮಹಿಳೆ ಮೇಲೆ ತಾನು ಸೇರಿದಂತೆ ಚಟಾಕಿ ನಾಗರಾಜ, ಮಧು, ಅರ್ಜುನ, ಬಸ ವಂತ, ಕುಂದೂರ ಮಾರುತಿ, ಮನು, ಜೋಗಿ ಸುನೀಲ, ಪ್ರದೀಪ ಸಾಮೂಹಿಕ ಅತ್ಯಾಚಾರ ಎಸಗಿದ್ದಾಗಿ ಬಾಯಿ ಬಿಟ್ಟಿದ್ದಾನೆ.

ರಾಜ್ಯ ಸರ್ಕಾರದಿಂದ ಕನಿಷ್ಠ ವೇತನ ಹೆಚ್ಚಳ ತೀರ್ಮಾನ: ಈಶ್ವರ್ ಖಂಡ್ರೆ

ಜಿ ರಾಮ್ ಜಿ ವೇತನ ಹೆಚ್ಚಿಸಿ

ಬೆಂಗಳೂರು: ಪ್ರಸಕ್ತ ಬೆಲೆ ಏರಿಕೆ ಸರಿದೂಗಿಸಲು ರಾಜ್ಯ ಸರ್ಕಾರ ಕಾರ್ಮಿಕರ ಕನಿಷ್ಠ ವೇತನವನ್ನು ಹೆಚ್ಚಿಸಲು ತೀರ್ಮಾನಿಸಿದ್ದು, ಈ ಹಿಂದಿನ ಮನರೇ ಗಾದ ಹೊಸ ರೂಪವಾದ ವಿಬಿ-ಜಿ ರಾಮ್ ಜಿ ಯ ಕನಿಷ್ಠ ವೇತನವನ್ನು ಹೆಚ್ಚಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಕೇಂದ್ರ ಸಚಿವರನ್ನು ಆಗ್ರಹಿಸಿದರು.

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅಧ್ಯಕ್ಷತೆಯಲ್ಲಿ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರೊಂದಿಗೆ ಮಂಗಳವಾರ ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಈಗಾಗಲೇ ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳಕ್ಕೆ ಅನುಮೋದನೆ ನೀಡಿದ್ದು, ಇದೇ ಪ್ರಕಾರವಾಗಿ ಕೇಂದ್ರ ಸರ್ಕಾರವೂ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಹಣ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಗ್ರಾಮೀಣ ಜನರ ಬದುಕು ಹಸನಾಗಿಸಲು ಶ್ರಮಿಸಲಾಗುವುದು ಎಂದರು. ಜೂ. 28 ಹಾಗೂ 29ರಂದು ಹೊಸದಿಲ್ಲಿಯಲ್ಲಿ ವಿಬಿ- ಜಿ ರಾಮ್ ಜಿ ಯೋಜನೆ ಅನುಷ್ಠಾನದ ಬಗ್ಗೆ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಸಭೆ ಕರೆಯಲಾಗಿದ್ದು, ತಾವು ಈ ಸಭೆಯಲ್ಲಿ ಭಾಗಿಯಾಗಿ, ರಾಜ್ಯದ ಬೇಡಿಕೆಗಳನ್ನು ಮಂಡಿಸುವುದಾಗಿ ಈಶ್ವರ ಖಂಡ್ರೆ ತಿಳಿಸಿದರು. ಸಭೆಯಲ್ಲಿ ಇಲಾಖೆಯ ಕಾರ್ಯದರ್ಶಿ ಸಮೀರ್ ಶುಕ್ಲ ಮತ್ತಿತರರು ಭಾಗಿಯಾಗಿದ್ದರು.

ವಿಮಾನ ಸಮಯ ಬದಲಾವಣೆಗೆ ಸಚಿವ ಗರಂ

ಬೆಂಗಳೂರು: ಸ್ಟಾರ್ ಏರ್ ವಿಮಾನಯಾನ ಸಂಸ್ಥೆ ಬೆಂಗಳೂರು-ಬೀದರ್- ಬೆಂಗಳೂರು ನಡುವಿನ ವೇಳಾಪಟ್ಟಿಯಲ್ಲಿ ಸಮಯ ಬದಲಾವಣೆ ಮಾಡಿರುವುದಕ್ಕೆ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ



ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಮುಖ್ಯಮಂತ್ರಿಯವರಿಗೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರಿಗೆ ಪತ್ರ ಬರೆದಿರುವ ಅವರು, ಈ ಹಿಂದೆ ಪ್ರತಿದಿನ ಬೆಂಗಳೂರಿನಿಂದ ಬೆಳಗ್ಗೆ 6.30ಕ್ಕೆ ಹಾರಾಟ ಆರಂಭಿಸುತ್ತಿದ್ದ 84 ಆಸನಗಳ ವಿಮಾನ 7.45ಕ್ಕೆ ಬೀದರ್ ವಿಮಾನ ನಿಲ್ದಾಣಕ್ಕೆ ಆಗಮಿಸುತ್ತಿತ್ತು. ಬಳಿಕ ಬೆಳಗ್ಗೆ 8.15ಕ್ಕೆ ಬೀದರ್‌ನಿಂದ ಹಾರಾಟ ಆರಂಭಿಸಿ ಬೆಳಗ್ಗೆ 9.30ಕ್ಕೆ ಬೆಂಗಳೂರಿಗೆ ಆಗಮಿಸುತ್ತಿತ್ತು ಇದು ಬೀದರ್ ಮತ್ತು ಸುತ್ತಮುತ್ತಲ ಜಿಲ್ಲೆಗಳ ಹಾಗೂ ನೆರೆಯ ತೆಲಂಗಾಣದ ವಿಮಾನಯಾನ ಪ್ರಯಾಣಿಕರಿಗೆ, ವ್ಯಾಪಾರಸ್ಥರಿಗೆ ಮತ್ತು ಪ್ರವಾಸಿಗರಿಗೆ ಅನುಕೂಲಕರವಾಗಿತ್ತು ಎಂದು ತಿಳಿಸಿದ್ದಾರೆ. ಬೀದರ್ ವಿಮಾನ ನಿಲ್ದಾಣ ಭಾರತೀಯ ವಾಯುಪಡೆಗೆ ಸೇರಿದ್ದು, ಈ ಹಿಂದೆ ಇದ್ದ ಬೆಳಗಿನ ವೇಳಾಪಟ್ಟಿಗೆ ರಕ್ಷಣಾ ಇಲಾಖೆ ಮತ್ತು ಕೇಂದ್ರ ಸರ್ಕಾರದ ನಾಗರಿಕ ವಿಮಾನಯಾನ ಸಚಿವಾಲಯ ತನ್ನ ಅನುಮತಿ ನೀಡಿತ್ತು. ಆದರೆ, ಸ್ಟಾರ್ ಏರ್ ಸಂಸ್ಥೆ ಈಗ ಏಕಾ ಏಕಿ ವೇಳಾಪಟ್ಟಿಯನ್ನು ಬದಲಾವಣೆ ಮಾಡಿ, ಜೂ.10ರಿಂದ ಮಧ್ಯಾಹ್ನ 12.30ಕ್ಕೆ ಬೆಂಗಳೂರು ವಿಮಾನ ನಿಲ್ದಾಣದಿಂದ ಹಾರಾಟ ಆರಂಭಿಸಿ 1.45ಕ್ಕೆ ಬೀದರ್‌ಗೆ ಬರಲಿದೆ. ಮತ್ತೆ ಬೀದರ್‌ನಿಂದ ಮಧ್ಯಾಹ್ನ 2.30ಕ್ಕೆ ಹೊರಟು ಬೆಂಗಳೂರಿಗೆ 3.30ಕ್ಕೆ ತಲುಪಲಿದೆ. ಈ ವೇಳಾಪಟ್ಟಿಯಿಂದ ಯಾವುದೇ ಪ್ರಯಾಣಿಕರಿಗೆ ಅನುಕೂಲ ಆಗುವುದಿಲ್ಲ. ಇದರಿಂದಾಗಿ ಪ್ರಯಾಣಿಕರ ಸಂಖ್ಯೆ ಇಳಿಮುಖವಾಗುವ ಸಾಧ್ಯತೆಯೂ ಇದೆ ಎಂದು ತಿಳಿಸಿದ್ದಾರೆ. ಸರ್ಕಾರ ಮತ್ತು ಕೆಕೆಆರ್ ಡಿಬಿಯಿಂದ ನೀಡುತ್ತಿರುವ ವಿಜಿಎಫ್ ನಿಷ್ಪ್ರಯೋಜಕವಾಗುತ್ತದೆ ಎಂದು ಹೇಳಿದರು.

> ಜು.1ರಿಂದ ಜಾರಿಯಾಗಬೇಕಿರುವ ಮನರೇಗಾ ವಿಬಿ-ಜಿ ರಾಮ್ ಜಿ ಅಡಿಯಲ್ಲಿ ಕರ್ನಾಟಕಕ್ಕೆ ಕೇಂದ್ರ ಸರ್ಕಾರ 60:40ರ ಅನುಪಾತದಲ್ಲಿ 5,709.90 ಕೋಟಿ ರೂ. ಮಧ್ಯಂತರ ಹಂಚಿಕೆ ಮಾಡಿದ್ದು, ಇದಕ್ಕೆ ಶೇ.40ರ ಅನುಪಾತದಲ್ಲಿ 3806.60 ಕೋಟಿ ರೂ. ನೀಡಬೇಕಾಗಿದೆ, ಈ ಯೋಜನೆ ಅನುಷ್ಠಾನಕ್ಕಾಗಿ ಸಿಎಂಗೆ ಪ್ರಸ್ತಾವನೆ ಸಲ್ಲಿಸಲಾಗುವುದು.
> ■ **ಈಶ್ವರ ಖಂಡ್ರೆ,** ಸಚಿವ

ಖರ್ಗೆ ಹೇಳಿಕೆಗೆ ಬಿವೈವಿ ತಿರುಗೇಟು

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷೇಧಿಸಲು ಪ್ರಯತ್ನಿಸಿದ ಅನೇಕ ಸರ್ಕಾರಗಳು ಜನರಿಂದ ತಿರಸ್ಕರಿಸಲ್ಪಟ್ಟಿವೆ



ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ. ಗೃಹಸಚಿವ ಪ್ರಿಯಾಂಕ್ ಖರ್ಗೆ ಅವರ ಆರ್‌ಎಸ್‌ಎಸ್ ಕುರಿತ ಹೇಳಿಕೆಗೆ ವಿಜಯೇಂದ್ರ ಅವರು ಸಾಮಾಜಿಕ ಜಾಲತಾಣದಲ್ಲಿ ತಿರುಗೇಟು ನೀಡಿದ್ದಾರೆ.

ಪ್ರಿಯಾಂಕ್ ಖರ್ಗೆ ಅವರೇ ನಿಮ್ಮ ಮೂಲಕ ಹೇಳಿಸಿರುವ ಮಾತು ನಿಮ್ಮ ಮುಖ್ಯಸ್ಥರದೇ (ಚೀಫ್) ಆಗಿರಬೇಕು. ಹಲವು ಸರ್ಕಾರಗಳು ಬಂದು ಹೋಗಿವೆ. ಆರ್‌ಎಸ್‌ಎಸ್ ಅನ್ನು ನಿಷೇಧಿಸಲು ಪ್ರಯತ್ನಿಸಿದ ಅನೇಕ ಸರ್ಕಾರಗಳು ಅಂತಿಮವಾಗಿ ಜನರಿಂದ ತಿರಸ್ಕರಿಸಲ್ಪಟ್ಟವು. ಆದರೆ, ಆರ್‌ಎಸ್‌ಎಸ್ ಹಿಂದು ಸಮಾಜವನ್ನು ಒಗ್ಗೂಡಿಸುವ ಮತ್ತು ಹಿಂದು ಧರ್ಮದ ಸಂದೇಶವನ್ನು ಪ್ರಪಂಚದೊಂದಿಗೆ ಹಂಚಿಕೊಳ್ಳುವ ಸಾಮರ್ಥ್ಯವಿರುವ ಬಲವಾದ, ಸಮೃದ್ಧ ಭಾರತದ ದೃಷ್ಟಿಕೋನಕ್ಕೆ ಕೊಡುಗೆ ನೀಡುವ ತನ್ನ ಧ್ಯೇಯದಲ್ಲಿ ದೃಢವಾಗಿ ನಿಂತಿದೆ ಎಂದು ತಿಳಿಸಿದ್ದಾರೆ.

ನೀವು ಎತ್ತಿಹಿಡಿಯಲು ಪ್ರತಿಜ್ಞೆ ಮಾಡಿದ ಸಂವಿಧಾನದ ಚೌಕಟ್ಟಿನೊಳಗೆ ಆರ್‌ಎಸ್‌ಎಸ್ ಕಾರ್ಯ ನಿರ್ವಹಿಸುತ್ತದೆ. ಅಲ್ಲದೇ ನಿಮಗೆ ನಿರಾಶೆ ಉಂಟು ಮಾಡುವಂತೆ, ಆರ್‌ಎಸ್‌ಎಸ್ ಈಗ ತನ್ನ ಸ್ಥಾಪನೆಯ 100 ವರ್ಷಗಳನ್ನು ಪೂರೈಸಿದೆ. ಇದು ನಿಮಗೆ ಕಷ್ಟಕರವಾಗಿರುತ್ತದೆ ಮತ್ತು ಬಹುಶಃ ನಿಮ್ಮ ನೈಜ ಮುಖ್ಯಸ್ಥ ಒಪ್ಪಿಕೊಳ್ಳುವುದು ಇನ್ನೂ ಹೆಚ್ಚು ಕಷ್ಟಕರವಾಗಿರುತ್ತದೆ ಎಂದು ಲೇವಡಿ ಮಾಡಿದ್ದಾರೆ.

> ಆರೆಸ್ಸೆಸ್ ನಿಷೇಧಿಸಲು ಪ್ರಯತ್ನಿಸಿದ ಸರ್ಕಾರಗಳಿಗೆ ಜನರಿಂದ ತಿರಸ್ಕಾರ

ಏತನ್ಮಧ್ಯೆ, ನಿಮ್ಮ ಕಲಬುರಗಿ ಕ್ಷೇತ್ರವು ಹಲವಾರು ಅಭಿವೃದ್ಧಿ ಸೂಚಕಗಳಲ್ಲಿ ಕಳಪೆ ಸ್ಥಾನದಲ್ಲಿದೆ. ಇದು ವರ್ಷಗಳ ಅಸಮರ್ಪಕ ಆಡಳಿತ, ನಿಷ್ಪರಿಣಾಮಕಾರಿ ನಾಯಕತ್ವವನ್ನು ಪ್ರತಿಬಿಂಬಿಸುತ್ತದೆ. ನೀವು ಆರ್‌ಎಸ್‌ಎಸ್ ಮೇಲೆ ದಾಳಿ ಮಾಡುವುದು ಹೆಡ್‌ಲೈನ್ಸ್‌ಗಳನ್ನು ಸೃಷ್ಟಿಸಬಹುದು. ಆದರೆ, ಅದು ನಿಮ್ಮನ್ನು ಆಯ್ಕೆ ಮಾಡಿದ ಜನರ ಜೀವನವನ್ನು ಸುಧಾರಿಸುವುದಿಲ್ಲ ಎಂದಿದ್ದಾರೆ. ಕಲಬುರಗಿ ಮತ್ತು ಕರ್ನಾಟಕದ ಜನರು ಉತ್ತಮ ಆಡಳಿತ, ಸಮರ್ಪಕ ಅಭಿವೃದ್ಧಿ, ಹೊಣೆಗಾರಿಕೆ ಮತ್ತು ನಾಯಕತ್ವವನ್ನು ನಿರೀಕ್ಷಿಸುತ್ತಾರೆ. ಆಡಳಿತ ವೈಫಲ್ಯಗಳಿಂದ ಅವರ ಗಮನವನ್ನು ಬೇರೆಡೆ ಸೆಳೆಯಲು ಇಂತಹ ಹೇಳಿಕೆಗಳು ಯುಕ್ತವಲ್ಲ ಎಂದು ವಿಜಯೇಂದ್ರ ಎಚ್ಚರಿಸಿದ್ದಾರೆ.

ಶೇ.5.7ರಷ್ಟು ರಫ್ತು ವಲಯ ಪ್ರಗತಿ

ಬೆಂಗಳೂರು: ಕಳೆದ 12 ವರ್ಷಗಳ ಅವಧಿಯಲ್ಲಿ ಭಾರತದ ಒಟ್ಟಾರೆ ರಫ್ತು ವಲಯವು ಶೇ.5.7ರಷ್ಟು ಬೆಳವಣಿಗೆ ದಾಖಲಿಸಿದ್ದು, ಈ ಮೂಲಕ ಜಾಗತಿಕ ಮಟ್ಟದಲ್ಲಿ ದೇಶದ ವ್ಯಾಪಾರ ಸಾಮರ್ಥ್ಯ ವಿಸ್ತರಣೆ ಯಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯದ ಹೆಚ್ಚುವರಿ ಕಾರ್ಯ ದರ್ಶಿ ದರ್ಪಣ್ ಜೈನ್ ತಿಳಿಸಿದರು.

ಮುಕ್ತ ವ್ಯಾಪಾರ ಒಪ್ಪಂದ, ಐಟಿ ಸೇವೆಗಳ ಕ್ಷೇತ್ರದಲ್ಲಿ ಭಾರತದ 12 ವರ್ಷಗಳ ಪ್ರಗತಿ ಕುರಿತು ನಗರದ ಖಾಸಗಿ ಹೋಟೆಲ್‌ನಲ್ಲಿ ಮಾಧ್ಯಮ ಸಂವಾದದಲ್ಲಿ ಮಾಹಿತಿ ಹಂಚಿಕೊಂಡ ಅವರು, ಭಾರತದ ಸೇವಾ ವಲಯದ ರಫ್ತು ಶೇ.9.3ರಷ್ಟು ಗಣನೀಯ ಪ್ರಗತಿಯನ್ನು ಕಾಣುವ ಮೂಲಕ ದೇಶದ ಆರ್ಥಿಕತೆಗೆ ಬಲ ನೀಡಿದೆ. ಇದು ಒಟ್ಟಾರೆ ವ್ಯಾಪಾರ ಕೊರತೆಯನ್ನು ಸರಿದೂಗಿಸಲು ನೆರವಾಗಿದೆ ಎಂದರು. ಶೇ.35 ರಷ್ಟು ಇದ್ದ ರಫ್ತು ಪ್ರಮಾಣವು ಶೇ.48ಕ್ಕೆ ಏರಿಕೆಯಾಗಿದೆ ಎಂದು ಮಾಹಿತಿ ನೀಡಿದರು.

ಪ್ರಸ್ತುತ 38 ದೇಶಗಳೊಂದಿಗೆ 9 ಮುಕ್ತ ವ್ಯಾಪಾರ ಒಪ್ಪಂದಗಳನ್ನು ಕಳೆದ 5 ವರ್ಷಗಳಲ್ಲಿ ಮಾಡಲಾಗಿದೆ. ಇದರಿಂದ 56 ಟ್ರಿಲಿಯನ್ ಯುಎಸ್ ಡಾಲರ್‌ನಷ್ಟು ಜಿಡಿಪಿ ಮೌಲ್ಯ ವರ್ಧನೆಯಾಗಿದೆ. ಮೋದಿ ಅವರ ವಿಕಸಿತ ಭಾರತ 2047 ರ ದೂರದರ್ಶಿ ತ್ವದ ಗುರಿ ತಲುಪಲು, ಭಾರತವನ್ನು ಜಾಗತಿಕ ರಫ್ತು ಕೇಂದ್ರವಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಇಲಾಖೆಯು ದೃಢ ಹೆಜ್ಜೆಯಿಟ್ಟಿದೆ ಎಂದು ಹೇಳಿದರು.

ರಫ್ತು ಬೆಳವಣಿಗೆ: ಎಲೆಕ್ಟ್ರಾನಿಕ್ ಸರಕುಗಳ ರಫ್ತು ಕ್ಷೇತ್ರವು ಶೇ.20.3 ರಷ್ಟು ಅತ್ಯುನ್ನತ ಬೆಳವಣಿಗೆ ಸಾಧಿಸಿದೆ. ಇದರ ರಫ್ತು ಮೌಲ್ಯ 47.96 ಶತಕೋಟಿ ಯುಎಸ್ ಡಾಲರ್‌ಗೆ ತಲುಪಿದೆ. ಇಂಜಿನಿಯರಿಂಗ್ ಸರಕುಗಳು 122.4 ಶತಕೋಟಿ ಯುಎಸ್ ಡಾಲರ್ ತಲುಪುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿವೆ ಎಂದು ವಿವರಿಸಿದರು.

ನೌಕರರಿಗೆ ಶೀಘ್ರ ನೋಂದಾಯಿಸಲು ಸೂಚನೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ನಗದುರಹಿತ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸುವ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ (ಕೆಎಎಸ್‌ಎಸ್)ಯಲ್ಲಿ ಇನ್ನೂ ನೋಂದಣಿ ಮಾಡಿಸದ ನೌಕರರ ವಿವರಗಳನ್ನು ತುರ್ತಾಗಿ ಎಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ದಾಖಲಿಸುವಂತೆ ರಾಜ್ಯ ಸರ್ಕಾರ ಸೂಚನೆ ನೀಡಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಉಪಕಾರ್ಯದರ್ಶಿಗಳು ಹೊರಡಿಸಿರುವ ಸುತ್ತೋಲೆಯಲ್ಲಿ, ಕೆಎಎಸ್‌ಎಸ್ ಯೋಜನೆಗೆ ಒಳಪಡುವ ಅಥವಾ ಒಳಪಡದಿರುವ ಕುರಿತು ನೌಕರರಿಂದ ಲಿಖಿತ ಅಭಿಪ್ರಾಯ ಪಡೆಯುವ ಪ್ರಕ್ರಿಯೆ ಈಗಾಗಲೇ ಪೂರ್ಣಗೊಂಡಿರುವುದಾಗಿ ತಿಳಿಸಲಾಗಿದೆ. 2025ರ ನ.25ರ ಒಳಗೆ ಯೋಜನೆಯಿಂದ ಹೊರಗುಳಿಯುವ ಕುರಿತು ಲಿಖಿತವಾಗಿ ತಿಳಿಸದ ನೌಕರರನ್ನು ಸ್ವಯಂಚಾಲಿತವಾಗಿ ಯೋಜನೆಗೆ ಸೇರ್ಪಡೆಯಾಗಿರುವವರಾಗಿ ಪರಿಗಣಿಸಲಾಗಿದೆ.

ರಾಜ್ಯದಲ್ಲಿ ಒಟ್ಟು 3,76,955 ಸರ್ಕಾರಿ ನೌಕರರು ಕೆಎಎಸ್ ಎಸ್ ಯೋಜನೆಗೆ ಓಪಿಟಿ -ಇನ್ ಆಗಿದ್ದು, 23,081 ನೌಕರರು ಓಪಿಟಿ -ಔಟ್ ಆಗಿದ್ದಾರೆ. ಆದರೆ ಓಪಿಟಿ -ಇನ್ ಆಗಿರುವ ನೌಕರರಲ್ಲಿ ಕೇವಲ 1,79,339 ನೌಕರರು ಮತ್ತು ಅವರ ಅವಲಂಬಿತರ ವಿವರಗಳು ಮಾತ್ರ ಎಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ದಾಖಲೆಯಾಗಿವೆ. ಇನ್ನೂ 1,97,616 ನೌಕರರು ಮತ್ತು ಅವರ ಕುಟುಂಬದ ಅರ್ಹ ಸದಸ್ಯರ ವಿವರಗಳ ನೋಂದಣಿ ಬಾಕಿಯಿದೆ.

ಹೆಚ್ಚಿನ ಸಂಖ್ಯೆಯ ನೌಕರರ ವಿವರಗಳು ಇನ್ನೂ ನೋಂದಾಯಿಸದಿರುವುದರಿಂದ, ಯೋಜನೆಯ ಪ್ರಯೋಜನ ಪಡೆಯುವಲ್ಲಿ ತೊಂದರೆಗಳು ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ನೋಂದಣಿ ಮಾಡಿಸಿರುವ ನೌಕರರನ್ನು ಹೊರತುಪಡಿಸಿ ಉಳಿದಿರುವ 1.97 ಲಕ್ಷಕ್ಕೂ ಹೆಚ್ಚು ನೌಕರರು ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯರ ಮಾಹಿತಿಯನ್ನು ಜು.15ರೊಳಗೆ ಕಡ್ಡಾಯವಾಗಿ ಎಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ದಾಖಲಿಸಬೇಕು ಎಂದು ಎಲ್ಲಾ ಡಿಡಿಒ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ರಾಷ್ಟ್ರಚಿಂತನೆಯ ರಂಗರೂಪ: ಯುಗಪ್ರವರ್ತಕ ಡಾ. ಹೆಡಗೇವಾರ್ | ಭಾಷೆಯ ಗಡಿ ಮೀರಿ ಕನ್ನಡಿಗರ ಹೃದಯ ತಟ್ಟಿದ ನಾಟಕ

ಡಾ.ಹೆಡಗೇವಾರ್ ತಪೋಮಯ ಜೀವನದ ತಲ್ಲಣಕ್ಕೆ ಮರುಗಿದ ಪ್ರೇಕ್ಷಕರು

▸ ಡಾ. ಶೇಖರ ದೊಡ್ಡಗೌಡರ

ರಂಗಭೂಮಿ ಎನ್ನುವುದು ಕೇವಲ ಕಲ್ಪನೆಗಳ ಲೋಕವಲ್ಲ; ಅದು ಸಮಾಜದ ಜಾಗೃತಿ ಮತ್ತು ಇತಿಹಾಸದ ಪುನರುತ್ಥಾನದ ಪ್ರಬಲ ಮಾಧ್ಯಮ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪನೆಯಾಗಿ ನೂರು ವರ್ಷಗಳು ತುಂಬುತ್ತಿರುವ ಈ ಭವ್ಯ ಸಂಘ ಶತಾಬ್ದಿಯ ಸಂದರ್ಭದಲ್ಲಿ, ಈ ಮಾತನ್ನು ಅಕ್ಷರಶಃ ಸತ್ಯವಾಗಿಸಿದ ಅಪೂರ್ವ ರಂಗಪ್ರಯೋಗವೊಂದಕ್ಕೆ ಸಾಕ್ಷಿಯಾಗುವ ಮೂಲಕ, ಬೆಂಗಳೂರಿನ ಸಾಂಸ್ಕೃತಿಕ ಇತಿಹಾಸದಲ್ಲಿ 2026ರ ಜೂನ್ 6 ಮತ್ತು 7ರ ಸಾಯಂಕಾಲಗಳು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತದ್ದಾಗಿದ್ದವು. ನಾಗಪುರದ ಪ್ರಸಿದ್ಧ ನಾದಬ್ರಹ್ಮ ಸಂಸ್ಥೆ ಪ್ರಸ್ತುತಪಡಿಸಿದ ಯುಗಪ್ರವರ್ತಕ ಡಾ. ಹೆಡಗೇವಾರ್ ಹಿಂದಿ ನಾಟಕವನ್ನು ಸತತ ಎರಡು ಪ್ರದರ್ಶನಗಳಲ್ಲಿ ತೆರೆದಿಟ್ಟಿತು.

ಈ ರಂಗಪ್ರಯೋಗ ಕೇವಲ ನಾಟಕವಾಗಿರದೆ, ಶತಮಾನದ ಸಂಘದ ಗಂಗೋತ್ರಿಯ ಉಗಮವನ್ನು ಮತ್ತು ಡಾಕ್ಟರ್ ಜೀ ಅವರ ನಿಸ್ವಾರ್ಥ ಬದುಕನ್ನು ಕಣ್ಣೆದುರು ತಂದಿಟ್ಟ ದಿವ್ಯದರ್ಶನವಾಗಿತ್ತು. ಭಾಷೆಯ ಗಡಿಗಳನ್ನು ಮೀರಿ ಕನ್ನಡಿಗರ ಹೃದಯ ಮರುಗುವಂತೆ ಮಾಡಿದ ಈ ನಾಟಕದ ವೈಚಾರಿಕ ಹರಿವು ಪ್ರತಿಯೊಬ್ಬರಲ್ಲೂ ರಾಷ್ಟ್ರಭಕ್ತಿಯ ಹೊಸಚೈತನ್ಯವನ್ನು ತುಂಬಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕ ಪರಮ ಪೂಜನೀಯ ಡಾ. ಕೇಶವಬಲಿರಾಮ್ ಹೆಡಗೇವಾರ್‌ರವರ ತಪೋಮಯ ಜೀವನದ ತಲ್ಲಣಗಳನ್ನು ಪ್ರೇಕ್ಷಕರ ಎದುರು ಅತ್ಯಂತ ಮಾರ್ಮಿಕವಾಗಿ ಅನಾವರಣಗೊಳಿಸಿತು.

ಆ ತಪೋಮಯ ಪ್ರಯಾಣದ ಆರಂಭವಾಗಿ ನಾಟಕದ ಮೊದಲ ದೃಶ್ಯವೇ ಪ್ರೇಕ್ಷಕರನ್ನು ಇತಿಹಾಸದ ರಹಸ್ಯ ಕಾಲಘಟ್ಟಕ್ಕೆ ಕರೆದೊಯ್ಯುತ್ತದೆ. ಕೋಲ್ಕತ್ತಾದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದ ಯುವಕ ಕೇಶವರಾವ್ ಹೆಡಗೇವಾರ್, ಬ್ರಿಟಿಷರ ಕಣ್ಣಿಗೆ ಮಣ್ಣೆರಚಿ ಕ್ರಾಂತಿಕಾರಿಗಳ ಸಂಘಟನೆಯಾದ ಅನುಶೀಲನ ಸಮಿತಿ'ಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ರೋಮಾಂಚಕ ಸನ್ನಿವೇಶದೊಂದಿಗೆ ನಾಟಕ ತೆರೆದುಕೊಳ್ಳುತ್ತದೆ.

ಅಂದಿನ ದಿನಗಳಲ್ಲಿ ಬ್ರಿಟಿಷ್ ಗುಪ್ತಚರ ಇಲಾಖೆಯ ತೀಕ್ಷ್ಣ ನಿಗಾದಿಂದ ತಪ್ಪಿಸಿಕೊಳ್ಳಲು ಅವರಿಗೆ ನೀಡಲಾಗಿದ್ದ ರಹಸ್ಯ



ನಾಮವೇ ಕೋಕೇನ್'. ರಂಗದ ಮೇಲೆ ಮೂಡಿಬರುವ ಈ ಆರಂಭಿಕ ದೃಶ್ಯ ತೀವ್ರವಾದ ಭಾವುಕತೆಯಿಂದ ಕೂಡಿದೆ. ತಮ್ಮ ಪ್ರಾಣದ ಹಂಗು ತೊರೆದು ದೇಶಕ್ಕಾಗಿ ಹೋರಾಡುತ್ತಿದ್ದ ಸಹ ಕ್ರಾಂತಿಕಾರಿ ಯೊಬ್ಬರ ಅಕಾಲಿಕ ಬಲಿದಾನದ ಸುದ್ದಿ ಕೇಳಿ ಯುವ ಹೆಡಗೇವಾರ್ ತೀವ್ರವಾಗಿ ನೊಂದುಕೊಳ್ಳುವ, ಆತಂಕ ಮತ್ತು ತಲ್ಲಣಕ್ಕೆ ಒಳಗಾಗುವ ದೃಶ್ಯವನ್ನು ಕಲಾವಿದರು ಅತ್ಯಂತ ಮಾರ್ಮಿಕವಾಗಿ ಅಭಿನಯಿಸಿದ್ದಾರೆ. ಆದರೆ, ಒಡನಾಡಿಯ ನಿಧನದಿಂದ ಧೃತಿಗೆಡದ ಕೋಕೇನ್' (ಡಾ. ಹೆಡಗೇವಾರ್), ಆ ತೀವ್ರ ದುಃಖವನ್ನೇ ಬ್ರಿಟಿಷರ ವಿರುದ್ಧದ ಜ್ವಾಲಾಮುಖಿ ಆಕ್ರೋಶವನ್ನಾಗಿ ಮಾರ್ಪಡಿಸಿಕೊಳ್ಳುತ್ತಾರೆ. ಈ ದೃಶ್ಯವು ನಾಟಕದ ಮುಂದಿನ ಭವ್ಯ ಕಥಾವಸ್ತುವಿಗೆ ಮತ್ತು ಅವರ ಅಪ್ರತಿಮ ದೇಶಭಕ್ತಿಗೆ ಅತ್ಯಂತ ಶಕ್ತಿಶಾಲಿ ಮುನ್ನುಡಿಯನ್ನಿಡುತ್ತದೆ.

ದಿನನಿತ್ಯದ ಶಾಖೆ, ಸಂಘ ಕಾರ್ಯಗಳ ಕುರಿತು ಆಳವಾಗಿ ಚರ್ಚಿಸಿ, ಯೋಜನೆ ರೂಪಿಸಿ, ಅವುಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ದಾರಿ ತೋರುವ ಬೈಠಕ್', ಹಾಗೂ ಸ್ವಯಂಸೇವಕರಿಗೆ ಅಗತ್ಯವಾದ ಜ್ಞಾನ, ಕೌಶಲ್ಯಗಳನ್ನು ಧಾರೆ ಎರೆದು ಅವರನ್ನು ಸಂಘ ಕಾರ್ಯಕ್ಕೆ ಸಂಪೂರ್ಣವಾಗಿ ಸಜ್ಜುಗೊಳಿಸುವ ವಿಶಿಷ್ಟ ತರಬೇತಿಯ ವರ್ಗಗಳ ಮೂಲಕ ಪರಸ್ಪರ ಪ್ರೀತಿ-ವಿಶ್ವಾಸ ಬೆಸೆಯುವ ಕಾರ್ಯಪದ್ಧತಿ, ಪ್ರಾರ್ಥನೆ ಹಾಗೂ ಭಗವಾಧ್ವಜದ ಸಮ್ಮುಖದಲ್ಲಿ ಶಿಸ್ತಿನ ಸಿಪಾಯಿಗಳನ್ನು ನಿರ್ಮಿಸುವ ಆ ಭವ್ಯ ಪ್ರಕ್ರಿಯೆಯನ್ನು ನಾಟಕವು ಪ್ರೇಕ್ಷಕರ ಕಣ್ಣಿಗೆ ಕಟ್ಟುವಂತೆ ಪ್ರಸ್ತುತಪಡಿಸಿದೆ.

ಡಾಕ್ಟರ್‌ಜೀ ಅವರು ತಮ್ಮ ಜೀವಿತಾವಧಿಯ ಕೊನೆಯ 15 ವರ್ಷಗಳಲ್ಲಿ ಹಾಕಿಕೊಟ್ಟ ಈ ಭದ್ರವಾದ ಬುನಾದಿಯೇ, ಇಂದು ಒಂದು ಯುಗವನ್ನು (ನೂರುವರ್ಷಗಳನ್ನು) ದಾಟಿಯೂ ಜಗತ್ತಿನ ಅತಿ ದೊಡ್ಡ ಸ್ವಯಂಸೇವಾ ಸಂಘಟನೆಯಾಗಿ ಅಖಂಡವಾಗಿ ಬೆಳೆದು ನಿಲ್ಲಲು ಕಾರಣ ಎಂಬುದನ್ನುನಾಟಕವು ತಾರ್ಕಿಕವಾಗಿ ನಿರೂಪಿಸುತ್ತದೆ. ನಿರ್ದೇಶಕರಾದ ಸುಬೋಧ್ ಸಹಸ್ರಬುದ್ಧೆ ಅವರ ರಂಗಕಲ್ಪನೆ ಅತ್ಯಂತ ಉನ್ನತ ಮಟ್ಟದ್ದಾಗಿದೆ. ನಾಟಕದ ನಡುವೆ ಪ್ರೇರಣೆಯ ರೂಪದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರಸಂಗವನ್ನು ತಂದಿರುವುದು ಮತ್ತು ಕರ್ತವ್ಯ ಪ್ರಜ್ಞೆಯನ್ನು ಎಚ್ಚರಿಸಲು ಕೃಷ್ಣ-ಅರ್ಜುನರ ಸಂವಾದವನ್ನು ಜೋಡಿಸಿರುವುದು ನಿರ್ದೇಶನದ ವಿಶಿಷ್ಟ ಚಾತುರ್ಯವಾಗಿದೆ. ಇಡೀ ನಾದಬ್ರಹ್ಮ ತಂಡದ ಪ್ರಕಾರ, ಈ ರಂಗಪ್ರಯೋಗ ಕೇವಲ ಅವರ ವೈಯಕ್ತಿಕ ಸಾಧನೆಯಲ್ಲ, ಬದಲಿಗೆ ಡಾಕ್ಟರ್‌ಜೀ ಅವರ ಒಟ್ಟಾರೆ ತಪಸ್ಸಿನ ಪ್ರೇರಣೆಯಿಂದ ನಡೆದ ಒಂದು ಈಶ್ವರೀಯ ಕಾರ್ಯವಾಗಿದೆ. ಇಂದಿನ ಯುವ ಪೀಳಿಗೆಗೆ ನಮ್ಮ ಸಾಂಸ್ಕೃತಿಕ ಬೇರುಗಳನ್ನು ಹೆಮ್ಮೆಯಿಂದ ಪರಿಚಯಿಸಲು ಈ ನಾಟಕ ಅತ್ಯಂತ ಪ್ರಸ್ತುತವಾಗಿದೆ.



ನಾಟಕದ ಪ್ರಥಮಾರ್ಧವು ಸಂಘದ ಸ್ಥಾಪನೆಯ ಭವ್ಯ ಇತಿಹಾಸವನ್ನು ತೆರೆದಿಟ್ಟರೆ, ದ್ವಿತೀಯಾರ್ಧದಲ್ಲಿ ಮಾಧವ ಸದಾಶಿವ ಗೋಲವಲ್ಕರ್ (ಶ್ರೀಗುರೂಜಿ) ಅವರ ಪ್ರವೇಶ ಪ್ರೇಕ್ಷಕರಲ್ಲಿ ಹೊಸ ಕುತೂಹಲ ಮತ್ತು ರೋಮಾಂಚನವನ್ನು ಹುಟ್ಟುಹಾಕುತ್ತದೆ. ಆಧ್ಯಾತ್ಮದ ಕಡೆಗೆ ತೀವ್ರ ಒಲವು ಹೊಂದಿದ್ದ, ರಾಮಕೃಷ್ಣ ಮಿಷನ್‌ನ ಸನ್ಯಾಸತ್ವದತ್ತ ಆಕರ್ಷಿತ ರಾಗಿದ್ದ ಗುರೂಜಿಯವರ ಅದ್ಭುತ ತೇಜಸ್ಸು ಮತ್ತು ಅಪ್ರತಿಮ ಪ್ರತಿಭೆಯನ್ನು ಡಾಕ್ಟರ್‌ಜೀ ಗುರುತಿಸುವ ದೃಶ್ಯ ನಾಟಕಕ್ಕೆ ಹೊಸ ತಿರುವು ನೀಡುತ್ತದೆ. ಕೇವಲ ವೈಯಕ್ತಿಕ ಮೋಕ್ಷಕ್ಕಾಗಿ ತಪಸ್ಸು ಮಾಡುವುದಕ್ಕಿಂತ, ನೊಂದಿರುವ ಇಡೀ ಸಮಾಜದ ಮುಕ್ತಿಗಾಗಿ ಕಾಯಕ ಮಾಡುವುದೇ ನಿಜವಾದ ಆಧ್ಯಾತ್ಮ ಮತ್ತು ದೈವಕಾರ್ಯ ಎಂಬುದನ್ನು ಡಾಕ್ಟರ್‌ಜೀ ಅವರು ಗುರೂಜಿಯವರಿಗೆ ಮನವರಿಕೆ ಮಾಡಿಕೊಡುವ ಪರಿ ಅನನ್ಯ.

ಈ ಇಬ್ಬರು ಮಹಾನ್ ಚೇತನಗಳ ನಡುವಿನ ಅಪೂರ್ವ ಬಾಂಧವ್ಯ ಮತ್ತು ಕೊನೆಗೆ ಗುರೂಜಿಯವರು ಡಾಕ್ಟರ್‌ಜೀ ಅವರ ಮಾತಿಗೆ ಒಪ್ಪಿ ತಮ್ಮ ಇಡೀ ಜೀವನವನ್ನು ಸಂಘಕಾರ್ಯಕ್ಕಾಗಿ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವ ಭಾವುಕ ಸನ್ನಿವೇಶವು ಪ್ರೇಕ್ಷಕರ ಕಣ್ಣಾಲಿಗಳನ್ನು ಒದ್ದೆಯಾಗಿಸುತ್ತದೆ. ಇತಿಹಾಸದ ಅತ್ಯಂತ ಅಪರೂಪದ ಹಾಗೂ ಭಾವುಕ ಕ್ಷಣವನ್ನು ಪ್ರೇಕ್ಷಕರ ಕಣ್ಣೆದುರು ಮರುಸೃಷ್ಟಿಸುತ್ತದೆ.

ಅನಾರೋಗ್ಯದ ಆ ಕಠಿಣ ದಿನಗಳ ನಡುವೆಯೂ ಮೂಡಿಬರುವ ನಾಟಕದ ಅತ್ಯಂತ ಭಾವುಕ, ಅತಿ ಹೆಚ್ಚು ಪ್ರೇರಣಾದಾಯಕ ದೃಶ್ಯವೆಂದರೆ, ಅದು 1940ರ ನಾಗಪುರದ ಸಂಘ ಶಿಕ್ಷಾ ವರ್ಗದಲ್ಲಿ ಡಾಕ್ಟರ್‌ಜೀ ಅವರು ನೀಡಿದ ಕೊನೆಯ ಐತಿಹಾಸಿಕ ಬೌದ್ಧಿಕ್. ತಮ್ಮೆಲ್ಲಾ ದೈಹಿಕ ನೋವನ್ನುಮರೆತು ಸಿಂಹಗರ್ಜನೆ ಮಾಡುವ ಅವರ ಆ ಪ್ರಖರ ಧ್ವನಿ ಇಡೀ ರಂಗಮಂದಿರವನ್ನೇ ಒಂದು ಕ್ಷಣ ಮೌನವಾಗಿಸಿ, ನಿಶ್ಶಬ್ದಗೊಳಿಸುತ್ತದೆ. ನನಗೆ ನಿಮ್ಮ ಕಣ್ಣೆದುರು ಇಡೀ ಹಿಂದುಸ್ಥಾನದ ಭವ್ಯ ವೈಭವದ ದರ್ಶನ ವಾಗುತ್ತಿದೆ. ಸಂಘ ಕಾರ್ಯವು ಕೇವಲ ನಿತ್ಯದ ಶಾಖೆಗೆ ಮಾತ್ರಸೀಮಿತವಾಗಬಾರದು; ನಮ್ಮಲ್ಲಿ ಯಾರೊಬ್ಬರೂ ಎಂದಿಗೂ ನಾನು ಹಿಂದೆ ಸ್ವಯಂಸೇವಕನಾಗಿದ್ದೆ ಎಂದು ಭೂತಕಾಲದಲ್ಲಿ ಮಾತನಾಡಬಾರದು. ಬದಲಿಗೆ, ನಮ್ಮ ಜೀವನದ ಕೊನೆಯ ಉಸಿರಿರುವವರೆಗೂ ನಾವು ಸ್ವಯಂಸೇವಕರಾಗಿಯೇ ರಾಷ್ಟ್ರಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅವರು ಗದ್ಗದಿತ ಕಂಠದಿಂದ ನೀಡುವ ಆ ಅಂತಿಮ ಸಂದೇಶ, ಕೇವಲ ರಂಗದ ಮೇಲಿದ್ದ ಸ್ವಯಂಸೇವಕರಿಗಷ್ಟೇ ಅಲ್ಲ, ಇಡೀ ಪ್ರದರ್ಶನವನ್ನು ಉಸಿರು ಬಿಗಿಹಿಡಿದು ವೀಕ್ಷಿಸುತ್ತಿದ್ದ ನಮ್ಮಂತಹ ಪ್ರತಿಯೊಬ್ಬ ಪ್ರೇಕ್ಷಕನ ನರನಾಡಿಗಳಲ್ಲೂ ಅಭೂತಪೂರ್ವ



ವಿದ್ಯುತ್ ಸಂಚಲನ ಉಂಟುಮಾಡುತ್ತದೆ.

ಆ ವಿದ್ಯುತ್ ಸಂಚಲನದ ಬೆನ್ನಲ್ಲೇ ಮೂಡಿಬರುವ ನಾಟಕದ ಮಹಾಮುಕ್ತಾಯವು ಪ್ರತಿಯೊಬ್ಬ ಪ್ರೇಕ್ಷಕನ ಹೃದಯವನ್ನು ಭಾರವಾಗಿಸುತ್ತದೆ. ಜೊತೆಗೆ ಇಡೀ ಸಭಾಂಗಣ ನಿಲ್ಲದ ಕರತಾಡನಕ್ಕೆ ಸಾಕ್ಷಿಯಾಗುವಂತೆ ಮಾಡು ತ್ತದೆ. 1940ರ ಜೂನ್ 21ರಂದು ಡಾಕ್ಟರ್‌ಜೀ ಅವರ ಮಹಾನಿರ್ವಾಣದ ಕೊನೆಯ ಕ್ಷಣಗಳು ಹತ್ತಿರ ಬಂದಾಗ, ರಂಗದ ಮೇಲಿನ ವಾತಾವರಣ ಅತ್ಯಂತ ಗಂಭೀರವಾಗುತ್ತದೆ.

ಸಾವು ಕಣ್ಣೆದುರುಬಂದು ನಿಂತಿದ್ದರೂ, ದೈಹಿಕ ಪ್ರಜ್ಞೆ ತಪ್ಪುತ್ತಿದ್ದರೂ ಅವರ ಒಳಮನಸ್ಸು ನಿರಂತರವಾಗಿ ಜಪಿಸುತ್ತಿದ್ದದ್ದು ಮಾತ್ರ ತಾಯ್ನಾಡಿನ ಪರಮ ಪವಿತ್ರಮಂತ್ರವನ್ನೇ. ತಮ್ಮ ಕೊನೆಯ ಉಸಿರನ್ನು ಎಳೆಯುವ ಮುನ್ನ ಡಾಕ್ಟರ್ಜೀ ಅವರು ಅತ್ಯಂತ ಗಂಭೀರ ಹಾಗೂ ಭಕ್ತಿಪೂರ್ವಕವಾಗಿ ಉಚ್ಚರಿಸುವ ಆ ಅಂತಿಮ ಮಹಾಶಬ್ದಗಳು: ಹಿಂದೂ ರಾಷ್ಟ್ರ, ಭಾರತ್ ಮಾತಾ ಮತ್ತು ವಂದೇ ಮಾತರಂ! ಯುಗ ಪ್ರವರ್ತಕ' ಎನ್ನುವ ಶೀರ್ಷಿಕೆಗೆ ನಾಗಪುರದ ಆ ಧೀಮಂತ ಕಲಾವಿದರು ರಂಗದ ಮೇಲೆ ಸಂಪೂರ್ಣ ನ್ಯಾಯ ಒದಗಿಸಿದ್ದರು. ಡಾಕ್ಟರ್‌ಜೀ ಅವರು ದೈಹಿಕವಾಗಿ ಮರೆಯಾಗಿದ್ದರೂ, ಅವರು ಬಿತ್ತಿದ ಆ ಪ್ರಖರ ರಾಷ್ಟ್ರಚಿಂತನೆಯ ರಂಗರೂಪ ಇಂದಿಗೂ, ಮುಂದಿಗೂ ದೇಶದ ಕೋಟ್ಯಂತರ ಸ್ವಯಂಸೇವಾ ರೂಪದ ಕಾರ್ಯಕರ್ತರಲ್ಲಿ ಸದಾಜೀವಂತವಾಗಿರುತ್ತದೆ ಎಂಬುದನ್ನು ಈ ನಾಟಕ ಪ್ರತಿಯೊಬ್ಬರ ಮನದ ಆಳಕ್ಕೆ ತಲುಪಿಸುತ್ತದೆ.

ಸಂಪಾದಕೀಯ

ಇಚ್ಛಾಶಕ್ತಿಯ ಸುದೀರ್ಘ ಹರಿವು

ಇಂದಿಗೆ ನರೇಂದ್ರ ಮೋದಿಯವರು ದೀರ್ಘಾವಧಿಯವರೆಗೆ ಪ್ರಧಾನಮಂತ್ರಿಯಾದ ನಾಯಕ ಎಂಬ ದಾಖಲೆಗೆ ಸೇರುತ್ತಾರೆ. ಇದಕ್ಕೆ ಮೊದಲು ನೆಹರು ದೀರ್ಘಾವಧಿಯವರೆಗೆ ಅಧಿಕಾರದಲ್ಲಿದ್ದವರು ಎಂಬ ದಾಖಲೆ ಇತ್ತು. ಇದು ಕೂಡ ಒಂದು ದಾಖಲೆಯೇ? ಅದು ಸಂವಿಧಾನ ಕೊಟ್ಟ ಅವಕಾಶವಲ್ಲವೇ ಎಂಬ ಪ್ರಶ್ನೆಗಳು ಅನೇಕರಿಗೆ ಬರಬಹುದು. ದಾಖಲೆ ಎಂಬ ಪದ ' ಹೊಂದಾಣಿಕೆಯಾಗದು ಎಂದೂ ಕೆಲವರಿಗನಿಸಬಹುದು. ಆದರೂ ಮೋದಿಯವರು ದೀರ್ಘಾವಧಿಯ ಪ್ರಧಾನಮಂತ್ರಿ ಎಂಬ ಸಂಗತಿಯಂತೂ ದೇಶಕ್ಕೆ ಮುಖ್ಯ. ಇವರಿಬ್ಬರು ಆಳಿದ ಕಾಲಘಟ್ಟ, ಸಂದರ್ಭ ಸಂಪೂರ್ಣ ಭಿನ್ನ. ಹಾಗಾಗಿ ವಿವೇಚನೆ ಇಲ್ಲದೆ ನೆಹರು ಮಾಡದ್ದನ್ನು ಮೋದಿ ಮಾಡಿದರು ಎನ್ನುವುದೂ ವಿವೇಕದ ನಡೆಯಲ್ಲ. ಆದರೆ ಅದಕ್ಕೆ ಹೊರತಾದ ಕೆಲವು ಸಂಗತಿಗಳಂತೂ ಇದ್ದೇ ಇದೆ.



ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾದ ನೆಹರು ಪ್ರಧಾನಮಂತ್ರಿಯಾಗಿದ್ದು ಗಾಂಧೀಜಿಯವರ ಕೃಪಾಕಟಾಕ್ಷದಿಂದ. ಸ್ವಾತಂತ್ರ್ಯದ ಆರಂಭದ ವರ್ಷಗಳಲ್ಲಿ ನೆಹರು ಅವರಿಗೆ ಸಹಜವಾದ ಗೊಂದಲಗಳಿದ್ದವು. ಆದರೆ ಸಂವಿಧಾನ ರಚನೆಯಾಗಿ ಜನರಿಂದ ಆಯ್ಕೆಯಾದ ಮೇಲೂ ಅವರ ಗೊಂದಲ ನಿವಾರಣೆಯಾಗಿರಲಿಲ್ಲ. ಕಾಶ್ಮೀರದ ಸಂಗತಿಯನ್ನು ಅಂತಾರಾಷ್ಟ್ರೀಯ ಸಮಸ್ಯೆಯೆಂಬಂತೆ ಬಿಂಬಿಸಿದ್ದಲ್ಲಿಂದ ಹಿಡಿದು ಸಮಾಜವಾದವ್ರೋ, ಬಂಡವಾಳವಾದವೋ ಎಂಬ ಗೊಂದಲ ಅವರಿಗೆ ಕೊನೆಯವರೆಗೂ ನಿವಾರಣೆಯಾಗಲಿಲ್ಲ. ಹೊಸ ಭಾರತ ಉದಯವಾಗಿದೆ ಎಂಬ ಭ್ರಮೆಯಲ್ಲಿಯೇ ಇದ್ದ ಅವರಿಗೆ ಈ ನೆಲ ಶತಮಾನಗಳ ಹಿಂದಿನಿಂದಲೇ ಶ್ರೇಷ್ಠ ನಾಗರಿಕ ಸಮಾಜವನ್ನು ಅಳವಡಿಸಿಕೊಂಡಿತ್ತು ಎಂಬುದನ್ನು ಒಪ್ಪುವ ಮನಸ್ಥಿತಿ ಅವರಿಗೆ ಬರಲೇ ಇಲ್ಲ. ಪರಿಣಾಮ ಸಮಸ್ಯೆಗಳೆಲ್ಲವೂ ಅಲ್ಲಿಂದಲೇ ಹುಟ್ಟಿದವು, ಬೆಳೆದವು, ಹೆಮ್ಮರವಾದವು. ಸೆಕ್ಯುಲರಿಸಮ್ಮಿನ ಭ್ರಾಂತಿಯಿಂದ ಮೊದಲುಗೊಂಡು ತನ್ನೆಲ್ಲಾ ಸಮಸ್ಯೆಗಳಿಗೆ ವಿದೇಶಿಯರಲ್ಲೇ ಪರಿಹಾರವಿದೆ ಎಂದು ನಂಬಿದ ಯುಗವನ್ನು ಭಟ್ಟಂಗಿಗಳು ನೆಹರೂವಿಯನ್ ಯುಗವೆಂದು ಬಣ್ಣಿಸಿ ಭಾರತದ ಓಟವನ್ನು ಕುಂಟಿತಗೊಳಿಸಿದರು. ಹಾಗಾಗಿ ಇಂದು ನಾವು ದೇಶದಲ್ಲಿ ಯಾವುದನ್ನು ಸಮಸ್ಯೆ ಎಂದು ನೋಡುತ್ತೇವೆಯೋ ಅವೆಲ್ಲವೂ ಆ ಯುಗದ ಮೂಲಕ್ಕೇ ಹೋಗುತ್ತದೆ. ಆ ಸಮಸ್ಯೆಗಳೆಲ್ಲವೂ ಇಂದು ಒಂದೊಂದಾಗಿ ಪರಿಹಾರವಾಗುತ್ತಿದೆ ಎಂದರೆ ಅದಕ್ಕೆ ಕಾರಣ ನರೇಂದ್ರ ಮೋದಿಯವರ ಭಾರತ ಪ್ರೀತಿ. ಅಂದು ಕೋಮು ಆಧಾರಿತವಾಗಿ ಪ್ರತ್ಯೇಕಿಸಿಟ್ಟ ಕಾಶ್ಮೀರ ಇಂದು ದೇಶದ ಉಳಿದ ರಾಜ್ಯಗಳಲ್ಲೊಂದು. ಇಂದು ದೇಶ ಸಬ್ ಕಾ ವಿಕಾಸ್ ಎನ್ನುವ ಘೋಷಣೆಯಲ್ಲಿ ಏಕತೆಯನ್ನು ಅನುಭವಿಸುತ್ತಿದೆ. ಅಂದು ಜಾಗತಿಕ ನಾಯಕರ ಮನೆ ಬಾಗಿಲು ಕಾಯುತ್ತಿದ್ದ ಭಾರತ ಇಂದು ವಿಶ್ವದ ಪ್ರಬಲ ಶಕ್ತಿಗಳಲ್ಲೊಂದು. ಪಟ್ಟಿ ಮಾಡುತ್ತಾ ಹೋದರೆ ಇನ್ನೆಷ್ಟೋ. ಇದಕ್ಕೆಲ್ಲಾ ಪ್ರಧಾನಮಂತ್ರಿಯವರ ಇಚ್ಚಾಶಕ್ತಿಯೇ ಕಾರಣ ಎನ್ನದೆ ಇನ್ನೇನೂ ಹೇಳಲಾಗುವುದಿಲ್ಲ. ಇಬ್ಬರು ನಾಯಕರ ತುಲನೆ ಸಲ್ಲ ಎಂದರೂ ಇಬ್ಬರು ನಾಯಕರ ಛಲ ಮತ್ತು ಇಚ್ಛಾಶಕ್ತಿಯನ್ನು ಅಳೆದರೆ ತಪ್ಪೇನಿಲ್ಲ. ನೆಹರು ಅವರಿಗೆ ಅಂದು ಗೊಂದಲಗಳಿಲ್ಲದಿದ್ದರೆ ಭಾರತದ ಸ್ಥಾನ ಇನ್ನೆಲ್ಲೋ ಇರುತ್ತಿತ್ತು ಎನ್ನುವುದು ಮಾತ್ರ ಸತ್ಯ.

ರಾಜಕಾರಣದ ವ್ಯಾಕರಣ ಬದಲಿಸಿದ ಮೋದಿ

▸ ಅಜಯ್ ಸಿಂಗ್

ಮೈಲಿಗಲ್ಲುಗಳು ಮತ್ತು ಕಾಲಮಾನ-ಇವು ಪರಿವರ್ತನೆಯ ಯುಗದ ಸರಿಯಾದ ಅಳತೆಗೋಲುಗಳಲ್ಲ. ಅವು ಕೇವಲ ಅಂಕಿ-ಅಂಶಗಳು. ನರೇಂದ್ರ ಮೋದಿ ಅವರು ದೇಶದಲ್ಲಿ ಅತ್ಯಂತ ದೀರ್ಘಕಾಲ ಸೇವೆ ಸಲ್ಲಿಸಿದ ಪ್ರಧಾನಮಂತ್ರಿ ಆಗುವುದು ಕೇವಲ ಒಂದು ಮೈಲಿಗಲ್ಲನ್ನು ದಾಟುವುದು ಮಾತ್ರವಲ್ಲ, ಅದೊಂದು ಸುದೀರ್ಘ ಅಧಿಕಾರಾವಧಿಯ ದಾಖಲೆಗಿಂತ ಮಹತ್ವದ್ದು. ಈ ಕಾಲದ ಮನೋಭಾವವನ್ನು ಕೇವಲ ಸಂಖ್ಯೆಗಳಲ್ಲಿ ಹಿಡಿದಿಡಲು ಸಾಧ್ಯವಿಲ್ಲ ಮತ್ತು ಆ ಮನೋಭಾವದಲ್ಲಿ ಅವರು ಭಾರತದ ಪ್ರತಿಭೆಯನ್ನು ಪ್ರತಿನಿಧಿಸುತ್ತಾರೆ. ಅವರ ಸಾರ್ವಜನಿಕ ಜೀವನದ ಪಥವು ಸಾಮಾನ್ಯದಿಂದ ಅಸಾಮಾನ್ಯದ ಕಡೆಗೆ ರೂಪಾಂತರಗೊಂಡಿದೆ. ಸಂಘ ಪರಿವಾರದಿಂದ ಪ್ರೇರಣೆ ಪಡೆದ ಒಬ್ಬ ಸಾಮಾನ್ಯ ಆರ್‌ಎಸ್‌ಎಸ್ ಕಾರ್ಯಕರ್ತನಾಗಿ ಅವರ ಪಯಣ ಆರಂಭವಾಯಿತು. 1950 ಮತ್ತು 60ರ ದಶಕದಲ್ಲಿ ಅವರು ತಮ್ಮ ತವರು ರಾಜ್ಯವಾದ ಗುಜರಾತ್‌ನಲ್ಲಿ ಆಗಿನ ಕಾಲಕ್ಕೆ ಅತ್ಯಂತ ಕಡಿಮೆ ಜನಪ್ರಿಯವಾಗಿದ್ದ ಸಿದ್ಧಾಂತವನ್ನು ಪ್ರತಿಪಾದಿಸಿದವರು.



ಆ ಕಾಲದ ಸಾಂಪ್ರದಾಯಿಕ ರಾಜಕಾರಣಿಗಳಿಗಿಂತ ಭಿನ್ನವಾಗಿ ಅವರು ಹೆಮ್ಮೆಪಟ್ಟುಕೊಳ್ಳಲು ಯಾವುದೇ ರಾಜಕೀಯ ಅಥವಾ ಗಣ್ಯರ ವಂಶಾವಳಿಯ ಹಿನ್ನೆಲೆ ಇಲ್ಲದವರು. ಹ್ಯಾರೋ, ಆಕ್ಸ್‌ಫರ್ಡ್, ಕೊಲಂಬಿಯಾ ಅಥವಾ ಹಾರ್ವರ್ಡ್‌ನಂತಹ ವಿದೇಶಿ ವಿವಿಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳ ವಿಶೇಷ ಕ್ಲಬ್‌ಗಳನ್ನು ಇಡೀ ಜಗತ್ತು ಗೌರವದಿಂದ ನೋಡುತ್ತಿತ್ತು. ಸರ್ ವಿನ್‌ಸ್ಟನ್ ಚರ್ಚಿಲ್ ಮತ್ತು ಭಾರತದ ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರು ಹ್ಯಾರೋ ಬಾಯ್ಸ್ ಎಂದೇ ಪರಿಚಿತರಾಗಿದ್ದರು. ಅವರು ಒಂದೇ ಭಾಷೆಯನ್ನು ಮಾತನಾಡುತ್ತಿದ್ದರು ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಗಣ್ಯರ ಬಳಗದಲ್ಲಿದ್ದರು. ಆದರೆ ಮೋದಿಯವರು ಅಂತಹ ಎಲ್ಲಾ ವಿವರಣೆಗಳನ್ನು ಸಂಪೂರ್ಣವಾಗಿ ಸುಳ್ಳಾಗಿಸಿದರು. ದೇಶಾದ್ಯಂತ ಸಾಮಾನ್ಯ ಜನರೊಂದಿಗೆ ಸಂವಾದ ನಡೆಸುವ ಮೂಲಕ ತಮ್ಮ ತಳಮಟ್ಟದ ಅನುಭವದಿಂದ ಅವರು ಭಾರತೀಯ ಸಮಾಜದ ಬಗ್ಗೆ ಜ್ಞಾನವನ್ನು ಪಡೆದುಕೊಂಡರು. ಜನರ ಆತಂಕಗಳು ಮತ್ತು ಆಕಾಂಕ್ಷೆಗಳ ಬಗ್ಗೆ ಅವರಿಗೆ ಅಸಾಧಾರಣವಾದ ಒಳನೋಟಗಳಿದ್ದವು. ಅವರು ರಾಜಕಾರಣವನ್ನು ವೃತ್ತಿಯಾಗಿ ಆರಿಸಿಕೊಂಡರು ಮತ್ತು ಅದನ್ನು ತಮ್ಮ ಸೈದ್ಧಾಂತಿಕ ಅನ್ವೇಷಣೆಯೊಂದಿಗೆ ಜೋಡಿಸಿದರು. ಅವರ ಈ ಕಾರ್ಯಾಚರಣೆಗೆ ಸಹಾಯ ಮಾಡಿದ್ದು ಅವರ ಎರಡು ಪ್ರಬಲ ಗುಣಗಳು. ವೈಯಕ್ತಿಕ ಜೀವನದಲ್ಲಿ ಅವರ ಸಂಯಮ (ವೈರಾಗ್ಯ) ಮತ್ತು ಸಾರ್ವಜನಿಕ ನಡವಳಿಕೆಯಲ್ಲಿ ಅವರ ಪ್ರಾಯೋಗಿಕತೆ.

ಅವರು ವಿರೋಧಾಭಾಸಗಳನ್ನು ಅತ್ಯಂತ ಸುಲಭವಾಗಿ ನಿಭಾಯಿಸುತ್ತಾರೆ. ಉದಾಹರಣೆಗೆ, ಗುಜರಾತ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮೋದಿಯವರು ಸಬ್ಸಿಡಿಗಳ ಮೇಲೆ ಅವಲಂಬಿತವಾಗಿರದ ಬೆಳವಣಿಗೆಯ ಮಾದರಿಯೊಂದನ್ನು ಬಲವಾಗಿ ಪ್ರತಿಪಾದಿಸಿದರು. ಅದೇ ರೀತಿ ಪ್ರಧಾನಮಂತ್ರಿಯಾಗಿ ಸಾಂಕ್ರಾಮಿಕ ರೋಗ ಹರಡಿದ ನಂತರ ದೇಶದಲ್ಲಿ ಯಾರೂ ಹಸಿವಿನಿಂದ ಬಳಲಬಾರದೆಂದು ವಿಶ್ವದ ಅತಿ ದೊಡ್ಡ ಆಹಾರ ಭದ್ರತಾ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಅವರ ಸಾಮಾಜಿಕ ವಸತಿ ಯೋಜನೆ ಮತ್ತು ಆಯುಷ್ಮಾನ್ ಭಾರತ್‌ನಂತಹ ವಿಮಾ ಯೋಜನೆಗಳು ಸಮಾಜದ ಅತ್ಯಂತ ದುರ್ಬಲ ವರ್ಗಗಳ ಕಾಳಜಿಯಿಂದ ಜಾರಿಯಾದಂತಹವು. ಜನರ ಅತ್ಯಂತ ಪ್ರಮುಖ ಆದ್ಯತೆಗಳಾದ ರೋಟಿ, ಕಪ್ಡಾ ಔರ್ ಮಕಾನ್ (ಅನ್ನ, ಬಟ್ಟೆ, ವಸತಿ) ಮತ್ತು ಆರೋಗ್ಯದ ಅಗತ್ಯಗಳನ್ನು ಅವರು ಪೂರೈಸಿದರು. ಈ ಕಾಳಜಿಗಳನ್ನು 60ರ ದಶಕದ ಆರಂಭದಿಂದ ಇತ್ತೀಚಿನವರೆಗೂ ಸಮಾಜವಾದಿಗಳು ರಾಜಕೀಯ ಘೋಷಣೆಗಳಾಗಿ ಮಾತ್ರ ಬಳಸುತ್ತಿದ್ದರು. ಇಂದಿನ ಭಾರತದಲ್ಲಿ ಅಂತಹ ಘೋಷಣೆಗಳು ಪ್ರಾಯೋಗಿಕವಾಗಿ ಅಪ್ರಸ್ತುತವಾಗಿವೆ.

ವಾಸ್ತವವಾಗಿ ಮೋದಿಯವರು ದೇಶದ ರಾಜಕಾರಣವನ್ನು ಅತ್ಯಂತ ಆಳವಾಗಿ ಮರುಕಲ್ಪಿಸಿದ್ದಾರೆ. ದಶಕಗಳ ಕಾಲ ದೇಶವನ್ನು ಕಾಡುತ್ತಿದ್ದ ಸಮಸ್ಯೆಗಳು ಈಗ ಇತಿಹಾಸದ ಪಠ್ಯಕ್ರಮದ ಭಾಗವಾಗಿವೆ. ಜನರ ಸಾಮೂಹಿಕ ಕಲ್ಪನೆಯಲ್ಲಿ ಅಯೋಧ್ಯೆ ಈಗ ಒಂದು ಭವ್ಯವಾದ ದೇವಾಲಯದ ಸಂಕೀರ್ಣದ ಚಿತ್ರಣವನ್ನು ನೀಡುತ್ತದೆಯೇ ಹೊರತು ದೇವಾಲಯ-ಮಸೀದಿ ವಿವಾದದ ಸ್ಥಳವಾಗಿ ಅಲ್ಲ. ದೇಶಾದ್ಯಂತ ಹಿಂದು ದೇವಾಲಯಗಳನ್ನು ಅವುಗಳ ಪ್ರಾಚೀನ ವೈಭವಕ್ಕೆ ಮರುಸ್ಥಾಪಿಸಿರುವುದು ಸಾಂಸ್ಕೃತಿಕ ಏಕತೆಯ ಪ್ರಬಲ ಸಂದೇಶವನ್ನು ರವಾನಿಸುತ್ತದೆ. ಆಶ್ಚರ್ಯಕರ ಸಂಗತಿಯೆಂದರೆ ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ ನಂತರ ದೇಶ ಪ್ರವಾಸ ಕೈಗೊಂಡಾಗ ಮಹಾತ್ಮಾ ಗಾಂಧೀಜಿ ಅವರೂ ಸಹ ಇಂತಹದೇ ಪುನಶ್ಚೇತನದ ಕನಸು ಕಂಡಿದ್ದರು. ಕಾಂಗ್ರೆಸ್‌ನಲ್ಲಿದ್ದ ಗಾಂಧೀಜಿ ಅವರ ಶಿಷ್ಯರು ಅವರ ಆಶಯವನ್ನು ಈಡೇರಿಸುವಲ್ಲಿ ವಿಫಲರಾದರು. ಮೋದಿ ಆ ಕನಸನ್ನು ನನಸು ಮಾಡಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಜಮ್ಮು ಮತ್ತು ಕಾಶ್ಮೀರದ ಸ್ಥಾನಮಾನವು ಒಂದು ದೊಡ್ಡ ಗುಣಪಡಿಸಲಾಗದ ಗಾಯವಾಗಿತ್ತು. ರಾಜಕೀಯ ಅಸ್ಪಷ್ಟತೆಯು ಮುಸ್ಲಿಂ ಪ್ರಾಬಲ್ಯದ ಕಣಿವೆಯಲ್ಲಿ ಪ್ರತ್ಯೇಕತಾವಾದ ಮತ್ತು ಉಗ್ರಗಾಮಿತ್ವವನ್ನು ಪ್ರಚೋದಿಸಿತ್ತು. 2014ಕ್ಕಿಂತ ಮೊದಲು ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ ಭಾರತೀಯ ಸಂವಿಧಾನದ ವ್ಯಾಪ್ತಿಯನ್ನು ಮೀರಿ ರಾಜ್ಯವನ್ನು 1953 ಕ್ಕಿಂತ ಮುಂಚಿನ ಸ್ಥಿತಿಗೆ ಮರುಸ್ಥಾಪಿಸಬೇಕೆಂದು ಒತ್ತಾಯಿಸಿ ಹಲವು ನಿರ್ಣಯಗಳನ್ನು ಅಂಗೀಕರಿಸಲಾಗಿತ್ತು. ಆದರೆ ಒಂದೇ ಏಟಿಗೆ ಆ ರಾಜ್ಯವನ್ನು ಇಬ್ಭಾಗ ಮಾಡಿ ಕೇಂದ್ರಾಡಳಿತ ಪ್ರದೇಶವಾಗಿ ಪರಿವರ್ತಿಸಲಾಯಿತು. ಆ ಮೂಲಕ 370ನೇ ವಿಧಿಯನ್ನು ಇತಿಹಾಸದ ಒಂದು ಅಪ್ರಸ್ತುತ ಅವಶೇಷವನ್ನಾಗಿ ಮಾಡಲಾಯಿತು. ಪ್ರತ್ಯೇಕತಾವಾದದ ಭೂತವು ಝೀಲಂ ನದಿಯ ಕೆಸರಿನಂತೆ ಆಳವಾಗಿ ಹೂತುಹೋಗಿದೆ. ದೇಶದ ಉಳಿದ ಭಾಗಗಳೊಂದಿಗೆ ಸಂಪೂರ್ಣ ಮತ್ತು ಬೇಷರತ್ತಾದ ಏಕೀಕರಣಕ್ಕಾಗಿ ಆ ಪ್ರದೇಶದ ಜನರಲ್ಲಿ ಇಂದು ತೀವ್ರ ಹಂಬಲವಿದೆ. ತೀರಾ ಇತ್ತೀಚಿನ ಭೂತಕಾಲದಲ್ಲಿ ಉಗ್ರಗಾಮಿತ್ವ ಮತ್ತು ಹಿಂಸಾಚಾರದಿಂದ ತತ್ತರಿಸಿದ್ದ ಈಶಾನ್ಯ ರಾಜ್ಯಗಳ ವಿಷಯದಲ್ಲೂ ಇದು ಅನ್ವಯಿಸುತ್ತದೆ.

ಮೋದಿ ಅವರು ಗಣಿತದ ಒಂದು ಪಾಠವನ್ನು ಅರಿವಿಲ್ಲದೆಯೇ ಅಳವಡಿಸಿಕೊಂಡಂತೆ ತೋರುತ್ತದೆ. ಅದೇನೆಂದರೆ, ಸಮಸ್ಯೆಯನ್ನು ಸೃಷ್ಟಿಸಿದ ಮನಸ್ಥಿತಿಯಿಂದಲೇ ಆ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ. ಅವರು ದೇಶದ ರಾಜಕೀಯ ಮನಸ್ಥಿತಿಯನ್ನೇ ಸಂಪೂರ್ಣವಾಗಿ ಬದಲಾಯಿಸಿದರು ಮತ್ತು ಅದನ್ನು ಎಂದಿಗೂ ಹಿಂತಿರುಗಿಸಲಾಗದ ಹಾದಿಯಲ್ಲಿ ಮುನ್ನಡೆಸಿದರು.

ಸಾರ್ವಜನಿಕ ಜೀವನದ ನಡವಳಿಕೆಯಲ್ಲಿ ಇಂತಹ ಆಮೂಲಾಗ್ರ ಬದಲಾವಣೆಯು ತೀವ್ರ ಪ್ರತಿಕ್ರಿಯೆಗಳನ್ನು ಉಂಟುಮಾಡುವುದು ಸಹಜ. ಇದರ ಪರಿಣಾಮವಾಗಿ ಮೋದಿ ಅವರಿಗೆ ಪ್ರಶಂಸೆಗಿಂತ ಟೀಕೆಗಳೇ ಹೆಚ್ಚು ಸಿಗುತ್ತವೆ. ಆದರೆ ಅವರು ತಮ್ಮ ಬದ್ಧತೆಗಳಲ್ಲಿ ಧೃತಿಗೆಡದೆ ಸ್ಥಿರವಾಗಿ ಉಳಿದಿದ್ದಾರೆ.

ತಮ್ಮ 24 ವರ್ಷಗಳ ಆಡಳಿತಾವಧಿಯಲ್ಲಿ, ಮೊದಲು ಗುಜರಾತ್ ಮುಖ್ಯಮಂತ್ರಿಯಾಗಿ ಮತ್ತು ನಂತರ ಭಾರತದ ಪ್ರಧಾನಮಂತ್ರಿಯಾಗಿ ಅವರು ನೈಸರ್ಗಿಕ ಮತ್ತು ರಾಜಕೀಯ ಎರಡೂ ರೂಪದಲ್ಲೂ ಅನೇಕ ಅಭೂತಪೂರ್ವ ಬಿಕ್ಕಟ್ಟುಗಳನ್ನು ಎದುರಿಸಿದ್ದಾರೆ. ಗುಜರಾತ್‌ನಲ್ಲಿ ಕಾರ್ಯಾಂಗದ ಮುಖ್ಯಸ್ಥರಾಗಿ ಅವರ 13 ವರ್ಷಗಳ ಅಧಿಕಾರಾವಧಿಯಲ್ಲಿ ಯುಪಿಎ ನೇತೃತ್ವದ ಪ್ರತಿಕೂಲ ಕೇಂದ್ರ ಸರ್ಕಾರವನ್ನು ಒಂದು ದಶಕದ ಕಾಲ (2004-2014) ಎದುರಿಸಬೇಕಾಯಿತು. ಆ ಸರ್ಕಾರವು ರಾಜ್ಯವನ್ನು ಬಹುತೇಕ ಶತ್ರುವಿನಂತೆ ನಡೆಸಿಕೊಂಡಿತು. ಸೃಷ್ಟಿಸಲಾದ ಕ್ರಿಮಿನಲ್ ಪ್ರಕರಣಗಳಲ್ಲಿ ಅವರನ್ನು ಸಿಲುಕಿಸಲು ವ್ಯವಸ್ಥಿತ ಪ್ರಯತ್ನಗಳು ನಡೆದವು. ಅದೇ ರೀತಿ ಪ್ರಧಾನಮಂತ್ರಿಯಾಗಿ ಅವರ ಪ್ರಸ್ತುತ ಅವಧಿಯು ಮಾನವ ಇತಿಹಾಸದ ಅತ್ಯಂತ ಕೆಟ್ಟ ಬಿಕ್ಕಟ್ಟುಗಳಲ್ಲಿ ಒಂದಾದ ಸಾಂಕ್ರಾಮಿಕ ರೋಗವನ್ನು ಎದುರಿಸಿತು. ಯುರೋಪ್ ಮತ್ತು ಮಧ್ಯಪ್ರಾಚ್ಯದಲ್ಲಿ ಯುದ್ಧಗಳು ಭುಗಿಲೆದ್ದಿದ್ದು ಭಾರತದ ಮೇಲೆ ಭಾರಿ ಭೌಗೋಳಿಕ ರಾಜಕೀಯ ಮತ್ತು ಆರ್ಥಿಕ ಪರಿಣಾಮ ಬೀರಿದೆ. ಇದಕ್ಕೆ ಚಾಣಾಕ್ಷ ರಾಜತಾಂತ್ರಿಕ ಮಾರ್ಗದರ್ಶನದ ಅಗತ್ಯವಿತ್ತು. ಭಾರತದಲ್ಲಿ ಭಯೋತ್ಪಾದನೆಗೆ ಪಾಕಿಸ್ತಾನ ನೀಡುವ ಬೆಂಬಲವನ್ನು ತಡೆಯಲು ದಂಡನಾತ್ಮಕ ಸರ್ಜಿಕಲ್ ಸ್ಟ್ರೈಕ್‌ಗಳು, ಬಾಲಕೋಟ್ ವೈಮಾನಿಕ ದಾಳಿ ಮತ್ತು ಆಪರೇಷನ್ ಸಿಂಧೂರ್ ಅನ್ನು ಪ್ರಾರಂಭಿಸಿದಾಗಲೂ ಸಹ, ಉದ್ವಿಗ್ನತೆಯು ಸಂಪೂರ್ಣ ನಿಯಂತ್ರಣದಲ್ಲಿತ್ತು ಮತ್ತು ಅದನ್ನು ಎಂದಿಗೂ ಪೂರ್ಣ ಪ್ರಮಾಣದ ಯುದ್ಧವಾಗಿ ಬದಲಾಗಲು ಬಿಡಲಿಲ್ಲ. ಅವರ ರಾಜಕೀಯ ವಿರೋಧಿಗಳು ಅವರಲ್ಲಿರುವ ಹಲವು ವೈಫಲ್ಯಗಳನ್ನು ಎತ್ತಿ ತೋರಿಸಬಹುದು ಮತ್ತು ಭಾರತದಂತಹ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಜಾಪ್ರಭುತ್ವದಲ್ಲಿ, ಮೋದಿ ಅವರಂತಹ ವ್ಯಕ್ತಿತ್ವವನ್ನು ಹಲವು ರೀತಿಯಲ್ಲಿ ವಿಶ್ಲೇಷಿಸುವುದು ಸಹಜ. ಭಾರತದ ಚುನಾಯಿತ ಪ್ರಧಾನಮಂತ್ರಿಯಾಗಿ ಅವರ ಸುದೀರ್ಘ ಅವಧಿಯು ಘಟನಾಪ್ರಧಾನವಾಗಿದೆ ಮತ್ತು ಜನರ ಸೂಕ್ಷ್ಮ ಪರಿಶೀಲನೆಗೆ ಮುಕ್ತವಾಗಿದೆ.

ಇತಿಹಾಸವು ಯಾವುದೇ ಭಾವನೆಗಳು ಮತ್ತು ಪೂರ್ವಗ್ರಹಗಳಿಂದ ಮುಕ್ತವಾಗಿರುತ್ತದೆ ಎಂದು ಭಾವಿಸಲಾಗಿದೆ. ಮಹಾತ್ಮಾ ಗಾಂಧೀಜಿ ಅವರನ್ನು ಅವರದೇ ಕಾಲದಲ್ಲಿ ನಿಂದಿಸಲಾಯಿತು ಮತ್ತು ಪ್ರಶಂಸಿಸಲಾಯಿತು. ಆದರೆ ಅವರ ಅತ್ಯಂತ ಪ್ರಭಾವಶಾಲಿ ಐತಿಹಾಸಿಕ ಮೌಲ್ಯಮಾಪನವು ವಿಜ್ಞಾನದ ಪ್ರತಿಭೆ ಆಲ್ಬರ್ಟ್ ಐನ್‌ಸ್ಟೈನ್ ಅವರಿಂದ ಬಂತು. ಅವರು ಇಂತಹ ರಕ್ತಮಾಂಸದ ಮನುಷ್ಯನೊಬ್ಬ ಎಂದಾದರೂ ಈ ಭೂಮಿಯ ಮೇಲೆ ನಡೆದಾಡಿದ್ದನೆಂಬುದನ್ನು ಮುಂದಿನ ಪೀಳಿಗೆಯವರು ನಂಬುವುದು ಕಷ್ಟ ಎಂದು ಅವರು ಬರೆದಿದ್ದರು. ಇತಿಹಾಸವನ್ನು ನಿಖರವಾದ ಪದಗಳಲ್ಲಿ ಮಂಡಿಸಲು ಐನ್‌ಸ್ಟೈನ್‌ನಂತಹ ದೂರದೃಷ್ಟಿಯ ಅಗತ್ಯವಿದೆ. ಆದರೆ ಮುಂದಿನ ಪೀಳಿಗೆಗೆ ಮೋದಿ ಅವರ ಐತಿಹಾಸಿಕ ಮೌಲ್ಯಮಾಪನವೂ ಅಷ್ಟೇ ಪ್ರಭಾವಶಾಲಿಯಾಗಿರಲಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

(ಲೇಖಕರು ಭಾರತದ ರಾಷ್ಟ್ರಪತಿಯವರ ಮಾಜಿ ಪತ್ರಿಕಾ ಕಾರ್ಯದರ್ಶಿ ಮತ್ತು 'ದಿ ಆರ್ಕಿಟೆಕ್ಟ್ ಆಫ್ ದಿ ನ್ಯೂ ಬಿಜೆಪಿ: ಹೌ ನರೇಂದ್ರ ಮೋದಿ ಟ್ರಾನ್ಸ್‌ಫಾರ್ಮ್ಡ್ ದಿ ಪಾರ್ಟಿ' ಪುಸ್ತಕದ ಕರ್ತೃ)

ದೇಶದ ಪ್ರಗತಿ ಪಥ ಬದಲಿಸಿದ ಮೋದಿ

▸ ಏಕನಾಥ ಶಿಂಧೆ, ಮಹಾರಾಷ್ಟ್ರ ಉಪಮುಖ್ಯಮಂತ್ರಿ





ನರೇಂದ್ರ ಮೋದಿಯವರು ನಿರಂತರ ಸುದೀರ್ಘ ಅವಧಿಗೆ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ ಸಾಧನೆಗೆ ಈಗ ಪಾತ್ರರಾಗಿದ್ದಾರೆ. ಇಂದು ಮೋದಿಯವರು ಪ್ರಧಾನಿ ಗಾದಿಯಲ್ಲಿ 4,399 ದಿನಗಳನ್ನು ಪೂರೈಸಲಿದ್ದು, ಆ ಮೂಲಕ ಜವಾಹರಲಾಲ್ ನೆಹರೂ ಪ್ರಧಾನಿಯಾಗಿದ್ದ 4,398 ದಿನಗಳ ಸಾಧನೆಯನ್ನು ಮೀರಿ ಮುಂದುವರಿಯಲಿದ್ದಾರೆ. ನೆಹರೂ ಯುಗವು ಭಾರತದ ನಿಧಾನ ಪ್ರಗತಿಯನ್ನು ದಾಖಲಿಸಿದ್ದರೆ, ಮೋದಿಯವರ ಯುಗದಲ್ಲಿ ಭಾರತವು ಅಭಿವೃದ್ಧಿಯತ್ತ ದಾಪುಗಾಲು ಇಡುತ್ತಿರುವುದು ಈ ಎರಡು ಆಡಳಿತ ಕಾಲದ ವ್ಯತ್ಯಾಸವಾಗಿದೆ.



ಪ್ರಧಾನಿ ನರೇಂದ್ರ ಮೋದಿಯವರು ಕಳೆದ 12 ವರ್ಷಗಳಿಂದ 'ನವಭಾರತ' ನಿರ್ಮಾಣಕ್ಕಾಗಿ ಅವಿಶ್ರಾಂತವಾಗಿ ಶ್ರಮಿಸುತ್ತಿದ್ದಾರೆ. ವಿರೋಧಿಗಳ ಅಪಪ್ರಚಾರ, ಟೀಕೆ ಮತ್ತು ಚಾರಿತ್ರ್ಯಹನನದ ಪ್ರಯತ್ನಗಳನ್ನೆಲ್ಲ ಲೆಕ್ಕಿಸದೆ ಮೋದಿಯವರು ತಮ್ಮ ಗುರಿಸಾಧನೆಯ ಪ್ರಯತ್ನದಲ್ಲಿ ಅವಿಚಲಿತರಾಗಿ ಮುಂದುವರಿಯುತ್ತಿದ್ದಾರೆ.

ಈ ಹಿಂದೆಲ್ಲಾ ಸಾಮಾನ್ಯವಾಗಿ ಭಾರತದ ಪ್ರಗತಿಯನ್ನು ತುಲನೆ ಮಾಡುವಾಗ 'ಸ್ವಾತಂತ್ರ್ಯ ಪೂರ್ವ' ಮತ್ತು 'ಸ್ವಾತಂತ್ರ್ಯಾನಂತರ'ದ ಕಾಲ ಎಂದು ಹೇಳಲಾಗುತ್ತಿತ್ತು. ಆದರೆ ಈಗ ಭಾರತವು ಸಾಧಿಸಿರುವ ಅದ್ಭುತ ಪ್ರಗತಿಯ ಬಳಿಕ ದೇಶೀಯವಾಗಿಯೂ, ಜಾಗತಿಕವಾಗಿಯೂ '2014ರ ಮುನ್ನ' ಮತ್ತು '2014ರ ನಂತರ' ಎಂಬ ಕಾಲಖಂಡವನ್ನು ಉಲ್ಲೇಖಿಸಲಾಗುತ್ತಿದೆ. ಮೋದಿಯವರ ಭವಿಷ್ಯದ ಕುರಿತಾದ ದೂರದೃಷ್ಟಿಯೇ ಇದಕ್ಕೆಲ್ಲ ಕಾರಣವಾಗಿದೆ.

1947ರ ಬಳಿಕ 67 ವರ್ಷಗಳ ಅವಧಿಯಲ್ಲಿ ಭಾರತವು ಹಲವಾರು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿತೆಂಬುದು ನಿಜ. ಆದರೆ ಅದು ಪ್ರತಿಯೊಂದು ಪ್ರಜಾತಾಂತ್ರಿಕ ದೇಶವೂ ಸಾಧಿಸಬಹುದಾದ ನಿಧಾನ ಪ್ರಗತಿ. ಆದರೆ ಕಳೆದ 12 ವರ್ಷಗಳಲ್ಲಿ ನಾವು ಕಾಣುತ್ತಿರುವುದು ಕ್ಷಿಪ್ರವಾದ ಹಾಗೂ ದೇಶವನ್ನು ಜಾಗತಿಕವಾಗಿ ಮೇಲೆತ್ತಬಲ್ಲ ಅಭೂತಪೂರ್ವ ಪ್ರಗತಿ.

ಮೊದಲ 67 ವರ್ಷಗಳ ಆಡಳಿತದಲ್ಲಿ ಬಡತನ ನಿವಾರಣೆಗೆ ಮತ್ತು ಅಭಿವೃದ್ಧಿ ಸಾಧಿಸಲು ಹಲವಾರು ಕಾರ್ಯಕ್ರಮಗಳನ್ನು ಪ್ರಕಟಿಸಲಾಯಿತಾದರೂ ಮತ್ತು 'ಗರೀಬಿ ಹಟಾವೋ'ದಂತಹ ಘೋಷಣೆಗಳನ್ನು ಮೊಳಗಿಸಲಾಯಿತಾದರೂ ಬರೀ ಘೋಷಣೆಯಿಂದ ಏನೂ ಸಾಧಿಸಲ್ಪಡಲಿಲ್ಲ. ಕಾಂಗ್ರೆಸ್ ಆಳ್ವಿಕೆಯ ಈ ಸಮಯದಲ್ಲಿ ಖಾದಿಧಾರಿ ರಾಜಕಾರಣಿಗಳು ಮಾತ್ರ ತಮ್ಮ ಜೇಬು ತುಂಬಿಸಿಕೊಳ್ಳುತ್ತಾರೆ ಎಂಬ ಪರಿಕಲ್ಪನೆ ಜನರಲ್ಲಿ ಉಂಟಾಗಲು ಕಾರಣವಾಯಿತು. ಆದರೆ ಮೋದಿಯವರ ಆಡಳಿತದಲ್ಲಿ ಇದು ಬದಲಾಯಿತು. ರಾಷ್ಟ್ರೀಯ ಹಿತಾಸಕ್ತಿ ಆದ್ಯತೆ ಪಡೆಯಿತು. ಮೋದಿಯವರು ಭ್ರಷ್ಟಾಚಾರದ ನಿಯಂತ್ರಣ ಮಾಡಿದರು, ಪ್ರಗತಿಗೆ ಇರುವ ಅಡ್ಡಿಗಳನ್ನು ತೊಲಗಿಸಿದರು. ಪ್ರಗತಿಪರರ ಹೆಸರಿನಲ್ಲಿ ಕಾಂಗ್ರೆಸ್ ನಿರ್ಮಿಸಿದ್ದ ಬೌದ್ಧಿಕ ಅಡೆತಡೆಗಳನ್ನು ನಿವಾರಿಸಿದರು.

ಮೋದಿಯವರು 2001ರ ಅಕ್ಟೋಬರ್ 7ರಿಂದ 2014ರ ಮೇ 11ರ ವರೆಗೆ ಗುಜರಾತಿನ ಮುಖ್ಯಮಂತ್ರಿಯಾಗಿದ್ದರು. ಅವರು ಮೂರು ಅವಧಿಗಳಿಗೆ ಮುಖ್ಯಮಂತ್ರಿಯಾಗಿದ್ದಾಗ ವಿರೋಧಿಗಳು ಅವರ ವಿರುದ್ಧ ಸಾಕಷ್ಟು ಅಪಪ್ರಚಾರ ಮಾಡಿದರು, ಅವರ ಸ್ಫೂರ್ತಿಯನ್ನು ಕುಂದಿಸಲು ಯತ್ನಿಸಿದರು. ಆದರೆ ಮೋದಿಜೀ ಈ ಎಲ್ಲಾ ಅಡೆತಡೆಗಳನ್ನು ನಿವಾರಿಸಿ 'ಗುಜರಾತ್ ಮಾದರಿ' ಎಂಬ ಅಭಿವೃದ್ಧಿಯ ಹೊಸಶಕೆಯನ್ನು ಆರಂಭಿಸಿದರು. 'ವೈಬ್ರೆಂಟ್ ಗುಜರಾತ್' ಸಮ್ಮೇಳನದ ಮೂಲಕ ದೊಡ್ಡ ಪ್ರಮಾಣದಲ್ಲಿ ವಿದೇಶಿ ಹೂಡಿಕೆಯನ್ನು ಆಕರ್ಷಿಸಿದರು. ರೈತರಿಗೆ ದಿನದ 24 ಗಂಟೆ ವಿದ್ಯುತ್ ಪೂರೈಸುವ ಮೂಲಕ ರಾಜ್ಯದಲ್ಲಿ ರೈತಕ್ರಾಂತಿಯನ್ನು ಅನುಷ್ಠಾನಿಸಿದರು. ಆಡಳಿತದಲ್ಲಿ ತಂತ್ರಜ್ಞಾನವನ್ನು ಅಳವಡಿಸುವುದರೊಂದಿಗೆ ಭ್ರಷ್ಟಾಚಾರ ಕಡಿಮೆಯಾಗಿ ಪಾರದರ್ಶಕತೆಗೆ ಅವಕಾಶ ಕಲ್ಪಿಸಿತು.

"ಜನರು ನನ್ನನ್ನು ಟೀಕಿಸಲಿ ಅಥವಾ ಹೊಗಳಲಿ, ನನ್ನ ಗುರಿ ದೇಶದ ಅಭಿವೃದ್ಧಿ" ಎನ್ನುವುದು ಮೋದಿಜೀಯವರ ಧ್ಯೇಯವಾಕ್ಯ. 2014ರಲ್ಲಿ ಪ್ರಧಾನಿಯಾದ ಬಳಿಕವೂ ಅವರು ಇದೇ ಧ್ಯೇಯದೊಂದಿಗೆ ಮುಂದುವರಿಯುತ್ತಿದ್ದಾರೆ. 'ಟೀಕಾಕಾರನೊಬ್ಬ ಪಕ್ಕದಲ್ಲಿರಬೇಕು' ಎಂದು ಹೇಳುವುದಿದೆ. ಆದರೆ ಮೋದಿಜೀಗೆ ಸಂಬಂಧಿಸಿ ಹೇಳುವುದಾದರೆ ಗಲ್ಲಿಗಲ್ಲಿಯಲ್ಲಿ ಟೀಕಾಕಾರರು ಹುಟ್ಟಿಕೊಂಡರು.



ಟೀಕಾಕಾರರು ಮತ್ತು ವಿರೋಧಿಗಳು ಚೆಲ್ಲಿದ ದ್ವೇಷದ ನೆಲದಲ್ಲಿ ಮೋದಿಯವರು ಅಭಿವೃದ್ಧಿಯ ಉದ್ಯಾನವನವನ್ನು ಬೆಳೆಸಬಲ್ಲರು.

ಆದರೆ ಅಂತ್ಯದಲ್ಲಿ ಭಾರತದ ಅಭಿವೃದ್ಧಿಯ ಬಿರುಗಾಳಿಯನ್ನು ತಡೆಯಲು ಅವರಾರಿಗೂ ಆಗಲಿಲ್ಲ. ಕಳೆದ 12 ವರ್ಷಗಳಲ್ಲಿ ಭಾರತವು ಬಡತನ ನಿರ್ಮೂಲನೆಯಲ್ಲಿ ಉತ್ತಮ ಪ್ರಗತಿ ಸಾಧಿಸಿದೆ ಎಂದು ವಿಶ್ವಬ್ಯಾಂಕ್ ವರದಿ ಹೇಳುತ್ತಿದೆ. 2011-12ರಲ್ಲಿ ಶೇ. 27ರಷ್ಟಿದ್ದ ಬಡವರ ಸಂಖ್ಯೆಯು ಈಗ ಶೇ. 5-6ಕ್ಕಿಳಿದಿದೆ.

"ಮೋದೀಜಿ ಹೇಳಿದಂತೆ ನಡೆಯುವವರು ಹಾಗೂ ತಮ್ಮಿಂದ ಮಾಡಲಾಗುವುದನ್ನೇ ಹೇಳುವವರು" ಎಂಬ ಮಾತು ಈಗ ಪ್ರಚಲಿತವಾಗಿದೆ. ಕಳೆದ 12 ವರ್ಷಗಳಲ್ಲಿ ಅವರ ಕಾರ್ಯಾನುಷ್ಠಾನ ಶೈಲಿಯು ಈ ಹೇಳಿಕೆಯನ್ನು ದೃಢಪಡಿಸಿದೆ. ದೇಶದ ನಾಯಕನೊಬ್ಬ ಎಷ್ಟು ಪತ್ರಿಕಾಗೋಷ್ಠಿಯನ್ನು ನಡೆಸಿದ್ದಾನೆ ಎಂಬ ಆಧಾರದಲ್ಲಿ ಆತನನ್ನು ಅಳೆಯುವ ಟೀಕಾಕಾರರು ಕೇವಲ ಭಾರತದಲ್ಲಷ್ಟೇ ಕಂಡುಬರುತ್ತಾರೆ. ಆದರೆ ಮೋದಿಯವರು ಮಾಧ್ಯಮಗಳ ಮುಂದೆ ದೊಡ್ಡ ದೊಡ್ಡ ಹೇಳಿಕೆಗಳನ್ನು ನೀಡಲು ಹೋಗುವುದಿಲ್ಲ. ಅವರು ಪ್ರಚಾರದಿಂದ ದೂರವಾಗಿ, ಮೌನವಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಕಳೆದ 67 ವರ್ಷಗಳಲ್ಲಿ ಕಾಂಗ್ರೆಸ್ ಆಡಳಿತ ಮತ್ತು ಕಾಂಗ್ರೆಸ್ ಸಿದ್ಧಾಂತದಿಂದ ರೂಪಿಸಲ್ಪಟ್ಟ ಕೊಳೆಗಳನ್ನು ತೊಳೆಯಲೇ ಮೋದಿಯವರು ಬಹಳಷ್ಟು ಶ್ರಮಪಡಬೇಕಾಗಿ ಬಂತು. ಆಡಳಿತ ಶುದ್ಧೀಕರಣವನ್ನು ಘೋಷಿಸಿದ ಅವರು ಈ ಕಾರ್ಯಕ್ಕೆ ಆದ್ಯತೆ ನೀಡಿದರು. ತಮ್ಮ ಕೆಲಸದ ಬಗ್ಗೆ ಮಾತಿನಿಂದ ಹೇಳುವ ಅಗತ್ಯವಿಲ್ಲ, ಅದರ ಬದಲಾಗಿ ತನ್ನ ಕೃತಿಗಳಿಂದಲೇ ಅದನ್ನು ಸಾಬೀತುಪಡಿಸುತ್ತೇನೆ ಎಂಬುದು ಮೋದಿಯವರ ಚಿಂತನೆ.

ಕಳೆದ 12 ವರ್ಷಗಳ ಮೋದಿ ಆಡಳಿತದ ಸಾಧನೆಗಳನ್ನು ವಿವಿಧ ದಿಕ್ಕುಗಳಿಂದ ನೋಡಬಹುದಾಗಿದೆ. ಸಾಮಾಜಿಕ ಸುಧಾರಣೆ, ರಾಜಕೀಯ ಬದಲಾವಣೆ, ಸಾಂಸ್ಕೃತಿಕ ಪುನರುತ್ಥಾನ, ಜಾಗತಿಕವಾಗಿ ಹೆಚ್ಚಿದ ಭಾರತದ ಘನತೆ ಮೊದಲಾದವು ಇದಕ್ಕೆ ನಿದರ್ಶನ. ಜನಧನ್ ಯೋಜನೆ, ಸ್ವಚ್ಛ ಭಾರತ ಅಭಿಯಾನ, ಜಿಎಸ್‌ಟಿ ಅನುಷ್ಠಾನ, ಆಯುಷ್ಮಾನ್ ಭಾರತ್, ಡಿಜಿಟಲ್ ಇಂಡಿಯಾ, ಆತ್ಮನಿರ್ಭರ ಭಾರತ, ತ್ರಿವಳಿ ತಲಾಖ್ ಕಾನೂನು, ಸಂವಿಧಾನದ 370ನೇ ವಿಧಿ ರದ್ದತಿ, ಹೊಸ ಸಂಸತ್‌ಭವನ ನಿರ್ಮಾಣ, ಶ್ರೀರಾಮ ಮಂದಿರ ನಿರ್ಮಾಣ, ಕಾಶಿ ವಿಶ್ವನಾಥ ಕಾರಿಡಾರ್ ನಿರ್ಮಾಣ... ಒಂದೇ ಎರಡೇ, ಮೋದಿ ಸಾಧನೆಯ ಗರಿಗಳು ಅನೇಕ!!

ಈಗ ದೇಶಾದ್ಯಂತ ಷಟ್ಪಥ ಮತ್ತು ಅಷ್ಟಪಥಗಳ ರಸ್ತೆ ಜಾಲ ಹರಡಿರಬೇಕಾದರೆ ಅದಕ್ಕೆ ಮೋದಿಜೀಯವರ ಅಭಿವೃದ್ಧಿಯ ದೃಷ್ಟಿಕೋನವೇ ಕಾರಣ. ಕಳೆದ 70 ವರ್ಷಗಳಲ್ಲಿ ದೇಶದಲ್ಲಿ ಸರಿಯಾದ ರಸ್ತೆ ಸೌಕರ್ಯಗಳನ್ನೂ ಒದಗಿಸಲು ಹಿಂದಿನ ಆಡಳಿತಗಳಿಗೆ ಸಾಧ್ಯವಾಗಲಿಲ್ಲವೆನ್ನುವುದು ದುರದೃಷ್ಟಕರ. 2014ರಿಂದ ಆರಂಭಿಸಿ ದೇಶಾದ್ಯಂತ 375000 ಕಿ.ಮೀ. ಹೊಸ ರಸ್ತೆಗಳನ್ನು ನಿರ್ಮಿಸಲಾಗಿದೆ. ರಸ್ತೆಗಳು ಆರ್ಥಿಕ ಮತ್ತು ಕೈಗಾರಿಕಾ ಪ್ರಗತಿಯ ಮೂಲಭೂತ ಅವಶ್ಯಕತೆಗಳಾಗಿವೆ. ಜತೆಗೇ ಸಾಮಾನ್ಯ ಜನರ ಜೀವನಾಡಿಯೂ ಆಗಿದೆ.ದೇಶಕ್ಕೆ ಇದನ್ನು ಅರಿತುಕೊಳ್ಳಲು ಇಷ್ಟು ದೀರ್ಘಕಾಲ ಬೇಕಾಯಿತು.

ನಮಾಮಿ ಗಂಗಾ ಯೋಜನೆಯು ನರೇಂದ್ರ ಮೋದಿ ಸರಕಾರದ ಅತ್ಯಂತ ಮಹತ್ವದ ಪರಿಸರ ಸಂರಕ್ಷಣೆ ಯೋಜನೆ. ಈ ಯೋಜನೆಯಡಿಯಲ್ಲಿ ಗಂಗಾ ಮತ್ತು ಅದರ ಉಪನದಿಗಳ ಶುದ್ಧೀಕರಣ ಕಾರ್ಯ ಕೈಗೊಳ್ಳಲಾಗಿದೆ. ಇದು ದೇಶಾದ್ಯಂತ ನದಿ ಸಂರಕ್ಷಣೆ ಕುರಿತಾದ ಜಾಗೃತಿಯನ್ನು ಮೂಡಿಸಿದೆ.

ಮೋದಿಜೀಯವರು ಭಾರತೀಯ ರೈಲ್ವೇಯನ್ನು ಆಧುನೀಕರಣಗೊಳಿಸುವಲ್ಲಿ ಮಹತ್ತರ ಯಶಸ್ಸು ಸಾಧಿಸಿದ್ದಾರೆ. ರೈಲು ನಿಲ್ದಾಣಗಳ ನವೀಕರಣ, ಹೊಸ ರೈಲುಗಳ ಸೇರ್ಪಡೆ, ಹೈಸ್ಪೀಡ್ ರೈಲು ಯೋಜನೆ ಮುಂತಾದವು ಪ್ರಯಾಣಿಕರಿಗೆ ಸುರಕ್ಷಿತ ಮತ್ತು ಉತ್ತಮ ಪ್ರಯಾಣದ ಅನುಭವ ನೀಡುತ್ತಿವೆ. ವಂದೇಭಾರತ್‌ನಂತಹ ಆಧುನಿಕ ರೈಲುಗಳು ಮತ್ತು ಪ್ರಮುಖ ನಗರಗಳಲ್ಲಿ ಮೆಟ್ರೋ ಸೇವೆ ವಿಸ್ತರಣೆ ಭಾರತೀಯರ ದೈನಂದಿನ ಜೀವನವನ್ನು ಸುಗಮಗೊಳಿಸಿದೆ.

ಸರ್ಜಿಕಲ್ ದಾಳಿಗಳನ್ನು ನಡೆಸುವ ಮೂಲಕ ಮೋದಿಜೀಯವರು ಭಾರತವು ತನ್ನ ವಿರೋಧಿಗಳಿಗೆ ಕ್ಷಿಪ್ರ ಪ್ರತ್ಯುತ್ತರ ನೀಡಬಲ್ಲುದೆಂಬುದನ್ನು ಸಾಬೀತುಪಡಿಸಿದ್ದಾರೆ. ಪಾಕಿಸ್ತಾನಿ ಪ್ರೇರಿತ ಭಯೋತ್ಪಾದಕರು ಭಾರತದೊಳಕ್ಕೆ ನುಸುಳಿ ಬಂದು ಇಲ್ಲಿ ವಿಧ್ವಂಸಕ ಕೃತ್ಯಗಳನ್ನೆಸಗಿ ಸುರಕ್ಷಿತವಾಗಿ ಪಾರಾಗಬಹುದು ಎಂದು ಈವರೆಗೆ ತಿಳಿದುಕೊಂಡಿದ್ದರು. ಆದರೆ ಈಗ ಭಾರತೀಯ ಸೇನೆಯು ವಿರೋಧಿ ನೆಲದೊಳಗೆ ನುಗ್ಗಿ ಭಯೋತ್ಪಾದಕರನ್ನು ಸದೆಬಡಿಯುವಲ್ಲಿ ಸಫಲವಾಗಿದೆ. ಆಂತರಿಕ ಭಯೋತ್ಪಾದನೆಗೆ ಹೆಸರಾದ ನಕ್ಸಲೀಯ ಪಿಡುಗನ್ನು ಕೂಡಾ ಈಗ ದಮನಿಸಲಾಗಿದೆ.

ನಾನು ಮತ್ತು ನನ್ನ ಪೂರ್ಣ ಕುಟುಂಬವು ಪ್ರಧಾನಿ ಮೋದಿಜೀಯವರ ಪ್ರೀತಿವಾತ್ಸಲ್ಯಕ್ಕೆ ಪಾತ್ರರಾಗಿರುವುದು ನಮ್ಮ ಅದೃಷ್ಟ. ಪ್ರತಿಬಾರಿ ಅವರನ್ನು ಭೇಟಿಯಾದಾಗಲೂ "ಹೇಗಿದ್ದೀರಿ ಏಕನಾಥ್‌ಜೀ" ಎಂದು ಅವರು ವಿಚಾರಿಸಿಕೊಳ್ಳುತ್ತಾರೆ.

ರಾಜಕೀಯದಲ್ಲಿ ಮೋದಿಜೀಯವರದು ಸುಗಮ ಹಾದಿಯಲ್ಲ. ಅವರ ಹಾದಿಯಲ್ಲಿ ಟೀಕಾಕಾರರು, ನಿಂದಕರು ಸದಾ ಅಡ್ಡಾಗಾಲಿಡಲು ಯತ್ನಿಸುತ್ತಾರೆ. ಆದರೆ ಮೋದಿಜೀಯವರು ತಮಗೆದುರಾಗುವ ಟೀಕೆ, ದ್ವೇಷ, ಅಸೂಯೆ, ವೈಯಕ್ತಿಕ ನಿಂದನೆ ಮುಂತಾದವುಗಳನ್ನೆಲ್ಲಾ ಮೀರಿ ಮುಂದೆ ಸಾಗುವವರೆಂಬ ವಿಶ್ವಾಸ ನನಗಿದೆ. ಟೀಕಾಕಾರರು ಮತ್ತು ವಿರೋಧಿಗಳು ಚೆಲ್ಲಿದ ದ್ವೇಷದ ನೆಲದಲ್ಲಿ ಮೋದಿಯವರು ಅಭಿವೃದ್ಧಿಯ ಉದ್ಯಾನವನವನ್ನು ಬೆಳೆಸಬಲ್ಲರು.

ಶ್ರಾದ್ಧದ ಪ್ರಕಾರಗಳು ಮತ್ತು ಅವುಗಳ ಮಹತ್ತ್ವ

ಪಿತೃಕಾರ್ಯವು ದೇವಕಾರ್ಯದಷ್ಟೇ ಮಹತ್ತ್ವದ್ದು ಮತ್ತು ಇದನ್ನು ತಪ್ಪದೇ ಮಾಡಬೇಕೆಂಬುದಾಗಿ ಉಪನಿಷತ್ತು ತಿಳಿಸುತ್ತದೆ.

ಪದಸಂಚಲನ

◆ ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಪಿತೃಋಣದ ಅಪಾಕರಣೆಗಾಗಿ ಮಾಡಲಾಗುವ ಕರ್ಮವೇ ಶ್ರಾದ್ಧಕಾರ್ಮ. ವ್ಯಕ್ತಿಯ ಮರಣದ ಅನಂತರ ಮಾಡಲಾಗುವ ಮೊಟ್ಟ ಮೊದಲ ಶ್ರಾದ್ಧವೆಂದರೆ, ಅದು ನಗ್ನಪ್ರಚ್ಛಾದನಶ್ರಾದ್ಧ. ಹನ್ನೆರಡನೆಯ ದಿನ ಪಿಂಡಸಂಯೋಜನೆಯ ಮೂಲಕ ಮೃತವ್ಯಕ್ತಿಗೆ ಪಿತೃಗಳ ಸ್ಥಾನ ದೊರಕುವವರೆಗೆ ಅವರು ಪ್ರೇತರಾಗಿರುತ್ತಾರೆ. ಹಾಗಾಗಿಯೇ ಅಲ್ಲಿಯವರೆಗೆ ಪಿತುಃ ಪ್ರೇತೇ ಎಂದೇ ಸಂಬೋಧಿಸಲಾಗುತ್ತದೆ. ಪ್ರೇತವನ್ನು ಕುರಿತು ಮಾಡಲಾಗುವ ಮೊದಲ ಶ್ರಾದ್ಧಕ್ಕೆ ನಗ್ನಪ್ರಚ್ಛಾದನಶ್ರಾದ್ಧ ಎಂದು ಕರೆಯಲಾಗುತ್ತದೆ. ಈ ಶ್ರಾದ್ಧದ ಅಂಗವಾಗಿ ಧಾನ್ಯಸಹಿತವಾದ ಪಾತ್ರೆ, ದೀಪ, ಕಂಚಿನ ಅಡುಗೆಯ ಪಾತ್ರೆ ಹಾಗೂ ಬಟ್ಟೆಯನ್ನು ಸೇರಿಸಿ ದಾನವಾಗಿ ಕೊಡಲಾಗುತ್ತದೆ.

ರುದ್ರಗಣಶ್ರಾದ್ಧ: ಏಕಾದಶಾಹದ ದಿನ ಹನ್ನೊಂದು ವಿಪ್ರರಲ್ಲಿ ಏಕಾದಶರುದ್ರರನ್ನು ಆವಾಹಿಸಿ ಪ್ರೇತತ್ವವಿಮೋಚನೆಗಾಗಿ ಅಕ್ಕಿ, ತೆಂಗಿನಕಾಯಿ ಮೊದಲಾದವುಗಳನ್ನು ನೀಡುವುದನ್ನು ರುದ್ರಗಣಶ್ರಾದ್ಧ ಎಂದು ಕರೆಯಲಾಗುತ್ತದೆ. ಏಕಾದಶಾಹದಂದು ಮಾಡಲಾಗುವ ಕಾರ್ಯಗಳನ್ನು ಶಿವಪ್ರೀತ್ಯರ್ಥವಾಗಿಯೂ, ಸಪಿಂಡೀಕರಣದ ದಿನ (ದ್ವಾದಶಾಹ) ಮಾಡುವ ಕಾರ್ಯಗಳನ್ನು ವಿಷ್ಣುಪ್ರೀತ್ಯರ್ಥವಾಗಿಯೂ ಮಾಡಲಾಗುತ್ತದೆ.

ನವಶ್ರಾದ್ಧ: ವ್ಯಕ್ತಿಯು ಮರಣವನ್ನು ಹೊಂದಿದ ದಿನದಿಂದ ಹನ್ನೊಂದನೆಯ ದಿನಗಳೊಳಗೆ ಬರುವ 1,3,5,7,9,11 ಈ ವಿಷಮಸಂಖ್ಯೆಯ ದಿನಗಳಲ್ಲಿ ಮಾಡಲಾಗುವ ವಿಶೇಷಶ್ರಾದ್ಧಗಳನ್ನು ನವಶ್ರಾದ್ಧ ಎಂಬುದಾಗಿ ಕರೆಯಲಾಗಿದೆ. ಸ್ನಾನದ ಅನಂತರ ಕರ್ತೃವು ಮೈಯನ್ನು ಒರೆಸಿಕೊಳ್ಳದೇ ಪವಿತ್ರಧಾರಿಯಾಗಿ ಆರು ಬಾಳೆಲೆಗಳಲ್ಲಿ ಅಕ್ಕಿ-ತೆಂಗಿನಕಾಯಿಯನ್ನು ಹಾಕಿ ದಾನ ಮಾಡುವ ಪ್ರಕ್ರಿಯೆಯನ್ನೇ ನವಶ್ರಾದ್ಧ ಎನ್ನಲಾಗುತ್ತದೆ.

ಷೋಡಶಶ್ರಾದ್ಧ: ಈ ಶ್ರಾದ್ಧಕ್ಕೆ ಮತ್ತೊಂದು ಹೆಸರು ಮಲಿನಶ್ರಾದ್ಧ ಎಂಬುದಾಗಿ. ಷೋಡಶಶ್ರಾದ್ಧದಲ್ಲಿ 360 ಪಿಂಡ ಮತ್ತು 16 ಮಾಸಿಕ ಪಿಂಡಗಳನ್ನು ನೀಡಲಾಗುತ್ತದೆ. ಇದು ಪ್ರೇತವನ್ನು ಉದ್ದೇಶಿಸಿ ಮಾಡಲಾಗುವ ಶ್ರಾದ್ಧವಾಗಿದೆ. ಪ್ರೇತಕ್ಕೆ ಪಿತೃಲೋಕವನ್ನು ಸೇರಲು ಒಂದು ವರ್ಷ ಕಾಲ ಬೇಕಾಗುತ್ತದೆಂದು ಹೇಳಲಾಗುತ್ತದೆ. ಅವರೆಗೆ ಪ್ರತಿದಿನವೂ ಪಿಂಡಪ್ರದಾನದ ಮೂಲಕ ಪ್ರೇತಾತ್ಮವನ್ನು ತೃಪ್ತಿಪಡಿಸಬೇಕೆಂಬ ಉದ್ದೇಶದಿಂದ ಇದನ್ನು ಆಚರಿಸಲಾಗುತ್ತದೆ. ಇದನ್ನು ಏಕಾದಶಾಹದಂದು ವೃಷೋತ್ಸರ್ಗಹೋಮದ ಅನಂತರ ಆಚರಿಸಲಾಗುತ್ತದೆ.

ಸಪಿಂಡೀಕರಣಶ್ರಾದ್ಧ:

ಅಶುದ್ಧಃ ಸ್ಯಾತ್ ಸದಾ ಪುತ್ರೋ ನ ಶುದ್ಧ್ಯತಿ ಕದಾಚನ ।
ಸೂತಕಂ ನ ನಿವರ್ತೇತ ಸಪಿಂಡೀಕರಣಂ ವಿನಾ ॥

ಎಂಬುದಾಗಿ ಶಾಸ್ತ್ರಗಳು ತಿಳಿಸುತ್ತವೆ. ಅರ್ಥಾತ್ ಸಪಿಂಡೀಕರಣವನ್ನು ಮಾಡದಿದ್ದರೆ ಮಕ್ಕಳಿಗೆ ಆಶೌಚದಿಂದ ಶುದ್ಧಿಯು ದೊರೆಯುವುದಿಲ್ಲ. ಎಲ್ಲ ಮಕ್ಕಳೂ ಸೇರಿ ಜ್ಯೇಷ್ಠಪುತ್ರನ ನೇತೃತ್ವದಲ್ಲಿ ಇದನ್ನು ಮಾಡಲಾಗುತ್ತದೆ. ಮರಣದ ಹನ್ನೆರಡನೆಯ ದಿನ ಈ ಶ್ರಾದ್ಧವನ್ನು ಮಾಡಲಾಗುತ್ತದೆ. ಸಪಿಂಡೀಕರಣವೆಂದರೆ ಮೃತನಾದ ವ್ಯಕ್ತಿಗಿಂತ ಮುಂಚೆ ಕಳೆದುಹೋದ ಮೂರು ತಲೆಮಾರಿನ ಪಿತೃಗಳ ಸಮೂಹದೊಡನೆ ಈಗ ತೀರಿಹೋದ ವ್ಯಕ್ತಿಯನ್ನು ಪಿತೃರೂಪದಲ್ಲಿ ಸೇರಿಸುವುದಾಗಿದೆ. ಸಪಿಂಡೀಕರಣದಿಂದ ಮೃತರಿಗೆ ಪ್ರೇತತ್ವದ ನಿವಾರಣೆಯಾಗಿ ಪಿತೃಸ್ಥಾನವು ಲಭ್ಯವಾಗುತ್ತದೆ. ದ್ವಾದಶಾಹೇ ಸಪಿಂಡಾಖ್ಯಂ ಮುಖ್ಯಂ ಕಲಿಯುಗೇ ಸ್ಮೃತಮ್ ಎಂಬುದಾಗಿ ಶಾಸ್ತ್ರವು ಸಪಿಂಡೀಕರಣದ ಮಹತ್ತ್ವವನ್ನು ತಿಳಿಸುತ್ತದೆ.

ಪಾಥೇಯಶ್ರಾದ್ಧ: ಮರಣದ ದಿನದಿಂದ ಹದಿಮೂರನೆಯ ದಿನ ಮಾಡಲಾಗುವ ಶ್ರಾದ್ಧವನ್ನು ಪಾಥೇಯಶ್ರಾದ್ಧ ಎನ್ನಲಾಗುತ್ತದೆ. ಇದಕ್ಕೆ ಪತಂಗ ಎಂಬುದಾಗಿಯೂ ಕರೆಯಲಾಗುತ್ತದೆ. ವರ್ಷಕ್ಕೊಮ್ಮೆ ಮಾಡಲಾಗುವ ಶ್ರಾದ್ಧದ ರೀತಿಯಲ್ಲಿಯೇ ಇದನ್ನೂ ಮಾಡಲಾಗುತ್ತದೆ. ಪಾಥೇಯಶ್ರಾದ್ಧದಿಂದ ಆರಂಭಿಸಿ ಪ್ರತಿಮಾಸಿಕಶ್ರಾದ್ಧ, ಪ್ರಥಮಾಬ್ದಿಕಶ್ರಾದ್ಧ, ಪ್ರತಿಸಾಂವತ್ಸರಿಕಶ್ರಾದ್ಧ ಈ ಎಲ್ಲವುಗಳಲ್ಲಿಯೂ ಮೂರು ಪಿಂಡಗಳನ್ನು ಪ್ರದಾನ ಮಾಡಿ ಶ್ರಾದ್ಧವನ್ನು ಮಾಡಲಾಗುತ್ತದೆ. ಶ್ರಾದ್ಧಗಳಲ್ಲಿ ವಚನಾಗ್ನಿ, ಬ್ರಾಹ್ಮಣಭೋಜನ, ಪಿಂಡಪ್ರದಾನಗಳೆಂಬ ಮೂರು ಕಾರ್ಯಗಳು ಸಮಾನವಾಗಿರುತ್ತವೆ.

ಮಾಸಿಕಶ್ರಾದ್ಧ: ಸಾಮಾನ್ಯವಾಗಿ ಪ್ರತಿತಿಂಗಳೂ ಮಾಡುವ ಶ್ರಾದ್ಧಕ್ಕೆ ಮಾಸಿಕಶ್ರಾದ್ಧ ಎಂದು ಹೆಸರು. ಆದರೆ ವ್ಯಕ್ತಿಯ ಮರಣದಿಂದ ಒಂದು ವರ್ಷದವರೆಗೆ ಸುಮಾರು ಹದಿನಾರು ಮಾಸಿಕಶ್ರಾದ್ಧಗಳು ಬರುತ್ತವೆ. ಅವೆಲ್ಲವುಗಳಿಗೂ ಮಾಸಿಕಶ್ರಾದ್ಧವೆಂದೇ ಕರೆಯಲಾಗುತ್ತದೆ. ಇದರ ಪ್ರಕಾರ ಮೊದಲ ಮಾಸಿಕಶ್ರಾದ್ಧ ಮರಣದ ದಿನದಿಂದ ಇಪ್ಪತ್ತೊಂದನೆಯ ದಿನಕ್ಕೆ ಬರುತ್ತದೆ. ಇಪ್ಪತ್ತೇಳನೆಯ ದಿನ ಎರಡನೆಯ ಮಾಸಿಕಶ್ರಾದ್ಧವನ್ನೂ, ಮೊದಲ ತಿಂಗಳಿನ ಮರಣತಿಥಿಯಂದು ಮೂರನೆಯ ಮಾಸಿಕಶ್ರಾದ್ಧವನ್ನೂ ಆಚರಿಸಲಾಗುತ್ತದೆ. ಹಾಗೆಯೇ ಮರಣದಿನದಿಂದ ನಲವತ್ತೊಂದನೆಯ ದಿನಕ್ಕೆ ನಾಲ್ಕನೇ ಮಾಸಿಕಶ್ರಾದ್ಧವನ್ನೂ, ಮರಣತಿಥಿಯಿಂದ ಎರಡನೆಯ ತಿಂಗಳಿನ ಮರಣತಿಥಿಯಂದು ಐದನೆಯ ಮಾಸಿಕಶ್ರಾದ್ಧವನ್ನೂ ಆಚರಿಸಲಾಗುತ್ತದೆ. ಇಲ್ಲಿಂದ ಮುಂದೆ ಮೂರು, ನಾಲ್ಕು ಮತ್ತು ಐದನೆಯ ತಿಂಗಳಿಗೆ ತಿಥಿಯ ಪ್ರಕಾರ ಆರು, ಏಳು ಮತ್ತು ಎಂಟನೆಯ ಮಾಸಿಕಶ್ರಾದ್ಧವನ್ನು ಆಚರಿಸಲಾಗುತ್ತದೆ.

ಊನಷಾಣ್ಮಾಸಿಕಶ್ರಾದ್ಧ: ಇದನ್ನು ಮರಣದಿನದಿಂದ 171ನೇ ದಿನ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ನೌಕಾದಾನ ಮಾಡಲಾಗುತ್ತದೆ. ಮೃತವ್ಯಕ್ತಿಯು ವೈತರಣೀನದಿಯನ್ನು ದಾಟಲು ಇದು ಸಹಾಯಕ ಎಂಬುದಾಗಿ ಗರುಡಪುರಾಣದಲ್ಲಿ ತಿಳಿಸಲಾಗಿದೆ.ಇಲ್ಲಿಂದ ಮುಂದೆ ಮತ್ತೆ ತಿಥಿಯ ಪ್ರಕಾರ ಆರು, ಏಳು, ಎಂಟು, ಒಂಬತ್ತು, ಹತ್ತು, ಹನ್ನೊಂದನೆಯ ತಿಂಗಳಲ್ಲಿ ಕ್ರಮವಾಗಿ ಹತ್ತು, ಹನ್ನೊಂದು, ಹನ್ನೆರಡು, ಹದಿಮೂರು, ಹದಿನಾಲ್ಕು ಮತ್ತು ಹದಿನೈದನೆಯ ಮಾಸಿಕಶ್ರಾದ್ಧವನ್ನು ಆಚರಿಸಲಾಗುತ್ತದೆ. ಮರಣದಿನದಿಂದ 346ನೇ ದಿನ ಊನಾಬ್ದಿಕಶ್ರಾದ್ಧವನ್ನು ಆಚರಿಸಲಾಗುತ್ತದೆ. ಹೀಗೆ ಹದಿನಾರು ಮಾಸಿಕಶ್ರಾದ್ಧಗಳನ್ನು ಆಚರಿಸಿ, ಹನ್ನೆರಡನೆಯ ತಿಂಗಳು ಪ್ರಥಮಾಬ್ದಿಕ ಶ್ರಾದ್ಧವನ್ನು ಆಚರಿಸಲಾಗುತ್ತದೆ. ಮರಣದಿನದಿಂದ 361ನೇ ದಿನ ಆಚರಿಸಲಾಗುವ ಶ್ರಾದ್ಧಕ್ಕೆ ಪತಂಗಶ್ರಾದ್ಧ ಅಥವಾ ಪಿತೃಸಂಗಮಶ್ರಾದ್ಧ ಎಂಬುದಾಗಿ ಕರೆಯಲಾಗುತ್ತದೆ. ಒಂದು ವೇಳೆ ಹದಿನೇಳು ಮಾಸಿಕಗಳು ಬಂದಲ್ಲಿ ಪ್ರಥಮಾಬ್ದಿಕಶ್ರಾದ್ಧವು ಒಂದು ತಿಂಗಳಿನಷ್ಟು ಮುಂದೆ ಹೋಗುತ್ತದೆ.

ತ್ರಿಪಿಂಡೀಶ್ರಾದ್ಧ: ಪ್ರೇತಬಾಧೆಯಿದೆಯೆಂದು ದೈವಜ್ಞರು ತಿಳಿಸಿದಲ್ಲಿ ಈ ಶ್ರಾದ್ಧವನ್ನು ಮಾಡಲಾಗುತ್ತದೆ. ಇದೊಂದು ವಿಶೇಷವಾದ ಶ್ರಾದ್ಧವಾಗಿದೆ. ಯಾರಿಗೆ ಪ್ರೇತಬಾಧೆ ಇದೆಯೋ ಅವರಿಗೆ ಮಾತ್ರ ಆಚರಿಸಲಾಗುವ ಶ್ರಾದ್ಧವಿದು.

ಪಿತೃಸಂಗಮಶ್ರಾದ್ಧ: ಇದನ್ನು ಪತಂಗಶ್ರಾದ್ಧ ಎಂದೂ ಕರೆಯಲಾಗುತ್ತದೆ. ಕಟಪಯಾದಿ ಸೂತ್ರದ ಅಕ್ಷರಗಳ ಲೆಕ್ಕಾಚಾರದಲ್ಲಿ ಪತಂಗವೆಂದರೆ 361ನೆಯ ದಿನವಾಗುತ್ತದೆ.

ಮಹಾಲಯಶ್ರಾದ್ಧ: ಪಿತೃಪಕ್ಷದಲ್ಲಿ ಯಾವುದೇ ನಿಶ್ಚಿತವಾದ ದಿನದಂದು ಮಹಾಲಯಶ್ರಾದ್ಧವನ್ನು ಮಾಡಲಾಗುತ್ತದೆ. ಸಾಮಾನ್ಯವಾಗಿ ವ್ಯಕ್ತಿಯು ಮರಣಹೊಂದಿದ ತಿಥಿಯಂದೇ ಮಾಡಲಾಗುತ್ತದೆ. ಆಷಾಢಮಾಸದಿಂದ ಆರಂಭಿಸಿ ಐದು ಪಕ್ಷಗಳವರೆಗೆ ಪಿತೃಪಕ್ಷವೆಂದು ಗುರುತಿಸಲಾಗುತ್ತದೆ. ಈ ದಿನಗಳಲ್ಲಿ ಪಿತೃಗಳು ಆಹಾರವನ್ನು ಬಯಸುತ್ತಾರೆ ಎಂದು ಹೇಳಲಾಗುತ್ತದೆ. ಆದರೆ ಮೃತವ್ಯಕ್ತಿಯ ಪ್ರಥಮಾಬ್ದಿಕಶ್ರಾದ್ಧವಾಗದೇ ಈ ಶ್ರಾದ್ಧವನ್ನು ಆಚರಿಸುವಂತಿಲ್ಲ.

ಹೀಗೆ ಸಂದುಹೋದ ನಮ್ಮ ಪಿತೃಗಳ ನೆನಪಿನಲ್ಲಿ ಮಾಡಲಾಗುವ ಕರ್ಮವನ್ನೇ ಶ್ರಾದ್ಧ ಎಂಬುದಾಗಿ ಕರೆಯಲಾಗುತ್ತದೆ. ಇದನ್ನು ಮಾಡುವುದರಿಂದ ಏನು ಪ್ರಯೋಜನ ಎಂದು ಕೆಲವರು ಕೇಳುವುದುಂಟು. ಇವೆಲ್ಲವೂ ಅವರವರ ಶ್ರದ್ಧೆಗೆ ಸಂಬಂಧಿಸಿದ್ದು. ಹಾಗೆ ನೋಡಿದರೆ ಎಲ್ಲ ಕರ್ಮಾಂಗಗಳೂ ಕೂಡ ಶ್ರದ್ಧೆಯುಳ್ಳವನಿಗೇ ಹೌದು.

ಕರ್ಮಣಿ ಶ್ರಾದ್ಧೋ ಅಧಿಕಾರೀ ಎಂಬುದಾಗಿ ಶಾಸ್ತ್ರಗಳು ತಿಳಿಸುತ್ತವೆ. ತಪ್ಪದೇ ಶ್ರಾದ್ಧವನ್ನು ಆಚರಿಸಿದರೆ ವಸುರೂಪದಲ್ಲಿರುವ ಪಿತೃಗಳು ಆಯುಸ್ಸನ್ನೂ, ರುದ್ರರೂಪದಲ್ಲಿರುವ ಪಿತೃಗಳು ಧನವನ್ನೂ, ಆದಿತ್ಯರೂಪದಲ್ಲಿರುವ ಪಿತೃಗಳು ಪ್ರಜಾಸಂಪತ್ತನ್ನೂ ಕರುಣಿಸುತ್ತಾರೆ ಎಂಬುದಾಗಿ ಶಾಸ್ತ್ರಗಳಲ್ಲಿ ತಿಳಿಸಲಾಗಿದೆ. ಪಿತೃಕಾರ್ಯವು ದೇವಕಾರ್ಯದಷ್ಟೇ ಮಹತ್ತ್ವದ್ದು ಮತ್ತು ಇದನ್ನು ತಪ್ಪದೇ ಮಾಡಬೇಕೆಂಬುದಾಗಿ ಉಪನಿಷತ್ತು ತಿಳಿಸುತ್ತದೆ. ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಮ್ ಎಂಬುದಾಗಿ ತೈತ್ತಿರೀಯೋಪನಿಷತ್ತು ತಿಳಿಸಿದೆ. ದೇವತಾಕಾರ್ಯಗಳೂ ಕೂಡ ಋಣಪ್ರಜ್ಞೆಯಿಂದಲೇ ಆಚರಿಸುವಂಥದ್ದು. ಪಿತೃಕಾರ್ಯವೂ ಋಣಪ್ರಜ್ಞೆಯಿಂದಲೇ ಮಾಡುವಂಥದ್ದು. ಯಾರಿಗೆ ಇಂಥ ಋಣಭಾವ ಇದೆಯೋ ಅವರು ಖಂಡಿತವಾಗಿ ಈ ಕಾರ್ಯಗಳನ್ನು ತಮ್ಮ ಸಂಪ್ರದಾಯ, ಆಚಾರಗಳಿಗೆ ಅನುಸಾರವಾಗಿ ತಿಳಿದು ಮಾಡಬೇಕಾದದ್ದು ಸೂಕ್ತವಾದುದು.

ಮೋದಿ ಸರ್ಕಾರಕ್ಕೆ 12 ವರ್ಷ ಪೂರ್ಣ

ಸುದೀರ್ಘ ನಾಯಕತ್ವ ಇಂದು ಎನ್‌ಡಿಎ ಸಭೆ

• ಹೊಸದಿಲ್ಲಿ: ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ 12 ವರ್ಷಗಳನ್ನು ಪೂರ್ಣಗೊಳಿಸಿರುವ ಹಿನ್ನೆಲೆ ಹಾಗೂ ದೇಶದ ಅತಿ ದೀರ್ಘಾವಧಿ ನಿರಂತರವಾಗಿ ಸೇವೆ ಸಲ್ಲಿಸಿದ ಚುನಾಯಿತ ಪ್ರಧಾನಿಯಾಗಿ ಮೋದಿ ಹೊಸ ದಾಖಲೆ ನಿರ್ಮಿಸುತ್ತಿರುವ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (ಎನ್‌ಡಿಎ) ಬುಧವಾರ ರಾಜಧಾನಿಯಲ್ಲಿ ಮಹತ್ವದ ಸಭೆ ನಡೆಸಲಿದೆ.



ಭಾರತ ಮಂಟಪಂನಲ್ಲಿ ನಡೆಯಲಿರುವ ಈ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿ ಉನ್ನತ ನಾಯಕರು ಹಾಗೂ ಎನ್‌ಡಿಎಯ ಎಲ್ಲ ಮಿತ್ರಪಕ್ಷಗಳ ಪ್ರಮುಖರು ಭಾಗವಹಿಸಲಿದ್ದಾರೆ. ಮೋದಿ ಅವರು ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ದಾಖಲೆಯನ್ನು ಹಿಂದಿಕ್ಕುತ್ತಿರುವ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸುವ ವಿಶೇಷ ನಿರ್ಣಯವೊಂದನ್ನು ಸಭೆಯಲ್ಲಿ ಅಂಗೀಕರಿಸುವ ಸಾಧ್ಯತೆಯಿದೆ.

1952ರ ಸಾರ್ವತ್ರಿಕ ಚುನಾವಣೆಯ ನಂತರ ಚುನಾಯಿತ ಪ್ರಧಾನಿಯಾಗಿ ನೆಹರೂ 4,399 ದಿನಗಳ ಕಾಲ ಅಧಿಕಾರದಲ್ಲಿದ್ದರು. ಜೂ.10ರಂದು ಮೋದಿ ಅವರು ಈ ದಾಖಲೆಯನ್ನು ಮೀರಲಿದ್ದು, ದೇಶದ ಅತಿ ಹೆಚ್ಚು ದಿನಗಳ ಕಾಲ ನಿರಂತರವಾಗಿ ಅಧಿಕಾರದಲ್ಲಿರುವ ಚುನಾಯಿತ ಪ್ರಧಾನಿಯಾಗಲಿದ್ದಾರೆ. 2014ರ ಮೇ 26ರಂದು ಮೊದಲ ಬಾರಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ್ದ ಮೋದಿ, 2019ರಲ್ಲಿ ಮರು ಆಯ್ಕೆಯಾಗಿ ಎರಡನೇ ಅವಧಿ ಆರಂಭಿಸಿದ್ದರು. 2024ರ ಜೂನ್ 9ರಂದು ಮೂರನೇ ಅವಧಿಗೂ ಅಧಿಕಾರ ಸ್ವೀಕರಿಸಿದ್ದರು. ಮೂಲಗಳ ಪ್ರಕಾರ, ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಪ್ರಧಾನಿ ಮೋದಿ ಅವರ ಸಾಧನೆಯನ್ನು ಅಭಿನಂದಿಸುವ ನಿರ್ಣಯ ಮಂಡಿಸಲಿದ್ದು, ನಾಗಾಲ್ಯಾಂಡ್ ಮುಖ್ಯಮಂತ್ರಿ ನೆಫಿಯು ರಿಯೊ ಅದನ್ನು ಅನುಮೋದಿಸಲಿದ್ದಾರೆ. ಬಳಿಕ ವಿವಿಧ ಮಿತ್ರಪಕ್ಷಗಳ ನಾಯಕರು ಚರ್ಚೆಯಲ್ಲಿ ಭಾಗವಹಿಸಿ ನಿರ್ಣಯವನ್ನು ಅಂಗೀಕರಿಸಲಿದ್ದಾರೆ. ನಿರ್ಣಯದ ಬಳಿಕ ಪ್ರಧಾನಿ ಮೋದಿ ಸಭೆಯನ್ನು ಉದ್ದೇಶಿಸಿ ಮಾತನಾಡುವ ನಿರೀಕ್ಷೆಯಿದೆ.

75ಕ್ಕೂ ಹೆಚ್ಚು ನಾಯಕರು ಭಾಗಿ: ಎನ್‌ಡಿಎ ಆಡಳಿತವಿರುವ 22 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಮೈತ್ರಿಕೂಟದ ಎಲ್ಲಾ ಪಕ್ಷಗಳ ಅಧ್ಯಕ್ಷರು ಮತ್ತು ಹಿರಿಯ ನಾಯಕರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಸುಮಾರು 35 ಮಿತ್ರಪಕ್ಷಗಳನ್ನು ಪ್ರತಿನಿಧಿಸುವ 75ಕ್ಕೂ ಹೆಚ್ಚು ಹಿರಿಯ ನಾಯಕರು ಸಭೆಯಲ್ಲಿ ಉಪಸ್ಥಿತರಿರಲಿದ್ದಾರೆ ಎಂದು ತಿಳಿದುಬಂದಿದೆ.

ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಜೆ.ಪಿ. ನಡ್ಡಾ, ಶಿವರಾಜ್ ಸಿಂಗ್ ಚೌಹಾಣ್ ಸೇರಿದಂತೆ ಹಲವು ಬಿಜೆಪಿ ನಾಯಕರು ಭಾಗವಹಿಸಲಿದ್ದಾರೆ. ಮಿತ್ರಪಕ್ಷಗಳ ಪರವಾಗಿ ಟಿಡಿಪಿಯ ಕೆ. ರಾಮ್ ಮೋಹನ್ ನಾಯ್ಡು, ಜೆಡಿಯುನ ರಾಜೀವ್ ರಂಜನ್ ಸಿಂಗ್, ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ ಹಾಗೂ ಅಪ್ನಾದಳದ ಅನುಪ್ರಿಯಾ ಪಟೇಲ್ ಕೂಡ ಹಾಜರಾಗುವ ಸಾಧ್ಯತೆ ಇದೆ.

ಮೋದಿ ಯುಗದಲ್ಲಿ ಭೂ ಬಂದರು ವ್ಯಾಪಾರ ವೃದ್ಧಿ

• ಹೊಸದಿಲ್ಲಿ: ವಿಜ್ಞಾನ ಭವನದಲ್ಲಿ ಭೂ ಬಂದರು ನಿರ್ವಹಣಾ ವ್ಯವಸ್ಥೆಯನ್ನು (ಎಲ್‌ಪಿಎಂಎಸ್) ಮಂಗಳವಾರ ಉದ್ಘಾಟಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕಳೆದ 12 ವರ್ಷಗಳ ಪ್ರಧಾನಿ ಮೋದಿ ಆಡಳಿತದಲ್ಲಿ 2014ರಲ್ಲಿ 5000 ಕೋಟಿ ರೂ. ಇದ್ದ ಭೂ ಬಂದರು ವ್ಯಾಪಾರ 83,000 ಕೋಟಿ ರೂ. ವರೆಗೆ ಬೆಳೆದಿದೆ ಎಂದು ಮೋದಿ ನಾಯಕತ್ವವನ್ನು ಕೊಂಡಾಡಿದ್ದಾರೆ.

ಹೊಸ ಭೂ ಬಂದರು ನಿರ್ವಹಣಾ ವ್ಯವಸ್ಥೆಯಿಂದ ಶೇ.90 ದಾಖಲೆಪತ್ರಗಳ ಕೆಲಸ ಕಡಿಮೆಯಾಗುತ್ತದೆ ಹಾಗೂ ಅಂತಾರಾಷ್ಟ್ರೀಯ ಗಡಿ ಭದ್ರತೆಯನ್ನು ಹೆಚ್ಚಿಸುತ್ತದೆ. ಇದು ಸಿಂಗಲ್ ಎಲೆಕ್ಟ್ರಾನಿಕ್ ವಿಂಡೋ ಸಿಸ್ಟಂ ಹೊಂದಿದ್ದು, ಪ್ರಕ್ರಿಯೆಯ ಸಮಯ ಶೇ.40ರಿಂದ 60ರಷ್ಟು ಕಡಿಮೆಯಾಗಲಿದೆ. ಪ್ರಸ್ತಾವಿಸಲಾದ ಸ್ಮಾರ್ಟ್ ಗಡಿಗಳು ಹೊಸ ಡಿಜಿಟಲ್ ಅಡಿಪಾಯವನ್ನು ಹಾಕಿಕೊಟ್ಟಿವೆ ಎಂದು ಶಾ ಹೇಳಿದ್ದಾರೆ. ಮುಂದಿನ 3 ವರ್ಷಗಳಲ್ಲಿ 11 ಭೂ ಬಂದರು: ಗಡಿ ಜಿಲ್ಲೆಗಳ ಮೇಲಿನ ವಲಸೆ ಒತ್ತಡವನ್ನು ಕಡಿಮೆ ಮಾಡುವುದಲ್ಲದೆ ಸ್ಥಳೀಯ ಆರ್ಥಿಕತೆಯನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸುವ 15 ಭೂ ಬಂದರುಗಳು ಪ್ರಸ್ತುತ ದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ. ಮುಂದಿನ ಮೂರು ವರ್ಷಗಳಲ್ಲಿ ಇನ್ನೂ 11 ಭೂ ಬಂದರುಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಇದೆ.

ಭೂ ಬಂದರುಗಳು ಕೇವಲ ವ್ಯಾಪಾರ ಸಾಗಣೆಯ ಮಾರ್ಗಗಳಷ್ಟೇ ಅಲ್ಲ; ಅವು ಭದ್ರತೆಯ ಕವಚ, ಸಾಂಸ್ಕೃತಿಕ ವಿನಿಮಯದ ಸೇತುವೆ ಹಾಗೂ ಗಡಿಭಾಗಗಳಿಂದ ವಲಸೆಯನ್ನು ನಿಯಂತ್ರಿಸುವ ಸಾಧನವೂ ಆಗಿವೆ ಎಂದು ಅವರು ಹೇಳಿದರು.

ಪಶ್ಚಿಮ ಬಂಗಾಳದಲ್ಲಿ ಸುವೇಂದು ಅಧಿಕಾರಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿ ತನ್ನ ಮೊದಲ ತಿಂಗಳನ್ನು ಪೂರೈಸಿದ್ದು, ವ್ಯಾಪಕ ಆಡಳಿತಾತ್ಮಕ ನಿರ್ಧಾರಗಳು, ಮೂಲಸೌಕರ್ಯ ಯೋಜನೆಗಳು ಮತ್ತು ನೀತಿ ಬದಲಾವಣೆಗಳನ್ನು ಜಾರಿಗೆ ತಂದಿದೆ. ಇದೇ ಸಮಯದಲ್ಲಿ ಪ್ರಮುಖ ವಿರೋಧ ಪಕ್ಷ ತೃಣಮೂಲ ಕಾಂಗ್ರೆಸ್, ಆಂತರಿಕ ಅಸ್ಥಿರತೆಯಿಂದ ನಲುಗಿದೆ, ಸಂಭವನೀಯ ಭಾರೀ ಬಂಡಾಯವೊಂದಕ್ಕೆ ಪಕ್ಷ ಸಿದ್ಧವಾಗುತ್ತಿದೆ.

ಸುವೇಂದು ಸರ್ಕಾರಕ್ಕೆ ಬಹುಪರಾಕ್

ಪಶ್ಚಿಮ ಬಂಗಾಳದಲ್ಲಿ ಕಮಲ ಅರಳಿ ಒಂದು ತಿಂಗಳು, ಯೋಜನೆ ಆವಿಷ್ಕಾರ ಹತ್ತಾರು



ಸುದ್ದಿ ಸಮಗ್ರ

ಮೂಲಸೌಕರ್ಯ ಅಭಿವೃದ್ಧಿ

ಹಲವಾರು ರಾಜಕೀಯ ಬೆಳವಣಿಗೆಗಳ ನಡುವೆಯೇ ಮುಖ್ಯಮಂತ್ರಿ ಸುವೇಂದು ಅಧಿಕಾರಿ ನವದೆಹಲಿಗೆ ಭೇಟಿ ನೀಡಿ ಕೇಂದ್ರ ಸಚಿವರೊಂದಿಗೆ ಸಭೆ ನಡೆಸಿದರು. ಇದರ ಫಲವಾಗಿ ಪಶ್ಚಿಮ ಬಂಗಾಳದಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ವಿಮೆ ಯೋಜನೆಯನ್ನು ಜಾರಿಗೊಳಿಸುವ ಒಪ್ಪಂದವನ್ನು ಅಂತಿಮಗೊಳಿಸಲಾಯಿತು. ವಿವಿಧ ಅಭಿವೃದ್ಧಿ ಯೋಜನೆಗಳು, ಗಡಿ ಭದ್ರತೆ, ಕಾನೂನು ಜಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ಹಲವು ರಂಗಗಳಲ್ಲಿ ಸರ್ಕಾರ ಮುಂದಡಿ ಇಟ್ಟಿದೆ ಎಂದು ರಾಜ್ಯ ಸರ್ಕಾರ ಸಮರ್ಥಿಸಿಕೊಂಡಿದೆ.

ಗಡಿ ಮೂಲಸೌಕರ್ಯ ಮೇಲ್ದರ್ಜೆಗೆ

ಸರ್ಕಾರ ತನ್ನ ಆರಂಭಿಕ ತಿಂಗಳಿನಲ್ಲಿ ಗಡಿ ನಿರ್ವಹಣೆ ಮತ್ತು ಕಾನೂನುಬಾಹಿರ ನುಸುಳುವಿಕೆಯನ್ನು ತಡೆಯುವಿಕೆಗೆ ಆದ್ಯತೆ ನೀಡಿದೆ. ಮೂಲಸೌಕರ್ಯ ಅಭಿವೃದ್ಧಿಗೆ ಅನುಕೂಲವಾಗುವಂತೆ ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) 142 ಎಕರೆಗಿಂತ ಹೆಚ್ಚು ಭೂಮಿ ಹಸ್ತಾಂತರಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಭಾರತ-ಬಾಂಗ್ಲಾದೇಶ ಗಡಿಯಲ್ಲಿ ಈ ಹಿಂದೆ ಬೇಲಿ ಹಾಕದ ದೊಡ್ಡ ಪ್ರದೇಶದಲ್ಲಿ ಬೇಲಿ ಹಾಕುವ ಪ್ರಕ್ರಿಯೆಯನ್ನು ಸುಗಮಗೊಳಿಸುವ ಇಚ್ಛೆಯನ್ನು ಸರ್ಕಾರ ವ್ಯಕ್ತಪಡಿಸಿದ್ದು, ಯೋಜನೆಗಳ ತ್ವರಿತ ಜಾರಿಗೆ ವಿವಿಧ ವಿಭಾಗಗಳಿಗೆ ಗುರಿಗಳನ್ನು ನಿಗದಿಪಡಿಸಿದೆ.

ಸಾರ್ವಜನಿಕ ಸ್ಥಳಗಳ ನಿಯಂತ್ರಣ

ಸಾರ್ವಜನಿಕ ರಸ್ತೆಗಳು ಮತ್ತು ಪ್ರಮುಖ ಸಾರಿಗೆ ಮಾರ್ಗಗಳಲ್ಲಿ ನಮಾಜ್ ಮಾಡುವುದನ್ನು ನಿಷೇಧಿಸುವುದು ಸೇರಿದಂತೆ ಸಾರ್ವಜನಿಕ ಸ್ಥಳಗಳನ್ನು ನಿಯಂತ್ರಿಸುವ ಕ್ರಮಗಳನ್ನು ಸರ್ಕಾರ ಪರಿಚಯಿಸಿದೆ. ಸಾರ್ವಜನಿಕ ರಸ್ತೆಗಳು ಸಾರಿಗೆ ಮತ್ತು ತುರ್ತು ಸೇವೆಗಳಿಗಾಗಿ ಮುಕ್ತವಾಗಿರಬೇಕು ಎಂದು ಸರ್ಕಾರ ವಾದಿಸಿದೆ. ಧಾರ್ಮಿಕ ಚಟುವಟಿಕೆಗಳನ್ನು ಸಾರ್ವಜನಿಕ ಸಾರಿಗೆ ಮಾರ್ಗಗಳ ಬದಲಿಗೆ ಗೊತ್ತುಪಡಿಸಿದ ಸ್ಥಳಗಳಲ್ಲಿ ನಡೆಸಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಲ್ಯಾಣ ಕಾರ್ಯಕ್ರಮಗಳಿಗೆ ಚಾಲನೆ

ಸರ್ಕಾರ ಅಧಿಕಾರ ವಹಿಸಿಕೊಂಡ ಕೆಲವೇ ವಾರಗಳಲ್ಲಿ ಮಹಿಳೆಯರು ಮತ್ತು ಕುಟುಂಬಗಳಿಗಾಗಿ ಕಲ್ಯಾಣ ಯೋಜನೆಗಳನ್ನು ಘೋಷಿಸಲಾಯಿತು. ಸಾರಿಗೆ ವೆಚ್ಚವನ್ನು ಕಡಿಮೆ ಮಾಡಲು, ರಾಜ್ಯದಲ್ಲಿ ಮಹಿಳಾ ಪ್ರಯಾಣಿಕರಿಗೆ ಉಚಿತ ಬಸ್ ಪ್ರಯಾಣವನ್ನು ಪರಿಚಯಿಸಿತು. ಹೆಚ್ಚುವರಿಯಾಗಿ, ಸಾಮಾಜಿಕ ಬೆಂಬಲ ವ್ಯವಸ್ಥೆಗಳನ್ನು ಬಲಪಡಿಸಲು ಮತ್ತು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಹಣಕಾಸಿನ ನೆರವನ್ನು ವಿಸ್ತರಿಸಲು ಅನ್ನಪೂರ್ಣ ಯೋಜನೆಯನ್ನು ಪ್ರಮುಖ ಕಲ್ಯಾಣ ಕಾರ್ಯಕ್ರಮವಾಗಿ ಪ್ರಾರಂಭಿಸಲಾಯಿತು.

ವಾಣಿಜ್ಯ ಮತ್ತು ಶೈಕ್ಷಣಿಕ ನಿಯಮಗಳು

ಆರೋಗ್ಯ ಸೌಲಭ್ಯಗಳು ಮತ್ತು ಶಿಕ್ಷಣ ಸಂಸ್ಥೆಗಳ ಸುತ್ತ ಸುರಕ್ಷಿತ ವಾತಾವರಣ ನಿರ್ಮಿಸಲು ಶಾಲೆಗಳು ಮತ್ತು ಆಸ್ಪತ್ರೆಗಳ ಸಮೀಪದಲ್ಲಿ ಮದ್ಯದ ಅಂಗಡಿಗಳ ಕಾರ್ಯಾಚರಣೆಯನ್ನು ನಿಷೇಧಿಸಲು ಸರ್ಕಾರ ನಿರ್ಧರಿಸಿದೆ. ಜತೆಗೆ, ಶಾಲೆಗಳಲ್ಲಿ ವಂದೇ ಮಾತರಂ ಗಾಯನವನ್ನು ಕಡ್ಡಾಯಗೊಳಿಸಿ ನಿರ್ದೇಶನ ಹೊರಡಿಸಲಾಗಿದ್ದು, ವಿದ್ಯಾರ್ಥಿಗಳಲ್ಲಿ ನಾಗರಿಕ ಮೌಲ್ಯಗಳು ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಉತ್ತೇಜಿಸುವ ಪ್ರಯತ್ನ ಎಂದು ಬಿಜೆಪಿ ಆಡಳಿತ ಬಣ್ಣಿಸಿದೆ.

ಕಾನೂನು ಜಾರಿ ಅಭಿಯಾನಗಳು

ಕಾನೂನು ಮತ್ತು ಸುವ್ಯವಸ್ಥೆಗೆ ಹೆಚ್ಚಿನ ಗಮನ ನೀಡಲಾಗಿದ್ದು, ರಾಜ್ಯಾದ್ಯಂತ ಸುಲಿಗೆ ಮತ್ತು ಕಾನೂನುಬಾಹಿರ ಹಣ ವಸೂಲಿ ವಿರುದ್ಧ ಕಠಿಣ ಕ್ರಮವನ್ನು ಪ್ರಾರಂಭಿಸಲಾಗಿದೆ. ಹಲವಾರು ದೂರುಗಳನ್ನು ಪರಿಶೀಲಿಸಲು ಮತ್ತು ಸಾಕ್ಷ್ಯಗಳಿರುವಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಜಾರಿ ಸಂಸ್ಥೆಗಳಿಗೆ ಸೂಚನೆ ನೀಡಲಾಗಿದೆ. ಆರ್ ಜಿ ಕರ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಹಲವಾರು ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಿದ್ದು, ಹೊಣೆಗಾರಿಕೆ ಮತ್ತು ಪಾರದರ್ಶಕತೆಗೆ ತನ್ನ ಬದ್ಧತೆ ತೋರ್ಪಡಿಸಿದೆ.

ಅಧಿಕಾರಶಾಹಿಯ ಪುನರ್‌ರಚನೆ

ಅಧಿಕಾರಶಾಹಿ ಪುನರ್ರಚನೆಯಲ್ಲಿ, ರಾಜ್ಯ ಮತ್ತು ಕೇಂದ್ರದ ನಡುವಿನ ಸಮನ್ವಯವನ್ನು ಬಲಪಡಿಸಲು ರಾಜ್ಯ ಕೆಡರ್ ಅಧಿಕಾರಿಗಳಿಗೆ ಕೇಂದ್ರ ಸರ್ಕಾರಕ್ಕೆ ನಿಯೋಜನೆ ಮೇಲೆ ಹೋಗುವ ಅವಕಾಶಗಳನ್ನು ಸುಗಮಗೊಳಿಸಲಾಗಿದೆ. ಸಾರಿಗೆ ಮೂಲಸೌಕರ್ಯದಲ್ಲಿ, ಕೇಂದ್ರ ಸಂಸ್ಥೆಗಳೊಂದಿಗೆ ಸಮನ್ವಯ ಸುಧಾರಿಸುವ ಮೂಲಕ ವರ್ಷಗಳಿಂದ ವಿಳಂಬವಾಗಿದ್ದ ಮೆಟ್ರೋ ರೈಲು ಯೋಜನೆಗಳ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪ್ರಗತಿ ಸಾಧಿಸಲಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಜತೆಗೆ ಹೈ-ಸ್ಪೀಡ್ ರೈಲು ಮತ್ತು ಬುಲೆಟ್ ರೈಲು ಜಾಲಗಳಿಗೆ ಬೆಂಬಲ ವ್ಯಕ್ತಪಡಿಸಿದೆ.

ಕೈಗಾರಿಕಾ ಅಭಿವೃದ್ಧಿ ಯೋಜನೆಗಳು

ಮಮತಾ ಬ್ಯಾನರ್ಜಿ ನೇತೃತ್ವದ ಪ್ರತಿಭಟನೆಗಳ ನಂತರ ಟಾಟಾ ಗ್ರೂಪ್ ತನ್ನ ಯೋಜನೆಯನ್ನು ಹಿಂತೆಗೆದುಕೊಂಡಾಗ ಉಂಟಾಗಿದ್ದ ರಾಜ್ಯದ ಐತಿಹಾಸಿಕ ಕೈಗಾರಿಕಾ ವಿರೋಧಿ ಗ್ರಹಿಕೆಯನ್ನು ಬದಲಾಯಿಸಲು ಸರ್ಕಾರ ಹಲವಾರು ಉದ್ಯಮಿಗಳೊಂದಿಗೆ ಮಾತುಕತೆ ನಡೆಸಿದೆ. ಟಾಟಾ ಗ್ರೂಪ್ ಅನ್ನು ಪಶ್ಚಿಮ ಬಂಗಾಳಕ್ಕೆ ಮರಳಿ ತರಲು ಸರ್ಕಾರ ಶ್ರಮಿಸುತ್ತಿದೆ. ಹೆಚ್ಚುವರಿಯಾಗಿ, ಅಮುಲ್‌ನ ಅತಿ ದೊಡ್ಡ ಡೈರಿ ಪ್ಲಾಂಟ್‌ಗೆ ಜೂನ್ 13 ರಂದು ಶಂಕುಸ್ಥಾಪನೆ ಮತ್ತು ಭೂಮಿ ಪೂಜೆ ನೆರವೇರಲು ದಿನಾಂಕ ನಿಗದಿಯಾಗಿದೆ.ಆರಂಭಿಕ ತಿಂಗಳು ಹಿಂದಿನ ಸರ್ಕಾರದ ಆದ್ಯತೆಗಳಿಂದ ಹಿಂದೆ ಸರಿಯುವ ಕೆಲಸ ನಡೆದಿದೆ. ಸಾಕಷ್ಟು ಜನಪ್ರಿಯ ಘೋಷಣೆಗಳನ್ನು ಮಾಡಲಾಗಿದೆ. ಎರಡನೇ ತಿಂಗಳು ಪ್ರಾರಂಭವಾಗುತ್ತಿದ್ದಂತೆ, ಅನುಷ್ಠಾನ, ಯೋಜನೆಗಳ ವಿಸ್ತರಣೆ ಮತ್ತು ಫಲಿತಾಂಶಗಳ ಮೌಲ್ಯಮಾಪನದ ಕಡೆಗೆ ಗಮನ ಹರಿಸುವ ನಿರೀಕ್ಷೆಯಿದೆ.



ಕಿರುಸುದ್ದಿ

ಶೀಘ್ರ ಮೋದಿ ಫ್ರಾನ್ಸ್, ಸ್ಲೋವಾಕಿಯಾ ಪ್ರವಾಸ

• ಹೊಸದಿಲ್ಲಿ: ಜೂನ್ 13ರಿಂದ ಒಂದು ವಾರಗಳ ಭೇಟಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್ ಮತ್ತು ಸ್ಲೋವಾಕಿಯಾಗಳಿಗೆ ಒಂದು ವಾರದ ಪ್ರವಾಸವನ್ನು ಕೈಗೊಳ್ಳಲಿದ್ದಾರೆ. ತಮ್ಮ ಈ ಭೇಟಿಯಲ್ಲಿ ಅವರು ದ್ವಿಪಕ್ಷೀಯ ಸಂಬಂಧಗಳನ್ನು ವಿಸ್ತರಿಸುವ ಮಾರ್ಗಗಳನ್ನು ಅನ್ವೇಷಣೆ ಮತ್ತು ಜಾಗತಿಕ ಸವಾಲುಗಳ ಬಗ್ಗೆ ಚರ್ಚಿಸಲಿದ್ದಾರೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದ (ಎಂಇಎ) ಪ್ರಕಾರ, ಮೋದಿಯವರು ಫ್ರಾನ್ಸ್‌ನ ಇವಿಯಾನ್‌ನಲ್ಲಿ ಜೂ16 ಮತ್ತು 17ರಂದು ನಡೆಯುವ ಜಿ7 ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.

ಸೋನಿಯಾ-ದೀದಿ ಭೇಟಿ

• ಹೊಸದಿಲ್ಲಿ: ವಿಧಾನಸಭೆ ಚುನಾವಣೆ ಬಳಿಕ ತೃಣಮೂಲ ಕಾಂಗ್ರೆಸ್ ಆಂತರಿಕ ಕಲಹ ಬಳಲುತ್ತಿರುವ ಮಧ್ಯೆ ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮಂಗಳವಾರ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಉಭಯ ನಾಯಕಿಯರು ಮುಂದಿನ ಕಾರ್ಯತಂತ್ರ ಕುರಿತು ಸಮಾಲೋಚನೆ ನಡೆಸಿದ್ದಾರೆ.

ಕುವೈತ್ ದೊರೆಗೆ ಬೆಂಬಲ ಸೂಚಿಸಿದ ಪ್ರಧಾನಿ ಮೋದಿ

• ಹೊಸದಿಲ್ಲಿ: ಮಧ್ಯಪ್ರಾಚ್ಯ ಯುದ್ಧ ಸಂದರ್ಭ ಕುವೈತ್‌ನ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಗೆ ಭಾರತದ ಬಲವಾದ ಬೆಂಬಲವನ್ನು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಪುನರುಚ್ಚರಿಸಿದ್ದಾರೆ.

ಕುವೈತ್ ದೊರೆ ಶೇಖ್ ಮೇಶಲ್ ಅಲ್-ಅಹ್ಮದ್ ಅಲ್-ಜಾಬರ್ ಅಲ್ ಸಬಾ ಅವರೊಂದಿಗೆ ದೂರವಾಣಿ ಕರೆ ಮೂಲಕ ಪ್ರಧಾನಿ ಮೋದಿ ಮಾತುಕತೆ ನಡೆಸಿದ್ದಾರೆ. ಮಧ್ಯಪ್ರಾಚ್ಯದಲ್ಲಿನ ಇತ್ತೀಚಿಗಿನ ಬೆಳವಣಿಗೆಗಳ ಕುರಿತು ಚರ್ಚಿಸಿದ್ದಾರೆ.

ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ತೀವ್ರಗೊಂಡಿರುವ ಉದ್ವಿಗ್ನತೆ ಕುರಿತು ಪ್ರಧಾನಿ ಮೋದಿ ಅತೀವ ಕಾಳಜಿ ವ್ಯಕ್ತಪಡಿಸಿದ್ದು, ಕುವೈತ್‌ನ ಸಾರ್ವಭೌಮತ್ವ ಮತ್ತು ಭೌಗೋಳಿಕ ಅಖಂಡತೆಯ ಮೇಲೆ ನಡೆಯುವ ದಾಳಿಗಳನ್ನು ಭಾರತವು ಬಲವಾಗಿ ಖಂಡಿಸುತ್ತದೆ ಎಂದು ಪುನರುಚ್ಚರಿಸಿದ್ದಾರೆ ಎಂದು ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ.

ಕುವೈತ್‌ನಲ್ಲಿ ವಾಸಿಸುತ್ತಿರುವ ದೊಡ್ಡ ಭಾರತೀಯ ಸಮುದಾಯದ ಯೋಗಕ್ಷೇಮ ಮತ್ತು ಸುರಕ್ಷತೆಯ ಬಗ್ಗೆ ವೈಯಕ್ತಿಕವಾಗಿ ಗಮನ ಹರಿಸಿರುವುದಕ್ಕೆ ಕುವೈತ್ ದೊರೆಗೆ ಪ್ರಧಾನಿ ಮೋದಿ ಕೃತಜ್ಞತೆಗಳನ್ನು ತಿಳಿಸಿದ್ದಾರೆ.

ಪ್ರದೇಶದಲ್ಲಿ ಉದ್ವಿಗ್ನತೆ ಕಡಿಮೆಗೊಳಿಸುವುದು, ಶಾಂತಿ ಮಾತುಕತೆ ಮೊದಲಾದ ರಾಜತಾಂತ್ರಿಕ ಮಾರ್ಗ ಅನುಸರಿಸಬೇಕೆಂದು ಮೋದಿ ಪುನರುಚ್ಚರಿಸಿದ್ದಾರೆ. ಇದೇ ಸಂದರ್ಭ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ನೊಂದಿಗೆ ಕೆಲವೇ ದಿನಗಳಲ್ಲಿ ಒಪ್ಪಂದ ಆಗಬಹುದು. ಒಪ್ಪಂದ ಅಂತಿಮಗೊಳ್ಳುವವರೆಗೆ ಹಾರ್ಮುಜ್ ಮೇಲಿನ ನಿರ್ಬಂಧಗಳು ಹಾಗೆಯೇ ಇರಲಿವೆ ಎಂದು ಹೇಳಿದ್ದಾರೆ.

ಪಂಜಾಬ್: ಉಗ್ರ ಜಾಲದ ಸಹಚರರಿಬ್ಬರ ಬಂಧನ

• ಅಮೃತಸರ: ಪಂಜಾಬ್ ಪೊಲೀಸ್ ಮತ್ತು ಕೇಂದ್ರ ಸಂಸ್ಥೆಗಳು ಗಡಿಯಾಚೆಗಿನ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕ ಹೊಂದಿದ್ದ ಇಬ್ಬರು ವ್ಯಕ್ತಿಗಳನ್ನು ಮಂಗಳವಾರ ಬಂಧಿಸಿದ್ದು, ಅಮೃತಸರದ ಖಾಸಾ ಪ್ರದೇಶದಲ್ಲಿ ಅವರಿಂದ ಎರಡು ಹ್ಯಾಂಡ್ ಗ್ರೆನೇಡ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಬಂಧಿತರನ್ನು ತಾರ್ನ್ ತಾರನ್ ನಿವಾಸಿಗಳಾದ ದೇವಿಂದರ್ ಸಿಂಗ್ ಮತ್ತು ರಾಜ್‌ವಿಂದರ್ ಸಿಂಗ್ ಎಂದು ಗುರುತಿಸಲಾಗಿದೆ ಎಂದು ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ತಿಳಿಸಿದ್ದಾರೆ. ಗುಪ್ತಚರ ಮಾಹಿತಿ ಆಧಾರಿತ ಶೋಧ ಕಾರ್ಯಾಚರಣೆಯ ಸಂದರ್ಭದಲ್ಲಿ ಹ್ಯಾಂಡ್ ಗ್ರೆನೇಡ್‌ಗಳು ಪತ್ತೆಯಾದ ನಂತರ ಅಧಿಕಾರಿಗಳು ಆರೋಪಿಗಳು ಪ್ರಯಾಣಿಸುತ್ತಿದ್ದ ವಾಹನವನ್ನು ಜಪ್ತಿ ಮಾಡಿದ್ದಾರೆ. ಪ್ರಾದೇಶಿಕ ಶಾಂತಿ ಕದಡುವ ಚಟುವಟಿಕೆಗಳನ್ನು ಯೋಜಿಸಲು ಆರೋಪಿಗಳು ವಿದೇಶಿ ಮೂಲದ ಹ್ಯಾಂಡ್ಲರ್‌ಗಳೊಂದಿಗೆ ನೇರ ಸಂಪರ್ಕದಲ್ಲಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಅಮೃತಸರ ಜೈಲಿನಲ್ಲಿದ್ದ ಹರ್ವಂತ್ ಸಿಂಗ್ ಅಲಿಯಾಸ್ ಹ್ಯಾರಿ ಎಂಬ ಕೈದಿ ಈ ಇಬ್ಬರನ್ನು ವಿದೇಶಿ ಹ್ಯಾಂಡ್ಲರ್‌ಗೆ ಪರಿಚಯಿಸಿದ್ದ ಎಂದು ಹಿರಿಯ ಪೊಲೀಸ್ ಅಧೀಕ್ಷಕ ಕನ್ವಲ್‌ಪ್ರೀತ್ ಸಿಂಗ್ ಚಾಹಲ್ ತಿಳಿಸಿದ್ದಾರೆ. ಶಂಕಿತರು ಈ ಹಿಂದೆ ಹರ್ವಂತ್‌ನ ಸಹಚರರಿಗೆ ಹಲವಾರು ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ಕಳ್ಳಸಾಗಣೆ ಮಾಡಿದ್ದರು. ಕಾನೂನು ಜಾರಿ ಅಧಿಕಾರಿಗಳು ಕಾರಾಗೃಹದ ಆವರಣದೊಳಗೆ ಹರ್ವಂತ್‌ಗೆ ಸೇರಿದ ಮೊಬೈಲ್ ಫೋನ್ ಅನ್ನು ವಶಪಡಿಸಿಕೊಂಡಿದ್ದು, ಈ ಕುರಿತು ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ.

ನಕಲಿ ಸಹಿ: ಮಮತಾ ನಿವಾಸದಲ್ಲಿ ಶೋಧ

• ಕೋಲ್ಕತ್ತಾ: ಶಾಸಕರ ನಕಲಿ ಸಹಿ ಹಗರಣದ ತನಿಖೆಗೆ ಸಂಬಂಧಿಸಿದಂತೆ ಅಪರಾಧ ತನಿಖಾ ಇಲಾಖೆ (ಸಿಐಡಿ) ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಕೋಲ್ಕತಾ ನಿವಾಸಕ್ಕೆ ಶೋಧನಾ ವಾರಂಟ್‌ನೊಂದಿಗೆ ಮಂಗಳವಾರ ದಾಳಿ ನಡೆಸಿದೆ.

ಕಾಳಿಘಾಟ್ ಪೊಲೀಸ್ ಸಿಬ್ಬಂದಿಯೊಂದಿಗೆ ಆಗಮಿಸಿದ ಅಧಿಕಾರಿಗಳು ಮಧ್ಯಾಹ್ನದ ವೇಳೆಗೆ 30 ಬಿ ಹರೀಶ್ ಚಟರ್ಜಿ ರಸ್ತೆಯಲ್ಲಿರುವ ಪಕ್ಷದ ಕೇಂದ್ರ ಕಚೇರಿ ತಲುಪಿದರು. ಸದ್ಯ ದಿಲ್ಲಿಯಲ್ಲಿರುವ ಬ್ಯಾನರ್ಜಿ ನಿವಾಸ ಹಾಗೂ ಸಂಸದ ಅಭಿಷೇಕ್ ಬ್ಯಾನರ್ಜಿಯ ಕಚೇರಿ ಮತ್ತು ನಿವಾಸ ಸೇರಿದಂತೆ ಒಟ್ಟು ಮೂರು ಸ್ಥಳಗಳಲ್ಲಿ ಸಿಐಡಿಯ ಪ್ರತ್ಯೇಕ ತಂಡಗಳು ಏಕಕಾಲದಲ್ಲಿ ಪರಿಶೀಲನೆ ನಡೆಸಿವೆ.ಪಕ್ಷದ ಶಾಸಕರ ಸಹಿಗಳನ್ನು ಈ ಕೇಂದ್ರ ಕಚೇರಿಯಲ್ಲೇ ಸಂಗ್ರಹಿಸಲಾಗಿತ್ತು ಎಂದು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ನೀಡಿದ ಉತ್ತರದ ಆಧಾರದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ. ಶೋವಂದೇಬ್ ಚಟ್ಟೋಪಾಧ್ಯಾಯ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಗುರುತಿಸುವಂತೆ ಕೋರಿ ವಿಧಾನಸಭೆಯ ಸ್ಪೀಕರ್‌ಗೆ ಸಲ್ಲಿಸಲಾದ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈ ತನಿಖೆ ನಡೆಯುತ್ತಿದೆ.

ದಾಖಲೆಯಲ್ಲಿರುವ 70 ಸಹಿಗಳಲ್ಲಿ 14 ಸಹಿಗಳನ್ನು ನಕಲು ಮಾಡಲಾಗಿದೆ ಎಂದು ಶಾಸಕರಾದ ರಿತಬ್ರತ ಬ್ಯಾನರ್ಜಿ ಮತ್ತು ಸಂದೀಪನ್ ಸಹಾ ದೂರು ನೀಡಿದ್ದರು. ಎಫ್‌ಐಆರ್ ದಾಖಲಾದ ನಂತರ ಮುಖ್ಯಮಂತ್ರಿ ಸುವೇಂದು ಅಧಿಕಾರಿ ದೂರುದಾರರ ಹೆಸರುಗಳನ್ನು ಬಹಿರಂಗಪಡಿಸಿದ್ದರು, ಮತ್ತು ಪಕ್ಷ ತಕ್ಷಣವೇ ಇಬ್ಬರನ್ನೂ ಉಚ್ಚಾಟಿಸಿತ್ತು.

ವಾಯುಪಡೆ, ಸಿಆರ್‌ಪಿಎಫ್ ನಿಯೋಜನೆ

• ಹೊಸದಿಲ್ಲಿ: ಜೂನ್21ರಂದು ನಡೆಯಲಿರುವ ನೀಟ್-ಯುಜಿ ಮರುಪರೀಕ್ಷೆಯನ್ನು ಸುರಕ್ಷಿತವಾಗಿ ನಡೆಸಲು ಕೇಂದ್ರ ಶಿಕ್ಷಣ ಸಚಿವಾಲಯ ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ಭಾರತೀಯ ವಾಯುಪಡೆ ಹಾಗೂ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳನ್ನು ನಿಯೋಜಿಸುತ್ತಿದೆ. ಪ್ರಶ್ನೆಪತ್ರಿಕೆಗಳ ಸಾಗಣೆ ಸಮಯವನ್ನು ಹತ್ತು ದಿನಗಳಿಂದ ನಾಲ್ಕೈದು ದಿನಗಳಿಗೆ ಕಡಿತಗೊಳಿಸಲು ವಾಯುಪಡೆಯ ಹೆಲಿಕಾಪ್ಟರ್ ಮತ್ತು ವಿಮಾನಗಳನ್ನು ಬಳಸಿಕೊಳ್ಳುವ ಕುರಿತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೊಂದಿಗೆ ಚರ್ಚಿಸಿದ್ದಾರೆ. ವಿತರಣಾ ಕೇಂದ್ರಗಳಿಂದ ಪರೀಕ್ಷಾ ಕೇಂದ್ರಗಳಿಗೆ ಸುರಕ್ಷಿತ ಸಾಗಣೆಯನ್ನು ಖಚಿತಪಡಿಸಿಕೊಳ್ಳಲು ಸಿಆರ್‌ಪಿಎಫ್, ಬಿಎಸ್‌ಎಫ್ ಮತ್ತು ಸಿಐಎಸ್‌ಎಫ್ ಒಳಗೊಂಡ ಕೇಂದ್ರ ಪಡೆಗಳನ್ನು ನಿಯೋಜಿಸುವ ಸಾಧ್ಯತೆಯಿದೆ.

ಗ್ರಾಮೀಣ ಉದ್ಯೋಗಕ್ಕೆ ಹೊಸ ಚೈತನ್ಯ | ಜುಲೈ 1ರಿಂದ ಜಿರಾಮ್‌ಜಿ ಆರಂಭ

ಗ್ರಾಮೀಣಾಭಿವೃದ್ಧಿಗೆ 1.25 ಲಕ್ಷ ಕೋ. ರೂ.

• ಹೊಸದಿಲ್ಲಿ: ಗ್ರಾಮೀಣ ಉದ್ಯೋಗ, ಕಾರ್ಮಿಕರ ಭದ್ರತೆ ಹಾಗೂ ಹಳ್ಳಿಗಳ ಸಮಗ್ರ ಅಭಿವೃದ್ಧಿಗೆ ಹೊಸ ಉತ್ತೇಜನ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರ ನರೇಗಾ ಬದಲಿಗೆ ಹೊಸದಾಗಿ ಜಾರಿ ಮಾಡಲಿರುವ ವಿಕಸಿತ ಭಾರತ ಜಿರಾಮ್‌ಜಿ ಅಡಿಯಲ್ಲಿ 1.25 ಲಕ್ಷ ಕೋಟಿ ರೂ. ಮೊತ್ತದ ಅನುದಾನ ಘೋಷಿಸಲಾಗಿದೆ.

ಜು.1ರಿಂದ ಜಾರಿಗೆ ಬರುವ ವಿಕಸಿತ ಭಾರತ ಜಿರಾಮ್‌ಜಿ ಕುರಿತಂತೆ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರೊಂದಿಗೆ ನಡೆದ ಸಭೆಯಲ್ಲಿ ಕೇಂದ್ರ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಈ ಘೋಷಣೆ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ ವಿಕಸಿತ ಭಾರತ ಜಿರಾಮ್‌ಜಿ ಗ್ರಾಮೀಣ ಭಾರತದಲ್ಲಿ ಉದ್ಯೋಗ ಸೃಷ್ಟಿ, ಮೂಲಸೌಕರ್ಯ ನಿರ್ಮಾಣ ಮತ್ತು ಕಾರ್ಮಿಕರ ಜೀವನೋಪಾಯಕ್ಕೆ ಹೊಸ ದಿಕ್ಕು ನೀಡಲಿದೆ ಎಂದು ಚೌಹಾಣ್ ಹೇಳಿದರು.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ(ಎಂಎನ್‌ಆರ್‌ಇಜಿಎ) ಅಡಿಯಲ್ಲಿ ಈಗಾಗಲೇ 30,000 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಇದರ ಜೊತೆಗೆ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಮಧ್ಯಂತರವಾಗಿ 95,692 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿದ್ದು, ಒಟ್ಟಾರೆ ಅನುದಾನ 1.25 ಲಕ್ಷ ಕೋಟಿ ರೂ. ಮೀರಿದೆ. ಈ ಹಣ ದೇಶದ ಸುಮಾರು 2.8 ಲಕ್ಷ ಗ್ರಾಮ ಪಂಚಾಯಿತಿಗಳಿಗೆ ತಲುಪಲಿದ್ದು, ಅಭಿವೃದ್ಧಿ ಕಾಮಗಾರಿಗಳು ಮತ್ತು ಉದ್ಯೋಗ ಸೃಷ್ಟಿಗೆ ಬಳಸಲಾಗುವುದು ಎಂದು ಸಚಿವರು ತಿಳಿಸಿದರು.

ಗ್ರಾಮ ಪಂಚಾಯಿತಿಗಳು ಹಾಗೂ ಗ್ರಾಮಸಭೆಗಳ ಮೂಲಕ ಅಭಿವೃದ್ಧಿ ಕಾಮಗಾರಿಗಳನ್ನು ಆಯ್ಕೆ ಮಾಡಲಾಗುವುದು. ಉದ್ಯೋಗ ಸೃಷ್ಟಿ ಮತ್ತು ವೇತನ ಪಾವತಿಯಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ನೋಡಿಕೊಳ್ಳಬೇಕು ಎಂದು ರಾಜ್ಯಗಳಿಗೆ ನಿರ್ದೇಶನ ನೀಡಲಾಗಿದೆ. ಜೂ.28 ಮತ್ತು 29ರಂದು ಹೊಸದಿಲ್ಲಿಯ ಪೂಸಾ ಸಂಸ್ಥೆಯಲ್ಲಿ ನಡೆಯಲಿರುವ ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಸಮ್ಮೇಳನದಲ್ಲಿ ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಕುರಿತು ಸವಿಸ್ತಾರ ಚರ್ಚೆ ನಡೆಯಲಿದೆ.

ಕರ್ನಾಟಕಕ್ಕೆ 5,709 ಕೋಟಿ ರೂ.

ಹೊಸ ಮಧ್ಯಂತರ ಅನುದಾನದಡಿ ಕರ್ನಾಟಕಕ್ಕೆ 5,709.09 ಕೋಟಿ ರೂ. ಮಂಜೂರು ಮಾಡಲಾಗಿದೆ. ಉತ್ತರ ಪ್ರದೇಶಕ್ಕೆ ಅತಿ ಹೆಚ್ಚು 12,221.48 ಕೋಟಿ ರೂ., ಪಶ್ಚಿಮ ಬಂಗಾಳಕ್ಕೆ 8,508 ಕೋಟಿ ರೂ. ಹಾಗೂ ತಮಿಳುನಾಡಿಗೆ 7,957.57 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ರಾಜ್ಯಗಳು ಮುಂಚಿತವಾಗಿಯೇ ಕಾಮಗಾರಿಗಳಿಗೆ ಅನುಮೋದನೆ ನೀಡುವ ಮೂಲಕ ಜುಲೈ 1ರಿಂದ ವೇಗವಾಗಿ ಯೋಜನೆ ಜಾರಿಗೊಳಿಸಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ.

ರಾಷ್ಟ್ರ ಪರಂಪರೆ ಗೌರವಿಸದವರಿಗೆ ಭಾರತ ಧರ್ಮಛತ್ರವಾಗಿರಲು ಸಾಧ್ಯವಿಲ್ಲ

ಲವ್ ಜಿಹಾದ್ ವಿರುದ್ಧ ಎಚ್ಚರಿಸಿದ ಯೋಗಿ

• ಲಖನೌ: ರಾಷ್ಟ್ರದ ಪರಂಪರೆ,ಮೌಲ್ಯಗಳಿಗೆ ಗೌರವ ನೀಡದವರಿಗೆ ಭಾರತ "ಧರ್ಮಶಾಲೆ"ಯಾಗಿರಲು ಸಾಧ್ಯವಿಲ್ಲ ಎಂದು ಸಾರಿದ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು,'ಲವ್ ಜಿಹಾದ್", ಕಾನೂನುಬಾಹಿರ ಮತಾಂತರ ಮತ್ತು ಲ್ಯಾಂಡ್ ಜಿಹಾದ್‌ಗಳಂತಹ ಪಿಡುಗುಗಳ ವಿರುದ್ಧ ಜಾಗೃತರಾಗಿರಲು ದೇಶದ ಜನತೆಯನ್ನು ಆಗ್ರಹಿಸಿದ್ದಾರೆ.

ಅವರು ಲಖನೌದಲ್ಲಿ ಜಗದ್ಗುರು ಶ್ರೀ ರಮಾನಂದಾಚಾರ್ಯ ಸ್ವಾಮಿ ರಾಮಭದ್ರಾಚಾರ್ಯರು ಆಯೋಜಿಸಿದ 9ದಿನಗಳ ಶ್ರೀರಾಮ ಕಥಾ ಮಹೋತ್ಸವದ ಸಮಾರೋಪದಲ್ಲಿ ಮಾತನಾಡಿದರು. ಭಗವಾನ್ ಶ್ರೀರಾಮ ರಾಷ್ಟ್ರೀಯ ಏಕತೆಯ ಒಂದು ಶಕ್ತಿಶಾಲಿ ಸಂಕೇತವಾಗಿ ಉಳಿಯಲಿದ್ದಾರೆ ಎಂದರು.

ರಾಜಕೀಯ ಪ್ರಚೋದನೆ ಮತ್ತು ಪೂರ್ವಾಗ್ರಹಗಳಿಂದ ಕೂಡಿದ ಕೆಲವೇ ವ್ಯಕ್ತಿಗಳನ್ನು ಹೊರತುಪಡಿಸಿ ಭಾರತೀಯ ಡಿಎನ್‌ಎ ಹೊಂದಿದ ಮತ್ತು ಯಾವುದೇ ರೂಪದಲ್ಲಿ ಭಗವಾನ್ ಶ್ರೀರಾಮನ ಚಿಂತನೆಗಳನ್ನು ತಮ್ಮ ಜೀವನದ ಭಾಗವಾಗಿಸದೆ ಇರುವ ಯಾವುದೇ ವ್ಯಕ್ತಿಗಳನ್ನು ನೀವು ಕಾಣಲು ಸಾಧ್ಯವಿಲ್ಲ ಎಂದು ಅವರು ದೃಢವಾಗಿ ಹೇಳಿದರು.



ಶ್ರೀ ರಾಮಜನ್ಮಭೂಮಿ ಚಳುವಳಿಯು ತಲೆಮಾರುಗಳವರೆಗೆ ಉಳಿದುಕೊಂಡಿರುವುದು ಏಕೆಂದರೆ, ಸಂತರು ಇದನ್ನು ಭಾರತದ ನಾಗರಿಕ ಪರಂಪರೆಯನ್ನು ರಕ್ಷಿಸುವ ಧ್ಯೇಯವೆಂದು ಪರಿಗಣಿಸಿದ್ದರು. ಸುಪ್ರೀಂ ಕೋರ್ಟ್‌ನ 2019ರ ತೀರ್ಪನ್ನು ಉಲ್ಲೇಖಿಸಿ, ಸಂವಿಧಾನ ಪೀಠವು ರಾಮಲಲ್ಲಾ ಅವರ ಜನ್ಮಸ್ಥಳವನ್ನು ಸರ್ವಾನುಮತದಿಂದ ಗುರುತಿಸಿದೆ ಮತ್ತು ನ್ಯಾಯಬದ್ಧ ಕಾನೂನು ಹೋರಾಟದಲ್ಲಿ ಸ್ವಾಮಿ ರಾಮಭದ್ರಾಚಾರ್ಯರ ಪಾತ್ರವನ್ನು ಶ್ಲಾಘಿಸಿದೆ ಎಂದು ಅವರು ಬೊಟ್ಟು ಮಾಡಿದರು.

ರಾಮಾಯಣವನ್ನು ಉಲ್ಲೇಖಿಸಿದ ಅವರು, ತಾಟಕಿಯಂತಹ ರಾಕ್ಷಸರು ಕಲಿಕೆ ಮತ್ತು ಸಂಶೋಧನೆಯಂತಹ ಜ್ಞಾನದ ಕೇಂದ್ರಗಳನ್ನು ನಾಶಗೈಯ್ಯಲು ಮಾಡಿದ ಎಲ್ಲ ಯತ್ನಗಳನ್ನೂ ಭಗವಾನ್ ಶ್ರೀರಾಮ ಸೋಲಿಸಿದ್ದನ್ನು ಪ್ರಸ್ತಾವಿಸಿದರು.

ಭಗವಾನ್‌ಶ್ರೀರಾಮ ರಾಷ್ಟ್ರೀಯ ಏಕತೆಯ ಸಂಕೇತವಾಗಿದ್ದುಕೊಂ, ಶ್ರೀರಾಮ ಭಾರತೀಯರ ಸ್ಫೂರ್ತಿಯಾಗಿದ್ದಾರೆ ಎಂದರು. ಇಂದು ಭಾರತೀಯ ಸಮಾಜವನ್ನು ಉಧ್ವಸ್ತಗೊಳಿಸುವ ಷಡ್ಯಂತ್ರದ ಭಾಗವಾಗಿ ನಡೆಯುತ್ತಿರುವ 'ಲವ್ ಜಿಹಾದ್", ಕಾನೂನುಬಾಹಿರ ಮತಾಂತರ, 'ಲ್ಯಾಂಡ್ ಜಿಹಾದ್"ನಂತಹ ಪಿಡುಗುಗಳ ವಿರುದ್ಧ ದೇಶದ ಜನತೆ ಜಾಗೃತರಾಗಿರುವಂತೆ ಕರೆ ನೀಡಿದರು. ಲವ್ ಜಿಹಾದ್ ಭಾರತೀಯ ಧಾರ್ಮಿಕ ಜನಸಂಖ್ಯಾ ವ್ಯವಸ್ಥೆಯನ್ನೇ ಬುಡಮೇಲುಗೊಳಿಸುವ ಸಂಚಿನ ಭಾಗವಾಗಿದೆ ಎಂದರು.

ಅಲೆಮಾರಿ/ಅರೆ ಅಲೆಮಾರಿ, ವಿಮುಕ್ತ ಬುಡಕಟ್ಟು ಸಮುದಾಯ

ಘುಮಂತು ಕಾರ್ಯ–ಕರ್ನಾಟಕ ದಕ್ಷಿಣ ಪ್ರಾಂತದ ಪ್ರಾಂತ ಬೈಠಕ್



ಮಂಗಳೂರು: ಬೆಂಗಳೂರಿನ 'ಉತ್ತುಂಗ' ಸಭಾಂಗಣದಲ್ಲಿ ಅಲೆಮಾರಿ/ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟು ಸಮುದಾಯದ ಘುಮಂತು ಕಾರ್ಯ–ಕರ್ನಾಟಕ ದಕ್ಷಿಣ ಪ್ರಾಂತದ ಪ್ರಾಂತ ಬೈಠಕ್ ಯಶಸ್ವಿಯಾಗಿ ನಡೆಯಿತು. ಚಿತ್ರದುರ್ಗದ ಶ್ರೀ ಯಾದವಾನಂದ ಸ್ವಾಮೀಜಿ, ಅ ಭಾ ಘುಮಂತು ಕಾರ್ಯ ಪ್ರಮುಖ್ ದುರ್ಗಾದಾಸ್, ಪ್ರಾಂತ ಸಂಘಚಾಲಕ್, ಪ್ರಾಂತ ಪ್ರಚಾರಕ್, ಪ್ರಾಂತ ಸಂಯೋಜಕರಾದ ಗುರುಗಣೇಶ್, ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಕೆ. ರವೀಂದ್ರ ಶೆಟ್ಟಿ ಉಳಿದೊಟ್ಟು, ಕರ್ನಾಟಕ ರಾಜ್ಯ ಪಾಣರ ಅಜಿಲಯಾನೆ ನಲಿಕೆ ಸಮಾಜ ಸೇವಾ ಸಂಘದ ರಾಜ್ಯಾಧ್ಯಕ್ಷ, ದೈವ ನರ್ತಕ ದಯಾನಂದ, ಹೈಕೋರ್ಟ್ ವಕೀಲ ಎಸ್. ರವಿ ಮಾವಿನಕುಂಟೆ, ಉಮಾ ಸಾಗರ ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು.

ಎಂಟೂ ವಿಭಾಗದ 22ಕ್ಕೂ ಹೆಚ್ಚು ಜಿಲ್ಲೆಗಳಿಂದ 11 ಮಾತೆಯರನ್ನು ಒಳಗೊಂಡು ಒಟ್ಟು 157 ಪ್ರತಿನಿಧಿಗಳು ಭಾಗವಹಿಸಿದ್ದರು. 15 ಸಮುದಾಯಗಳಿಂದಅನೇಕಗಣ್ಯರು, ಸಮುದಾಯ ಸಂಘಟನೆಯ ರಾಜ್ಯ ಮತ್ತು ಜಿಲ್ಲಾ ಸ್ತರದ ಪದಾಧಿಕಾರಿಗಳು ಭಾಗವಹಿಸಿದ್ದರು.

ಓರ್ವ ಮಹಿಳೆಗೆ ಹೊಲಿಯುವ ಯಂತ್ರ ಮತ್ತು 10 ವಿದ್ಯಾರ್ಥಿಗಳಿಗೆ ವಿದ್ಯಾನಿಧಿಯನ್ನು ವಿತರಿಸಲಾಯಿತು.

2026–27 ಸಾಲಿನ ಕಾರ್ಯದ ವಾರ್ಷಿಕ ಯೋಜನೆ ತಿಳಿಸಿ ಕಾರ್ಯಕರ್ತರ ಜವಾಬ್ದಾರಿಗಳನ್ನು ಘೋಷಣೆ ಮಾಡಲಾಯಿತು.

ಇದೇ ಸಂದರ್ಭ ಘುಮಂತು ಕಾರ್ಯದ ಪರಿಚಯ ಮಾಡುವ ಕರಪತ್ರದ ಬಿಡುಗಡೆ ನಡೆಯಿತು.

ಕುದ್ಕುಳಿ ಸಂಪರ್ಕ ರಸ್ತೆ ಸಮಸ್ಯೆ ಶಾಸಕರ ನೇತೃತ್ವದಲ್ಲಿ ಇತ್ಯರ್ಥ



ಸುಳ್ಯ: ಆಲೆಟ್ಟಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕುಲ್ಕುಳಿ ಎಂಬಲ್ಲಿ ಕಳೆದ ಕೆಲ ಸಮಯಗಳಿಂದ ಸಮಸ್ಯೆ ಎದುರಿಸುತ್ತಿದ್ದ ರಸ್ತೆ ಸಮಸ್ಯೆಯೊಂದು ಶಾಸಕರ ಸಮ್ಮುಖದಲ್ಲಿ ಬಗೆಹರಿಸಲಾಗಿದೆ.

ಸೋಮವಾರ ವಿವಾದಿತ ಸ್ಥಳಕ್ಕೆ ಶಾಸಕಿ ಭಾಗೀರಥಿ ಮುರುಳ್ಯ ಭೇಟಿ ನೀಡಿ ಇತ್ತಂಡದ ಸದಸ್ಯರ ಜತೆ ಮಾತುಕತೆ ನಡೆಸಿ ಕಾಲನಿಯ ನಿವಾಸಿಗಳ ಮನವೊಲಿಸಿ ರಸ್ತೆ ಅಭಿವೃದ್ಧಿ ಪಡಿಸುವ ಕಾರ್ಯ ಕೈಗೆತ್ತಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಕಚ್ಚಾ ರಸ್ತೆಯು ಪಂಚಾಯತ್ ರಸ್ತೆಯಾಗಿದ್ದು ಜೆಸಿಬಿ ಬಳಸಿ ರಸ್ತೆಯನ್ನು ತಾತ್ಕಾಲಿಕ ದುರಸ್ತಿ ಪಡಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಹರೀಶ್ ಕಂಜಿಪಿಲಿ, ವೆಂಕಟ್ ದಂಬೆಕೋಡಿ, ಜಯಪ್ರಕಾಶ್ ಕುಂಚಡ್ಕ, ಧನಂಜಯ ಕುಂಚಡ್ಕ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಜಯಪ್ರಕಾಶ್, ಕುಶಾಲಪ್ಪ ಗೌಡ ಹಾಗೂ ಸ್ಥಳೀಯ ನಿವಾಸಿಗಳು, ಪಂಚಾಯತ್ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಜೂ. 10 ರಂದು ಬೆಳಿಗ್ಗೆ 9.30 ರಿಂದ ಸಂಜೆ 6 ಗಂಟೆವರೆಗೆ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಶಿರ್ತಾಡಿ, ಕೊಯಿಕುಡೆ, ಪಿದಮಲೆ, ಬೈಲಬರ್ಕೆ, ಬೋರುಗುಡ್ಡೆ, ಕರ್ನಲ್ ಗುಡ್ಡೆ, ಹೂಂಪೆಟ್ಟು, ಆನೆಗುಡ್ಡೆ, ಕುಕ್ಕುದಕಟ್ಟೆ, ಪಡುಕೊಣಾಜೆ, ಮೇಕಾರು ದ್ವಾರ, ಅರಸುಕಟ್ಟೆ, ವಿದ್ಯಾನಗರ, ಕಜೆ, ಕಾಶಿಪಟ್ನ, ಕಾನ, ಕಲ್ಲೋಳಿ, ನಡಿಗುಡ್ಡೆ, ಕಾಂತಾವರ ಕ್ರಾಸ್, ಬೆಳುವಾಯಿ, ಬನ್ನಡ್ಕ, ಕಾಯರ್ ಕಟ್ಟೆ, ಬೆಳುವಾಯಿ ಚರ್ಚ್, ಇರ್ವತ್ತೂರು ಕ್ರಾಸ್, ಮೂಡು ಮಾರ್ನಾಡು, ಕೆಲ್ಲಪುತ್ತಿಗೆ ದರೆಗುಡ್ಡೆ, ಪಣಪಿಲ, ಅಳಿಯೂರು ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ತಿಳಿಸಿದೆ.

ವಿದ್ಯುತ್ ತಂತಿ ಅಕ್ರಮ ಸಾಗಾಟ: ನಾಲ್ವರ ಬಂಧನ

ಕಾಸರಗೋಡು: ವಿದ್ಯುತ್ ಲೈನ್ ಅಳವಡಿಸಲು ಉಪಯೋಗಿಸುವ ಅಲ್ಯೂಮಿನಿಯಂ ತಂತಿಗಳನ್ನು ಅಕ್ರಮವಾಗಿ ಸಾಗಿಸಿದ ಆರೋಪದಂತೆ ಗುತ್ತಿಗೆದಾರ ಸಹಿತ ನಾಲ್ವರನ್ನು ಬಂಧಿಸಲಾಗಿದೆ. ರಾಜಪುರಂ ವಿದ್ಯುತ್ ಸೆಕ್ಷನ್ ಕಚೇರಿಯ ವ್ಯಾಪ್ತಿಯಲ್ಲಿ ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ಕೆಲಸದ ಗುತ್ತಿಗೆದಾರ, ಬಳಾಂತೋಡು ಅರಿತ್ರೋಡು ನಿವಾಸಿ ವಿನೋದ್‌ಕುಮಾರ್ (52), ಕಳ್ಳಾರಿನ ಗುಜರಿ ವ್ಯಾಪಾರಿ ಕೆ.ಪಿ.ಶಫೀಕ್ (42), ಗುಜರಿ ಅಂಗಡಿಯ ಕಾರ್ಮಿಕರಾದ ಅಸ್ಸಾಂ ನಿವಾಸಿಗಳಾದ ಸೈಫುದ್ದೀನ್ ಅಹಮ್ಮದ್ (38), ಅಲಂಖೀರ್ ಹುಸೈನ್ (18) ಬಂಧಿತ ಆರೋಪಿಗಳು. ಸಾಮಗ್ರಿ ಮತ್ತು ಸಾಗಿಸಲು ಉಪಯೋಗಿಸಿದ ವಾಹನವನ್ನು ರಾಜಪುರಂ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ಬ್ಯಾಂಕರ್‌ಗಳ ಜಿಲ್ಲಾ ಮಟ್ಟದ ಸಭೆ ನಾಳೆ

ಕಾಸರಗೋಡು: ಕೇಂದ್ರ ಮತ್ತು ರಾಜ್ಯ ಹಣಕಾಸು ನೆರವು ಯೋಜನೆಗಳ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳುವ ಮತ್ತು ಅಸ್ತಿತ್ವದಲ್ಲಿರುವ ಉದ್ಯಮಿಗಳಲ್ಲಿ ಬ್ಯಾಂಕಿಂಗ್ ಮತ್ತು ಹಣಕಾಸು ಸಾಕ್ಷರತಾ ಜಾಗೃತಿಯನ್ನು ಪಸರಿಸುವ ಉದ್ದೇಶದಿಂದ ಜೂ.11ರಂದು ಬೆಳಗ್ಗೆ 10.30 ರಿಂದ ಅಪರಾಹ್ನ 3.30ರ ವರೆಗೆ ಕಾಸರಗೋಡು ಸಿಟಿ ಟವರ್‌ನಲ್ಲಿ ಜಿಲ್ಲಾ ಮಟ್ಟದ ಬ್ಯಾಂಕರ್‌ಗಳ ಸಭೆಯನ್ನು ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 9744916766, 9048221142, 9744370989 ಕರೆ ಮಾಡಬಹುದು.

ಭೂಮಿಪೂಜೆ

ಮಡಿಕೇರಿ: ನಗರದ ಐಟಿಐ ಸಮೀಪ ನಿರ್ಮಾಣಗೊಳ್ಳಲಿರುವ ಅಮ್ಮ ಕೊಡವ ಸಮಾಜದ ಕಾಮಗಾರಿಗೆ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ ಭೂಮಿಪೂಜೆ ನೆರವೇರಿಸಿದರು. ಅಮ್ಮ ಕೊಡವ ಸಮಾಜದ ಪ್ರಮುಖರು ಉಪಸ್ಥಿತರಿದ್ದರು.

ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿ
ಎಪಿಎಂಸಿ ಆವರಣ ಚನ್ನಗಿರಿ, ದಾವಣಗೆರೆ ಜಿಲ್ಲೆ,–577213,
Email:tumcoscng@gmail.com, info@tumcos.com Mo:7349033006

TUMCOS/2026-27/268 DATE: 08-06-2026

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕಟಣೆ

ಸಂಘದ ಹೊಳಲ್ಕೆರೆ ಶಾಖೆಯ ಕಚೇರಿ ಸಹಿತ ಗೋದಾಮು ಕಟ್ಟಡ ನಿರ್ಮಾಣ ಕಾಮಗಾರಿ ಮಾಡಲು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ. ಅಂದಾಜು ಮೊತ್ತ:7,93,98,032/–ರೂ.ಗಳು, ಇ.ಎಂ.ಡಿ.ಮೊತ್ತ:9,10,000/–ರೂ.ಗಳು, ಟೆಂಡರ್ ನಂಬರ್:TUMCOSL/2026-27/OW/WORK_INDENT4, ಟೆಂಡರ್ ಟೈಟಲ್ :PROPOSED COMMERCIAL BUILDING AT TUMCOS LTD, APMC YARD, HOLALKERE, CHITRADURGA DISTRICT.. ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ರಲ್ಲಿ 08/07/2026 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಮೇಲ್ಕಂಡ ಅಂತರ್ಜಾಲ ಅಥವಾ https://www.tumcos.com ಸಂಪರ್ಕಿಸಿ

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ತುಮ್‌ಕೋಸ್ ಲಿ.,ಚನ್ನಗಿರಿ

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-523th) ಡ್ರಾ ಜೂನ್ 9ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SU 715081 (THIRUVANANTHAPURAM)

Cons Prize-Rs: 5000/-
SN 715081 SO 715081 SP 715081 SR 715081
SS 715081 ST 715081 SV 715081 SW 715081
SX 715081 SY 715081 SZ 715081

2nd Prize Rs: 30,00,000/- [30 Lakhs]
SX 578598 (THRISSUR)

3d Prize Rs: 5,00,000/- [5 Lakhs]
SZ 859429 (PUNALUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0833 0886 0954 1652 2839 3598 5685 5884 6450 6760 6914 7312 7581 7588 8648 9240 9626 9703 9895

5th Prize Rs.2,000/-
1406 1773 3786 5325 8038 9915

6th Prize Rs.1,000/-
0234 0437 0848 1196 1199 1591 1594 2092 2107 2411 2475 3437 4138 4310 4960 5895 6294 6987 7220 7393 7514 7705 8169 8349 9079

7th Prize Rs.500/-
0376 0392 0614 0664 0794 0956 1111 1212 1585 1624 1691 1897 1978 2079 2311 2336 2340 2615 2748 2885 3108 3208 3243 3273 3328 3562 3833 3880 4287 4768 4951 4972 5208 5273 5440 5463 5553 5606 5708 5815 5843 6257 6497 6584 6765 6776 6922 6978 7006 7055 7074 7094 7253 7260 7278 7628 7639 7893 7920 8042 8161 8164 8183 8373 8417 8542 8616 8666 8774 8788 9252 9375 9491 9754 9868 9944

8th Prize Rs.200/-
0019 0023 0110 0262 0276 0325 0580 0662 0728 1028 1171 1303 1609 1665 1778 1804 1819 1955 1958 2182 2343 2523 2802 2958 3098 3302 3478 3511 3794 3905 3930 3963 3978 4030 4048 4221 4283 4329 4346 4585 4605 4847 4895 4964 5058 5069 5395 5530 5610 5743 5859 6001 6066 6360 6660 6742 6774 6825 6894 6975 7004 7068 7159 7229 7257 7297 7313 7361 7394 7525 7763 7895 7991 8009 8160 8197 8397 8411 8585 8711 8897 9003 9307 9360 9420 9453 9634 9693 9778 9805

9th Prize Rs.100/-
0010 0043 0103 0198 0224 0243 0313 0400 0555 0560 0584 0618 0665 0805 0912 0942 1046 1087 1108 1309 1316 1335 1411 1478 1501 1558 1606 1634 1663 1699 1875 1916 1950 2073 2088 2117 2252 2323 2339 2459 2499 2547 2554 2639 2853 2864 2880 3019 3153 3514 3545 3547 3573 3703 3704 3865 3894 4019 4143 4210 4285 4322 4415 4456 4524 4594 4621 4748 4784 4851 4902 4914 4979 5104 5121 5138 5175 5225 5268 5299 5305 5308 5409 5459 5471 5555 5575 5667 5758 5950 6071 6094 6110 6155 6353 6439 6653 6791 6904 6919 6950 6988 7164 7230 7338 7347 7413 7439 7597 7619 7783 7847 7852 7855 7993 7996 8013 8016 8127 8227 8258 8321 8333 8398 8434 8547 8579 8643 8739 8758 8847 8883 8950 9013 9023 9053 9057 9133 9235 9248 9270 9409 9436 9488 9559 9642 9664 9700 9803 9858

ಸರಕಾರಿ ಪ್ರೌಢಶಾಲೆ, ಎಲಿಮಲೆ
ದೇವಚಳ್ಳ ಗ್ರಾಮ ಸುಳ್ಯ ತಾಲೂಕು, ದ.ಕ. 574248, ದೂರವಾಣಿ ಸಂಖ್ಯೆ: 9902965372
ಇಮೇಲ್: govthighschoolelimale@gmail.com
ಕ್ರ.ಸಂ: ಸ.ಪ್ರೌ.ಶಾಲೆ ಎಲಿಮಲೆ/ಪ್ರಕಟಣೆ/2025–26 ದಿನಾಂಕ: 09.06.2026

ಟೆಂಡರ್ ಪ್ರಕಟಣೆ

ಸುಳ್ಯ ತಾಲೂಕು ಎಲಿಮಲೆ ಸರಕಾರಿ ಪ್ರೌಢಶಾಲೆಗೆ, 2025–26ನೇ ಸಾಲಿನ ಜಿಲ್ಲಾ ಪಂಚಾಯತ್ ಯೋಜನೆಯಡಿ ಅವಶ್ಯಕ ಪೀಠೋಪಕರಣಗಳನ್ನು ಮತ್ತು ಕಛೇರಿ ನಿರ್ವಹಣಾ ಸಾಮಗ್ರಿಗಳನ್ನು ಪೂರೈಕೆ ಮಾಡಲು ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಏಜೆನ್ಸಿದಾರರು ತಮ್ಮ ಟೆಂಡರ್ ಅರ್ಜಿಯನ್ನು ಈ ಕಛೇರಿಗೆ ದಿನಾಂಕ: 16.06.2026ರಂದು 4.00 ಗಂಟೆಯ ಒಳಗಾಗಿ ಸಲ್ಲಿಸಬಹುದಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಹಾಗೂ ಪೀಠೋಪಕರಣಗಳ ವಿವರಗಳನ್ನು ಟೆಂಡರ್ ಅರ್ಜಿಯೊಂದಿಗೆ ಎಲಿಮಲೆ ಪ್ರೌಢಶಾಲಾ ಕಛೇರಿಯಿಂದ ಕಛೇರಿ ಸಮಯದಲ್ಲಿ ಪಡೆಯಬಹುದಾಗಿದೆ.
1) ಟೆಂಡರ್‌ಗೆ ಇರಿಸಿದ ಮೊತ್ತ: ರೂ. 4.75 ಲಕ್ಷಗಳು. 2) ಟೆಂಡರ್ ಪ್ರಕಟಣೆ ದಿನಾಂಕ: 10.06.2026. 3) ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16.06.2026 4.00 ಗಂಟೆಯ ಒಳಗಾಗಿ. 4) ಟೆಂಡರ್ ಅರ್ಜಿ ತೆರೆಯುವ ದಿನಾಂಕ: 17.06.2026 11.00 ಗಂಟೆಗೆ. 5) ಇ.ಎಂ.ಡಿ ಮೊತ್ತ: ರೂ. 12,500/–
DIPR/DK/KSMCA/1699/25-26 dt.09.06.2026

ಸಹಿ/– ಮುಖ್ಯೋಪಾಧ್ಯಾಯರು
ಸರಕಾರಿ ಪ್ರೌಢಶಾಲೆ ಎಲಿಮಲೆ, ಸುಳ್ಯ ತಾಲೂಕು

ಮಂಗಳೂರು ಮಹಾನಗರಪಾಲಿಕೆ
MCC/EE2/TENDER-14/2026-27 ದಿನಾಂಕ: 09-06-2026

ಟೆಂಡರ್ ಪ್ರಕಟಣೆ E-PROCUREMENT OF KARNATAKA

ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ. ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಯನ್ನು **ಸಾಮಾನ್ಯ ನಿಧಿಯಲ್ಲಿ** ನಿರ್ವಹಿಸುವ ಬಗ್ಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 13–07–2026.** ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **kppp.karnataka.gov.in** ಹೆಚ್ಚಿನ ವಿವರವನ್ನು ಪಡೆಯಬಹುದು.

ಕ್ರ. ಸಂ.	ಕೆಲಸದ ಹೆಸರು	ಅಂದಾಜು ಪಟ್ಟಿ ಮೊತ್ತ ರೂಪಾಯಿ
1	ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಕೊಡಿಯಾಲ್ ಗುತ್ತು ವೆಟ್‌ವೆಲ್‌ನಿಂದ ಕುದ್ರೋಳಿ ವೆಟ್‌ವೆಲ್‌ಗೆ ಸಂಪರ್ಕಿಸುವ ಪಂಪಿಗೆ ಕೊಳವೆಯನ್ನು (450 ಎಂ.ಎಂ. ವ್ಯಾಸ) ಕೊಡಿಯಾಲ್ ಗುತ್ತು ವೆಟ್‌ವೆಲ್‌ನಿಂದ ಹಾಲ್ ಮಾರ್ಕ್ ಅಪಾರ್ಟ್‌ಮೆಂಟ್ ವರೆಗೆ (600 ಎಂ.ಎಂ. ವ್ಯಾಸ) ಕೊಳವೆಯನ್ನು ಬದಲಾಯಿಸುವ ಕಾಮಗಾರಿ. **(Indent No. 55424/Call-2)**	3,42,00,000.00

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರಪಾಲಿಕೆ, ಮಂಗಳೂರು
DIPR/DK/KSMCA/338/26-27 dt: 09.06.2026

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ
ನಂ.ಕಾ.ನಿ.ಅ/ಗ್ರಾ.ಕು.ನೀ&ನೈ/ಬೆಳಗಾವಿ/ಪಿಬಿ–2/ಕು.ನೀ.ಸ.ಯೋ/ಕೆಡಬ್ಲ್ಯು–3/ ಟೆಂಡರ್–2/2026–27/389 ದಿ:08–06–2026

ಇ–ಪ್ರೊಕ್ಯೂರಮೆಂಟ್‌ರೀತ್ಯಾ ಏಕಲಕೋಟೆ &ದ್ವಿ–ಲಕೋಟೆ ಮಾದರಿಯ ಹೊಸ ಟೆಂಡರ್ ಪ್ರಕಟಣೆ ಸಂಖ್ಯೆ :2/2026–27

ಈ ಕೆಳಕಂಡ ಹೊಸ ಕಾಮಗಾರಿಗಳು Standard Tender Document KW-1,2&3 ರ ನಿಬಂಧನೆಗೊಳಪಟ್ಟಂತೆ ಏಕಲಕೋಟೆ & ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀಆಧಾರದ ಮೇಲೆ ಟೆಂಡರನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರಿನಲ್ಲಿ ಇ–ಪ್ರೊಕ್ಯೂರಮೆಂಟ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಟೆಂಡರ ತೆರೆಯುವ ದಿನಾಂಕಗಳು ಈ ಕೆಳಗಿನಂತಿದೆ.
ಅನುಸೂಚಿತ ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:–, ಅನುಸೂಚಿತ ಪರಿಶಿಷ್ಟ ಜಾತಿಗೆ ಮೀಸಲಿಟ್ಟ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:–, ಸಾಮಾನ್ಯ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:9773 Call-3, 9816/CALL-5, 9782/CALL-6. CAT-II(A), ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:–, CAT-Iಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:–
1)ಇ–ಪ್ರೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:17–06–2026 ಸಾಯಂಕಾಲ 17:00 ಘಂಟೆವರೆಗೆ 2)ಇ–ಪ್ರೊಕ್ಯೂರಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:18–06–2026 ಸಾಯಂಕಾಲ 17:30 ಘಂಟೆ ನಂತರ 3)ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ:ತಾಂತ್ರಿಕ ಬಿಡ್ ಅನುಮೋದಿಸಿದ ನಂತರ, ಕಾಮಗಾರಿ ಮುಕ್ತಾಯಗೊಳಿಸಬೇಕಾದ ಅವಧಿಯು ಮಳೆಗಾಲವನ್ನು ಒಳಗೊಂಡಿರುತ್ತದೆ.
ಸೂಚನೆ:–ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ https://kppp.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ. ಕು. ನೀ. & ನೈ. ವಿಭಾಗ, ಬೆಳಗಾವಿ.
DIPR/BGM/RO-NO-393/KSMCA/2026-27

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಲೋಕೋಪಯೋಗಿ ಇಲಾಖೆ, ಗದಗ ವಿಭಾಗ, ಗದಗ
ದೂರವಾಣಿ : 08372–238782, ಇಮೇಲ್ : eepwdgad@gmail.com
ಸಂಖ್ಯೆ : ಕಾ.ನಿ.ಇಂ.ಗ./ಲೋ.ಇ./ಪಿಬಿ–1, 5/ವಿವಿಧ/2026–27/817
ದಿನಾಂಕ : 09–06–2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು 848.00 ಲಕ್ಷ ಮೊತ್ತದಲ್ಲಿ ಒಟ್ಟು 08 ಕಾಮಗಾರಿಗೆ (ಕನಿಷ್ಠ ಮೊತ್ತ ರೂ. 2.00 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 250.00 ಲಕ್ಷ) ಕೆ.ಪಿ.ಪಿ.ಪಿ.ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.ಪಿ. ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ. – 1, 2, 3 ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.karnataka.gov.in ದಲ್ಲಿ ನೋಡಿಕೊಳ್ಳಬಹುದು.

Work Indent No. : Part-1, 27553/Call-2.
ಮೇಲಿನ ಕಾಮಗಾರಿಗಳ ಪ್ರಶ್ನೋತ್ತರ ದಿನಾಂಕ : 22–06–2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 23–06–2026 ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 24–06–2026. ಆರ್ಥಿಕ ಬಿಡ್ ತೆರೆಯುವ ದಿನಾಂಕ : 25–06–2026.

Work Indent No. : Part-2, 32764/Call-3, 32781/Call-3, 32783-SC/Call-2, 35125.
ಮೇಲಿನ ಕಾಮಗಾರಿಯ ಟೆಂಡರ್ ವಿವರ : ಪ್ರಶ್ನೋತ್ತರ ದಿನಾಂಕ : 16–06–2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 17–06–2026 ರ ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 18–06–2026. ಆರ್ಥಿಕ ಬಿಡ್ ತೆರೆಯುವ ದಿನಾಂಕ : 19–06–2026.

Work Indent No. : Part-3, 33451, 33444, 36229.
ಮೇಲಿನ ಕಾಮಗಾರಿಗಳ ಟೆಂಡರ್ ವಿವರ : ಪ್ರಶ್ನೋತ್ತರ ದಿನಾಂಕ : 30–06–2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 01–07–2026 ರ ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ / ಆರ್ಥಿಕ ಬಿಡ್ ತೆರೆಯುವ ದಿನಾಂಕ : 02–07–2026.

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ–1 ಹಾಗೂ ಕೆಟಗರಿ–2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಗದಗ ವಿಭಾಗ,
ಗದಗ.
ಡಿಐಪಿಆರ್/ಗದಗ/115/ಮಣಿಪಾಲ್/2026–27

ಪುತ್ತೂರು ಮಾರುಕಟ್ಟೆ ಧಾರಣೆ
09-06-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	: 420 - 470
ಚೋಲ್ ಅಡಿಕೆ	: 525 - 550
ಡಬಲ್ ಚೋಲ್	: 525 - 550
ಹೊಸ ಪಟೋರ	: 340 - 390
ಹಳೆ ಪಟೋರ	: 360 - 390
ಹೊಸ ಉಳ್ಳಿ	: 140 - 285
ಕರಿಗೋಟು	: 245 - 275
ಕೋಕಾ	: 315 - 335
ಹಸಿ ಕೊಕ್ಕೋ	: 70 - 105
ಒಣ ಕೊಕ್ಕೋ	: 270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	: 450 - 665

ರಬ್ಬರ್ ಧಾರಣೆ : ಗ್ರೇಡ್

ರಬ್ಬರ್ ಗ್ರೇಡ್	- 211-262
ರಬ್ಬರ್ ಸ್ಕ್ರಾಪ್	- 140-152

IN THE COURT OF THE IV ADDITIONAL CIVIL JUDGE AT MANGALURU
O.S. No. 487/2025
Between: The Karnataka Grameena Bank ....Plaintiff
And
Mr. Venugopal S.K. ...Defendant

Defendant
Mr. Venugopal. S.K., S/o Koosappa Gowda, Aged about 50 years, residing at D.No.3/84-116(2) Shanthi Nagara, Kavoor, Mangaluru-575015.

NOTICE
Please take notice that the plaintiff has instituted a suit against you stands posted to for your appearance. If you fail to appear at **11 a.m. on 28/07/2026** the said date before the above said court either in person or through counsel, the same will be proceeded with by setting you exparte.
Given under my hand and seal of the court this the **04-06-2026.**

(By the order of the court)
Sd/- CHIEF MINISTERIAL OFFICER,
Court of the Civil Judge and
JMFC, Mangaluru

Sd/- Advocate for Plaintiff,
(B. Guruprasad Shetty)
Mangaluru | 02-06-2026

ಕರ್ನಾಟಕ ಸರ್ಕಾರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಮಂಗಳೂರು (ನಗರ)
ಸಿಲ್ವಾ ಕ್ರಾಸ್ ರೋಡ್ ವೆಲೆನ್ಸಿಯಾ, ಬಿಷಪ್ ವಿಕ್ಟರ್ ಅಡ್ಡ ರಸ್ತೆ, ಮಂಗಳೂರು–575002
ದೂರವಾಣಿ: 0824–2959809 ಇ–ಮೇಲ್: cdpomu@yahoo.in
ಸಂಖ್ಯೆ:ಸಶಿಅಯೋಮ/ಬಾ.ಮೂ./ಕ.ಅ.ಮೆ/ಟೆಂಡರ್/2026–27 ದಿನಾಂಕ: 06–06–2026

ಟೆಂಡರ್ ಪ್ರಕಟಣೆ

ಶಿಶು ಅಭಿವೃದ್ಧಿ ಯೋಜನೆ, ಮಂಗಳೂರು ನಗರ ಇಲ್ಲಿಗೆ ಕಂಪ್ಯೂಟರ್ ಆಪರೇಟರ್, ಮೆಸೆಂಜರನ್ನು ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ ಹೊರಗುತ್ತಿಗೆ ಆಧಾರದಲ್ಲಿ ಬಾಹ್ಯ ಮೂಲದ ಮುಖಾಂತರ ಪಡೆಯಲು ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 19–06–2026 ಅಪರಾಹ್ನ 5.00 ಗಂಟೆ, ಟೆಂಡರ್ ತೆರೆಯುವ ದಿನಾಂಕ: 22–06–2026. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮಂಗಳೂರು(ನಗರ) ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿ
ಮಂಗಳೂರು (ನಗರ)
DIPR/DK/KSMCA/340/26-27 Dt. 09.06.2026

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/26096910/877 ಫ್ಯಾಕ್ಸ್: 080–25536105
ಇ–ಮೇಲ್: purchase@kmf.coop
ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–935/2026–27 ದಿನಾಂಕ: 09.06.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

Sl. No.	Description	Approx. Qty (Kgs.)	EMD (Rs.)
1	Supply of Laminated Film for packing 1kg Chelated Mineral Mixture to KMF Cattle Feed Plants For A Period of Three months	44500 Kgs	1,64,000/-

ಇ–ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ 16.06.2026 ರಂದು 05.15 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.
ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

IN THE COURT OF THE 5th ADDITIONAL DISTRICT JUDGE AT PUTTUR, D.K.
(In the matter of will of Hariyappa Achari)
P&SC No: 5001/26

Between,
Yashodha ...Petitioner
And
Prathik Kumar S and others ...Respondents

PUBLIC NOTICE

Whereas the Petitioner Yashodha has filed the above petition before this court for grant of probate of will executed by **Hariyappa Achari** dated **04.06.2024** in favour of petitioner with regard to Schedule properties.

A' Schedule
Immovable properties situated in Balpa Village of Kadaba Taluk, comprised in:

Sl. No	S. No	S.D. No	Kissam	Extent	Assessment
1	53	1 B 3	Thari	0-68	1-98
2	53	12	Thari	0-14	1-81

Together with house Building, tree growth, right of way, water right and other appurtenant rights.

Notice are issued in the name of respondents that in case anybody has any objection for the grant of probate, he/she can file objections to the same on or before **29.06.2026** either in person or through a counsel to answer the same, failing which the petition shall be decided in accordance with law

Given under my hand and seal of the Court this 9th June 2026
(By order of court)

Sd/- Shirastedar
Court of the 5th additional
District Judge at Puttur, D.K.

Sd/- Advocate for Petitioner

ಕರ್ನಾಟಕ ಸರ್ಕಾರ
ಬೀದರ ಮಾಹಾನಗರ ಪಾಲಿಕೆ ಬೀದರ
ದೂರವಾಣಿ: 08482-240432 ಫ್ಯಾಕ್ಸ ನಂ: 08482–240432 Web Site:www.bidarcity.mrc.gov.in
E-mail ID:itstaff_ulb-bidar@yahoo.com, ka.bidar.cmc@gmail.com
ಸಂ:ಬೀಮಪಾ/ಆರೋಗ್ಯ/ಸಿಆರ್– /2025–26 ದಿನಾಂಕ: 06–06–2026

– : ಇ–ಪ್ರಕ್ಯೂರ್‌ಮೆಂಟ್ ಪ್ರಕಟಣೆ (ದರ ಅಹ್ವಾನಕ್ಕಾಗಿ): –

1) ಕಾಮಗಾರಿ/ಸರಕು/ಸೇವೆಯ ವಿವರ {DMA/2026-27/OW/WORK_INDENT59474}:- hiring of power screen warrior 1200 and trommel machine on hourly basis for processing of municipal solid (for preparation of estimate), 2) ಕಾಮಗಾರಿ/ಸರಕು/ಸೇವೆಯ ಅಂದಾಜು ಮೊತ್ತ KPPP-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ KPPP-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ KPPP-portal ನಲ್ಲಿ ನಮೂದಿಸಿದಂತೆ, 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು **16-06-2026 upto 04.00 PM,** 6) ಟೆಂಡರ ತೆರೆಯುವ **ದಿನಾಂಕ 17-06-2026 at 04.30 PM,** 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಆಯುಕ್ತರು ಮಹಾನಗರ ಪಾಲಿಕೆ ಬೀದರ ಇ–ಮೇಲ್: ka.bidar.cmc@gmail.com 08482-240432, 8) ಅಂತರಜಾಲ ತಾಣದ ವಿಳಾಸ https://kppp.karnataka.gov.in/

ಸಹಿ/–ಆಯುಕ್ತರು,
ಬೀದರ ಮಾಹಾನಗರ ಪಾಲಿಕೆ ಬೀದರ
ವಾ.ಸಾ.ಸಂ.ಇ/ಬೀದರ/54/ಕೆ.ಎಸ್.ಎಂ.ಸಿ.&ಎ/2026–27

ನಗರಸಭಾ ಕಾರ್ಯಾಲಯ ರಾಬರ್ಟ್‌ಸನ್‌ಪೇಟೆ ಕೆ.ಜಿ.ಎಫ್–563122 CITY MUNICIPAL COUNCIL ROBERTSONPET KOLAR GOLD FIELDS - 563122
Website: www.robertsonpetcity.mrcgov.in, E mail: itstaff_ ulb_robertsonpet@yahoo.com
Phone No:08153-260256
ಸಂಖ್ಯೆ:ನಸರಾ/ತಾಶಾ/ಸ.ಅ/ಇ–ಪ್ರೊಕ್/ಸಿಆರ್/04/2026–27 ದಿನಾಂಕ:06.06.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ದತಿ)

ರಾಬರ್ಟ್‌ಸನ್‌ಪೇಟೆ ನಗರಸಭೆ ವ್ಯಾಪ್ತಿಯಲ್ಲಿ ಎಸ್.ಎಫ್.ಸಿ ಯೋಜನೆ ಮತ್ತು ನಗರಸಭೆ ನಿಧಿ ಅನುದಾನದ ಅಡಿಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ನೊಂದಾಯಿತ ಗುತ್ತಿಗೆದಾರರುಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ–1999 ನಿಯಮಗಳು 2000) ಅನ್ವಯ ಐಟಂವಾರು ದರಗಳ ದ್ವಿ–ಲಕೋಟೆ ಪದ್ದತಿ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

Sl no	Name of work	Estcost (Rs.In Lakhs)	Category
1	DMA/2025-26/Ws/WORK_INDENT59124	2.91	Others
2	DMA/2025-26/OW/WORK_INDENT59128	1.675	SC
3	DMA/2025-26/OW/WORK_INDENT59130	15.00	ST
4	DMA/2025-26/OW/WORK_INDENT59131	6.04	Others
5	DMA/2025-26/RD/WORK_INDENT59132	18.00	Others
6	DMA/2025-26/RD/WORK_INDENT59136	3.52	Others
7	DMA/2025-26/WS/WORK_INDENT59138	1.6	Cat-II(A)
8	DMA/2025-26/OW/WORK_INDENT59140	3.75	Cat-II(A)
9	DMA/2025-26/OW/WORK_INDENT59146	9.32	Others
10	DMA/2025-26/OW/WORK_INDENT59147	8.4	Others
11	DMA/2025-26/OW/WORK_INDENT59460	13.94	Others
12	DMA/2025-26/SE7012/CALL-3		

ಆಯಾ ಕಾಮಗಾರಿಗಳಿಗೆ ಅನ್ವಯಿಸುವ ಟೆಂಡರ್ ದಾಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ತಾಂತ್ರಿಕ ಶಾಖೆ ನಗರಸಭೆ ರಾಬರ್ಟ್‌ಸನ್‌ಪೇಟೆ ರವರನ್ನು ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08153–260256.

ಸಹಿ/–
ಡಾ॥ಎಂ.ಆರ್ ರವಿ
ಆಡಳಿತಾಧಿಕಾರಿಗಳು, ನಗರಸಭೆ, ಕೆಜಿಎಫ್
ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ

ಸಹಿ/–
ಶ್ರೀಧರ್ ವಿ
ಪೌರಾಯುಕ್ತರು
ನಗರಸಭೆ, ಕೆಜಿಎಫ್

ವಾಸಾಸಂಇ/ ಕೋಲಾರ/ ಆರ್.ಓ.ಸಂಖ್ಯೆ:104/ಕೆಎಸ್‌ಎಂಸಿಎ/ 2026–27

ಕಿರುಸುದ್ದಿ

ಯುವ ಕಾಂಗ್ರೆಸ್‌ನಿಂದ ನಿರ್ಘೂಮ್ ಉಚ್ಚಾಟನೆ

ಮಂಗಳೂರು: ಸಮಾಜವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಆರೋಪ ಬಂದಿರುವ ಹಿನ್ನೆಲೆಯಲ್ಲಿ ನಿರ್ಘೂಮ್ ಎಂಬವರನ್ನು ಯುವ ಕಾಂಗ್ರೆಸ್ ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಹಾಗೂ ಯುವ ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವದಿಂದ ತಕ್ಷಣದಿಂದಲೇ ಉಚ್ಚಾಟನೆ ಮಾಡಲಾಗಿದೆ ಎಂದು ಯುವ ಕಾಂಗ್ರೆಸ್ ದ.ಕ. ಜಿಲ್ಲಾಧ್ಯಕ್ಷ ಇಬ್ರಾಹಿಂ ನವಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಣಿಲ-ಮುರುವದಲ್ಲಿ ಮಕ್ಕಳ ಬೇಸಿಗೆ ಶಿಬಿರ ಸಮಾರೋಪ

ಪುತ್ತೂರು: ಬೇಸಿಗೆ ಶಿಬಿರಗಳಿಂದ ಮಕ್ಕಳಲ್ಲಿ ಉಲ್ಲಾಸ, ಸಂತೋಷಗಳು ಉಂಟಾಗುತ್ತವೆ. ಬಹುದೀರ್ಘ ಕಾಲದವರೆಗೆ ಶಿಬಿರದ ನೆನಪುಗಳು ಅಂತರಂಗದಲ್ಲಿ ಹಸಿರಾಗಿ ಉಳಿದುಕೊಳ್ಳುತ್ತವೆ. ಹಾಗಾಗಿ ರಜಾ ಅವಧಿಯಲ್ಲಿ ಶಿಬಿರಗಳಲ್ಲಿ ಭಾಗವಹಿಸುವುದು ಅತ್ಯಂತ ಸ್ವಾಗತಾರ್ಹ ವಿಚಾರ ಎಂದು ಮಾಣಿಲ ಗ್ರಾಮ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿ ಕೃಷ್ಣಕುಮಾರ ಕಮ್ಮಜೆ ಹೇಳಿದರು. ಇತ್ತೀಚೆಗೆ ಮುರುವ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾಣಿಲ ಗ್ರಾಮ ಪಂಚಾಯತ್ ಆಯೋಜಿಸಲಾದ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಂಕಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಶಾಲಾ ಸಂಚಾಲಕ ಮುರುವ ನಡುಮನೆ ಮಹಾಬಲ ಭಟ್ ಶುಭ ಹಾರೈಸಿದರು. ಶಾಲಾ ಮುಖ್ಯೋಪಾಧ್ಯಾಯ ದಯಾನಂದ ನಾಯಕ್ ಶುಭಾಶಂಸನೆಗೈದರು. ಈ ಸಂದರ್ಭ ಪೆರುವಾಯಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಮುದಾಯ ಆರೋಗ್ಯ ಅಧಿಕಾರಿ ಸುಮಲತಾ ಹಾಗೂ ಆಶಾ ಕಾರ್ಯಕರ್ತೆ ರತ್ನಾವತಿ ಶಿಬಿರಾರ್ಥಿಗಳ ಆರೋಗ್ಯ ತಪಾಸಣೆ ನಡೆಸಿಕೊಟ್ಟರು. ಶಿಬಿರದಲ್ಲಿ ಮಕ್ಕಳಿಗೆ ಹಾಡು, ಸಂಗೀತ ಕುರ್ಚಿ, ಪ್ರಬಂಧ ರಚನೆ, ಕೆರೆದಡ, ಮೊದಲಾದ ಸ್ಪರ್ಧೆಗಳನ್ನು ಆಯೋಜಿಸಿ ರಂಜಿಸಲಾಯಿತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಮಜಾಲು, ಪಳಕಳಂಜದ ಶ್ರೀ ವೇಣುಗೋಪಾಲ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ, ಮುರುವ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪಳಕಳಂಜ ಶಾಲೆಯ ಶಿಕ್ಷಕರಾದ ದಯಾಮಣಿ, ಮಾಲತಿ ಹಾಗೂ ಮುರುವ ಶಾಲಾ ಶಿಕ್ಷಕಿ ಸುಲೋಚನಾ ಶಿಬಿರವನ್ನು ನಡೆಸಿಕೊಟ್ಟರು.

ವಲಸೆ ಕಾರ್ಮಿಕರಿಗೆ ಆರೋಗ್ಯದ ಬಗ್ಗೆ ಮಾಹಿತಿ ಕಾರ್ಯಕ್ರಮ

ಕುಂದಾಪುರ: ಪರಿಸರದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು. ಮಳೆಗಾಲದಲ್ಲಿ ಹೆಚ್ಚು ಸಾಂಕ್ರಾಮಿಕ ರೋಗಗಳು ಕಾಣಿಸಿಕೊಳ್ಳುವುದರಿಂದ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಕುಂದಾಪುರದ ಉದ್ಯಮಿ ಕೆ.ಆರ್. ನಾಯ್ಕ್ ಕರೆ ನೀಡಿದರು. ಹಟ್ಟ ಆಂಗಡಿ ಪಂಚಾಯತ್‌ನಲ್ಲಿ ವಲಸೆ ಕಾರ್ಮಿಕರಿಗೆ ಆಯೋಜಿಸಲಾಗಿದ್ದ ಪರಿಸರ ಮತ್ತು ಆರೋಗ್ಯದ ಬಗ್ಗೆ ಮಾಹಿತಿ ಕಾರ್ಯಕ್ರಮದಲ್ಲಿ ವಲಸೆ ಕಾರ್ಮಿಕರ ಮಕ್ಕಳಿಗೆ ಕೊಡೆಗಳನ್ನು ವಿತರಿಸಿ ಅವರು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ರೇಣುಕಾ ಹೆಗಡೆ ಮಾತನಾಡಿ, ಗ್ರಾಮ ಪಂಚಾಯತ್ ವ್ಯಾಪ್ತಿಯೊಳಗೆ ಸ್ವಚ್ಛತೆಯನ್ನು ಕಾಪಾಡುವಂತಹದ್ದು ಪ್ರತಿಯೊಬ್ಬ ನಾಗರಿಕರ ಕರ್ತವ್ಯ. ನೀವು ವಾಸ ಮಾಡುವ ಪರಿಸರದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದು ಹೇಳಿದರು. ಪಂಚಾಯತ್ ಕಾರ್ಯದರ್ಶಿ ಕೃಷ್ಣ ಮಜ ಗ್ರಾ.ಪಂ. ಅಧ್ಯಕ್ಷ ರಾಜೀವ ಶೆಟ್ಟಿ, ನಮ್ಮ ಭೂಮಿ ಸಂಸ್ಥೆಯ ನರಸಿಂಹ ಗಾಣಿಗ ಮೊದಲಾದವರು ಉಪಸ್ಥಿತರಿದ್ದರು. ಗ್ರಾಮ ಪಂಚಾಯತ್ ಸಿಬ್ಬಂದಿ ರೇಷ್ಮಾ ಸ್ವಾಗತಿಸಿದರು. ಪಂಚಾಯತ್ ಸಿಬ್ಬಂದಿಗಳಾದ ಯೋಗೇಶ್ ವಂದಿಸಿ, ಜ್ಯೋತಿ ಗಂಗಾಧರ್ ಮೊಗವೀರ ಕಾರ್ಯಕ್ರಮ ನಿರೂಪಿಸಿದರು.

ಸ್ಕೂಟರ್‌ಗೆ ಪಿಕಪ್ ಡಿಕ್ಕಿ: ಸವಾರರಿಬ್ಬರ ಸಾವು

ಬೆಳ್ತಂಗಡಿ: ಬಳ್ಳಮಂಜ- ಪಣಕಜೆ ರಸ್ತೆಯ ಪಾಲ್ಗಾರ ಎಂಬಲ್ಲಿ ಪಿಕಪ್ ವಾಹನ ಹಾಗೂ ಆಕ್ಟಿವಾ ಸ್ಕೂಟರ್ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಆಕ್ಟಿವಾದಲ್ಲಿ ಪ್ರಯಾಣಿಸುತ್ತಿದ್ದ ಇಬ್ಬರು ಮೃತಪಟ್ಟ ಘಟನೆ ಸೋಮವಾರ ಸಂಜೆಯ ವೇಳೆ ಸಂಭವಿಸಿದೆ. ಅಪಘಾತದಲ್ಲಿ ಆಕ್ಟಿವಾ ಸವಾರ ಡಾಕಯ್ಯ ಗೌಡ (60) ಹಾಗೂ ಹಿಂಬದಿ ಸವಾರ ಚಂದಪ್ಪ ಮೂಲ್ಯ (65) ಅವರು ಗಂಭೀರ ವಾಗಿ ಗಾಯಗೊಂಡು ಮೃತಪಟ್ಟ ವ್ಯಕ್ತಿಗಳಾಗಿದ್ದಾರೆ. ಮಡಂತ್ಯಾರಿನ 'ಎನ್. ಎಂ ಶಮಿಯಾನ' ಸಂಸ್ಥೆಗೆ ಸೇರಿದ ಪಿಕಪ್ ವಾಹನವು ಬಳ್ಳಮಂಜ ಕಡೆಯಿಂದ ಪಣಕಜೆ ಕಡೆಗೆ ತೆರಳುತ್ತಿತ್ತು. ಈ ವೇಳೆ ಪಣಕಜೆಯಿಂದ ಬಳ್ಳಮಂಜ ಕಡೆಗೆ ಬರುತ್ತಿದ್ದ ಆಕ್ಟಿವಾ ಸ್ಕೂಟರ್‌ಗೆ ಪಾಲ್ಗಾರ ಬಳಿ ಪಿಕಪ್ ವಾಹನವು ನೇರ ಡಿಕ್ಕಿ ಹೊಡೆದಿದೆ. ಡಿಕ್ಕಿಯ ತೀವ್ರತೆಗೆ ಆಕ್ಟಿವಾ ಸಹ ಸವಾರ ಸ್ಥಳದಲ್ಲಿಯೇ ಮೃತಪಟ್ಟಿದ್ದು ಸವಾರ ಡಾಕಯ್ಯ ಗೌಡ ಅವರಿಗೂ ತಲೆಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಅವರನ್ನು ತಕ್ಷಣವೇ ಹತ್ತಿರದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು ಆದರೆ ಚಿಕಿತ್ಸೆ ಫಲಕಾರಿ ಆಗದೆ ಇವರು ಮೃತ ಪಟ್ಟಿದ್ದಾರೆ.

ಆಗುಂಬೆ ಘಾಟಿ ವೀಕ್ಷಣೆ ಮಾಡಿದ ಸಂಸದ ಕೋಟ ಶ್ರೀನಿವಾಸ ಪೂಜಾರಿ | ದುರಸ್ತಿ ಕಾಮಗಾರಿಗೆ ಸೂಚನೆ

15 ಕೋಟಿ ರೂಪಾಯಿ ವೆಚ್ಚದಲ್ಲಿ ತಡೆಬೇಲಿ



ಉಡುಪಿ: ಆಗುಂಬೆ ಘಾಟಿಯಲ್ಲಿ ಉಂಟಾಗುತ್ತಿರುವ ವಿಪರೀತ ವಾಹನ ದಟ್ಟಣೆ, ಸಂಚಾರದಟ್ಟಣೆ ಹಾಗೂ ಕೆಲ ಪ್ರಮುಖ ತಿರುವುಗಳ ದಂಡೆ (ಬರೆ) ಕುಸಿಯುತ್ತಿರುವ ಬಗ್ಗೆ ಸಾರ್ವಜನಿಕರಿಂದ ವ್ಯಾಪಕ ದೂರುಗಳು ಬಂದ ಹಿನ್ನೆಲೆಯಲ್ಲಿ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು ಅರಣ್ಯ ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿದರು.

ಸಮನಾಂತರವಾಗಿರುವ ಹುಲಿಕಲ್ ಘಾಟಿಯಲ್ಲಿ ಸದ್ಯ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಿರುವ ಕಾರಣ, ಇಡೀ ಕರಾವಳಿ ಮತ್ತು ಮಲೆನಾಡಿನ ವಾಹನಗಳ ಒತ್ತಡ ಆಗುಂಬೆ ಘಾಟಿಯ ಮೇಲೆ ಬಿದ್ದಿದೆ. ಪರಿಣಾಮವಾಗಿ ಇಲ್ಲಿ ವಾಹನ ದಟ್ಟಣೆ ವಿಪರೀತವಾಗಿ ಹೆಚ್ಚಾಗಿದೆ. ಘಾಟಿಯಲ್ಲಿ ಸಂಚಾರದ ಕಟ್ಟುನಿಟ್ಟಿನ ನಿಯಮಗಳಿದ್ದರೂ ಸಹ, ಕೆಲವರು ಜಲ್ಲಿಕಲ್ಲು ಸಾಗಣೆ ಹಾಗೂ ಭಾರೀ ಸರಕು ಸಾಗಣೆ ವಾಹನಗಳನ್ನು ರಾಜಾರೋಷವಾಗಿ ಚಲಾಯಿಸುತ್ತಿದ್ದಾರೆ. ಇದು ಮಳೆಗಾಲದಲ್ಲಿ ಭೀಕರ ಭೂಕುಸಿತದ ಅಪಾಯವನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ಸ್ಥಳದಲ್ಲಿದ್ದ ಅಧಿಕಾರಿಗಳು ಸಂಸದರಿಗೆ ಮಾಹಿತಿ ನೀಡಿದರು.

15 ಕೋಟಿ ರೂಪಾಯಿ ಮಂಜೂರಾತಿ ಮತ್ತು ತಡೆಬೇಲಿ

ಸ್ಥಳ ಪರಿಶೀಲನೆಯ ಬಳಿಕ ಮಾತನಾಡಿದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು,

119 ಕೋಟಿ ರೂ. ಅನುದಾನ ಮಂಜೂರು: ಕೋಟ

ಉಡುಪಿ: ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಒಟ್ಟು 18 ಲೋಕೋಪಯೋಗಿ ಇಲಾಖೆಯ ರಸ್ತೆಗಳಿಗೆ ಒಟ್ಟು 119 ಕೋಟಿ ರೂ. ಅನುದಾನ ರಸ್ತೆಯ ದುರಸ್ತಿ ಮತ್ತು ಅಭಿವೃದ್ಧಿಗಾಗಿ ಮಂಜೂರಾಗಿದೆ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ಕುಂದಾಪುರ-ಬೈಂದೂರು-ವಿರಾಜಪೇಟೆ ರಸ್ತೆಗೆ 6 ಕೋಟಿ ರೂ., ಉಡುಪಿ- ಹಿರಿಯಡ್ಕ- ಕಾರ್ಕಳ -ಸುಬ್ರಹ್ಮಣ್ಯ ರಸ್ತೆಗೆ 6 ಕೋಟಿ, ಬ್ರಹ್ಮಾವರ-ಜನ್ನಾಡಿ ರಸ್ತೆ ಅಭಿವೃದ್ಧಿಗೆ 5 ಕೋಟಿ, ಬಾರಕೂರು ರಸ್ತೆ ಅಭಿವೃದ್ಧಿಗೆ 10 ಕೋಟಿ, ಶಿರೂರು- ಕೊಳ್ಳೂರು-ಸಂತೆಕಟ್ಟೆ ರಸ್ತೆಗೆ 3 ಕೋಟಿ, ಬ್ರಹ್ಮಾವರ ತಾಲೂಕಿನ ಹಳೆ ಎಂ.ಡಿ.ಸಿ ರಸ್ತೆಗೆ 1.60 ಕೋಟಿ ರೂ. ಮಂಜೂರಾಗಿದೆ. ಮೂಡಿಗೆರೆ ತಾಲೂಕಿನ ರಾಜ್ಯ ಹೆದ್ದಾರಿ 106ರ ಬಾಳೂರು ಹ್ಯಾಂಡ್ ಪೋಸ್ಟ್‌ನಿಂದ ಕಳಸ ರಸ್ತೆಗೆ 6 ಕೋಟಿ ಹಾಗೂ ತರೀಕೆರೆ ತಾಲೂಕಿನಲ್ಲಿ ರಾಜ್ಯ ಹೆದ್ದಾರಿ 57 ಬಾಗಲೋಟೆ- ಬಳಿಗಿರಿಗಳ ಬೆಟ್ಟ ರಸ್ತೆಯ ಅಭಿವೃದ್ಧಿಗೆ6 ಕೋಟಿ ರೂ. ಮಂಜೂರಾಗಿದೆ ಎಂದು ಸಂಸದರ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಈ ಎಲ್ಲಾ ಕಾಮಗಾರಿ ಮಂಜೂರಾಗಲು ಕಾರಣರಾದ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಕ್ಷೇತ್ರದ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸುರಂಗ ಮಾರ್ಗ ಮತ್ತು ರಸ್ತೆ ದ್ವಿಪಥೀಕರಣಕ್ಕೆ ಚಾಲನೆ

ಆಗುಂಬೆ ಘಾಟಿಯ ಈ ದೀರ್ಘಕಾಲದ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸುರಂಗ ಮಾರ್ಗ ನಿರ್ಮಾಣ ಹಾಗೂ ರಸ್ತೆ ದ್ವಿಪಥೀಕರಣಕ್ಕೆ (ಎರಡು ಪಥಗಳ ರಸ್ತೆ) ಸಂಬಂಧಿಸಿದಂತೆ 'ವಿವರವಾದ ಯೋಜನಾ ವರದಿ' ಸಿದ್ಧಪಡಿಸಲು ಈಗಾಗಲೇ ಟೆಂಡರ್ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ. ಈ ಯೋಜನೆಯ ಸಾಧ್ಯತಾ ವರದಿಯನ್ನು ಆಧರಿಸಿ ಮುಂದಿನ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ರಸ್ತೆ ದ್ವಿಪಥೀಕರಣಕ್ಕೆ ಅಗತ್ಯವಾಗಿ ಬೇಕಾಗಿರುವ ಅರಣ್ಯ ಇಲಾಖೆಯ ಭೂಮಿ ಮತ್ತು ಅನುಮತಿ ಪ್ರಕ್ರಿಯೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಸಂಸದರು ವಿವರಿಸಿದರು.

ಪ್ರಯಾಣಿಕರ ಹಾಗೂ ವಾಹನ ಸವಾರರ ಸುರಕ್ಷತೆಯ ದೃಷ್ಟಿಯಿಂದ ಘಾಟಿಯ ಅಪಾಯಕಾರಿ ತಿರುವುಗಳ ದಂಡೆಗಳಲ್ಲಿ ಸುಮಾರು ಒಂದು ಸಾವಿರ ಮೀಟರ್ ಉದ್ದಕ್ಕೆ ಭದ್ರವಾದ

ಭಾರೀ ವಾಹನ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮಕ್ಕೆ ಸೂಚನೆ

ಮಳೆಗಾಲದ ಅವಧಿಯಲ್ಲಿ ಭಾರೀ ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ನಿಯಂತ್ರಿಸದಿದ್ದರೆ ಘಾಟಿ ಕುಸಿಯುವ ಅಪಾಯ ತೀರಾ ಹೆಚ್ಚಿರುತ್ತದೆ. ಆದ್ದರಿಂದ ಈ ಕುರಿತು ಜಿಲ್ಲಾಡಳಿತಕ್ಕೆ ಅಗತ್ಯ ಸಲಹೆ ಹಾಗೂ ಮಾರ್ಗಸೂಚಿಗಳನ್ನು ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ ಸಂಸದರು, ಸಾರ್ವಜನಿಕರ ಜೀವ ರಕ್ಷಣೆಗೆ ಮೊದಲ ಆದ್ಯತೆ ನೀಡಬೇಕು ಎಂದು ಕೋಟ ಶ್ರೀನಿವಾಸ ಪೂಜಾರಿ ಎಚ್ಚರಿಸಿದರು.

ತಡೆಬೇಲಿಯನ್ನು ನಿರ್ಮಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ. ಜೊತೆಗೆ ಘಾಟಿ ರಸ್ತೆಯ ಕುಸಿತಗೊಂಡಿರುವ ಭಾಗಗಳ ಶಾಶ್ವತ ದುರಸ್ತಿ ಹಾಗೂ ಸರ್ವಾಂಗೀಣ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ 'ಕೇಂದ್ರ ರಸ್ತೆ ಮತ್ತು ಮೂಲ ಸೌಕರ್ಯ ನಿಧಿ' ಯೋಜನೆಯಡಿಯಲ್ಲಿ ಒಟ್ಟು 15 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿಸಲಾಗಿದೆ. ಪ್ರಸ್ತುತ ಮಳೆಗಾಲ ಆರಂಭವಾಗಿರುವುದರಿಂದ, ಈ ಮಳೆಗಾಲ ಮುಗಿದ ತಕ್ಷಣವೇ ಕಾಮಗಾರಿಗಳನ್ನು ಆರಂಭಿಸಲಾಗುವುದು ಎಂದು ತಿಳಿಸಿದರು.

ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರವನ್ನೂ ಕಲಿಸಿ: ಉಮಾನಾಥ್ ಕೋಟ್ಯಾನ್

ಅಮ್ಮನ ನೆನಪಿಗಾಗಿ ಬಡಕುಟುಂಬಕ್ಕೆ ಮನೆ



ಮಂಗಳೂರು: ಮೂಡುಶೆಡ್ಡೆ ಹೊಸಲಕ್ಕೆ ದಿ.ದೇವಕಿ ಸಂಜೀವ ಶೆಟ್ಟಿ ಅವರ ನಾಲ್ಕನೇ ವರ್ಷದ ಪುಣ್ಯ ಸ್ಮರಣೆಯ ಅಂಗವಾಗಿ ಅವರ ಪುತ್ರರು ಕೊರಗ ಸಮುದಾಯಕ್ಕೆ ಸೇರಿದ ಗಿರಿಜ ಎಂಬವರಿಗೆ ನೂತನವಾಗಿ ನಿರ್ಮಿಸಿದ ಮನೆಯ ಹಸ್ತಾಂತರ ಕಾರ್ಯಕ್ರಮ ಮಂಗಳವಾರ ನಡೆಯಿತು.

ಅತಿಥಿಗಳು ಮನೆಯ ಕೀಲಿ ಕೈ ಹಸ್ತಾಂತರಿಸಿದರು. ಶಾಸಕ ಉಮಾನಾಥ್ ಕೋಟ್ಯಾನ್ ಮಾತನಾಡಿ, ಮನೆಯಲ್ಲಿ ಹಿರಿಯರು ಕಲಿಸಿದ ಸಂಸ್ಕಾರದಿಂದ ಹೊಸಲಕ್ಕೆ ಉಮೇಶ್ ಶೆಟ್ಟಿ ಸೋದರರು ಇಂತಹ ಸಾರ್ಥಕ ಸೇವೆಯನ್ನು ಸಲ್ಲಿಸಲು ಸಾಧ್ಯವಾಗಿದೆ. ಇಂದಿನ ಮುಂದುವರಿದ ಯುಗದಲ್ಲೂ ನಮ್ಮ ಮನೆಯ ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ, ಸಮಾಜದ ನೊಂದವರಿಗೆ ನೆರವಾಗುವ ಗುಣವನ್ನು ಬೆಳೆಸಿಕೊಳ್ಳಲು ಪ್ರೇರೇಪಿಸಬೇಕು ಎಂದರು.

ಮಾಜಿ ಸಂಸದ ನಳಿನ್ ಕುಮಾರ್ ಕಟೀಲು ಮಾತನಾಡಿ, ಹೆತ್ತವರನ್ನು ವಯಸ್ಸಾಯ್ತು ಎಂದು ವೃದ್ಧಾಶ್ರಮ ಸೇರಿಸುವ ಈ ಕಾಲದಲ್ಲಿ ಹೆತ್ತವರ ಮಾತನ್ನು ಉಳಿಸಬೇಕು, ಅವರ ಆದರ್ಶ ಸಮಾಜಕ್ಕೆ ಮಾದರಿಯಾಗಬೇಕು ಎಂಬ ನಿಟ್ಟಿನಲ್ಲಿ ಬಡ ಕುಟುಂಬಕ್ಕೆ ಮನೆ ನಿರ್ಮಿಸಿಕೊಡುವ ಕಾರ್ಯಕ್ಕೆ ಮುಂದಾಗಿರುವುದು ಶ್ಲಾಘನೀಯ ಎಂದು ಶುಭ ಹಾರೈಸಿದರು.

ಬಂಟರ ಯಾನೆ ನಾಡವರ ಮಾತೃಸಂಘದ ಅಧ್ಯಕ್ಷ ಅಜಿತ್ ಕುಮಾರ್ ರೈ ಮಾಲಾಡಿ ಮಾತನಾಡಿ, ಸಮಾಜದ ಎಲ್ಲರೂ ಜಾತಿ ಮತ ಬೇಧ ಮರೆತು ಒಗ್ಗೂಡಿದಾಗ ಮನೆ ಇಲ್ಲದವರಿಗೆ ಮನೆ ಕಟ್ಟಿಕೊಡಲು ಸಾಧ್ಯ ಎಂದರು.

ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಬೊಟ್ಯಾಡಿ, ಉದ್ಯಮಿ ಇಬ್ರಾಹಿಂ ಗಡಿಯಾರ್, ಮಾಜಿ ಮೇಯರ್ ಭಾಸ್ಕರ್ ಮೊಯ್ಲಿ, ಮಂಜುನಾಥ್ ಭಂಡಾರಿ ಶೆಡ್ಡೆ, ಉದ್ಯಮಿ ಮಹೇಶ್ವರಪ್ಪ, ಮೂಡುಶೆಡ್ಡೆ ಪಂಚಾಯತ್ ಪಿಡಿಒ ಜಯಪ್ರಕಾಶ್, ಗಡಿ ಪ್ರಧಾನರಾದ ಜಕ್ಕಿ ಪೂಜಾರಿ ಜಾರ, ಶಿವರಾಮ್ ಮಲ್ಲಿ, ವಿಷ್ಣುಮೂರ್ತಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಶಿವರಾಮ, ಕೊರಗ ಸಂಘದ ಜಿಲ್ಲಾಧ್ಯಕ್ಷ ಸುಂದರ ಬೆಳುವಾಯಿ, ವಿಶ್ವನಾಥ ಶೆಟ್ಟಿ ಹೊಸಲಕ್ಕೆ, ಕರುಣಾಕರ ಶೆಟ್ಟಿ ಹೊಸಲಕ್ಕೆ, ಕುಸುಮ ದಾಸಣ್ಣ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಉಮೇಶ್ ಶೆಟ್ಟಿ ಹೊಸಲಕ್ಕೆ ಸ್ವಾಗತಿಸಿದರು. ಪುರುಷೋತ್ತಮ ಭಂಡಾರಿ ಅಡ್ಯಾರ್ ಕಾರ್ಯಕ್ರಮ ನಿರೂಪಿಸಿದರು.

> **ಮೂಡುಶೆಡ್ಡೆ ನೇಜಿಗುರಿಯ ಕೊರಗ ಸಮುದಾಯಕ್ಕೆ ಸೇರಿದ ಬಡಕುಟುಂಬಕ್ಕೆ ಮನೆ ಇಲ್ಲದ ಹಿನ್ನೆಲೆಯಲ್ಲಿ ವಕೀಲ ಉಮೇಶ್ ಶೆಟ್ಟಿ ಮತ್ತು ಸೋದರರು ಸುಸಜ್ಜಿತ ಮನೆ ಕಟ್ಟಿಕೊಟ್ಟಿದ್ದಾರೆ. ಇದು ದೇವರು ಮೆಚ್ಚುವ ಕೆಲಸ. ನಾವು ಸಮಾಜದಲ್ಲಿ ನೊಂದವರಿಗೆ ಅಶಕ್ತರಿಗೆ ನೆರವಾದರೆ ನಮಗೆ ದೇವರ ಆಶೀರ್ವಾದ ಖಂಡಿತಾ ಇರುತ್ತದೆ. ಅವರ ಕುಟುಂಬಕ್ಕೆ ಇನ್ನಷ್ಟು ಬಡಜನರಿಗೆ ನೆರವಾಗುವ ಶಕ್ತಿ ಸಿಗಲಿ.**
> ■ ರಮೇಶ್ ಎದುರುಪದವು, ಕೊರಗ ಸಂಘದ ಮಾಜಿ ಜಿಲ್ಲಾಧ್ಯಕ್ಷ

> **ಮೂಡುಶೆಡ್ಡೆ ಪಿಡಿಒ ಅವರ ತೋರಿಸಿದಂತೆ ಕೊರಗ ಸಮುದಾಯದ ಗಿರಿಜ ಅವರ ಕುಟುಂಬಕ್ಕೆ 10 ಲಕ್ಷ ರೂ. ವೆಚ್ಚದಲ್ಲಿ ಸುಸಜ್ಜಿತ ಹಂಚಿನ ಮನೆ ನಿರ್ಮಿಸಿ ಕೊಟ್ಟಿದ್ದೇವೆ. ಮನೆಯಲ್ಲಿ ತಾಯಿ ಮತ್ತು ಶಾಲೆಗೆ ಹೋಗುವ ಇಬ್ಬರು ಸಣ್ಣ ಮಕ್ಕಳಿದ್ದು ಎಲ್ಲರಂತೆ ಅವರು ಬೆಳೆಯಬೇಕು ಎಂಬ ನಿಟ್ಟಿನಲ್ಲಿ ಮನೆಗೆ ಟೈಲ್ಸ್ ಅಳವಡಿಸಿ ಟಿವಿ ಸಹಿತ ಎಲ್ಲವನ್ನೂ ಒದಗಿಸಿದ್ದೇವೆ. ಎಲ್ಲರೂ ನಮ್ಮಂತೆ ಸಮಾಜಕ್ಕೆ ನೆರವಾಗುವ ಪ್ರಾಮಾಣಿಕ ಉದ್ದೇಶ ಹೊಂದಿದ್ದರೆ ಸಮಾಜ ಅಭಿವೃದ್ಧಿಯಾಗುತ್ತದೆ.**
> ■ ಹೊಸಲಕ್ಕೆ ಉಮೇಶ್ ಶೆಟ್ಟಿ, ವಕೀಲ

ಜೂ.13: ತುಳುವಿನಲ್ಲಿ ಕನಕದಾಸರ ಕಾವ್ಯ, ಕೀರ್ತನೆ ಕುರಿತು ಸಂವಾದ

ಮಂಗಳೂರು: ತುಳು ಭಾಷೆಗೆ ಅನುವಾದಿಸಲಾದ ಸಂತ ಶ್ರೇಷ್ಠ ಕನಕದಾಸರ ಕಾವ್ಯ -ಕೀರ್ತನೆಯ ಕುರಿತು ಸಂವಾದ ಹಾಗೂ ಕಾವ್ಯ ವಾಚನ ಕಾರ್ಯಕ್ರಮವನ್ನು ಜೂ.13ರಂದು ಮಧ್ಯಾಹ್ನ 3ಗಂಟೆಗೆ ಮಂಗಳೂರು ಉರ್ವಸ್ಟೋರ್‌ನಲ್ಲಿರುವ ತುಳು ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.



ಕರ್ನಾಟಕ ಸರಕಾರದ ಸಂತ ಕನಕದಾಸ ಮತ್ತು ತತ್ವಪದ ಕಾರರ ಅಧ್ಯಯನ ಕೇಂದ್ರ ಕನಕದಾಸರ ಸಮಗ್ರ ಸಾಹಿತ್ಯವನ್ನು ತುಳು ಸೇರಿದಂತೆ ಒಟ್ಟು ಹದಿನಾಲ್ಕು ಭಾಷೆಗೆ ಅನುವಾದಿಸಿ ಇತ್ತೀಚೆಗೆ ಬಿಡುಗಡೆ ಮಾಡಿತ್ತು. ತುಳು ಅನುವಾದ ಸಂಪುಟದ ಸಂಪಾದಕರಾಗಿ ಕಾರ್ಯನಿರ್ವಹಿಸಿದ ವಿದ್ವಾಂಸ ಪ್ರೊ.ಎ.ವಿ. ನಾವಡ ವಿಚಾರ ಸಂಕಿರಣವನ್ನು ಉದ್ಘಾಟನೆ ಮಾಡಲಿದ್ದಾರೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಅಧ್ಯಕ್ಷತೆ ವಹಿಸಲಿದ್ದು, ಕನ್ನಡ ತುಳು ವಿದ್ವಾಂಸ ಪ್ರೊ.ಬಿ.ಶಿವರಾಮ ಶೆಟ್ಟಿ ಕೃತಿ ಅವಲೋಕನ ಮಾಡಲಿದ್ದಾರೆ. ನಿವೃತ್ತ ಪ್ರಾಂಶುಪಾಲ ಪ್ರೊ.ಕೃಷ್ಣಮೂರ್ತಿ, ಕೆನರಾ ಪಿ.ಯು. ಕಾಲೇಜಿನ ಉಪನ್ಯಾಸಕ ರಘು ಇಡ್ಕಿದು, ಆಳ್ವಾಸ್ ಕಾಲೇಜಿನ ಕನ್ನಡ ಉಪನ್ಯಾಸಕಿ ಡಾ.ಸುಧಾರಾಣಿ ಪ್ರತಿಕ್ರಿಯೆ ನೀಡಲಿದ್ದಾರೆ.

ಕೃತಿಯ ಅನುವಾದಕರಾದ ಅತ್ರಾಡಿ ಅಮೃತಾ ಶೆಟ್ಟಿ, ಮುದ್ದು ಮೂಡುಬೆಳ್ಳೆ, ಭಾಸ್ಕರ ರೈ ಕುಕ್ಕುವಳ್ಳಿ, ಡಾ.ಕಾತ್ಯಾಯಿನಿ ಕುಂಜಿ ಬೆಟ್ಟು, ಪ್ರೊ.ಟಿ.ಎ.ಎನ್.ಖಂಡಿಗೆ, ಡಾ.ವಸಂತಕುಮಾರ್ ಪೆರ್ಲ ಅತಿಥಿಗಳಾಗಿ ಭಾಗವಹಿಸುವರು. ಸಂವಾದ ಕಾರ್ಯಕ್ರಮದ ಆರಂಭದಲ್ಲಿ ಗಾಯಕ ನಾದಾ ಮಣಿನಾಲ್ಕೂರು ಅವರಿಂದ ತುಳುವಿಗೆ ಅನುವಾದಗೊಂಡ ಕನಕದಾಸರ ಕಾವ್ಯಗಳ ಗಾಯನ ಕಾರ್ಯಕ್ರಮ ನಡೆಯಲಿದೆ ಎಂದು ತುಳು ಅಕಾಡೆಮಿ ಪ್ರಕಟಣೆ ತಿಳಿಸಿದೆ.

ವಾಹನಗಳ ಡಿಕ್ಕಿ: ಇಬ್ಬರಿಗೆ ಗಾಯ

ಕುಂದಾಪುರ : ಸ್ಕೂಟರ್‌ಗೆ ಬೈಕ್ ಡಿಕ್ಕಿ ಹೊಡೆದು ಸವಾರರಿಬ್ಬರು ಗಾಯಗೊಂಡ ಘಟನೆ ಬೀಜಾಡಿ ಎಂಬಲ್ಲಿ ನಡೆದಿದೆ. ಕೋಟೇಶ್ವರ ಗ್ರಾಮದ ಶೋಭಾ ಎಂಬವರು ಬೀಜಾಡಿ ಕಡೆಗೆ ಸ್ಕೂಟರ್‌ನಲ್ಲಿ ಹೋಗುತ್ತಿದ್ದ ಸಂದರ್ಭ ದೊಡ್ಡೋಣಿ ರಸ್ತೆಗೆ ಹೋಗಲು ಸ್ಕೂಟರ್‌ನ್ನು ತಿರುಗಿಸಿದಾಗ ರಥಬೀದಿ ಕಡೆಗೆ ಹೋಗುತ್ತಿದ್ದ ಬೈಕ್ ಸ್ಕೂಟರ್‌ಗೆ ಎದುರಿನಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ಗಂಭೀರವಾಗಿ ಗಾಯಗೊಂಡ ಶೋಭಾ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ ಕೆಎಂಸಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಬೈಕ್ ಸುದೀಪ್ ಪೂಜಾರಿ ಅವರನ್ನು ಚಿಕಿತ್ಸೆಗಾಗಿ ಕೋಟೇಶ್ವರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮನೆಗೆ ನುಗ್ಗಿ ನಗ - ನಗದು ಕಳವು ಪ್ರಕರಣ : ಅಂತಾರಾಜ್ಯ ಕಳವು ಆರೋಪಿಗಳಿಬ್ಬರ ಬಂಧನ

ಬಂಟ್ವಾಳ: ಪುಂಜಾಲಕಟ್ಟೆ ಪೊಲೀಸ್ ಠಾಣಾ ವ್ಯಾಪ್ತಿಯ ಮಚ್ಚಿನ ಎಂಬಲ್ಲಿ ಏ.5 ರಂದು ಮನೆಗೆ ನುಗ್ಗಿ ಚಿನ್ನಾಭರಣ ಹಾಗೂ ನಗದು ಕಳವುಗೈದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಅಂತರಾಜ್ಯ ಕಳ್ಳರನ್ನು ಪುಂಜಾಲಕಟ್ಟೆ ಪೊಲೀಸರು ಬಂಧಿಸಿದ್ದಾರೆ.

ಕೇರಳ ನಿವಾಸಿ ಹಮೀದ್ ಯಾನೆ ಅಬ್ದುಲ್ ಹಮೀದ್ ಕೆ ಯಾನೆ ಅಮ್ಮಿ (36) ಮತ್ತು ಮೊಗ್ರಾಲ್ ಪುತ್ತೂರು ಕಾಸರಗೋಡು ನಿವಾಸಿ ಅಬ್ದುಲ್ ಜಾಬೀರ್ ಯಾನೆ ಜಾಬಿ (38) ಬಂಧಿತ ಆರೋಪಿಗಳಾಗಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿ ಪುಂಜಾಲಕಟ್ಟೆ ಪೊಲೀಸರು ಸುಮಾರು 68.690 ಗ್ರಾಂ. ಚಿನ್ನಾಭರಣ ಹಾಗೂ 2 ಲಕ್ಷ ರೂ ನಗದು ಹಾಗೂ ಉಪ್ಪಿನಂಗಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಕಳವು ಪ್ರಕರಣಕ್ಕೆ ಸಂಬಂಧಿಸಿ 21.810 ಗ್ರಾಂ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಉಪಯೋಗಿಸಿದ ಮಾರುತಿ ಸ್ವಿಫ್ಟ್ ಕಾರನ್ನು ಆರೋಪಿಗಳಿಂದ ವಶಪಡಿಸಿದ್ದಾರೆ. ಸ್ವಾಧೀನಪಡಿಸಿಕೊಂಡ ಸೊತ್ತಿನ ಒಟ್ಟು ಮೌಲ್ಯ 20,67 ಲಕ್ಷ ರೂ ಎಂದು ಅಂದಾಜಿಸಲಾಗಿದೆ.





ಬೆಳ್ತಂಗಡಿ ತಾಲೂಕಿನ ಮಚ್ಚಿನ ಗ್ರಾಮದ ನಿವಾಸಿ ಡಿ. ಮುರಳಿ ಅವರ ಮನೆಯಲ್ಲಿ ಏ.5ರಂದು ಮನೆಗೆ ನುಗ್ಗಿದ ಕಳ್ಳರು ಮನೆಯ ಮುಂಬಾಗಿಲ ಬೀಗವನ್ನು ಮುರಿದು ಒಳಪ್ರವೇಶಿಸಿ ಕಪಾಟಿನ ಲಾಕ್ ಮುರಿದು ಚಿನ್ನಾಭರಣ ಮತ್ತು ಹಣವನ್ನು ಕಳವುಗೈದು ಪರಾರಿಯಾಗಿದ್ದರು. ಈ ಬಗ್ಗೆ ಪುಂಜಾಲಕಟ್ಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಪ್ರಕರಣದ ಪತ್ತೆಗೆ ಪೊಲೀಸರ ತಂಡ ರಚಿಸಲಾಗಿದ್ದು, ಮೇ.15ರಂದು ಆರೋಪಿ ಹಮೀದ್ ಎಂಬಾತವನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಈತ ನೀಡಿದ ಮಾಹಿತಿಯಂತೆ ಪ್ರಕರಣದಲ್ಲಿ ಭಾಗಿಯಾದ ಇನ್ನೋರ್ವ ಆರೋಪಿ ಅಬ್ದುಲ್ ಜಾಬೀರ್ ಎಂಬಾತನನ್ನು ಬಂಧಿಸಲಾಗಿತ್ತು,

ಬಳಿಕ ಆರೋಪಿಗಳಿಂದ ಒಟ್ಟು ಮೌಲ್ಯ 20,67,000 ಮೌಲ್ಯದ ಸೊತ್ತುಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ.

ಬಂಧಿತ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ನ್ಯಾಯಾಂಗ ಬಂಧನ ವಿಧಿಸಿದೆ. ಆರೋಪಿಗಳು ಕೇರಳ ರಾಜ್ಯದಲ್ಲಿ ಹಾಗೂ ದ.ಕ ಜಿಲ್ಲೆಯ ಉಪ್ಪಿನಂಗಡಿ, ಬೆಳ್ತಂಗಡಿ ಹಾಗೂ ಬಂಟ್ವಾಳ ನಗರ ಠಾಣಾ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿರುವ ಬಗ್ಗೆ ಮಾಹಿತಿ ನೀಡಿದ್ದು, ತನಿಖೆ ಮುಂದುವರಿಯುತ್ತದೆ.

ದ.ಕ ಜಿಲ್ಲಾ ಪೊಲೀಸ್ ಅಧೀಕ್ಷಕ ಅರುಣ್ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಅನಿಲ್ ಕುಮಾರ್ ಎಸ್ ಭೂಮಾರೆಡ್ಡಿರವರ ಮಾರ್ಗದರ್ಶನದಂತೆ ಬೆಳ್ತಂಗಡಿ ಪೊಲೀಸ್ ಉಪಾಧೀಕ್ಷಕರಾದ ರೋಹಿಣಿ ಸಿ.ಕೆ. ಅವರ ನೇತೃತ್ವದಲ್ಲಿ ಬೆಳ್ತಂಗಡಿ ಗ್ರಾಮಾಂತರ ಸಿ.ಪಿ.ಐ ರವಿ ಬಿ.ಎಸ್, ಉಪ್ಪಿನಂಗಡಿ ಗ್ರಾಮಾಂತರ ಸಿ.ಪಿ.ಐ. ನಾಗರಾಜ್ ಹೆಚ್.ಇ, ಪುಂಜಾಲಕಟ್ಟೆ ಠಾಣಾ ಪಿ.ಎಸ್.ಐ ರಾಜೇಶ್ ಕೆ.ಪಿ, ಸಿಬ್ಬಂದಿಗಳಾದ ಎಎಸ್ಐ ಬೆನ್ನಿಚ್ಚನ್, ಎಎಸ್ಐ ಸುಂದರ ಶೆಟ್ಟಿ, ಎಎಸ್ಐ ವಿಶ್ವನಾಥ್ ನಾಯ್ಕ್, ಪ್ರವೀಣ್ ಮೂರುಗೋಳಿ, ರಾಜೇಶ್ ಎನ್, ವಿಜಯ್ ಕುಮಾರ್ ರೈ, ರಾಹುಲ್ ರಾವ್, ಸಂತೋಷ್, ಬಸವರಾಜ್, ರಜಿತ್, ನಾಗರಾಜ್ ಈ ಕಳವು ಪ್ರಕರಣವನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಜಿಲ್ಲಾ ತಾಂತ್ರಿಕ ವಿಭಾಗದ ದಿವಾಕರ್ ಮತ್ತು ಸಂಪತ್ ಅವರು ಈ ಕಾರ್ಯಾಚರಣೆಗೆ ಸಹಕರಿಸಿದ್ದರು.

ಬಿಲ್ಲವ, ಬಂಟ ಜಾತಿ ನಿಂದನೆ | ಅನಿತಾ ವಿರುದ್ಧ ಆಕ್ರೋಶ | ಉಡುಪಿ ನಗರ ಪೊಲೀಸ್ ಠಾಣೆಗೆ ದೂರು

ಉಡುಪಿ: ಬಿಲ್ಲವ ಮತ್ತು ಬಂಟ ಸಮುದಾಯಗಳ ವಿರುದ್ಧ ಜಾತಿ ನಿಂದನಾತ್ಮಕ ಹಾಗೂ 'ಫ್ರೆಂಡ್ಸ್ ಬಲ್ಲಾಳ್ ಬಾಗ್ ಬಿರುವೆರ್ ಕುಡ್ಲ' ಸಂಘಟನೆಯ ಬಗ್ಗೆ ಅಶ್ಲೀಲ ಹೇಳಿಕೆ ನೀಡಿರುವ ಮಹಿಳೆಯ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ಉಡುಪಿ ನಗರ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಲಾಗಿದೆ.

ಬಿರುವೆರ್ ಕುಡ್ಲ ಉಡುಪಿ ಘಟಕದ ಪದಾಧಿಕಾರಿಗಳು ಈ ದೂರು ನೀಡಿದ್ದು, ಆರೋಪಿತೆ ಅನಿತಾ ಕಾಸರಗೋಡು ಸಮಾಜದಲ್ಲಿ ಶಾಂತಿ ಕದಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಈ ಸಂಸ್ಥೆಯು ಕಳೆದ 11 ವರ್ಷಗಳಿಂದ ಬಡ ರೋಗಿಗಳಿಗೆ '12 ಕೋಟಿಗೂ ಅಧಿಕ ಆರ್ಥಿಕ ನೆರವು ನೀಡಿದೆ. ಆದರೆ ಈ ಸಂಸ್ಥೆ ಹಾಗೂ ಕರಾವಳಿಯ ಪ್ರಮುಖ ಸಮುದಾಯಗಳ ಭಾವನೆಗಳಿಗೆ ಧಕ್ಕೆ ಬರುವಂತೆ ಅನಿತಾ ಕಾಸರಗೋಡು ನಿಂದಿಸಿದ್ದಾರೆ ಎಂದು ದೂರಿನಲ್ಲಿ ವಿವರಿಸಲಾಗಿದೆ.



ಇದರೊಂದಿಗೆ, ಕುದ್ರೋಳಿ ಕ್ಷೇತ್ರದ ಕೋಶಾಧಿಕಾರಿ ಹಾಗೂ ನ್ಯಾಯವಾದಿ ಪದ್ಮರಾಜ್ ಆರ್. ಪೂಜಾರಿ ಅವರ ವಿರುದ್ಧವೂ ಈ ಮಹಿಳೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಈ ಹಿಂದೆ ಬಿರುವೆರ್ ಕುಡ್ಲ ಸಂಘಟನೆಯು ಅನಿತಾ ವಿರುದ್ಧ ಎಫ್‌ಐಆರ್ ದಾಖಲಿಸಲು ನ್ಯಾಯವಾದಿ ಪದ್ಮರಾಜ್ ಸಹಕರಿಸಿದ್ದರು ಎಂಬ ಕಾರಣಕ್ಕೆ ಈ ನಿಂದನೆ ಮಾಡಲಾಗಿದ್ದು, ಪೊಲೀಸರು ತನಿಖೆ ನಡೆಸಬೇಕು ಎಂದು ಒತ್ತಾಯಿಸಲಾಗಿದೆ.

ದೂರು ನೀಡುವಾಗ ಉಡುಪಿ ಘಟಕದ ಅಧ್ಯಕ್ಷ ಯೋಗೀಶ್ ಪೂಜಾರಿ, ಸತೀಶ್ ಕಡೆಕಾರು, ಉಮೇಶ್ ಕೋಟ್ಯಾನ್, ರಾಜೇಶ್ ಕೆ.ಜೆ. ಹಾಗೂ ಮಂಜುನಾಥ್ ಚೇರ್ಕಾಡಿ ಉಪಸ್ಥಿತರಿದ್ದರು.

ಕಾನೂನಾತ್ಮಕವಾದ ಕ್ರಮವನ್ನು ಕೈಗೊಳ್ಳಿ



ಬೆಳ್ತಂಗಡಿ : ಬಿಲ್ಲವ ಸಮಾಜಕ್ಕೆ ಅಶ್ಲೀಲ ಪದಗಳಿಂದ ಅವಹೇಳನಗೈದು ವೀಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟ ಅನಿತಾ ಕಾಸರಗೋಡು ವಿರುದ್ಧ ಬೆಳ್ತಂಗಡಿ ಶ್ರೀ ಗುರುನಾರಾಯಣ ಸ್ವಾಮಿ ಸೇವಾ ಸಂಘದ ವತಿಯಿಂದ ಸೋಮವಾರ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಯಿತು.

ಅನಿತಾ ಕಾಸರಗೋಡು ಎಂಬ ಖಾತೆಯಲ್ಲಿ ಸಾಮಾಜಿಕ ಜಾಲತಾಣದಲ್ಲಿ 'ಪೂಜಾರಿಗಳು ಮತ್ತು ಶೆಟ್ಟಿಗಳು ಎಂಬ ಜಾತಿಯ ಹೆಸರಿನ ಪದಗಳನ್ನು ಬಳಸಿ' ಅಶ್ಲೀಲವಾಗಿ ನಿಂದಿಸಿದ್ದಾರೆಂದು ಆರೋಪಿಸಲಾಗಿದೆ. ಅನಿತಾ ಕಾಸರಗೋಡು ವಿರುದ್ಧ ಕಾನೂನಾತ್ಮಕವಾದ ಕ್ರಮವನ್ನು ಕೈಗೊಳ್ಳಬೇಕು, ಇಲ್ಲದೇ ಇದ್ದಲ್ಲಿ ಶ್ರೀ ಗುರುನಾರಾಯಣ ಸ್ವಾಮಿ ಸೇವಾ ಸಂಘದ ವತಿಯಿಂದ ಹೋರಾಟವನ್ನು ನಡೆಸಲಾಗುವುದು ಎಂದು ಸಂಘದ ಅಧ್ಯಕ್ಷ ಜಯವಿಕ್ರಮ ಕಲ್ಲಾಪು ಎಚ್ಚರಿಸಿದ್ದಾರೆ.

ಈ ಸಂದರ್ಭದಲ್ಲಿ ಶ್ರೀ ಗುರುನಾರಾಯಣ ಸ್ವಾಮಿ ಸೇವಾ ಸಂಘದ ನಿರ್ದೇಶಕರು, ಪದಾಧಿಕಾರಿಗಳು, ಸದಸ್ಯರು ಇದ್ದರು.

ವಿಟ್ಲದಲ್ಲಿಯೂ ದೂರು ದಾಖಲು, ಕ್ರಮಕ್ಕೆ ಆಗ್ರಹ

ವಿಟ್ಲ: ಸಾಮಾಜಿಕ ಜಾಲತಾಣದಲ್ಲಿ ಬಿಲ್ಲವ ಸಮುದಾಯವನ್ನು ಅವಹೇಳನಕಾರಿಯಾಗಿ ದೂಷಿಸಿರುವ ಅನಿತಾ ಕಾಸರಗೋಡು ಎಂಬ ಮಹಿಳೆಯ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿ ವಿಟ್ಲ ಬಿಲ್ಲವ ಸಂಘ, ಯುವವಾಹಿನಿ ಘಟಕಗಳ ಪದಾಧಿಕಾರಿಗಳು, ಸದಸ್ಯರು ವಿಟ್ಲ ಪೊಲೀಸ್ ವೃತ್ತ ನಿರೀಕ್ಷಕ ಪ್ರಕಾಶ್ ದೇವಾಡಿಗ ಅವರ ಮೂಲಕ ಮಂಗಳವಾರ ದೂರು ನೀಡಿದರು.



ನೋಟರಿ ವಕೀಲ ಪದ್ಮನಾಭ ಪೂಜಾರಿ ಅಳಿಕೆ ಮಾತನಾಡಿ, ಸಾಮಾಜಿಕ ಜಾಲತಾಣದಲ್ಲಿ ಬಿಲ್ಲವ ಸಮುದಾಯ ವನ್ನು ಗುರಿಯಾಗಿಸಿಕೊಂಡು ಅರ್ಥ ಹೀನಮಾತುಗಳನ್ನುಹರಿಯಬಿಟ್ಟು ಬಿಲ್ಲವರ ತೇಜೋವಧೆ ಮಾಡಿದ್ದಾರೆ. ದೂರಿನ ಪ್ರಕಾರ ಆಕೆಯ ಮೇಲೆ ತಕ್ಷಣ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ವಿಟ್ಲ ಬಿಲ್ಲವ ಸಂಘ ಅಧ್ಯಕ್ಷ ಜಯಪ್ರಕಾಶ್, ಮುಖಂಡರುಗಳಾದ ಮಾಧವ ಪಟ್ಲ, ಚಂದ್ರಹಾಸ ಸುವರ್ಣ, ದಾಸಪ್ಪ ಪೂಜಾರಿ ನೆಕ್ಕಿಲಾರು, ಎಂ.ಎಸ್.ಸಂಜೀವ, ಹರೀಶ್ ಸಿ.ಹೆಚ್, ಪ್ರಕಾಶ್ ವಿಟ್ಲ, ಸುಧಾಕರ ಪೂಜಾರಿ ಕೇಪು, ಲಕ್ಷ್ಮಣ ಪೂಜಾರಿ, ಜಯಂತ್, ಮಂಜುನಾಥ ಕಲ್ಲಕಟ್ಟ, ಪ್ರವೀಣ್ ಅಳಿಕೆ, ಹರೀಶ್ ಮರುವಾಳ, ಸತೀಶ್ ಅಳಿಕೆ, ಯಶೋಧರ, ಸುಜನ್, ಶಶಿಧರ್, ರಾಜೇಂದ್ರ, ವಿಟ್ಲ ಯುವವಾಹಿನಿ ಘಟಕದ ಅಧ್ಯಕ್ಷ ಕೆಟಿ ಆನಂದ, ಪುಣಚ ಬಿಲ್ಲವ ಸಂಘದ ಅಧ್ಯಕ್ಷ ರಮೇಶ್ ಕೋಡಂದೂರು, ಕುಂಡಡ್ಕ ಬಿಲ್ಲವ ಸಂಘದ ಅಧ್ಯಕ್ಷ ವಿನೋದ್ ಕುಮಾರ್ ಬೋಳಿಗದ್ದೆ, ಹಾಗೂ ಹಲವು ಬಿಲ್ಲವ ಸಮಾಜ ಬಂಧುಗಳು ಭಾಗವಹಿಸಿದ್ದರು.

ನಿಧನ ಸುದ್ದಿ

ಪ್ರೇಮ್ ಕುಮಾರ್ ಜೈನ್



ಕಾರ್ಕಳ: ಹೊಸ್ಮಾರಿನ ಜನಾನುರಾಗಿ, ಉದ್ಯಮಿ, ಕೃಷಿಕ ಹಾಗೂ ಮಾಜಿ ತಾಲೂಕು ಪಂಚಾಯತ್ ಸದಸ್ಯರಾಗಿದ್ದ ಪ್ರೇಮ್ ಕುಮಾರ್ ಜೈನ್ (65) ಅವರು ಮಂಗಳವಾರ ನಿಧನ ಹೊಂದಿದರು. ಅಣ್ಣಾಜೇರ್ ಎಂದೇ ಕರೆಸಿಕೊಳ್ಳುತ್ತಿದ್ದ ಪ್ರೇಮ್ ಕುಮಾರ್ ಅವರು ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಸಕ್ರಿಯರಾಗಿದ್ದು ಉತ್ತಮ ಸಂಘಟಕರಾಗಿ ಗುರುತಿಸಿಕೊಂಡಿದ್ದರು. ಸ್ಥಳೀಯ ದೇವಸ್ಥಾನ, ಬಸದಿ, ದೈವಸ್ಥಾನ, ಶಾಲಾ ಅಭಿವೃದ್ಧಿಗೆ ಕೊಡುಗೆ ನೀಡಿದ್ದರು. ಮೃತರು ಪತ್ನಿ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಬಿ. ದಯಾನಂದ ರಾವ್



ಮಂಗಳೂರು: ಬಿ. ದಯಾನಂದ ರಾವ್ (74) ಜೂ. 8 ರಂದು ಕಾವೂರು ಶಾಂತಿನಗರದಲ್ಲಿರುವ ಸ್ವಗೃಹದಲ್ಲಿ ಹೃದಯಾಘಾತದಿಂದ ನಿಧನ ಹೊಂದಿದರು. ಇವರು ಕೋಟೆ ಕ್ಷತ್ರಿಯ ಸಂಘದ ಹಿರಿಯ ಸದಸ್ಯರಾಗಿದ್ದು ನಿವೃತ್ತ ಅರಣ್ಯ ಇಲಾಖೆಯ ಉದ್ಯೋಗಿಯಾಗಿದ್ದರು. ಬರಹಗಾರರಾಗಿದ್ದ ಇವರು ದಯಾನಂದ ಕುಡುಪಾಡಿ ಎಂದು ಪ್ರಸಿದ್ಧಿ ಪಡೆದಿದ್ದರು. ಕೊರಕೊಡು ಶ್ರೀ ದುರ್ಗಾಪರಮೇಶ್ವರಿ ಮಹಾಕಾಳಿ ಕಾಶಿ ಕಾಲಭೈರವ ದೇವಸ್ಥಾನದ ಮಾಜಿ ಕಾರ್ಯಕಾರಿಣಿ ಸದಸ್ಯರಾಗಿದ್ದರು. ಮೃತರು ಪತ್ನಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

ಸರಿತ ಪಿ. ಶೆಟ್ಟಿ



ಬಂಟ್ವಾಳ: ರಾ.ಹೆ.ಯ ತುಂಬೆ ಪ್ರಕಾಶ್ ಪಿ. ಶೆಟ್ಟಿ ಅವರ ಪತ್ನಿ ಸರಿತ ಪಿ. ಶೆಟ್ಟಿ (56) ದೀರ್ಘ ಕಾಲದ ಅಸೌಖ್ಯದಿಂದ ನಿಧನರಾಗಿದ್ದಾರೆ. ಮೃತರು ಪತಿ, ಓರ್ವ ಪುತ್ರ ಸಹಿತ ಬಂಧುಬಳಗವನ್ನು ಅಗಲಿದ್ದಾರೆ. ಸಾಮಾಜಿಕ ಚಟುವಟಿಕೆಯಲ್ಲೂ ತೊಡಗಿಸಿಕೊಂಡಿದ್ದ ಇವರು ಫರಂಗಿಪೇಟೆ ವಲಯ ಬಂಟರ ಮಹಿಳಾ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಮಾಜಿ ಸಚಿವ ರಮಾನಾಥ ರೈ, ಬೂಡಾ ಅಧ್ಯಕ್ಷ ಬೇಬಿಕುಂದರ್, ಜಿ.ಪಂ.ಮಾಜಿ ಸದಸ್ಯ ಚಂದ್ರಪ್ರಕಾಶ್ ಶೆಟ್ಟಿ, ಫರಂಗಿಪೇಟೆ ಸೇವಾಂಜಲಿ ಪ್ರತಿಷ್ಠಾನದ ಆಡಳಿತ ಟ್ರಸ್ಟಿ ಕೆ.ಕೆ.ಪೂಂಜಾ ಸಹಿತ ಹಲವಾರು ಗಣ್ಯರು ಮೃತರ ಅಂತಿಮ ದರ್ಶನ ಪಡೆದರು.

ವಿಶಾಲಾಕ್ಷಿ



ಮಂಗಳೂರು: ನಗರದ ಬಲ್ಲಾಲ್‌ಭಾಗ್ ಬಳಿಯ ನಿವಾಸಿ, ದಿ.ಬಿ.ಲೋಕೇಶ್ ಅವರ ಪತ್ನಿ ವಿಶಾಲಾಕ್ಷಿ (75) ಅವರು ಜೂ.8 ರಂದು ಅಸೌಖ್ಯದಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಮೃತರು ಓರ್ವ ಪುತ್ರ ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ.

ಗಣಪತಿ ಪಾಟ್ಕರ್



ಶಿರ್ವ: ಬಂಟಕಲ್ಲು ಸಮೀಪದ ಬಿಳಿಯಾರು ಗಣಪತಿ ಪಾಟ್ಕರ್ (87) ಅಲ್ಪ ಕಾಲದ ಅನಾರೋಗ್ಯದಿಂದ ಮಂಗಳವಾರ ಮಧ್ಯಾಹ್ನ ಉಡುಪಿ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಪ್ರಗತಿಪರ ಕೃಷಿಕರಾಗಿದ್ದು ಜನಾನುರಾಗಿಯಾಗಿದ್ದರು. ಅವರು ಓರ್ವ ಪುತ್ರ, ಪುತ್ರಿ ಹಾಗೂ ಬಂಧುಗಳನ್ನು ಅಗಲಿದ್ದಾರೆ.

ಡಾ. ಬಿ. ವೆಂಕಟರಮಣ ಭಟ್ಟ



ಪುತ್ತೂರು: ಮೈಸೂರು ಹಾಗೂ ಪುತ್ತೂರು ನಗರದ ಚಿಕಿತ್ಸಾಲಯವನ್ನು ಹೊಂದಿ ಸುಮಾರು 50 ವರ್ಷಗಳಿಂದ ವೈದ್ಯಕೀಯ ಸೇವೆ ನೀಡುತ್ತಿದ್ದ ಬಡೆಕ್ಕಿಲ ಡಾ. ಬಿ. ವೆಂಕಟರಮಣ ಭಟ್ಟ (75) ಅನಾರೋಗ್ಯದಿಂದ ಮಂಗಳವಾರ ಸ್ವಗೃಹದಲ್ಲಿ ನಿಧನ ಹೊಂದಿದ್ದಾರೆ. ವಿವೇಕಾನಂದ ಕಾಲೇಜಿನಲ್ಲಿ ಬಿಎಸ್ಸಿ ಹಾಗೂ ಮೈಸೂರಿನಲ್ಲಿ ಎಂಬಿಬಿಎಸ್ ಗಳಿಸಿದ್ದ ಇವರು ಆಯುರ್ವೇದ ಶಾಸ್ತ್ರದ ಗಿಡಮೂಲಿಕಾ ಔಷಧಗಳನ್ನು ಸ್ವತ: ತಯಾರಿಸಿ ವ್ಯಾಧಿಗಳನ್ನು ಉಪಶಮನ ಮಾಡುತ್ತಿದ್ದರು. ಸರಸ್ವತಿ ಲಿಪಿ ಎಂಬ ಪುಸ್ತಕವನ್ನು ಪ್ರಕಟಿಸಿ ಕನ್ನಡ ಅಕ್ಷರಮಾಲೆಗೆ ಹೊಸ ರೂಪು ನೀಡಿದ್ದರು. ಒತ್ತಕ್ಷರವಿಲ್ಲದೇ ಕನ್ನಡ ಭಾಷಾ ಲಿಪಿ ರಚಿಸಿದ್ದರು. ರಸಾಯಶಾಸ್ತ್ರದ ಮೂಲಧಾತುಗಳಿಗೆ ಅಚ್ಚ ಕನ್ನಡದ ಹೆಸರು ನೀಡಿರುವುದನ್ನು ಪರಿಗಣಿಸಿ ಕನ್ನಡ ಸಂಸ್ಕೃತಿ ಇಲಾಖೆ ರಸಶಾಸ್ತ್ರ ಎಂಬ ಪುಸ್ತಕವನ್ನು ಪ್ರಕಟಿಸಿದೆ. ಇವರು ಕುಟುಂಬಸ್ಥರನ್ನು ಹಾಗೂ ಬಂಧು ಬಳಗವನ್ನು ಅಗಲಿದ್ದಾರೆ.

ವೆಂಕಟ್ರಮಣ ಆಚಾರ್ಯ



ಉಪ್ಪಳ: ಬಾಯಾರು ಸಮೀಪದ ಬಳ್ಳೂರು ನಿವಾಸಿ ವೆಂಕಟ್ರಮಣ ಆಚಾರ್ಯ (88) ಸೋಮವಾರ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಬಡಗಿ ಹಾಗೂ ಕೃಷಿಕರಾಗಿದ್ದರು. ಬಾಯಾರು ಶ್ರೀ ವಿಶ್ವಕರ್ಮ ಸಮಾಜ ಸೇವಾ ಸಂಘದ ಹಿರಿಯ ಸದಸ್ಯರಾಗಿದ್ದರು. ಮೃತರು ಪತ್ನಿ ಯಶೋಧಾ, ಮಕ್ಕಳಾದ ವಿಕ್ರಮ, ಭುವನೇಶ್ವರಿ, ಸರೋಜಿನಿ, ಶಶಿಧರ, ತಾರಾನಾಥ, ವನಿತಾ ಅವರನ್ನು ಅಗಲಿದ್ದಾರೆ.



ಕದ್ರಿ ಮಲ್ಲಿಕಟ್ಟೆ ಶ್ರೀಕೃಷ್ಣ ಕಲ್ಯಾಣ ಮಂದಿರದಲ್ಲಿ ಭಾಸ್ಕರ ಮಾಲತಿ ರಾವ್ ಪೇಜಾವರ ಟ್ರಸ್ಟಿನ ವತಿಯಿಂದ ಸುಮಾರು ಒಂದೂವರೆ ಲಕ್ಷ ರೂಪಾಯಿ ಅನುದಾನ ವಿತರಣಾ ಸಮಾರಂಭ ಜರಗಿತು. ಹಿರಿಯ ನ್ಯಾಯವಾದಿ ಪಿ. ರಂಜನ್ ರಾವ್, ಟ್ರಸ್ಟಿನ ಕಾರ್ಯದರ್ಶಿ ಎನ್. ವೆಂಕಟರಾಜ್, ಟ್ರಸ್ಟಿನ ಹಿರಿಯ ವೈದ್ಯರಾದ ಪ್ರತಾಪ್ ನಾರಾಯಣ ಆಚಾರ್, ಅಹಲ್ಯ ವೆಂಕಟರಾಜ್, ಸಂಘಟಕ ಸುಧಾಕರ್ ರಾವ್ ಪೇಜಾವರ ಮೊದಲಾದವರು ಉಪಸ್ಥಿತರಿದ್ದರು.

ಮಂಗಳೂರು ನಗರ ಪೊಲೀಸರ ಕಾರ್ಯಾಚರಣೆ

ಮಾದಕ ದ್ರವ್ಯ ಸೇವನೆ: 14 ಮಂದಿ ಸೆರೆ

ಮಂಗಳೂರು: ಮಾದಕ ದ್ರವ್ಯ ಸೇವನೆ ಆರೋಪದಡಿ ಮೂರು ಪ್ರಕರಣಗಳಲ್ಲಿ 14 ಮಂದಿಯನ್ನು ಮಂಗಳೂರು ನಗರ ಪೊಲೀಸರು ಬಂಧಿಸಿದ್ದಾರೆ.

ಮಾದಕ ದ್ರವ್ಯಸೇವನೆ ಆರೋಪದಡಿ ಇರಾ ಕುಕ್ಕಾಜೆ ನಿವಾಸಿ ಸಿರಾಜುದ್ದೀನ್ (39) ಎಂಬಾತನನ್ನು ನಗರ ಪೊಲೀಸರು ಬಂಧಿಸಿದ್ದಾರೆ. ಜೂ.8ರಂದು ಮಧ್ಯಾಹ್ನ 1.30ರ ವೇಳೆಗೆ ಉಳ್ಳಾಲ ತಾಲೂಕು ಬೆಳ್ಮಾ ಗ್ರಾಮದ ದೇರಳಕಟ್ಟೆಯ ಗ್ರೀನ್ ಗ್ರೌಂಡ್ ಬಳಿ ಆರೋಪಿ ಸಿರಾಜುದ್ದೀನ್ ಅಮಲು ಪದಾರ್ಥ ಸೇವನೆ ಮಾಡಿ ನಶೆಯಲ್ಲಿದ್ದಂತೆ ಕಂಡು ಬಂದಿದ್ದು, ಕೊಣಾಜೆ ಪೊಲೀಸರು ಆತನನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ವೈದ್ಯಕೀಯ ತಪಾಸಣೆ ನಡೆಸಿದಾಗ ಸಿರಾಜುದ್ದೀನ್ ಮಾದಕ ಸೇವನೆ ಮಾಡಿರುವುದು ದೃಢಪಟ್ಟಿದೆ.

ಜೂ. 8ರಂದು ಬೆಳ್ಮಾ ದೇರಳಕಟ್ಟೆಯ ಫ್ಲಾಮಾ ಸಿಟಿಯಾಸ್ ಅಪಾರ್ಟ್‌ಮೆಂಟ್ ಬಳಿ ಮಾದಕ ಸೇವನೆ ಆರೋಪದಲ್ಲಿ ಕಾಸರಗೋಡು ಬೆರ್ಕ ನಿವಾಸಿ ಹಾತೀಮ್ ಅಬೂಬಕ್ಕರ್ (21) ಎಂಬಾತನನ್ನು ಕೊಣಾಜೆ ಪೊಲೀಸರು ಬಂಧಿಸಿದ್ದಾರೆ. ಜೂ.8ರಂದು ಪೂರ್ವಾಹ್ನ 11 ಗಂಟೆಗೆ ಉಳ್ಳಾಲ ತಾಲೂಕು ಬೆಳ್ಮಾ ಗ್ರಾಮದ ದೇರಳಕಟ್ಟೆಯ ಫ್ಲಾಮಾ ಸಿಟಿಯಾಸ್ ಅಪಾರ್ಟ್‌ಮೆಂಟ್ ಬಳಿ ಆರೋಪಿ ಅಮಲು ಪದಾರ್ಥ ಸೇವನೆ ಮಾಡಿ ನಶೆಯಲ್ಲಿದ್ದಂತೆ ಕಂಡು ಬಂದಿದ್ದು, ಪೊಲೀಸರು ಆತನನ್ನು ವಶಕ್ಕೆ ಪಡೆದಿದ್ದಾರೆ. ಆತನನ್ನು ವೈದ್ಯಾಧಿಕಾರಿಯವರ ಮುಂದೆ ಹಾಜರುಪಡಿಸಿ ವೈದ್ಯಕೀಯ ತಪಾಸಣೆ ನಡೆಸಿದಾಗ ಮಾದಕ ದ್ರವ್ಯವನ್ನು ಸೇವನೆ ಮಾಡಿರುವುದು ದೃಢಪಟ್ಟಿದೆ.

ನಗರದ ರೈಲ್ವೇ ಸ್ಟೇಷನ್ ಪರಿಸರದ ಸುತ್ತಮುತ್ತ ಮಾದಕ ಸೇವನೆ ಆರೋಪದಲ್ಲಿ 12 ಮಂದಿಯನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ರೈಲ್ವೆ ಸ್ಟೇಷನ್ ಪರಿಸರದ ಸುತ್ತ ಮುತ್ತ ಕೆಲವು ವ್ಯಕ್ತಿಗಳು ಅನುಮಾನಾಸ್ಪದವಾಗಿ ತಿರುಗಾಡುತ್ತಿದ್ದು, ಪಾಂಡೇಶ್ವರ ಪೊಲೀಸರು ಅವರಲ್ಲಿ 12 ಮಂದಿಯನ್ನು ವಶಕ್ಕೆ ಪಡೆದು, ಗಾಂಜಾ ಅಥವಾ ಇತರ ಅಮಲು ಪದಾರ್ಥ ಸೇವಿಸಿದ್ದಾರೆಯೆ ಎಂಬುದರ ಬಗ್ಗೆ ವೈದ್ಯಕೀಯ ತಪಾಸಣೆ ನಡೆಸಿದಾಗ ಮಾದಕ ಸೇವನೆ ಮಾಡಿರುವುದು ದೃಢಪಟ್ಟಿದೆ.

ಪಿಪಿ ಗೋಮತಿ ಸ್ಮಾರಕ ವಾರ್ಷಿಕ ಉಪನ್ಯಾಸ | ಬುಕರ್ ಪ್ರಶಸ್ತಿ ವಿಜೇತೆ ದೀಪಾ ಭಾಸ್ತಿ ಅಭಿಪ್ರಾಯ

ಭಾಷೆ ನಮ್ಮಲ್ಲಿರುವ ಶಕ್ತಿಯುತ ಸಾಧನ

ಮಂಗಳೂರು: ಭಾಷೆಗಳು ಕೇವಲ ಸಂವಹನದ ಸಾಧನ ಮಾತ್ರವಲ್ಲ. ಅದು ನಮ್ಮ ಕೈಯ್ಯಲ್ಲಿರುವ ಶಕ್ತಿಯುತ ಸಾಧನ ಎಂದು ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ವಿಜೇತೆ, ಬರಹಗಾರ್ತಿ ದೀಪಾ ಭಾಸ್ತಿ ಅಭಿಪ್ರಾಯಪಟ್ಟರು.

ಮಂಗಳೂರಿನ ಕುದ್ಮಲ್ ರಂಗರಾವ್ ಪುರಭವನದಲ್ಲಿ ಮಂಗಳವಾರ ಪಿಪಿ ಗೋಮತಿ ಮೆಮೋರಿಯಲ್ ಎಜುಕೇಶನ್ ಟ್ರಸ್ಟ್, ಮಂಗಳೂರು ವಿವಿ, ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತ ಸಂಘದ ವತಿಯಿಂದ ಆಯೋಜಿಸಲಾದ ಪಿಪಿ ಗೋಮತಿ ಸ್ಮಾರಕ ವಾರ್ಷಿಕ ಉಪನ್ಯಾಸದಲ್ಲಿ ಅವರು 'ಚಿಂತನೆಯೇ ಭಿನ್ನಮತವಾದಾಗ ಭಾಷೆ ಮತ್ತು ಜಗತ್ತಿನ ಕುರಿತು ಕೆಲವು ಆಲೋಚನೆಗಳು' ಎಂಬ ವಿಷಯದಲ್ಲಿ ಮಾತನಾಡಿದರು.

ಭಾಷೆಯನ್ನು ಹೆಚ್ಚಿನವರು ಒಳ್ಳೆಯದಕ್ಕಾಗಿ ಉಪಯೋಗಿಸಿದರೆ ಮತ್ತೆ ಕೆಲವರು ದ್ವೇಷಕ್ಕಾಗಿ ಬಳಸುತ್ತಾರೆ. ದ್ವೇಷ ಎನ್ನುವ ಪದ ವನ್ನೇ ಉದಾಹರಣೆಯನ್ನಾಗಿಸಿಕೊಂಡರೆ, ಪ್ರತಿಯೊಬ್ಬರಿಗೂ ತಮ್ಮದೇ ಆದ ಇಷ್ಟ ಮತ್ತು ಇಷ್ಟವಿಲ್ಲದಿರುವ ಸಂಗತಿಗಳಿರುತ್ತವೆ. ಅದು ನಮ್ಮ ವೈಯಕ್ತಿಕ ಭಾವನೆಗಳಾಗಿರುತ್ತವೆ. ಇನ್ನೊಬ್ಬರಿಗೆ ತೊಂದರೆ ಆಗದಂತೆ ನಾವು ನಮ್ಮ ವೈಯಕ್ತಿಕ ಭಾವನೆಗಳನ್ನು ಹೊಂದಿರುವುದು ತಪ್ಪಲ್ಲ ಎಂದರು.

ಕರ್ನಾಟಕದ ಭಾಷಾ ವೈವಿಧ್ಯತೆಯ ಬಗ್ಗೆ ಮಾತನಾಡಿದ ಅವರು, ಕರ್ನಾಟಕದಲ್ಲಿ ಕನ್ನಡ ಭಾಷೆ ಒಂದೇ ಅಲ್ಲ. ತುಳು, ಬ್ಯಾರಿ, ಕೊಡವ, ಕೊಂಕಣಿ, ಮಲಯಾಳಂ ಸೇರಿದಂತೆ ಹಲವಾರು ಸುಂದರ ಭಾಷೆಗಳಿಗೆ ನೆಲೆಯಾಗಿದೆ. ಯಾವುದೇ ಭಾಷೆಯು ಅದರ ಇತಿಹಾಸ, ಲಿಪಿ ಅಥವಾ ಸಾಹಿತ್ಯಿಕ ಇತಿಹಾಸದಿಂದಾಗಿ ಇನ್ನೊಂದಕ್ಕಿಂತ ಶ್ರೇಷ್ಠ ಎಂದು ಹೇಳಲಾಗದು. ಭಾಷೆ ಎನ್ನುವುದು ನಾವು ನಮ್ಮ ಸುತ್ತಲಿನ ಜಗತ್ತನ್ನು ಹೇಗೆ ವಿಶ್ಲೇಷಿಸುತ್ತೇವೆ ಮತ್ತು ವಿಶ್ವವನ್ನು ನಾವು ಹೇಗೆ ಅರ್ಥ ಮಾಡಿಕೊಂಡಿದ್ದೇವೆ ಎಂಬುದಾಗಿರುತ್ತದೆ. ಭಾಷೆ ನಮ್ಮ ಗುರುತು ಎಂದವರು ವಿಶ್ಲೇಷಿಸಿದರು.

ವೇದಿಕೆಯಲ್ಲಿ ಪಿಪಿ ಗೋಮತಿ ಮೆಮೋರಿಯಲ್ ಟ್ರಸ್ಟ್‌ನ ಬಂಬಿನ ಚಿನ್ನಮ್ಮ, ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್. ಉಪಸ್ಥಿತರಿದ್ದರು.

ಕಾರ್ಯಕ್ರಮ ಸಂಯೋಜಕ ಹಾಗೂ ಹಿರಿಯ ವೈದ್ಯ ಡಾ.ಶ್ರೀನಿವಾಸ ಕಕ್ಕಿಲಾಯ ಸ್ವಾಗತಿಸಿದರು. ಪಿಪಿ. ಗೋಮತಿ ಬಗ್ಗೆ ಮೀರಾ ಅರಾನ್ಹ ಪರಿಚಯ ನೀಡಿದರು. ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಶ್ರೀನಾಥ್ ಎಂ.ಪಿ. ವಂದಿಸಿದರು.



ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ವಿಜೇತೆ, ಬರಹಗಾರ್ತಿ ದೀಪಾ ಭಾಸ್ತಿ ಉಪನ್ಯಾಸ ನೀಡಿದರು

ಮಂಗಳೂರು ವಿವಿಯಲ್ಲಿ ದೀಪಾ ಭಸ್ತಿ ಸಾಧನೆಯ ಪಠ್ಯ

'ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ವಿಜೇತೆ, ಮಂಗಳೂರು ವಿವಿಯ ಹಳೆ ವಿದ್ಯಾರ್ಥಿನಿಯೂ ಆಗಿರುವ ದೀಪಾ ಭಸ್ತಿ ಅವರ ಸಾಧನೆಯನ್ನು ಗುರುತಿಸುವ ಸಲುವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಮಾನವಿಕ ವಿಭಾಗಗಳಲ್ಲಿ ಸಮೂಹ ಸಂವಹನದ ಬಗ್ಗೆ ಮುಂದಿನ ಶೈಕ್ಷಣಿಕ ವರ್ಷದಿಂದ ಮುಕ್ತ ಐಚ್ಛಿಕ ಪಠ್ಯಕ್ರಮ ಆರಂಭಿಸಲು ನಿರ್ಧರಿಸಿರುವುದಾಗಿ ಪ್ರಾಸ್ತಾವಿಕವಾಗಿ ಮಾತನಾಡಿದ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಪಿ.ಎಲ್. ಧರ್ಮ ತಿಳಿಸಿದರು.

ಪಿ.ಪಿ. ಗೋಮತಿ ಸ್ಮಾರಕ ವಾರ್ಷಿಕ ಉಪನ್ಯಾಸ
ಓದುವ ಹವ್ಯಾಸವಿದ್ದರೆ ಮಾತ್ರ ಬರೆಯಲು ಸಾಧ್ಯ

ಮಂಗಳೂರು: ಓದುವ ಹವ್ಯಾಸವಿದ್ದರೆ ಮಾತ್ರ ಸಾಹಿತ್ಯಿಕವಾಗಿ ಬರೆಯಲು ಸಾಧ್ಯ ಎಂದು ಬುಕರ್ ಪ್ರಶಸ್ತಿ ವಿಜೇತೆ, ಬರಹಗಾರ್ತಿ ದೀಪಾ ಭಸ್ತಿ ಹೇಳಿದರು.

ಮಂಗಳೂರಿನ ಕುದ್ಮಲ್ ರಂಗರಾವ್ ಪುರಭವನದಲ್ಲಿ ಮಂಗಳವಾರ ಪಿಪಿ ಗೋಮತಿ ಮೆಮೋರಿಯಲ್ ಎಜುಕೇಶನ್ ಟ್ರಸ್ಟ್, ಮಂಗಳೂರು ವಿವಿ, ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತ ಸಂಘದ ವತಿಯಿಂದ ಆಯೋಜಿಸಲಾದ ಪಿಪಿ ಗೋಮತಿ ಸ್ಮಾರಕ ವಾರ್ಷಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯುವ ಲೇಖಕರಿಗೆ ಬರೆಯುವ ಆಸಕ್ತಿ ಇದೆ. ಆದರೆ ಓದದೆ ಬರೆಯಲು ಸಾಧ್ಯ ಇಲ್ಲ. ಹೆಚ್ಚು ಹೆಚ್ಚು ಓದಿದಾಗ ಆಲೋಚನೆಗಳು, ಹೊಸ ಐಡಿಯಾಗಳು ಬರುತ್ತವೆ. ಓದುವುದಕ್ಕಾಗಿ ಪುಸ್ತಕಗಳನ್ನೇ ನೆಚ್ಚಿಕೊಳ್ಳಬೇಕೆಂದೇನಿಲ್ಲ. ಆಡಿಯೋಗಳ ಮೂಲಕವೂ ಓದಿನ ಗೀಳು ಹಚ್ಚಿಸಿಕೊಳ್ಳಬಹುದು ಎಂದರು.

ಭಾಷೆಯನ್ನು ಭಾಷಣಕ್ಕೆ ಮಾತ್ರ ಸೀಮಿತಗೊಳಿಸದೆ ದಿನನಿತ್ಯದ ಜೀವನದಲ್ಲಿ ಅದನ್ನು ಉಪಯೋಗಿಸಿಕೊಂಡಾಗ ಭಾಷೆ ಉಳಿಯುತ್ತದೆ. ಯಾವುದೂ ಪರಿಪೂರ್ಣ ಎಂದು ಹೇಳಲಾಗದು. ನನ್ನ ಅನುವಾದವೂ ಅಷ್ಟೇ. ಭಾನು ಮುಸ್ತಾಕ್ ಅವರ ಪುಸ್ತಕವನ್ನು ಅನುವಾದ ಮಾಡುವ ಮೊದಲು ನಾನು ತಿಂಗಳುಗಟ್ಟಲೆ ಸಂಶೋಧನೆ ಮಾಡಿದ್ದೆ. ಸಮುದಾಯದ ಬಗೆಗಿನ ಸಿನೆಮಾ, ಸೀರಿಯಲ್, ಸಂಗೀತವನ್ನು ಕೇಳಿ ಅರ್ಥ ಮಾಡಿಕೊಂಡಿದ್ದೇನೆ. ಭಾನು ಮುಸ್ತಾಕ್ ಅವರ ಕೃತಿ ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ. ಎಲ್ಲಾ ಸಮುದಾಯಗಳಲ್ಲೂ ಅಂತಹ ದೌರ್ಜನ್ಯವಿದೆ. ಎಲ್ಲಾ ಹೆಣ್ಣು ಮಕ್ಕಳು ಅಂತಹ ಮಾನಸಿಕತೆಯಿಂದ ಬಳಲುತ್ತಾರೆ. ಸಾಂಸ್ಕೃತಿಕವಾಗಿ ಭಿನ್ನತೆ ಇದ್ದರೂ ಸಮಸ್ಯೆಗಳು ಬಹುತೇಕ ಸಾಮಾನ್ಯವಾಗಿರುತ್ತದೆ. ಹಾಗಾಗಿ ಆ ಕಥೆಗಳು ಸಾರ್ವತ್ರಿಕ ಎಂದು ಪ್ರಶ್ನೆಯೊಂದಕ್ಕೆ ದೀಪಾ ಭಸ್ತಿ ಪ್ರತಿಕ್ರಿಯಿಸಿದರು.

ವೇದಿಕೆಯಲ್ಲಿ ಪಿಪಿ ಗೋಮತಿ ಮೆಮೋರಿಯಲ್ ಟ್ರಸ್ಟ್‌ನ ಬಂಬಿನ ಚಿನ್ನಮ್ಮ, ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್., ಉಪಸ್ಥಿತರಿದ್ದರು.

ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ.ಎಲ್. ಧರ್ಮ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮ ಸಂಯೋಜಕ ಹಾಗೂ ಹಿರಿಯ ವೈದ್ಯ ಡಾ. ಶ್ರೀನಿವಾಸ ಕಕ್ಕಿಲಾಯ ಸ್ವಾಗತಿಸಿದರು.

ಪಿಪಿ. ಗೋಮತಿ ಬಗ್ಗೆ ಮೀರಾ ಅರಾನ್ಹ ಪರಿಚಯ ನೀಡಿದರು. ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಶ್ರೀನಾಥ್ ಎಂ.ಪಿ. ವಂದಿಸಿದರು.

ಉಡುಪಿಯಲ್ಲಿ ಮುಸ್ಲಿಂ ಬಾಂಧವ್ಯ ವೇದಿಕೆ ಆಗ್ರಹ

ಗೋವನ್ನು ರಾಷ್ಟ್ರೀಯ ಪ್ರಾಣಿಯಾಗಿಸಿ



ಉಡುಪಿ: ಗೋವನ್ನು ರಾಷ್ಟ್ರೀಯ ಪ್ರಾಣಿಯಾಗಿ ಘೋಷಿಸಬೇಕು ಹಾಗೂ ದೇಶಾದ್ಯಂತ ಗೋಹತ್ಯೆ ಮತ್ತು ಗೋಮಾಂಸ ರಫ್ತನ್ನು ಸಂಪೂರ್ಣವಾಗಿ ನಿಷೇಧಿಸುವ ಕಟ್ಟುನಿಟ್ಟಿನ ಕಾನೂನನ್ನು ಜಾರಿಗೊಳಿಸಬೇಕು ಎಂದು ಮುಸ್ಲಿಂ ಬಾಂಧವ್ಯ ವೇದಿಕೆ ಕರ್ನಾಟಕ ಇದರ ವಕ್ತಾರ ಮುಸ್ತಾಕ್ ಹೆನ್ನಾಬೈಲು ಒತ್ತಾಯಿಸಿದ್ದಾರೆ.

ಉಡುಪಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಕಾರ್ಯಾಚರಿಸುತ್ತಿರುವ ಕಸಾಯಿಖಾನೆಗಳನ್ನು ಸಂಪೂರ್ಣವಾಗಿ ಮುಚ್ಚಬೇಕು. ಹಾಗೆಯೇ ಗೋವುಗಳ ರಕ್ಷಣೆಗಾಗಿ ಇರುವ ಗೋಶಾಲೆಗಳಿಗೆ ಅಗತ್ಯವಿರುವ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಂಟಿಯಾಗಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ದೇಶದಲ್ಲಿ ಗೋಹತ್ಯೆ ನಿಷೇಧಿಸುವ ಮತ್ತು ಗೋ ಸಂರಕ್ಷಣೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಸರ್ಕಾರಗಳು ಕೇವಲ ಪ್ರಚಾರಕ್ಕೆ ಸೀಮಿತವಾಗದೆ, ನೈಜ ಕಾಳಜಿಯೊಂದಿಗೆ ಸಮರ್ಪಕ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು. ದೇಶಾದ್ಯಂತ ಗೋಮಾಂಸ ರಫ್ತು ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿರುವುದನ್ನು ತಡೆಯುವ ನಿಟ್ಟಿನಲ್ಲಿ ಇನ್ನೂ ಕೂಡ ದೃಢವಾದ ಹೆಜ್ಜೆಗಳನ್ನು ಇಟ್ಟಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

- ದೇಶದಲ್ಲಿ ಕಾರ್ಯಾಚರಿಸುತ್ತಿರುವ ಕಸಾಯಿಖಾನೆಗಳನ್ನು ಸಂಪೂರ್ಣವಾಗಿ ಮುಚ್ಚಬೇಕು.
- ದೇಶಾದ್ಯಂತ ಏಕರೂಪದ ಗೋಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಗೆ ತರಬೇಕು.

ಕೇಂದ್ರ ಸರ್ಕಾರವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ದೇಶಾದ್ಯಂತ ಏಕರೂಪದ ಗೋಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಗೆ ತರಬೇಕು. ಈ ಮೂಲಕ ಗೋ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಒಂದು ವೇಳೆ ಈ ಕುರಿತು ಸರ್ಕಾರಗಳು ತಕ್ಷಣದ ಕ್ರಮಗಳನ್ನು ಕೈಗೊಳ್ಳದಿದ್ದಲ್ಲಿ, ಸಂವಿಧಾನಾತ್ಮಕ ಹಕ್ಕುಗಳ ಅಡಿಯಲ್ಲಿ ಶಾಂತಿಯುತವಾದ ಹೋರಾಟಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಸ್ಲಿಂ ಬಾಂಧವ್ಯ ವೇದಿಕೆಯ ಪ್ರಮುಖರಾದ ಅಬ್ದುಲ್ ಹಫೀರುಖ್ ಖಾಸಿಮಿ, ಝುಾಕೀರ್ ಹುಸೈನ್ ಉಚ್ಚಿಲ, ಇಬ್ರಾಹಿಂ ನಡುಪದವು ಹಾಗೂ ಕೋಟ ಇಬ್ರಾಹಿಂ ಸಾಹೇಬ್ ಉಪಸ್ಥಿತರಿದ್ದರು.

ಹೆಮ್ಮಾಡಿ ಜನತಾ ಪಿಯು ಕಾಲೇಜ್ ವಿದ್ಯಾರ್ಥಿಗಳ ಸಾಧನೆ

ಕೆಸಿಇಟಿ ಫಲಿತಾಂಶದಲ್ಲಿ ರಾಜ್ಯ ಮಟ್ಟದ 52 ನೇ ರ್‍ಯಾಂಕ್



ಕುಂದಾಪುರ : ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಪ್ರವೇಶ ಪರೀಕ್ಷೆಯ ಫಲಿತಾಂಶದಲ್ಲಿ ಗ್ರಾಮೀಣ ಭಾಗದ ಪ್ರತಿಷ್ಠಿತ ಹೆಮ್ಮಾಡಿಯ ಜನತಾ ಪಿಯು ಕಾಲೇಜಿನ ವಿದ್ಯಾರ್ಥಿಗಳು ಅದ್ವಿತೀಯ ಸಾಧನೆ ಮಾಡಿದ್ದಾರೆ.

ಕಾಲೇಜಿನ ವಿದ್ಯಾರ್ಥಿ ಶ್ರಾವ್ಯ ದೇವಾಡಿಗ ರಾಜ್ಯ ಮಟ್ಟದಲ್ಲಿ 52ನೇ ರ್‍ಯಾಂಕ್ ಪಡೆದು ಗ್ರಾಮೀಣ ಭಾಗದಲ್ಲೇ ಹೊಸ ಸಂಚಲನ ಮೂಡಿಸಿದ್ದಾಳೆ. ಈಕೆ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಯಲ್ಲೂ ರಾಜ್ಯ ಮಟ್ಟದ ಮೂರನೇ ರ್‍ಯಾಂಕ್ ಪಡೆದಿದ್ದಳು. ಕಾಲೇಜಿನ 10 ವಿದ್ಯಾರ್ಥಿಗಳು ಸಾವಿರದ ಒಳಗೆ ರ್‍ಯಾಂಕ್ ಪಡೆದು ಅಮೋಘ ಸಾಧನೆ ಮೆರೆದಿದ್ದಾರೆ.

ವಿದ್ಯಾರ್ಥಿಗಳಾದ ದೀಕ್ಷಾ 98ನೇ ರ್‍ಯಾಂಕ್, ಶ್ರೇಯಸ್ ಪಿ. ಗಾಣಿಗ 137, ಮರಿಯಾ ವಿಯೋಲಾ 392, ಗಗನ್ 415, ಸ್ತುತಿಕಾ 741, ಶ್ರದ್ಧಾ ಎಸ್. ಮೊಗವೀರ 774, ಸಹನ್ಯ 776, ಸಾಕ್ಷಿ ಎಸ್. ಪೂಜಾರಿ 858, ಇಂಚರಾ ಅಶೋಕ್ 952, ಅಕ್ಷತಾ ವೀರಣ್ಣ 1144, ಹೇಮಂತ್ ಗಣೇಶ್ ಸಿ. ವಿ. 1203, ಪ್ರೀತಿಕಾ 1505, ಆಯುಷ್ 2903, ಮಾನ್ಯ ಪೂಜಾರಿ 4508, ಪ್ರಸಾದ್ ಪೂಜಾರಿ 5262, ದೀಕ್ಷಾ 5592 ರ್‍ಯಾಂಕ್ ಪಡೆದಿದ್ದಾರೆ.

ಇಂಜಿನಿಯರಿಂಗ್ ವಿಭಾಗದಲ್ಲಿ ಶ್ರೇಯಸ್ ಪಿ. ಗಾಣಿಗ 769ನೇ ರ್‍ಯಾಂಕ್, ಅಕ್ಷತಾ ವೀರಣ್ಣ 1144 ರ್‍ಯಾಂಕ್, ಹೇಮಂತ್ ಗಾಣಿಗ 1203 ರ್‍ಯಾಂಕ್ ಪಡೆಯುದರ ಮೂಲಕ ಅದ್ವಿತೀಯ ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ, ಬೋಧಕೇತರ ವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 321ರ ಅಡಿಯಲ್ಲಿ 52 ಕ್ರಿಮಿನಲ್ ಪ್ರಕರಣ ಹಿಂಪಡೆಯುವ ನಿರ್ಧಾರಕ್ಕೆ ಆಕ್ಷೇಪ

ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯಿಂದ ಮುಖ್ಯಮಂತ್ರಿಗೆ ಮನವಿ

ಮಂಗಳೂರು: ರಾಜ್ಯ ಸಚಿವ ಸಂಪುಟವು ದಂಡ ಪ್ರಕ್ರಿಯಾ ಸಂಹಿತೆ ಕಲಂ 321ರ ಅಡಿಯಲ್ಲಿ 52 ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯಲು ಕೈಗೊಂಡಿರುವ ನಿರ್ಧಾರದ ಕುರಿತು 'ಹಿಂದೂ ರಾಷ್ಟ್ರ ಸಮನ್ವಯ ಸಮಿತಿ'ಯು ತನ್ನ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿದೆ.

ಈ ಕುರಿತು ಸಮಿತಿಯು ದಕ್ಷಿಣ ಕನ್ನಡ ಚುನಾವಣಾ ತಹಶೀಲ್ದಾರ್ ದಯಾನಂದ ಅವರ ಮೂಲಕ ಮುಖ್ಯಮಂತ್ರಿಗೆ ಸವಿಸ್ತಾರವಾದ ಮನವಿ ಸಲ್ಲಿಸಿದೆ.

ಗಲಭೆ, ಕಾನೂನುಬಾಹಿರ ಗುಂಪುಗೂಡಿಕೆ, ಸರ್ಕಾರಿ ಅಧಿಕಾರಿಗಳ ಮೇಲಿನ ಹಲ್ಲೆ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳ ಧ್ವಂಸದಂತಹ ಗಂಭೀರ ಸ್ವರೂಪದ ಪ್ರಕರಣಗಳನ್ನು ಹಿಂಪಡೆಯಲು ಮುಂದಾಗಿರುವುದು ಸಾರ್ವಜನಿಕ ಶಾಂತಿ ಮತ್ತು ಕಾನೂನು ಸುವ್ಯವಸ್ಥೆಯ ದೃಷ್ಟಿಯಿಂದ ಆತಂಕಕಾರಿ ವಿಷಯವಾಗಿದೆ ಎಂದು ಸಮಿತಿ ತಿಳಿಸಿದೆ. ಪೊಲೀಸ್ ಇಲಾಖೆ ಹಾಗೂ ರಾಜ್ಯ ಕಾನೂನು ಅಭಿಯೋಜನಾ ಇಲಾಖೆಯ ಹಿರಿಯ ಅಧಿಕಾರಿಗಳ ಸ್ಪಷ್ಟ ಆಕ್ಷೇಪಗಳಿದ್ದಾಗಲೂ ಇಂತಹ ನಿರ್ಧಾರ ಕೈಗೊಳ್ಳುವುದು ಕಾರ್ಯನಿರ್ವಹಣಾ ಅಧಿಕಾರದ ದುರುಪಯೋಗವಾಗುತ್ತದೆ ಮತ್ತು ಇದು ಸಮಾಜಕ್ಕೆ ತಪ್ಪು ಸಂದೇಶವನ್ನು ರವಾನಿಸುತ್ತದೆ ಎಂದು ಮನವಿಯಲ್ಲಿ ವಿವರಿಸಲಾಗಿದೆ.



ಸಾರ್ವಜನಿಕ ಅಭಿಯೋಜಕರು ಸರ್ಕಾರದ ಕೇವಲ ಪ್ರತಿನಿಧಿಗಳಲ್ಲ, ಅವರು ನ್ಯಾಯಾಲಯದ ಅಧಿಕಾರಿಗಳಾಗಿದ್ದು, ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳಬೇಕೆಂಬ ಸುಪ್ರೀಂ ಕೋರ್ಟ್ ಮತ್ತು ಕರ್ನಾಟಕ ಹೈಕೋರ್ಟ್‌ನ ವಿವಿಧ ತೀರ್ಪುಗಳನ್ನು ಮನವಿಯಲ್ಲಿ ಉಲ್ಲೇಖಿಸಲಾಗಿದೆ. ಈ ಹಿನ್ನೆಲೆಯಲ್ಲಿ, 52 ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯುವ ಸಚಿವ ಸಂಪುಟದ ನಿರ್ಧಾರವನ್ನು ತಕ್ಷಣವೇ ಜಾರಿಗೆ ತರದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು, ಸಾರ್ವಜನಿಕ ಅಭಿಯೋಜಕರ ಸ್ವತಂತ್ರ ಕಾರ್ಯನಿರ್ವಹಣೆಯ ಮೇಲೆ ಯಾವುದೇ ರಾಜಕೀಯ ಒತ್ತಡ ಹೇರಬಾರದು ಮತ್ತು ಕಾನೂನು ಜಾರಿಯ ಸಿಬ್ಬಂದಿಗಳ ವಿರುದ್ಧದ ಅಪರಾಧಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಕಟ್ಟುನಿಟ್ಟಾಗಿ ಮುಂದುವರಿಸಬೇಕು ಎಂದು ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯ ದಿನಕರ್ ಬಜಾಲ್, ಸುರೇಂದ್ರ ಜಪ್ಪಿನಮೊಗರು, ಹಿಂದೂ ಮಹಾಸಭಾದ ರಾಜ್ಯಾಧ್ಯಕ್ಷ ಲೋಹಿತ್ ಕುಮಾರ್ ಸುವರ್ಣ, ವಕೀಲೆ ಜ್ಯೋತಿ ಗೌಡ, ರಾಜಗೋಪಾಲ್ (ರಾಜ ಗೋವಿಂದ), ಪ್ರಕಾಶ್ ಬಜಾಲ್, ಜಯಪ್ರಕಾಶ್ ಬಜಾಲ್, ಭಾಸ್ಕರ ಆಚಾರ್ಯ, ಭಾಸ್ಕರ ಕೊಳ್ನಾಡು, ವಿಠಲ್ ನಾಯಕ್, ಚಂದ್ರಕಾಂತ್ ಕಾಮತ್, ಗಿರಿಧರ್ ಪೆರ್ಜಿಲ, ಸಂತೋಷ್, ನಿತಿನ್ ಅತ್ತಾವರ, ಪ್ರಕಾಶ್ ಪ್ರಧಾನ್, ಹಿಂದೂ ಜನಜಾಗೃತಿ ಸಮಿತಿಯ ಉಪೇಂದ್ರ, ರಾಜೇಶ್ ಆಚಾರ್ಯ ಉಪಸ್ಥಿತರಿದ್ದರು.

ಕಾಸರಗೋಡು ಜಿಲ್ಲೆಯಲ್ಲಿ ಭಾರೀ ಮಳೆ: ಹಲವೆಡೆ ಅಪಾರ ಹಾನಿ

ಕಾಸರಗೋಡು: ಜಿಲ್ಲೆಯಲ್ಲಿ ಸೋಮವಾರ ರಾತ್ರಿಯಿಂದ ವ್ಯಾಪಕ ಮಳೆಯಾಗಿದೆ. ಇದರಿಂದಾಗಿ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲೂ ನಾಶನಷ್ಟಗಳು ಸಂಭವಿಸಿದ ಬಗ್ಗೆ ವರದಿಯಾಗಿವೆ. ಧಾರಾಕಾರ ಮಳೆಯ ಹಿನ್ನೆಲೆಯಲ್ಲಿ ಮಂಗಳವಾರ ರೆಡ್ ಅಲರ್ಟ್ ಘೋಷಿಸ ಲಾಗಿತ್ತು ಮತ್ತು ಶಿಕ್ಷಣ ಸಂಸ್ಥೆಗಳಿಗೆ ರಜೆ ಸಾರಲಾಗಿತ್ತು.

ಸಿಡಿಲಿನ ಆಘಾತ

ಬಿರುಸಿನ ಮಳೆಯಿಂದಾಗಿ ಸಿಡಿಲಿನ ಆಘಾತದಿಂದ ಮನೆಯ ವಿದ್ಯುತ್ ಉಪಕರಣಗಳು ಹಾನಿಗೀಡಾಗಿ ವ್ಯಾಪಕ ನಾಶನಷ್ಟ ಸಂಭವಿಸಿದ ಘಟನೆ ನಡೆದಿದೆ. ನೀರ್ಚಾಲು ಬಳಿಯ ಬಾಪಾಲಿಪೊನದ ಬಿ.ಎಂ. ಆಲಿಕುಂಞಿ ಎಂಬವರ ಮನೆಗೆ ಸಿಡಿಲು ಬಡಿದುದಾಗಿದೆ. ಇದರಿಂದಾಗಿ ವಿದ್ಯುತ್ ವಯರಿಂಗ್, ವಾಷಿಂಗ್ ಮೆಶಿನ್, ಮೋಟಾರುಪಂಪ್ ಮೊದಲಾದ ಉಪಕರಣಗಳು ಹಾನಿಗೀಡಾಗಿವೆ. ಮನೆಯ ಒಂದು ಬದಿಯ ಕಾಂಕ್ರೀಟ್ ತುಂಡಾಗಿ ಬಿದ್ದಿದೆ. ಸಿಡಿಲಿನ ಬಡಿತದಿಂದ ಮನೆ ಸಮೀಪದ ತೆಂಗಿನ ಮರಕ್ಕೂ ಹಾನಿ ಉಂಟಾಗಿದೆ. ಸಿಡಿಲಿನ ಭಾರೀ ಗರ್ಜನೆ ಕೇಳಿ ಬಂದ ಹಿನ್ನೆಲೆಯಲ್ಲಿ ಮನೆಯವರು ಹೊರಗೆ ಓಡಿ ಬಂದ ಕಾರಣ ಬಹುದೊಡ್ಡ ಅಪಾಯ ತಪ್ಪಿ ಹೋಯಿತು.

ಇದೇ ವೇಳೆ ಕಾಸರಗೋಡು ಜಿಲ್ಲೆಯಲ್ಲಿ ಮುಂದಿನ ಕೆಲವು ದಿನಗಳ ಕಾಲ ಬಿರುಸಿನ ಮಳೆಯಾಗಬಹುದೆಂದು ತಿರುವನಂತಪುರದ ಕೇಂದ್ರ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ಕೆಲವು ದಿನಗಳಿಂದ ಕಾಸರಗೋಡು ಜಿಲ್ಲೆಯಾದ್ಯಂತ ಮಳೆಯಾಗುತ್ತಿದ್ದು, ಜನರು ಎಚ್ಚರಿಕೆಯಿಂದಿರುವಂತೆ ಜಿಲ್ಲಾಡಳಿತ ಸೂಚನೆ ನೀಡಿದೆ.

ಕಿರುಸುದ್ದಿ

ಇರಾನ್ ಅಭಿಮಾನಿಗಳಿಗಿಲ್ಲ ಫಿಫಾ ನೋಡುವ ಭಾಗ್ಯ

ಹೊಸದಿಲ್ಲಿ: ವಿಶ್ವಕಪ್ ಆರಂಭವಾಗುವ ಕೆಲವೇ ದಿನಗಳ ಮೊದಲು ಇರಾನಿ ಅಭಿಮಾನಿಗಳ ಟಿಕೆಟ್ ಹಂಚಿಕೆಯನ್ನು ರದ್ದುಗೊಳಿಸಲಾಗಿದೆ ಎಂದು ಇರಾನ್ ಫುಟ್‌ಬಾಲ್ ಫೆಡರೇಶನ್ ಮಂಗಳವಾರ ತಿಳಿಸಿದೆ. ಇದರಿಂದಾಗಿ ಈಗಾಗಲೇ ಪ್ರಯಾಣ ಯೋಜನೆಗಳನ್ನು ಮಾಡಿಕೊಂಡಿದ್ದ ಬೆಂಬಲಿಗರು ತಮ್ಮ ತಂಡದ ಪಂದ್ಯಗಳಿಗೆ ಹಾಜರಾಗಲು ಸಾಧ್ಯವಾಗಲಿಲ್ಲ.ವಿಶ್ವಕಪ್ ಶುಕ್ರವಾರ ಆರಂಭವಾಗಲಿದ್ದು, ಇರಾನ್ ತನ್ನ ಮೊದಲ ಎರಡು ಗ್ರೂಪ್ ಜಿ ಪಂದ್ಯಗಳನ್ನು ಲಾಸ್ ಏಂಜಲೀಸ್‌ನಲ್ಲಿ ಜೂನ್ 15 ರಂದು ನ್ಯೂಜಿಲೆಂಡ್ ವಿರುದ್ಧ ಮತ್ತು ಜೂನ್ 21 ರಂದು ಬೆಲ್ಜಿಯಂ ವಿರುದ್ಧ ಆಡಲಿದೆ ಮತ್ತು ನಂತರ ಜೂನ್ 26 ರಂದು ಸಿಯಾಟಲ್‌ನಲ್ಲಿ ಈಜಿಪ್ಟ್ ವಿರುದ್ಧ ಆಡಲಿದೆ.ಇರಾನ್ ಫೆಡರೇಶನ್ ಪಂದ್ಯಗಳಿಗೆ ಟಿಕೆಟ್ ಮಾರಾಟ ಪ್ರಕ್ರಿಯೆಯನ್ನು ಈಗಾಗಲೇ ಪ್ರಾರಂಭಿಸಿದೆ, ಆದರೆ ಇನ್ನು ಮುಂದೆ ಅಭಿಮಾನಿಗಳಿಗೆ ಅವುಗಳನ್ನು ಒದಗಿಸಲು ಸಾಧ್ಯವಿಲ್ಲ ಎಂದು ಹೇಳಿದೆ. ಅಧಿಕೃತವಾಗಿ ಘೋಷಿಸಲಾದ ಪ್ರಕ್ರಿಯೆಯನ್ನು ಅವಲಂಬಿಸಿ, ಅನೇಕ ಇರಾನಿನ ಫುಟ್‌ಬಾಲ್ ಅಭಿಮಾನಿಗಳು ಪಂದ್ಯಗಳಿಗೆ ಹಾಜರಾಗಲು ಅಗತ್ಯ ಯೋಜನೆಗಳನ್ನು ಈಗಾಗಲೇ ಮಾಡಿಕೊಂಡಿದ್ದರೂ ಸಹ ಇದು ಸಂಭವಿಸಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಹರಿಹರನ್-ಅರ್ಜುನ್ ಶುಭಾರಂಭ

ಸಿಡ್ನಿ(ಆಸ್ಟ್ರೇಲಿಯಾ): ಮಂಗಳವಾರ ಸಿಡ್ನಿಯಲ್ಲಿ ನಡೆದ 32ನೇ ಸುತ್ತಿನ ಪಂದ್ಯದಲ್ಲಿ ಅಮೆರಿಕದ ಜೋಡಿಯಾದ ಆರ್ಡೆನ್ ಕ್ವಾನ್ ಲೀ ಮತ್ತು ಸ್ಟಾನ್ಲಿ ಕ್ಲಿಂಗ್ ಅವರನ್ನು ಸೋಲಿಸಿ, ಆಸ್ಟ್ರೇಲಿಯನ್ ಓಪನ್‌ನಲ್ಲಿ ಭಾರತದ ಪುರುಷರ ಡಬಲ್ಸ್ ಜೋಡಿ ಹರಿಹರನ್ ಅಂಶಕರುಣನ್ ಮತ್ತು ಎಂ.ಆರ್. ಅರ್ಜುನ್ ಎರಡನೇ ಸುತ್ತಿಗೆ ಪ್ರವೇಶಿಸಿದರು. ಬಿಡಬ್ಲ್ಯೂಎಫ್ ಸರ್ಕ್ಯೂಟ್‌ನಲ್ಲಿ ಉನ್ನತ ಶ್ರೇಯಾಂಕ ಹೊಂದಿರುವ ಭಾರತೀಯ ಜೋಡಿ, ಇತ್ತೀಚೆಗೆ ಮುಕ್ತಾಯಗೊಂಡ ಇಂಡೋನೇಷ್ಯಾ ಓಪನ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ ನಂತರ ಲೀ ಮತ್ತು ಕ್ಲಿಂಗ್ ವಿರುದ್ಧ 21-13, 21-13 ಅಂತರದ ಆತ್ಮವಿಶ್ವಾಸದ ಜಯದೊಂದಿಗೆ ತನ್ನ ಪುರುಷರ ಡಬಲ್ಸ್ ಅಭಿಯಾನವನ್ನು ಪ್ರಾರಂಭಿಸಿತು. ಇತ್ತ ಅಮ್ಸಕರುಣನ್-ಅರ್ಜುನ್ ಅವರಂತಹ ಸ್ಥಾಪಿತ ಜೋಡಿಗಳು ಮುಖ್ಯ ಡ್ರಾದಲ್ಲಿ ಮಿಂಚಿದರೆ, ಅತ್ತ ಭಾರತದ ಸನೀತ್ ದಯಾನಂದ್ ತಮ್ಮ ಅರ್ಹತಾ ಪಂದ್ಯಗಳನ್ನು ಗೆದ್ದ ನಂತರ ಪಂದ್ಯಾವಳಿಯ ಪುರುಷರ ಸಿಂಗಲ್ಸ್ ಮುಖ್ಯ ಡ್ರಾಗೆ ಮುನ್ನಡೆದರು. ಅರ್ಹತಾ ಸುತ್ತಿನಲ್ಲಿ ನಾಲ್ಕನೇ ಶ್ರೇಯಾಂಕಿತ ದಯಾನಂದ್, ಮೊದಲು ಸ್ಥಳೀಯ ಭರವಸೆಯ ಕರೋನೊ ಅವರನ್ನು 21-17, 21-15 ಅಂತರದಿಂದ ಸೋಲಿಸಿ, ನಂತರ ಮಲೇಷ್ಯಾದ ಮಿಂಗ್ ಹಾಂಗ್ ಲಿಮ್ ವಿರುದ್ಧ 21-9, 21-16 ಅಂತರದಿಂದ ಜಯಗಳಿಸಿ ಅರ್ಹತೆ ಪಡೆದರು. ಅವರು ತಮ್ಮ ಮೊದಲ ಮುಖ್ಯ ಡ್ರಾ ಪಂದ್ಯದಲ್ಲಿ ಚೀನಾದ ಹು ಝೆ ಆನ್ ಅವರನ್ನು ಎದುರಿಸಲಿದ್ದಾರೆ.

ಸಿರಾಜ್‌ಗೆ ವಿಶ್ರಾಂತಿ, ಪ್ರಸಿದ್ಧ ಕೃಷ್ಣಗೆ ಬುಲಾವ್

ಮುಂಬೈ: ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಐರ್ಲೆಂಡ್ ಮತ್ತು ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಗಳಿಗಾಗಿ ಭಾರತ ತಂಡದಲ್ಲಿ ಪ್ರಸಿದ್ಧ ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದ್ದು, ವೇಗಿ ಮೊಹಮ್ಮದ್ ಸಿರಾಜ್‌ಗೆ ವಿಶ್ರಾಂತಿ ನೀಡಲು ಆಜ್ಞೆ ನೀಡಲಾಗಿದೆ. ಜೂನ್ ಅಂತ್ಯ ಮತ್ತು ಜುಲೈನಲ್ಲಿ ನಡೆಯಲಿರುವ ಐರ್ಲೆಂಡ್ ಹಾಗೂ ಇಂಗ್ಲೆಂಡ್‌ನೊಂದಿಗೆ ಟಿ20 ಪಂದ್ಯಗಳಿಗೆ ತಂಡ ಬಿಡುಗಡೆ ಈ ಹಿಂದೆ ಮಾಡಲಾಗಿದೆ. ಟಿ20 ವಿಭಾಗದಲ್ಲಿ ಬಹು ದಿನಗಳ ನಂತರ ಮೊಹಮ್ಮದ್ ಸಿರಾಜ್ ಅವರನ್ನು ಆಯ್ಕೆ ಮಾಡಲಾಗಿತ್ತು. ಆದರೆ ಬಿಸಿಸಿಐ ಈ ಬಗ್ಗೆ ಮರುಪರಿಶೀಲನೆ ನಡೆಸಿದೆ. ಮೆಡಿಕಲ್ ತಂಡದೊಂದಿಗೆ ಚರ್ಚೆಗಳನ್ನು ಮಾಡಿದ ನಂತರ ಅವರಿಗೆ ವಿರಾಮ ನೀಡಲಾಗಿದ್ದು, ಅವರ ಬದಲಿಗೆ ಪ್ರಸಿದ್ಧ ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಬಿಸಿಸಿಐ ಪ್ರಕಟಣೆ ಹೊರಡಿಸಿದೆ. ವೈದ್ಯರೊಂದಿಗೆ ಮತ್ತು ಮ್ಯಾನೇಜ್ಮೆಂಟ್‌ನೊಂದಿಗೆ ಈ ಕುರಿತು ಚರ್ಚಿಸಲಾಗಿದೆ. ಐಪಿಎಲ್‌ನಲ್ಲಿ ಆಡಿದ್ದ ಸಿರಾಜ್ ನಂತರ ಅಫ್ಘಾನಿಸ್ತಾನದೊಂದಿಗೆ ಟೆಸ್ಟ್ ಪಂದ್ಯವನ್ನೂ ಆಡಿದ್ದಾರೆ. ಹೀಗಾಗಿ ಅವರ ವರ್ಕ್ ಲೋಡ್ ಹೆಚ್ಚಾಗಿದ್ದು, ಅವರಿಗೆ ವಿಶ್ರಾಂತಿಯ ಅವಶ್ಯವಿದೆ. ಅವರ ಬದಲಿಗೆ ಪ್ರಸಿದ್ಧ ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಬಿಸಿಸಿಐ ಹೇಳಿಕೆಯಲ್ಲಿ ತಿಳಿಸಿದೆ.

ಏಕದಿನಕ್ಕೆ ರೋಹಿತ್, ಪಾಂಡ್ಯ ಲಭ್ಯ

ಮುಂಬೈ: ಅನುಭವಿ ಬ್ಯಾಟರ್ ರೋಹಿತ್ ಶರ್ಮ ಮತ್ತು ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಏಕದಿನ ಪಂದ್ಯವಾಡಲು ಸಿದ್ಧವಾಗಿದ್ದು, ಬಿಸಿಸಿಐನ ಶ್ರೇಷ್ಠತಾ ಕೇಂದ್ರದಿಂದ ಗ್ರೀನ್ ಸಿಗ್ನಲ್ ಪಡೆದಿದ್ದಾರೆ. ಭಾನುವಾರದಿಂದ ಭಾರತ ಹಾಗೂ ಅಫ್ಘಾನಿಸ್ತಾನ ನಡುವೆ ಏನದಿನ ಸರಣಿ ಶುರುವಾಗಲಿದೆ. ಐಪಿಎಲ್ ವೇಳೆ ಗಾಯಗೊಂಡಿದ್ದ ರೋಹಿತ್ ಶರ್ಮ ಮತ್ತು ಹಾರ್ದಿಕ್ ಪಾಂಡ್ಯ ಅವರು ಈ ಸರಣಿಯಲ್ಲಿ ಭಾಗವಹಿಸಲು ಸಿದ್ಧವಾಗಿದ್ದರೂ ಬಿಸಿಸಿಐನ ಕ್ರೀಡಾ ವಿಜ್ಞಾನ ವಿಭಾಗದಿಂದ ಫಿಟ್ನೆಸ್ ಪರೀಕ್ಷೆಯಲ್ಲಿ ಪಾಸಾಗಬೇಕಿತ್ತು. ಈ ನಡುವೆ ಮಂಗಳವಾರದಂದು ಶ್ರೇಷ್ಠತಾ ಕೇಂದ್ರ ರೋಹಿತ್ ಹಾಗೂ ಹಾರ್ದಿಕ್ ಪಾಂಡ್ಯ ಅವರಿಗೆ ಅನುಮತಿ ನೀಡಿದೆ. ಜೂನ್ 2ರಂದು ಹಾರ್ದಿಕ್ ಪರೀಕ್ಷೆ ನಡೆದಿದ್ದರೆ, ಈ ಮೊದಲೇ ರೋಹಿತ್ ಪಾಸಾಗಿದ್ದಾರೆಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ. ಏಕದಿನ ತಂಡ ಇನ್ನೂ ಪ್ರಕಟವಾಗಬೇಕಿದೆ.

ಭಾರತ ಪ್ರತಿನಿಧಿಸಿದ ವೈಭವ್ ಸೂರ್ಯವಂಶಿ

ಮುಂಬೈ: ಭಾರತ ಎ ಹಾಗೂ ಶ್ರೀಲಂಕಾ ಎ ತಂಡದ ನಡುವೆ ನಡೆದ ಏಕದಿನ ಪಂದ್ಯದಲ್ಲಿ 15 ವರ್ಷದ ವೈಭವ್ ಸೂರ್ಯವಂಶಿ ಕಣಕ್ಕಿಳಿಯುವುದರೊಂದಿಗೆ ದಾಖಲೆ ಬರೆದರು. ಐಪಿಎಲ್‌ನಲ್ಲಿ 700ಕ್ಕೂ ಹೆಚ್ಚು ರನ್ ಬಾರಿಸಿದ ವೈಭವ್ ಸೂರ್ಯವಂಶಿ ಇದೇ ಮೊದಲ ಬಾರಿಗೆ ಭಾರತ ಎ ತಂಡಕ್ಕೆ ಆಯ್ಕೆಯಾದ್ದರು. ಶ್ರೀಲಂಕಾ, ಅಫ್ಘಾನಿಸ್ತಾನದೊಂದಿಗೆ ಭಾರತ ಎ ತಂಡ ತ್ರಿಕೋನ ಸರಣಿಯನ್ನಾಡಲಿದೆ. ಮಂಗಳವಾರ ಶ್ರೀಲಂಕಾ ಎ ಮತ್ತು ಭಾರತ ಎ ತಂಡಗಳ ನಡುವೆ ಮೊದಲ ಪಂದ್ಯ ನಡೆಯಿತು. ಈ ಪಂದ್ಯದಲ್ಲಿ ವೈಭವ್ ಅವರನ್ನು ಭಾರತದ ಆಡುವ 11ರ ಬಳಗದಲ್ಲಿ ಸೇರಿಸಲಾಗಿತ್ತು. ಹೆಚ್ಚಿನ ಕೊಡುಗೆ ನೀಡಿಲ್ಲವಾದರೂ ವೈಭವ್ ಸೂರ್ಯವಂಶಿ ಭಾರತ ಎ ತಂಡವನ್ನು ಪ್ರತಿನಿಧಿಸಿದ ಅತಿ ಕಿರಿಯ ಆಟಗಾರ ಅನಿಸಿಕೊಂಡು ದಾಖಲೆ ಮಾಡಿದ್ದಾರೆ.

ಇನ್ನು ಫುಟ್‌ಬಾಲ್ ಕಿಕ್

ಫಿಫಾ ವಿಶ್ವಕಪ್‌ಗೆ ಕಣ ಸಿದ್ಧ | ಪ್ರಚಲಿತ ಫೇವರಿಟ್ ಕ್ರೀಡೆ ಶುರುವಿಗೆ ಕ್ಷಣಗಣನೆ

ವಿಶ್ವಾದ್ಯಂತ ಕ್ರೀಡಾಭಿಮಾನಿಗಳಿಗೆ ಇನ್ನು ಮುಂದೆ ಫುಟ್‌ಬಾಲ್ ಕಿಕ್. ನೆಚ್ಚಿನ ತಂಡವನ್ನು ಬೆಂಬಲಿಸುವ ಉತ್ಸಾಹ. ಪಂದ್ಯಗಳ ರೋಚಕತೆ ಮತ್ತು ಕೊನೆ ಕ್ಷಣದ ಆತಂಕ. ಪಿಲೆಯ ಮಾಯೆ, ಮರಡೋನಾದ ಸಾಹಸ, ಜರ್ಮನಿಯ ಆಧಿಪತ್ಯ, ಮೆಸ್ಸಿಯ ಕನಸು ಮತ್ತು ವಿಶ್ವದ ಕೋಟ್ಯಂತರ ಕ್ರೀಡಾಭಿಮಾನಿಗಳ ಭಾವನೆ ಹೊತ್ತ ಕೂಟ ಫಿಫಾ ಫುಟ್‌ಬಾಲ್ ವಿಶ್ವಕಪ್ ಶುಕ್ರವಾರದಿಂದ ಶುರುವಾಗಲಿದೆ. ಆಟಕ್ಕೆ ಮೈದಾನ, ಕಾದಟಕ್ಕೆ ಆಟಗಾರರು ಮತ್ತು ವೀಕ್ಷಣೆಗೆ ಕೈಯಲ್ಲಿ ಸಂಜೆಯ ಸ್ನ್ಯಾಕ್ಸ್ ಹಿಡಿದುಕೊಂಡು ಕೂಡಲು ಅಭಿಮಾನಿಗಳು ಅಣಿಯಾಗಿದ್ದಾರೆ. ಆಟದ ಮರ್ಮ ಮತ್ತು ಶೈಲಿಯ ಕ್ರೇಜ್‌ನೊಂದಿಗೆ ಇತಿಹಾಸ ತಿಳಿದುಕೊಳ್ಳುವ ತವಕ ಜನರಲ್ಲಿದೆ. ಫಿಫಾ ವಿಶ್ವಕಪ್ ಇತಿಹಾಸ ಕೂಡ ತವಕದಿಂದಲೇ ಕೇಳುವಷ್ಟು ರೋಚಕವಾಗಿದೆ ಮತ್ತು ಹುಬ್ಬೇರಿಸುವಷ್ಟು ಕುತೂಹಲಕಾರಿಯಾಗಿದೆ. ಹಾಗಿದ್ದರೆ ಇತಿಹಾಸವೇನು? ಮಾಹಿತಿ ಇಲ್ಲಿದೆ.





ಫಿಫಾ ವಿಶ್ವಕಪ್ ಅಂದರೇನು?

ಫಿಫಾ ವಿಶ್ವಕಪ್ ವಿಶ್ವದ ಅತ್ಯಂತ ಪ್ರತಿಷ್ಠಿತ ಫುಟ್‌ಬಾಲ್ ಟೂರ್ನಿ. 1930ರಲ್ಲಿ ಆರಂಭವಾದ ಈ ಟೂರ್ನಿ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತದೆ. 1942 ಮತ್ತು 1946ರಲ್ಲಿ ದ್ವಿತೀಯ ವಿಶ್ವಯುದ್ಧದ ಕಾರಣ ಟೂರ್ನಿ ನಡೆದಿರಲಿಲ್ಲ. ವಿಶ್ವದ ಪ್ರತಿಷ್ಠಿತ ತಂಡಗಳು ಇದರಲ್ಲಿ ಭಾಗವಹಿಸುತ್ತವೆ. 2026ರಿಂದ 48 ತಂಡಗಳು ಭಾಗವಹಿಸುತ್ತಿವೆ.

13 ತಂಡಗಳಿಂದ ಆರಂಭ

ಮೊದಲ ವಿಶ್ವಕಪ್‌ಗೆ ಕೇವಲ 13 ತಂಡಗಳು ಭಾಗವಹಿಸಿದ್ದವು. ದಕ್ಷಿಣ ಅಮೆರಿಕದ ಉರುಗ್ವೆ ಆತಿಥ್ಯ ವಹಿಸಿತ್ತು. ಫೈನಲ್‌ನಲ್ಲಿ ಆತಿಥೇಯ ಉರುಗ್ವೆ, ಅರ್ಜೆಂಟಿನಾ ತಂಡವನ್ನು 4-2 ಗೋಲುಗಳಿಂದ ಸೋಲಿಸಿ ಮೊದಲ ವಿಶ್ವ ಚಾಂಪಿಯನ್ ಆಯಿತು.

ಆರಂಭ ಹೇಗಾಯಿತು?

1890ರ ಆಸುಪಾಸಿನಲ್ಲಿ ಫುಟ್‌ಬಾಲ್ ಕ್ರೇಜ್ ವಿಶ್ವಾದ್ಯಂತ ಜನರ ಮನದಲ್ಲಿ ಮನೆ ಮಾಡಿತ್ತು. ಸಾಮಾನ್ಯ ಜನರಲ್ಲಿ ಆಟದ ಬಗ್ಗೆ ಕ್ರೇಜ್. ಹಲವು ವರ್ಷಗಳ ನಂತರ 1904ರಲ್ಲಿ ಫಿಫಾ(ಫೆಡರೇಶನ್ ಇಂಟರ್‌ನ್ಯಾಷನಲ್ ಡೆ ಫುಟ್‌ಬಾಲ್ ಅಸೋಶಿಯೇಷನ್) ಎಂಬ ಸಂಸ್ಥೆ ಹುಟ್ಟಿಕೊಂಡಿತು. ಹೆಚ್ಚುತ್ತಿದ್ದ ಆಟಗಾರರ ಸಂಖ್ಯೆಯನ್ನು ಗಮನಿಸಿದ ಫಿಫಾ 1928ರಲ್ಲಿ ಪ್ರತ್ಯೇಕ ವಿಶ್ವ ಚಾಂಪಿಯನ್‌ಶಿಪ್ ಆಯೋಜಿಸಲು ನಿರ್ಧರಿಸಿತು. ಅದರ ಫಲವಾಗಿ 1930ರಲ್ಲಿ ಮೊದಲ ಫಿಫಾ ವಿಶ್ವಕಪ್ ನಡೆಯಿತು.

ಮರಕನಾಜೊ ಆಘಾತ

ಫಿಫಾ ವಿಶ್ವಕಪ್ ಇತಿಹಾಸದಲ್ಲಿ ಮರಕನಾಜೊ ಆಘಾತ ಅಚಲವಾಗಿದೆ. 1950ರ ವಿಶ್ವಕಪ್‌ನಲ್ಲಿ ಬ್ರೆಜಿಲ್ ಚಾಂಪಿಯನ್ ಆಗುವುದು ಬಹುತೇಕ ಖಚಿತ ಎನ್ನಲಾಗುತ್ತಿತ್ತು. ರಿಯೊ ಡಿ ಜನೈರೊದ ಪ್ರಸಿದ್ಧ ಮರಕನಾ ಕ್ರೀಡಾಂಗಣದಲ್ಲಿ ಸುಮಾರು ಎರಡು ಲಕ್ಷ ಅಭಿಮಾನಿಗಳು ಬ್ರೆಜಿಲ್ ವಿಜಯೋತ್ಸವಕ್ಕೆ ಸಿದ್ಧರಾಗಿದ್ದರು. ಆದರೆ ಉರುಗ್ವೆ 2-1 ಅಂತರದಲ್ಲಿ ಬ್ರೆಜಿಲ್‌ನ್ನು ಸೋಲಿಸಿ ಇತಿಹಾಸ ನಿರ್ಮಿಸಿತು. ಈ ಘಟನೆಯನ್ನು ಮರಕನಾಜೊ ಎಂದು ಕರೆಯಲಾಗುತ್ತದೆ. ಫುಟ್‌ಬಾಲ್ ಇತಿಹಾಸದ ಅತಿದೊಡ್ಡ ಆಘಾತಗಳಲ್ಲಿ ಇದು ಒಂದು.

ವಿಶ್ವಯುದ್ಧದ ಪರಿಣಾಮ

ವಿಶ್ವಕಪ್‌ನ ರೋಚಕತೆ ಮತ್ತು ಆಟಗಾರರ ನಡುವಿದ್ದ ಅಬ್ಬರ ವಿಶ್ವಾದ್ಯಂತ ಅಭಿಮಾನಿಗಳನ್ನು ಸೆಳೆದಿತ್ತು. ಅಂದಿನ ದಿನಗಳಲ್ಲಿ ಫಿಫಾ ವಿಶ್ವಕಪ್‌ಗಾಗಿ ಜನರು ಕಾಯುತ್ತಿದ್ದರು. ಆದರೆ 1934 ಮತ್ತು 1938ರ ವಿಶ್ವಕಪ್‌ಗಳನ್ನು ಇಟಲಿ ಗೆದ್ದಿತು. ಈ ಮೂಲಕ ಸತತ ಎರಡು ವಿಶ್ವಕಪ್ ಗೆದ್ದ ಮೊದಲ ರಾಷ್ಟ್ರವಾಯಿತು. ನಂತರದ ಅವಧಿಯಲ್ಲಿ ಜಗತ್ತನ್ನು ಎರಡನೇ ಮಹಾಯುದ್ಧ ಆವರಿಸಿತು. ಪರಿಣಾಮವಾಗಿ 1942 ಮತ್ತು 1946ರ ವಿಶ್ವಕಪ್‌ಗಳನ್ನು ರದ್ದುಗೊಳಿಸಲಾಯಿತು. ಎಂಟು ವರ್ಷಗಳ ವಿರಾಮದ ಬಳಿಕ 1950ರಲ್ಲಿ ವಿಶ್ವಕಪ್ ಮತ್ತೆ ಆರಂಭವಾಯಿತು.



ಪಿಲೆ ಯುಗ(1958-1970)

ಪಿಲೆ ಎಂಬ 17 ವರ್ಷದ ಯುವ ಆಟಗಾರ 1958ರ ವಿಶ್ವಕಪ್‌ನಲ್ಲಿ ಮಿಂಚಿದರು. ಅವರ ಅದ್ಭುತ ಪ್ರದರ್ಶನ ದಿಂದ ಬ್ರೆಜಿಲ್ ಮೊದಲ ಬಾರಿಗೆ ವಿಶ್ವಕಪ್ ಗೆದ್ದಿತು. 1962 ಮತ್ತು 1970ರಲ್ಲೂ ಬ್ರೆಜಿಲ್ ಪ್ರಶಸ್ತಿ ಗೆದ್ದು ಆಧುನಿಕ ಫುಟ್‌ಬಾಲ್‌ನ ಮಹಾಶಕ್ತಿಯಾಯಿತು. ಪಿಲೆ ಮೂರು ವಿಶ್ವಕಪ್ ಗೆದ್ದ ಏಕೈಕ ಆಟಗಾರ ಎಂಬ ದಾಖಲೆ ಇಂದಿಗೂ ಅಚಲವಾಗಿದೆ.



ಮಾಂತ್ರಿಕ ಮರಡೋನಾ

ಡಿಯೇಗೊ ಮರಡೋನಾ ಅವರ ಹೆಸರಿಲ್ಲದೆ ಫಿಫಾ ವಿಶ್ವಕಪ್ ಇತಿಹಾಸ ಅಪೂರ್ಣ. 1986ರ ಮೆಕ್ಸಿಕೋ ವಿಶ್ವಕಪ್‌ನಲ್ಲಿ ಅವರು ಅರ್ಜೆಂಟೀನಾವನ್ನು ತಂಡವನ್ನು ಗಟ್ಟಿಗೊಳಿಸಿದ್ದಲ್ಲದೆ ಚಾಂಪಿಯನ್ ಪಟ್ಟಕ್ಕೇರಿಸಿದರು. ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಅವರು ಗಳಿಸಿದ ಹ್ಯಾಂಡ್ ಆಫ್ ಗಾಡ್ ಗೋಲು ಮತ್ತು ಗೋಲ್ ಆಫ್ ದ ಸೆಂಚುರಿ ವಿಶ್ವಕಪ್ ಇತಿಹಾಸದ ಅತ್ಯಂತ ಪ್ರಸಿದ್ಧ ಕ್ಷಣಗಳಾಗಿವೆ.

ಯುರೋಪಿನ ಪ್ರಾಬಲ್ಯ(1974-1990)

ಫಿಫಾ ಫುಟ್‌ಬಾಲ್ ಇತಿಹಾಸದಲ್ಲಿ ಅವಧಿಯಲ್ಲಿ ಜರ್ಮನಿ ಮತ್ತು ಇಟಲಿ ತಂಡಗಳು ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದವು. 1974ರಲ್ಲಿ ಪಶ್ಚಿಮ ಜರ್ಮನಿ, 1982ರಲ್ಲಿ ಇಟಲಿ ಮತ್ತು 1990ರಲ್ಲಿ ಮತ್ತೆ ಜರ್ಮನಿ ಚಾಂಪಿಯನ್ ಆದವು. ಇದೇ ಸಮಯದಲ್ಲಿ ಫುಟ್‌ಬಾಲ್ ಹೆಚ್ಚು ವೃತ್ತಿಪರ ಮತ್ತು ತಾಂತ್ರಿಕ ಆಟವಾಗಿ ಬೆಳೆಯಿತು.



ಬ್ರೆಜಿಲ್‌ಗೆ ಐತಿಹಾಸಿಕ ಸೋಲಿನ ಆಘಾತ

2014ರ ವಿಶ್ವಕಪ್‌ಗೆ ಬ್ರೆಜಿಲ್ ಆತಿಥ್ಯ ವಹಿಸಿತ್ತು. ಸೆಮಿಫೈನಲ್‌ನಲ್ಲಿ ಜರ್ಮನಿ ವಿರುದ್ಧ ಬ್ರೆಜಿಲ್ ಆಡಿದ ಪಂದ್ಯ ಫುಟ್‌ಬಾಲ್ ಇತಿಹಾಸದ ಅತ್ಯಂತ ಆಘಾತಕಾರಿ ಫಲಿತಾಂಶಗಳಲ್ಲಿ ಒಂದು. ಜರ್ಮನಿ 7-1 ಅಂತರದಲ್ಲಿ ಬ್ರೆಜಿಲ್‌ನ್ನು ಸೋಲಿಸಿತು. ಈ ಸೋಲು ಬ್ರೆಜಿಲ್ ಅಭಿಮಾನಿಗಳಿಗೆ ಇಂದಿಗೂ ನೋವಿನ ನೆನಪು.

ಹೊಸ ಚಾಂಪಿಯನ್ಸ್ (1998-2010)

1998ರಲ್ಲಿ ಫ್ರಾನ್ಸ್ ತನ್ನ ಮೊದಲ ವಿಶ್ವಕಪ್ ಗೆದ್ದಿತು. 2002ರಲ್ಲಿ ಬ್ರೆಜಿಲ್ ಐದನೇ ಬಾರಿ ಚಾಂಪಿಯನ್ ಆಯಿತು. ಇದು ಇಂದಿಗೂ ದಾಖಲೆಯಾಗಿದೆ. 2006ರಲ್ಲಿ ಇಟಲಿ, 2010ರಲ್ಲಿ ಸ್ಪೇನ್ ಪ್ರಶಸ್ತಿ ಗೆದ್ದವು. ಸ್ಪೇನ್‌ನ 2010ರ ಜಯ ಅವರ ಟಿಕಿ-ಟಾಕಾ ಶೈಲಿಯ ಯಶಸ್ಸಿನ ಸಂಕೇತವಾಗಿತ್ತು.



ಮೆಸ್ಸಿಯ ಕನಸಿನ ಸಾಕಾರ

ಫುಟ್‌ಬಾಲ್ ದಂತಕಥೆ ಲಿಯೋನಲ್ ಮೆಸ್ಸಿ ಅವರ ವೃತ್ತಿಜೀವನದಲ್ಲಿ ಉಳಿದಿದ್ದ ಏಕೈಕ ಪ್ರಮುಖ ಟ್ರೋಫಿ ವಿಶ್ವಕಪ್ ಆಗಿತ್ತು. ಕತಾರ್‌ನಲ್ಲಿ ನಡೆದ 2022ರ ವಿಶ್ವಕಪ್‌ನಲ್ಲಿ ಅರ್ಜೆಂಟೀನಾ ಫ್ರಾನ್ಸ್ ವಿರುದ್ಧದ ರೋಚಕ ಫೈನಲ್‌ನಲ್ಲಿ ಜಯ ಸಾಧಿಸಿತು. ಮೆಸ್ಸಿ ವಿಶ್ವಕಪ್ ಎತ್ತಿಹಿಡಿದ ಕ್ಷಣವನ್ನು ಫುಟ್ಬಾಲ್ ಇತಿಹಾಸದ ಅತ್ಯಂತ ಭಾವನಾತ್ಮಕ ಕ್ಷಣಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತದೆ.

ಫ್ರಾನ್ಸ್ ಪುನರಾಗಮನ(2018)

ಆಧುನಿಕ ಫುಟ್‌ಬಾಲ್ ತಾರೆಯರಲ್ಲಿ ಒಬ್ಬರಾದ ಕಿಲಿಯನ್ ಎಂಬಾಪ್ಪೆ ಅವರ ಅದ್ಭುತ ಆಟದ ನೆರವಿನಿಂದ ಫ್ರಾನ್ಸ್ 20 ವರ್ಷಗಳ ಬಳಿಕ ಎರಡನೇ ವಿಶ್ವಕಪ್ ಗೆದ್ದಿತು. ಇದು ಫ್ರಾನ್ಸ್‌ನ ಪುನರಾಗಮನ ಎನ್ನಲಾಗುತ್ತದೆ. 20 ವರ್ಷದ ಮಟ್ಟಿಗೆ ಹಿನ್ನಡೆ ಅನುಭವಿಸಿದ್ದ ಫ್ರಾನ್ಸ್ ಮತ್ತೊಮ್ಮೆ ವಿಶ್ವಕಪ್ ಗೆದ್ದಿತ್ತು.

ಜೂನ್ 27ರಿಂದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ 2ನೇ ಹಂತದ ಪಂದ್ಯ ಆರಂಭ

ಮಹಾರಾಜ ಟ್ರೋಫಿಗೆ ಹುಬ್ಬಳ್ಳಿ ಸಿದ್ಧ

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಹಸರಿನಿಂದ ಕೂಡಿದ ಇಲ್ಲಿನ ನೃಪತುಂಗ ಬೆಟ್ಟದ ತಪ್ಪಲಿನಲ್ಲಿರುವ ರಾಜನಗರದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ) ಕ್ರೀಡಾಂಗಣದಲ್ಲಿ ಮಹಾರಾಜ ಟ್ರೋಫಿ ನಡೆಸಲು ಸಿದ್ಧತೆ ಆರಂಭವಾಗಿದೆ.

ಮಹಾರಾಜ ಟ್ರೋಫಿಯ ಎರಡನೇ ಹಂತದ ಟಿ20 ಪಂದ್ಯಗಳು ಜೂ.27ರಿಂದ ಜುಲೈ 3ರ ವರೆಗೆ ನಡೆಯಲಿವೆ. ಕಳೆದ ನಾಲ್ಕು ತಿಂಗಳ(ಫೆಬ್ರವರಿ) ಹಿಂದೆ ಕರ್ನಾಟಕ ಹಾಗೂ ಜಮ್ಮು ಕಾಶ್ಮೀರ ನಡುವೆ ಫೈನಲ್ ಪಂದ್ಯಕ್ಕೆ ಈ ಮೈದಾನ ವೇದಿಕೆಯಾಗಿತ್ತು. ಅದರಲ್ಲಿ ಜಮ್ಮು-ಕಾಶ್ಮೀರ ಜಯಿಸಿತ್ತು. ಈಗ ಮಹಾರಾಜ ಟ್ರೋಫಿಯ ಒಟ್ಟು 12 ಪಂದ್ಯಗಳು ಇಲ್ಲಿ ನಡೆಯಲಿವೆ.

ಕೆಎಸ್‌ಸಿಎ ವ್ಯವಸ್ಥಾಪನಾ ಸಮಿತಿ ಸದಸ್ಯ ಅವಿನಾಶ ವೈದ್ಯ ಹಾಗೂ ಮಹಾರಾಜ ಟ್ರೋಫಿಯ ಆಡಳಿತ ಮಂಡಳಿ ಸದಸ್ಯ ಎ.ವಿ.ಶಶಿಧರ ಅವರು ಇತ್ತೀಚೆಗೆ ಕ್ರೀಡಾಂಗಣಕ್ಕೆ ಭೇಟಿ ನೀಡಿ, ಸೌಲಭ್ಯಗಳನ್ನು ಪರಿಶೀಲಿಸಿದ್ದಾರೆ. ಪಂದ್ಯಗಳು ನೇರ ಪ್ರಸಾರವಾಗಲಿದ್ದು, ಈ ಹಿನ್ನೆಲೆಯಲ್ಲಿ ಲೈವ್ ಸೋನಿ ನೆಟ್‌ವರ್ಕ್ ಬ್ರಾಡ್‌ಕಾಸ್ಟಿಂಗ್ ತಂಡವೂ ಸಹ ಕ್ರೀಡಾಂಗಣಕ್ಕೆ ಬಂದು ಪರಿಶೀಲಿಸಿದೆ.

8 ಸಾವಿರ ಪ್ರೇಕ್ಷಕರಿಗೆ ಅವಕಾಶ:: ಪಂದ್ಯ ವೀಕ್ಷಣೆಗೆ ಬರುವ ಜನರಿಗೆ 7ರಿಂದ 8 ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗುತ್ತಿದೆ. ಗೇಟ್ ಸಂಖ್ಯೆ 1, 3, 4 ಹಾಗೂ 5ರಲ್ಲಿ ಟಿಕೆಟ್ ಪಡೆಯಲು ಅವಕಾಶ ನೀಡಲಾಗುತ್ತದೆ. ಈಗಾಗಲೇ ಸ್ವಚ್ಛತಾ ಕಾರ್ಯ ಮುಗಿದಿದ್ದು, ಸ್ಟ್ಯಾಂಡ್‌ಗಳ ಅಳವಡಿಸುವ ಕಾರ್ಯ ನಡೆಯುತ್ತಿದೆ. ಮೈದಾನದಲ್ಲಿ ಪ್ರಕರವಾದ ಬೆಳಕು ಬೀಳುವ ಉದ್ದೇಶದಿಂದ ಈ ಮೊದಲಿದ್ದ ಹ್ಯಾಲೋಜನ್ ವಿದ್ಯುತ್ ದೀಪಗಳ ಬದಲಿಸಿ ಎಲ್‌ಇಡಿ ದೀಪಗಳ ಅಳವಡಿಸಲಾಗುತ್ತದೆ. ಹ್ಯಾವಲ್ಸ್ ಕಂಪನಿಗೆ ಟೆಂಡರ್ ನೀಡಲಾಗಿದ್ದು, ಇದರಿಂದ ಶೇ.30ರಷ್ಟು ವಿದ್ಯುತ್ ದರ ಉಳಿತಾಯ ಆಗಲಿದೆ. 6 ಕ್ಯಾಮೆರಾ ಅಳವಡಿಸಲಾಗುತ್ತಿದೆ.



ಹುಲ್ಲು ಕತ್ತರಿಸುವ ಯಂತ್ರ ಗ್ರಾಸ್ ಕಟಿಂಗ್, ಲಾನ್ ಮೋವರ್‌ಗಳಿವೆ. ಸೂಪರ್ ಸಾಪರ್ ಒಂದು ಇದ್ದು, ಶಿವಮೊಗ್ಗದಿಂದ ಇನ್ನೊಂದು ಹಾಗೂ ಟಾರ್ಪಲಿನ್ ಗ್ರೌಂಡ್ ಕವರ್ ತರಿಸಿಕೊಳ್ಳಲು ಚಿಂತನೆ ನಡೆಸಲಾಗಿದೆ. ಇದರಿಂದ ಶೇ.70ರಷ್ಟು ಕವರ್ ಮಾಡಬಹುದು. ಸದ್ಯ 10 ಜನ ಗ್ರೌಂಡ್ ಮನ್‌ಗಳಿದ್ದು, 40 ಜನರ ಅವಶ್ಯಕತೆ ಇದೆ.

> **ಜೂ.27ರಿಂದ ಜುಲೈ 3ರ ವರೆಗೆ ಹುಬ್ಬಳ್ಳಿಯಲ್ಲಿ ಮಹಾರಾಜ ಟ್ರೋಫಿಯ ಪಂದ್ಯಗಳು ನಡೆಯಲಿವೆ. ಈಗಾಗಲೇ ಸಿದ್ಧತೆಗಳು ಆರಂಭಗೊಂಡಿವೆ. ಆಯೋಜನೆಗೆ ಸಂಬಂಧಿಸಿದಂತೆ ಕೆಎಸ್‌ಸಿಎ ವ್ಯವಸ್ಥಾಪನಾ ಸಮಿತಿ ಸದಸ್ಯರ ಸಭೆ ಜೂ.12ರಂದು ನಿಗದಿಯಾಗಿದ್ದು, ಬಳಿಕವೇ ಪೂರ್ಣ ವಿವರಗಳು ಲಭ್ಯವಾಗಲಿವೆ.**
> ■ ವೀರಣ್ಣ ಸವಡಿ, ಸಂಚಾಲಕ, ಕೆಎಸ್‌ಸಿಎ ಧಾರವಾಡ ವಲಯ

2018ರಲ್ಲಿ ಕೆಪಿಎಲ್ ನಡೆದಿತ್ತು: 2018ರಲ್ಲಿ ಹುಬ್ಬಳ್ಳಿಯಲ್ಲಿ ಕರ್ನಾಟಕ ಪ್ರೀಮಿಯರ್ ಲೀಗ್ ನಡೆದಿತ್ತು. ಆದಾದ ಬಳಿಕ ಇಲ್ಲಿ ಟಿ-20 ಪಂದ್ಯಗಳು ನಡೆದಿಲ್ಲ. ಕೆಪಿಎಲ್ ಹೆಸರು ಬದಲಿಸಿ ಮಹರಾಜ ಟ್ರೋಫಿ ಎಂದು ಹೆಸರಿಡಲಾಗಿದ್ದು, ಮತ್ತೆ ಹುಬ್ಬಳ್ಳಿಯಲ್ಲಿ ಪಂದ್ಯ ಆಯೋಜನೆಗೆ ಅವಕಾಶಗಳು ದೊರೆಕಿದೆ. ರಣಜಿ ಅಲ್ಲದೆ ಭಾರತ 'ಎ' ಮತ್ತು ವೆಸ್ಟ್ ಇಂಡಿಸ್ 'ಎ', ಭಾರತ 'ಎ'ಶ್ರೀಲಂಕಾ 'ಎ', ಭಾರತ 'ಎ' ನ್ಯೂಜಿಲೆಂಡ್ 'ಎ' ತಂಡಗಳ ನಡುವಿನ ಪಂದ್ಯಗಳು ಮತ್ತು ಕರ್ನಲ್ ಸಿ.ಕೆ.ನಾಯ್ಡು, 19 ವರ್ಷದೊಳಗಿನವರ ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯಗಳು ಸಹ ಇಲ್ಲಿ ನಡೆದಿವೆ.

ಜೂನಿಯರ್ ಟೆನಿಸ್: ಮಹತ್ವದ ಸಾಧನೆ

ಬೆಂಗ್ಳೂರಿನ ಸೃಷ್ಟಿ ಕಿರಣ್ ವಿಶ್ವ ನಂ.1 ಆಟಗಾರ್ತಿ

ಬೆಂಗಳೂರು: ಬೆಂಗಳೂರು ಮೂಲದ 13 ವರ್ಷದ ಟೆನಿಸ್ ಪ್ರತಿಭೆ ಸೃಷ್ಟಿ ಕಿರಣ್ ಜೂನಿಯರ್ ಟೆನಿಸ್ ವಲಯದಲ್ಲಿ ಮತ್ತೊಂದು ಮಹತ್ವದ ಸಾಧನೆ ಮಾಡಿದ್ದಾರೆ. ಅಂಡರ್-13 ವಿಭಾಗದ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿ ವಿಶ್ವ ನಂ.1 ಆಟಗಾರ್ತಿಯಾಗಿ ಹೊರಹೊಮ್ಮಿದ್ದಾರೆ.

ಇತ್ತೀಚಿನ ತಿಂಗಳುಗಳಲ್ಲಿ ಸೃಷ್ಟಿ ಅದ್ಭುತ ಪ್ರದರ್ಶನ ನೀಡಿದ್ದು, ಸತತ ಐದು ಐಟಿಎಫ್ ಜೂನಿಯರ್ ಪ್ರಶಸ್ತಿಗಳನ್ನು ಗೆದ್ದಿದ್ದರು. ಕಳೆದ ವಾರ ನಡೆದ ಗ್ವಾಟೆಮಾಲಾದ ಐಟಿಎಫ್ ವರ್ಲ್ಡ್ ಟೆನಿಸ್ ಟೂರ್ ಜೂನಿಯರ್ಸ್ ಜೆ100 ಟೂರ್ನಿಯಲ್ಲಿ ರನ್ನರ್-ಅಪ್ ಆಗಿದ್ದರು. ಈ ಸಾಧನೆಗಳ ಫಲವಾಗಿ ಅವರು ಐಟಿಎಫ್ ಜೂನಿಯರ್ ರ್‍ಯಾಂಕಿಂಗ್‌ನಲ್ಲಿ 357ನೇ ಸ್ಥಾನಕ್ಕೇರಿದ್ದು, ಅಂಡರ್-13 ವಿಭಾಗದಲ್ಲಿ ವಿಶ್ವದ ಅಗ್ರಸ್ಥಾನಕ್ಕೇರಿದ್ದಾರೆ.

ಈ ಸಾಧನೆಗೆ ಮತ್ತಷ್ಟು ವಿಶೇಷತೆ ತಂದಿರುವ ಸಂಗತಿ ಎಂದರೆ, ಸೃಷ್ಟಿ ಕೇವಲ ಎಂಟು ರ್‍ಯಾಂಕಿಂಗ್ ಟೂರ್ನಿಗಳಲ್ಲಷ್ಟೇ ಪಾಲ್ಗೊಂಡಿದ್ದರು. ಸಾಮಾನ್ಯವಾಗಿ ಗರಿಷ್ಠ ಹತ್ತು ಟೂರ್ನಿಗಳ ಫಲಿತಾಂಶಗಳನ್ನು ಪರಿಗಣಿಸಿ ರ್‍ಯಾಂಕಿಂಗ್ ಲೆಕ್ಕ ಹಾಕಲಾಗುತ್ತದೆ.



ಆರ್ಥಿಕ ಹಾಗೂ ವ್ಯವಸ್ಥಾಪನಾ ಸಮಸ್ಯೆಗಳಿಂದ ಎರಡು ಟೂರ್ನಿಗಳಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೂ, ಉಳಿದ ಟೂರ್ನಿಗಳಲ್ಲಿನ ಅತ್ಯುತ್ತಮ ಪ್ರದರ್ಶನದ ಮೂಲಕ ಅವರು ವಿಶ್ವದ ಅಗ್ರಸ್ಥಾನವನ್ನು ಅಲಂಕರಿಸಿದ್ದಾರೆ.

ಬೆಂಬಲದಿಂದ ಸಾಧ್ಯ: ಸೃಷ್ಟಿ: ನನ್ನ ವಯೋಮಾನದ ವಿಭಾಗದಲ್ಲಿ ವಿಶ್ವ ನಂ.1 ಆಗಿರುವುದು ತುಂಬಾ ಸಂತೋಷದ ವಿಚಾರ. ವರ್ಷದ ಆರಂಭದಲ್ಲಿ ಇದನ್ನು ನಾನು ನಿರೀಕ್ಷಿಸಿರಲಿಲ್ಲ. ನನ್ನ ಕೋಚ್‌ಗಳು, ಕುಟುಂಬ ಹಾಗೂ ಬೆಂಬಲ ತಂಡದ ಶ್ರಮಕ್ಕೆ ಇದು ಫಲವಾಗಿದೆ, ಎಂದು ಸೃಷ್ಟಿ ಸಂತಸ ವ್ಯಕ್ತಪಡಿಸಿದ್ದಾರೆ.

ಭಾರತ ಎ ಶುಭಾರಂಭ

ದಂಬುಲಾ(ಶ್ರೀಲಂಕಾ): ಐಪಿಎಲ್ ವೈಫಲ್ಯದಿಂದ ಕಂಗೆಟ್ಟಿದ್ದ ಬ್ಯಾಟರ್ ರುತುರಾಜ್ ಗಾಯಕ್ವಾಡ್ ನೀಲಿ ಬಣ್ಣದ ಅಂಗಿಯಲ್ಲಿ ಏಕದಿನ ಕಣದಲ್ಲಿಳಿದ ತಕ್ಷಣವೇ ಲಯಕ್ಕೆ ಮರಳಿದರು. ಮಂಗಳವಾರ ಶುರುವಾಗಿರುವ ಶ್ರೀಲಂಕಾ ಎ, ಭಾರತ ಎ ಮತ್ತು ಅಫ್ಘಾನಿಸ್ತಾನ ಎ ನಡುವಿನ ತ್ರಿಕೋನ ಸರಣಿಯ ಮೊದಲ ಪಂದ್ಯದಲ್ಲಿ ಶ್ರೀಲಂಕಾ ಎ ತಂಡದೊಂದಿಗೆ ಭಾರತ 8 ರನ್‌ಗಳ ರೋಚಕ ಗೆಲುವು ಸಾಧಿಸಿದೆ.


ತಮ್ಮ ಸಾಮಾನ್ಯ ಆರಂಭಿಕ ಕ್ರಮಾಂಕವನ್ನು ಬಿಟ್ಟು ಮಧ್ಯಮ ಕ್ರಮಾಂಕದಲ್ಲಿ ಗಟ್ಟಿಯಾಗಿ ನಿಂತುಕೊಂಡ ಗಾಯಕ್ವಾಡ್(101) ಮೊದಲು ಬ್ಯಾಟಿಂಗ್ ಮಾಡಿದ ಭಾರತ ಎ ತಂಡದ ಪರ ಶತಕ ಬಾರಿಸಿದರು. ಅವರ ಆಟಕ್ಕೆ ತಿಲಕ್ ವರ್ಮಾ(60) ಅತ್ಯುತ್ತಮ ಬ್ಯಾಟಿಂಗ್‌ನೊಂದಿಗೆ ಸಾಥ್ ಕೊಟ್ಟ ನಂತರ ಭಾರತ 50 ಓವರುಗಳಲ್ಲಿ 6 ವಿಕೆಟ್ ನಷ್ಟಕ್ಕೆ 277 ರನ್ ಮಾಡಿತು. ಗುರಿ ಬೆನ್ನತ್ತಿದ ಶ್ರೀಲಂಕಾ 269 ರನ್‌ಗಳಿಗೆ ಉರುಳಿತು. ನಿರೋಶನ್(47), ಅವಿಷ್ಕಾ(45) ರನ್‌ನೊಂದಿಗೆ ಉತ್ತಮ ಆರಂಭ ಒದಗಿಸಿದ್ದರು. ಮಧ್ಯಮ ಕ್ರಮಾಂಕದಲ್ಲಿ ಸದೀರ (46), ಸಹನ್ (74) ರನ್‌ನೊಂದಿಗೆ ಮಿಂಚಿದ ನಂತರ ಶ್ರೀಲಂಕಾ ಗೆಲುವಿನ ಕಡೆ ಸಾಗಿತ್ತು. ಆದರೆ ಭಾರತೀಯ ಸಾಂಘಿಕ ಬೌಲಿಂಗ್ ದಾಳಿ ಅದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಅರ್ಷದ್ ಖಾನ್, ಅನುಕುಲ್, ಆಯುಷ್ ಮತ್ತು ವಿಪ್ರಾಜ್ ನಿಗಮ್ ತಲಾ 2 ವಿಕೆಟ್ ಪಡೆದರು. ಅನ್ಮುಲ್ 1 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್

ಭಾರತ ಎ 277/6(50 ಓವರ್): ರುತುರಾಜ್ 101, ತಿಲಕ್ 60; ಶಿರಾಝ್ 67/2, **ಶ್ರೀಲಂಕಾ ಎ 48.5 ಓವರ್‌ಗಳಲ್ಲಿ 269/10:** ಸಹನ್ 74, ಸದೀರ 46; ಅರ್ಷದ್ 24/2

ಪದಬಂಧ

ರಾಜಾ ಸಂಗಮೇಶ ಹಿರೇಮಠ



6010

ಎಡದಿಂದ ಬಲಕ್ಕೆ
3.ಹಿಡಿದುಕೊಳ್ಳುವುದನ್ನು ಹೀಗೆನ್ನಬಹುದು (2)
4.ತಾವರೆಯಂಥಹ ವದನ-ಮುಖಕಮಲ (6)
7.ಗಣಿಗಳಿಂದ ದೊರಕುವ ಕಚ್ಚಾ ದ್ರವ್ಯ (3)
8.ವೇದನೆಯಿಂದ ಕೂಗುವಿಕೆ (3)
9.ಇದು ಎಲೆಯಿಂದ ಮಾಡಿದ ಬಟ್ಟಲು (2)
10.ಬೀರುತ್ತಿರುವ ಪ್ರಭೆ (2)
12.ಗಂಡುಕೋತಿಯಿಲ್ಲಿ ತಿರುಗಿ ಕುಳಿತಿದೆ (3)
14.ನರಕಾಧಿಪತಿ ಮೊದಲಿರುವ ಜೋಡಿ (3)
15.ಅಂಧವಿಶ್ವಾಸವನ್ನು ಹೀಗೂ ಹೇಳುತ್ತೇವೆ (6)
18.ಏನನ್ನಾದರೂ ಪಡೆಯಲು ಕೇಳುವುದು (2)

ಮೇಲಿನಿಂದ ಕೆಳಕ್ಕೆ
1.ಆರ್ದ್ರತೆ-ಒದ್ದೆಯಿಂದ ಕೂಡಿದ್ದು (2)
2.ಉತ್ತರಭಾರತದಲ್ಲಿನ ಪರ್ವತಗಳು ಉಲ್ಟಾ ಕಾಣುತ್ತಿವೆ (2)
3.ಜನ ನಡುವೆ ಇಟ್ಟುಕೊಂಡ ಯಕೃತ್ತು (6)
5.ಹಾವಿನಾಕಾರದ ಜಡೆಬಿಲ್ಲೆ (3)
6.ಇದು ದಕ್ಷಿಣ ದೇಶಕ್ಕೆ ಸಂಬಂಧಿಸಿದ್ದು (3)
8.ಹೃದಯದಿಂದ ಮೂಡಿ ಬಂದ ಗೀತೆ (6)
11.ಪ್ರಕಾಶವು ಇಲ್ಲಿ ಬೀರುತ್ತಿದೆ (3)
13.ವಿಷವನ್ನು ಕುಡಿದವ ತಲೆಕೆಳಗಾಗಿದ್ದಾನೆ (3)
16.ಸಂಹಾರಕ ಸ್ವರೂಪನಾದ ದೇವರು (2)
17.ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ (2)

6009 ಉತ್ತರ

ಎಡದಿಂದ ಬಲಕ್ಕೆ:
1.ದುಮ್ಮಾನ 3.ದಾರಿಹೋಕ
5.ವನೇಚರಿ 6.ಬಿರುಗಾಳಿ
8.ಶವಾಗಾರ 11.ಭದ್ರಗಜ
14.ಅಥರ್ವಣ 15.ರಸಕಸಿ
16.ರಣರಂಗ 17.ವಿಳೇಯ

ಮೇಲಿನಿಂದ ಕೆಳಕ್ಕೆ
:1.ದುರುದ್ದೇಶ
2.ನವರಂಗಾ 3.ದಾರಿಬಿಡು
4.ಕದಳಿ 7.ಗಾರುಡಿಗ
9.ವಾಯುಪಥ
10.ಬಾಣಸಿಗ
12.ವೀರಭದ್ರ
13.ಜಲಾಶಯ 14.ಅಪಾರ

ಕಿರುಸುದ್ದಿ

ವಿದ್ಯುತ್ ಅವಘಡಕ್ಕೆ ವ್ಯಕ್ತಿ ಬಲಿ

ಸುಳ್ಯ: ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಪೈಂಬಚಾಲ್ ಸಮೀಪ ತೋಟಕೊಚ್ಚಿ ಎಂಬಲ್ಲಿ ವಿದ್ಯುತ್ ಕಂಬಕ್ಕೆ ಮರ ಬಿದ್ದ ಪರಿಣಾಮ ಲೈನ್ ಆಫ್ ಮಾಡುವ ಸಂದರ್ಭದಲ್ಲಿ ವಿದ್ಯುತ್ ಪ್ರವಹಿಸಿ ಯುವಕನೋರ್ವ ಮೃತಪಟ್ಟ ಘಟನೆ ಮಂಗಳವಾರ ಸಂಜೆ ನಡೆದಿದೆ.



ಮೃತರನ್ನು ಪೈಂಬಚಾಲ್ ತೋಟಕೊಚ್ಚಿ ನಿವಾಸಿ ಮಹಮ್ಮದ್ ಶರೀಫ್ (35) ಎಂದು ಗುರುತಿಸಲಾಗಿದೆ. ವಿದ್ಯುತ್ ಕಂಬಕ್ಕೆ ಮರ ಬಿದ್ದ ಕಾರಣ ಲೈನ್ ಆಫ್ ಮಾಡುವ ಸಂದರ್ಭದ ವೇಳೆಯಲ್ಲಿ ಆಕಸ್ಮಿಕವಾಗಿ ವಿದ್ಯುತ್ ಪ್ರವಹಿಸಿದ್ದು, ಗಂಭೀರವಾಗಿ ಗಾಯಗೊಂಡ ಮಹಮ್ಮದ್ ಶರೀಫ್ ಅವರನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟರು.

ರಸ್ತೆ ಅಪಘಾತ ಬೈಕ್ ಸವಾರ ಸಾವು

ನಾಪೋಕ್ಲು: ಚಲಿಸುತ್ತಿದ್ದ ಬೈಕ್‌ಗೆ ಕಾರೊಂದು ಡಿಕ್ಕಿ ಆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ಇಲ್ಲಿಗೆ ಸಮೀಪದ ಚೋನಕೆರೆ ಎಂಬಲ್ಲಿ ಮಂಗಳವಾರ ನಡೆದಿದೆ. ನೆಲಜಿ ಕಡೆಯಿಂದ ನಾಪೋಕ್ಲುವಿನತ್ತ ತೆರಳುತ್ತಿದ್ದ ಚೋನಕೆರೆ ನಿವಾಸಿ ಚೀಯಕ ಪೂವಂಡ ಬೋಪಣ್ಣ (ಬೋಪಣಿ 77) ಎಂಬವರು ಚಲಾಯಿಸುತ್ತಿದ್ದ ಬೈಕ್‌ಗೆ ಎಮ್ಮೆಮಾಡುವಿನಿಂದ ನಾಪೋಕ್ಲುವಿನತ್ತ ತೆರಳುತ್ತಿದ್ದ ಆಲ್ಟೊ ಕಾರು ಹಿಂಬದಿಯಿಂದ ಡಿಕ್ಕಿಯಾಗಿ ಬೈಕಿನಿಂದ ಬಿದ್ದು ಸವಾರ ಬೋಪಣ್ಣ ಸ್ಥಳದಲ್ಲಿ ಮೃತಪಟ್ಟಿದ್ದಾರೆ.ಘಟನಾ ಸ್ಥಳಕ್ಕೆ ಗ್ರಾಮಾಂತರ ವೃತ್ತ ನಿರೀಕ್ಷಕ ಎಂ. ಉಮೇಶ್ , ಠಾಣಾಧಿಕಾರಿ ರಾಘವೇಂದ್ರ ಮತ್ತು ಸಿಬ್ಬಂದಿ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತರು ಪತ್ನಿ ಮೀನಾ ಹಾಗೂ ಪುತ್ರ ನಿರನ್ ಅವರನ್ನು ಅಗಲಿದ್ದಾರೆ.



ಬೈಕ್‌ಗೆ ಕಂಟೇನರ್ ಲಾರಿ ಡಿಕ್ಕಿ: ಸವಾರ ಮೃತ್ಯು

ಕುಂದಾಪುರ: ಕಂಟೇನರ್ ಲಾರಿ ಹಾಗೂ ಬೈಕ್ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟ ಘಟನೆ ಸೋಮವಾರ ಸಂಜೆ ಕೋಟೇಶ್ವರ– ಹಾಲಾಡಿ ರಸ್ತೆಯ ಅಂಡರ್‌ಪಾಸ್ ಸಮೀಪ ಸೋಮವಾರ ಸಂಜೆ ನಡೆದಿದೆ. ಮೃತರನ್ನು ಕೋಟೇಶ್ವರ ಮಾರ್ಕೋಡು ನಿವಾಸಿ ಪ್ರದೀಪ್ ಪೂಜಾರಿ (35) ಎಂದು ಗುರುತಿಸಲಾಗಿದೆ. ಅವರು ಗಾರೆ ಕೆಲಸ ಮಾಡಿಕೊಂಡಿದ್ದರು ಎಂದು ತಿಳಿದು ಬಂದಿದೆ. ಉಡುಪಿ ಕಡೆಯಿಂದ ಬಂದಿದ್ದ ಬೃಹತ್ ಕಂಟೇನರ್ ಲಾರಿಯೊಂದು ಕೋಟೇಶ್ವರ ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರಸ್ತೆಯ ಅಂಡರ್‌ಪಾಸ್ ಬಳಿ ಯು– ಟರ್ನ್ ಪಡೆಯಲು ಮುಂದಕ್ಕೆ ಸಾಗುತ್ತಿದ್ದ ವೇಳೆ, ಪೇಟೆ ಕಡೆಯಿಂದ ಹಾಲಾಡಿ ರಸ್ತೆಗೆ ತೆರಳುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ಡಿಕ್ಕಿಯ ಪರಿಣಾಮ ಬೈಕ್ ಸಹಿತ ಕೆಳಗೆ ಬಿದ್ದ ಪ್ರದೀಪ್ ಪೂಜಾರಿ ಅವರ ಮೇಲೆ ಲಾರಿ ಹರಿದ ಪರಿಣಾಮ ಗಂಭೀರ ಗಾಯಗೊಂಡು ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಕುಂದಾಪುರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವಾಹಿತ ಮಹಿಳೆ ನಾಪತ್ತೆ

ಕಡಬ: ಕಡಬ ತಾಲೂಕಿನ ನೂಜಿಬಾಳ್ತಿಲ ಗ್ರಾಮದ ಕಲ್ಲುಗುಡ್ಡೆ ನೀರಾರಿ ಮನೆ ನಿವಾಸಿ ಮೊಹಮ್ಮದ್ ಆಶಿಕ್ ಅವರ ಪತ್ನಿ ಅರ್‌ಫೈನ್ ಮೆಹತಾಬ್ (18) ಅವರು ನಾಪತ್ತೆಯಾಗಿರುವ ಕುರಿತು ಕಡಬ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜೂ. 7 ರಂದು ಮನೆಯಿಂದ ಹೊರಟು ಹೋಗಿರುವ ಅರ್‌ಫೈನ್ ಮೆಹತಾಬ್ ಅವರು ಮನೆಗೆ ಹಿಂದಿರುಗಿ ಬಾರದೇ ಸಂಬಂಧಿಕರ ಮನೆಗೂ ಹೋಗದೇ ನಾಪತ್ತೆಯಾಗಿರುವ ಬಗ್ಗೆ ಆಕೆಯ ಪತಿ ಕಡಬ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಅರ್‌ಫೈನ್ ಮೆಹತಾಬ್ ಅವರ ಬಗ್ಗೆ ಸುಳಿವು ದೊರೆತಲ್ಲಿ ಕಡಬ ಪೊಲೀಸ್ ಠಾಣೆ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕಾಗಿ ಪೊಲೀಸ್ ಪ್ರಕಟನೆ ತಿಳಿಸಿದೆ.



ವೃದ್ಧೆ ನೇಣು ಬಿಗಿದು ಆತ್ಮಹತ್ಯೆ

ಮುಳ್ಳೇರಿಯ: ವೃದ್ಧೆಯೋರ್ವ ಮನೆ ಬಳಿಯ ಶೆಡ್‌ನಲ್ಲಿ ನೇಣು ಬಿಗಿದು ಸಾವಿಗೀಡಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಆದೂರು ಪೊಲೀಸ್ ಠಾಣೆ ವ್ಯಾಪ್ತಿಯ ಅಡೂರು ಮಣಿಯೂರು ಚರ್ಲಕ್ಕೈ ನಿವಾಸಿ ದಿ.ಮಹಾಲಿಂಗ ನಾಯ್ಕರ ಪತ್ನಿ ಪಾರ್ವತಿ (80) ಮೃತಪಟ್ಟವರು. ಸೋಮವಾರ ಮನೆಯಲ್ಲಿ ಯಾರೂ ಇಲ್ಲದ ಸಂದರ್ಭ ಅವರು ಆತ್ಮಹತ್ಯೆಗೆ ಶರಣಾಗಿರಬಹುದೆಂದು ಸಂಶಯಿಸಲಾಗಿದೆ. ಆದೂರು ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಮೃತರು ಮಕ್ಕಳಾದ ಐತ್ತಮ್ಮ, ಅಕ್ಕಯ್ಯ, ಶ್ರೀಧರ ನಾಯ್ಕ, ವಾಸು ನಾಯ್ಕ ಅವರನ್ನು ಅಗಲಿದ್ದಾರೆ.

ಉಪ್ಪು ನೀರಿನ ಸಮಸ್ಯೆಯ ನಡುವೆಯೂ ಛಲಬಿಡದ ಕೃಷಿಕಗೆ ಸಿಕ್ಕಿದೆ ಮನೆಮಂದಿಯ ಸಾಥ್

ಹಡಿಲು ಭೂಮಿಯಲ್ಲಿ ನಳನಳಿಸಿತು ಭತ್ತ!

ದಿಗಂತ ವಿಶೇಷ

ಕುಂದಾಪುರ: ಉಪ್ಪು ನೀರಿನ ಸಮಸ್ಯೆ, ಕೂಲಿಯಾಳುಗಳಿಗೆ ಕೊರತೆ ಮೊದಲಾದ ಕಾರಣಗಳಿಂದ ಕರಾವಳಿಯ ಕೋಡಿ ಭಾಗದಲ್ಲಿ ಹಲವು ವರ್ಷಗಳಿಂದ ರೈತರು ಕೃಷಿ ಕಾರ್ಯಕ್ಕೆ ವಿದಾಯ ಹೇಳಿದ್ದು ಇಲ್ಲಿನ 49 ಎಕರೆ ಹಡಿಲು ಭೂಮಿಗಳನ್ನು ಗೇಣಿ ಪಡೆದು ಭತ್ತದ ಕೃಷಿ ಮಾಡಿ ಉತ್ತಮ ಬೆಳೆ ತೆಗೆದು ಬರಡು ಭೂಮಿಗೆ ಕೃಷಿಕರೊಬ್ಬರು ಜೀವ ಕಳೆ ತುಂಬಿ ಮಾದರಿಯಾಗಿದ್ದಾರೆ.

ಕುಂದಾಪುರ ತಾಲೂಕಿನ ಕೋಡಿ ನಿವಾಸಿ ಗಂಗಾಧರ ಪೂಜಾರಿ ಈ ಬಾರಿ ಮತ್ತಷ್ಟು ಎಕರೆ ಹಡಿಲು ಭೂಮಿ ಗೇಣಿ ಪಡೆದು ಭತ್ತದ ಕೃಷಿ ಮಾಡುತ್ತಿದ್ದಾರೆ.



ತಂದೆಯ ಪ್ರೇರಣೆ-ಹಡಿಲು ಭೂಮಿ ಹಸಿರು!

ಕೋಡಿ ಗಂಗಾಧರ ಪೂಜಾರಿಯವರು ಕಳೆದ 39 ವರ್ಷಗಳಿಂದ ಸೌಂಡ್ಸ್ ಎಂಡ್ ಲೈಟ್ಸ್ ಹಾಗೂಡೆಕೊರೇಶನ್‌ವೃತ್ತಿಮಾಡಿಕೊಂಡಿದ್ದಾರೆ. ತಂದೆ ತೊಪ್ಪು ಗಣಪ ಪೂಜಾರಿಯವರು ಏಳು ಮಕ್ಕಳಿಗೆ ಕೃಷಿ ಕಾಯಕದಿಂದಲೇ ಹೊಟ್ಟೆ-ಬಟ್ಟೆ, ವಿದ್ಯಾಭ್ಯಾಸ ಕೊಡಿಸಿದ್ದು ಮಗನಾದ ಇವರಿಗೆ ಸ್ಫೂರ್ತಿ. ಬಾಲ್ಯದಿಂದ ಕೃಷಿ-ಕೈಂಕರ್ಯದಲ್ಲಿ ತಂದೆಯೊಂದಿಗೆ ಆಸಕ್ತಿಯಿಂದ ತೊಡಗಿಸಿಕೊಂಡಿದ್ದು, ಕೃಷಿ ಬದುಕಲ್ಲಿ ನೆಮ್ಮದಿ ಕಂಡುಕೊಂಡಿದ್ದರು. ತಂದೆಯ ನಿಧನದ ಬಳಿಕ ಕೃಷಿಯನ್ನು ತಾವು ಮುಂದುವರೆಸುತ್ತಿದ್ದಾರೆ.

ಮೊದಲಿಗೆ ತಮ್ಮದೆ ಒಂದಷ್ಟು ಗದ್ದೆ ಹಾಗೂ ಮತ್ತೊಂದಷ್ಟು ಎಕರೆ ಬೇರೆಯವರ ಹಡಿಲು ಭೂಮಿಯನ್ನು ಗೇಣಿ ಪಡೆದು ಸಾಂಪ್ರದಾಯಿಕ ಭತ್ತ ಕೃಷಿ ಮಾಡುತ್ತಾ ಬಂದಿರುವ ಅವರು ಇತ್ತೀಚೆಗೆ ಯಾಂತ್ರೀಕೃತ ಭತ್ತದ ಕೃಷಿ ಮಾಡುತ್ತಿದ್ದಾರೆ.

ಬರೋಬ್ಬರಿ 49 ಎಕರೆ ಹಡಿಲು ಭೂಮಿ ಗೇಣಿ

ಕಳೆದ 22 ವರ್ಷದಿಂದ ಕೋಡಿ ಚಕ್ರೇಶ್ವರೀ ದೇವಸ್ಥಾನ ಆಸುಪಾಸಿನಲ್ಲಿ ಯಾಂತ್ರೀಕೃತ ಭತ್ತದ ಕೃಷಿ ನಡೆಸುತ್ತಿದ್ದು ಈ ಬಾರಿ ತಮ್ಮ ಸ್ವಂತದ 1 ಎಕರೆ, ಪತ್ನಿಯ 3 ಎಕರೆ ಗದ್ದೆಯಲ್ಲಿ ಹಾಗೂ ಹಡಿಲು ಬಿದ್ದ ಇತರರ 49 ಎಕರೆ ಭೂಮಿ (ಒಟ್ಟು 53 ಎಕರೆ) ಹಸನಾಗಿಸಲು ಈಗಾಗಲೇ ಅಣಿಯಾಗಿದ್ದು ಮ್ಯಾಟ್ ಪದ್ಧತಿ ಮೂಲಕ ಭತ್ತದ ಕೃಷಿ ಮಾಡಲು 3000 ಚಾಪೆ (ಟ್ರೇ) ನೇಜಿಯನ್ನು ಮನೆಯಂಗಳದಲ್ಲಿ ಸಿದ್ಧಪಡಿಸದ್ದಾರೆ. ಟ್ರೇ, ಕೊಟ್ಟಿಗೆ ಗೊಬ್ಬರ, ಗುಡ್ಡೆ ಮಣ್ಣು, ಹೊಯಿಗೆ ಮಣ್ಣು ಸೇರಿಸಿ ಗಾಳಿಸಿ, ಹದಗೊಳಿಸಿ ನೀರು ಸಿಂಪಡಿಸಿ 1 ಮ್ಯಾಟ್ ಗೆ 110 ಗ್ರಾಂ ಭತ್ತದ ಬೀಜ ಹಾಕಬೇಕು. 18–19 ದಿನಗಳಲ್ಲಿ ನಾಟಿಗೆ ಸಿದ್ಧವಾಗಲಿದೆ. 1 ಎಕರೆಗೆ ಅಂದಾಜು 70 ಟ್ರೇ ಅಗತ್ಯವಿದೆ.

ಸರಕಾರದ ಪ್ರೋತ್ಸಾಹ ಅಗತ್ಯ

ಕೃಷಿಗೆ ತಂದೆಯೇ ಸ್ಫೂರ್ತಿಯಾಗಿದ್ದು ಹಣ ಮಾಡುವ ಉದ್ದೇಶಕ್ಕಿಂತ ಬೆಳೆದ ಬೆಳೆ ಉತ್ತಮವಾಗಿ ಕೈಸೇರಿದರೆ ತೃಪ್ತಿ ಸಿಗುತ್ತದೆ. ಕೋಡಿ ಭಾಗದ ಮಣ್ಣು, ನೀರಿನ ಆಧಾರದಲ್ಲಿ ಟ್ರೇ ಮೂಲಕ ಬೀಜ ಬಿತ್ತನೆ ಮಾಡುತ್ತಿದ್ದೇವೆ. 2– 3 ದಿನಗಳಿಂದ ಬಿತ್ತನೆ ಕಾರ್ಯ ಶುರು ಮಾಡಿದ್ದೇವೆ. ಮಳೆ ವಿಳಂಬ ಆಗಿದ್ದರಿಂದ ಬಿತ್ತನೆ ಕಾರ್ಯ ವಿಳಂಬಗೊಂಡಿದೆ. ಬಹಳಷ್ಟು ಸವಾಲುಗಳು ಎದುರಾಗುತ್ತಿರುವುದರಿಂದ ಕೃಷಿಯಿಂದ ಹಲವರು ವಿಮುಖರಾಗುತ್ತಿದ್ದಾರೆ. ಸರಕಾರ ಕೃಷಿಕರಿಗೆ ಕೊಡುವ ಬೆಂಬಲ ಬೆಲೆ ಹೆಚ್ಚಿಸಬೇಕು. ಮುಂದಿನ ದಿನಗಳಲ್ಲಿ ಕೃಷಿಯೇ ಆಸರೆ. ಭತ್ತದ ಬೆಳೆಗೆ ಸರಕಾರದ ಪ್ರೋತ್ಸಾಹ ಅಗತ್ಯ. ಕೋಡಿ ಭಾಗದಲ್ಲಿ ಉಪ್ಪು ನೀರಿನ ಸಮಸ್ಯೆ ಹೆಚ್ಚಿದ್ದು ವೈಜ್ಞಾನಿಕ ರೀತಿಯಲ್ಲಿ ರಿಂಗ್ ರೋಡ್ ನಿರ್ಮಿಸಬೇಕು.

■ ಕೋಡಿ ಗಂಗಾಧರ ಪೂಜಾರಿ,
ಪ್ರಗತಿಪರ ಕೃಷಿಕ

ಕುಟುಂಬದ ಸಹಕಾರ

ತನ್ನ ಉದ್ಯಮದಲ್ಲಿ ಯುವಕನಂತೆ ತೊಡಗಿಸಿಕೊಳ್ಳುವ 58 ವರ್ಷ ಪ್ರಾಯದ ಗಂಗಾಧರ್ ಅವರ ಕ್ರಿಯಾಶೀಲತೆಗೆ ಕೃಷಿ ಕೆಲಸವೇ ಕಾರಣ. ಇವರಿಗೆ ಪತ್ನಿ ಸಹಿತ ಕುಟುಂಬಿಕರು ಸಹಕಾರ ನೀಡುತ್ತಿದ್ದು ಪುತ್ರ ಖಾಸಗಿ ಕಂಪೆನಿಯಲ್ಲಿ ಇಂಜಿನಿಯರ್ ಆಗಿದ್ದಾರೆ. ಮಳೆಗಾಲದಲ್ಲಿ ಗಂಗಾಧರ್ ಅವರ ಮೂಲ ವೃತ್ತಿಗೆ ಬಹುತೇಕ ಬಿಡುವಾದ ಕಾರಣ ತಾವೇ ಖುದ್ದು ಗದ್ದೆಗೆ ಇಳಿಯುತ್ತಾರೆ. ಟಿಲ್ಲರ್ ಮೂಲಕ ಅಷ್ಟೂ ಎಕರೆ ಗದ್ದೆ ಉಳುಮೆ ಮಾಡುವುದು, ಬೀಜ ತಯಾರಿಕೆ, ತಮ್ಮದೆ ಸ್ವಂತ ನಾಟಿ ಯಂತ್ರದಲ್ಲಿ ನಾಟಿ ಕಾರ್ಯ ಮುಗಿಸಿ ಭತ್ತ ಕೃಷಿಯ ನಡುವೆ ಬೆಳೆಯುವ ಕಳೆ ಕೀಳುವುದನ್ನು ಇವರೆ ಮಾಡುತ್ತಾರೆ. ಇವರ ಕೃಷಿ ಸಾಧನೆಗೆ 2025ರಲ್ಲಿ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದ್ದಲ್ಲದೆ, ಹಲವು ಸಂಘ ಸಂಸ್ಥೆಗಳು ಗೌರವಿಸಿದೆ.

ಆರಂಭದ ಮಳೆಯಲ್ಲಿಯೇ ದ.ಕ.ಜಿಲ್ಲೆಯಲ್ಲಿ ಅಪಾರ ನಷ್ಟ

10 ದಿನಗಳಲ್ಲಿ 280 ಮನೆಗಳಿಗೆ ಹಾನಿ



ಮಂಗಳೂರು: ಕಾಸರಗೋಡು, ದಕ್ಷಿಣ ಕನ್ನಡ ಹಾಗೂ ಉಡುಪಿ ಸೇರಿದಂತೆ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಮಂಗಳವಾರ ಉತ್ತಮ ಮಳೆಯಾಗಿದೆ. ಮಂಗಳೂರಿನಲ್ಲಿ ಬೆಳಗ್ಗಿನಿಂದಲೇ ಮೋಡ ಕವಿದ ವಾತಾವರಣವಿದ್ದು, ಸತತವಾಗಿ ಮಳೆ ಸುರಿದಿದೆ.

ಜಿಲ್ಲೆಯಲ್ಲಿ ಮೇ 31ರಿಂದ ಜೂ.9ರವರೆಗೆ ಒಟ್ಟು 280 ಮನೆಗಳಿಗೆ ಹಾನಿ ಉಂಟಾಗಿದೆ. ಈ ಪೈಕಿ 4 ಮನೆಗಳು ಸಂಪೂರ್ಣ ಕುಸಿದಿವೆ. 276 ಮನೆಗಳು ಭಾಗಶಃ ಹಾನಿಗೊಳಗಾಗಿವೆ ಎಂದು ಜಿಲ್ಲಾಡಳಿತ ತಿಳಿಸಿದೆ.

ಧರೆಗುರುಳಿದ 2672 ವಿದ್ಯುತ್ ಕಂಬಗಳು

ಭಾರೀ ಗಾಳಿ ಮಳೆಯ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಕಳೆದ 10 ದಿನಗಳ ಅಂತರದಲ್ಲಿ 2672 ವಿದ್ಯುತ್ ಕಂಬಗಳು ಧರೆಗುರುಳಿವೆ. 12 ಟ್ರಾನ್ಸ್‌ಮೀಟರ್‌ಗಳು ಹಾನಿಗೊಳಗಾಗಿದ್ದು 134 ಕಿ.ಮೀ ಉದ್ದದ ವಿದ್ಯುತ್ ಲೈನ್‌ಗಳು ತುಂಡಾಗಿವೆ. ಪ್ರಾಕೃತಿಕ ವಿಕೋಪದಿಂದಾಗಿ ಒಬ್ಬರು ಗಾಯಗೊಂಡಿದ್ದಾರೆ.

ದ.ಕ ಜಿಲ್ಲೆಯಲ್ಲಿ ಮಂಗಳವಾರ ಬೆಳಗ್ಗೆ 8.30ರಿಂದ ಮೊದಲ್ಗೊಂಡು ಹಿಂದಿನ 24 ಗಂಟೆಗಳ ಅವಧಿಯಲ್ಲಿ ಸರಾಸರಿ 20.7 ಮಿ.ಮೀ. ಮಳೆಯಾಗಿದೆ. ಬೆಳ್ತಂಗಡಿ 21. 9ಮಿ.ಮೀ., ಬಂಟ್ವಾಳ 24.9 ಮಿ.ಮೀ., ಮಂಗಳೂರು 22.7 ಮಿ.ಮೀ., ಪುತ್ತೂರು 14.2 ಮಿ.ಮೀ., ಸುಳ್ಯ 12.1 ಮಿ.ಮೀ., ಮೂಡುಬಿದಿರೆ 22.2 ಮಿ.ಮೀ., ಕಡಬ 21.6 ಮಿ.ಮೀ., ಮುಲ್ಕಿ 12.2 ಮಿ.ಮೀ ಮತ್ತು ಉಳ್ಳಾಲದಲ್ಲಿ 43.8 ಮಿ.ಮೀ ಮಳೆಯಾಗಿದೆ.

ಮತ್ತೆ ಮಳೆ ಬಿರುಸು

ಮುಂದಿನ ಕೆಲವು ದಿನಗಳ ಕಾಲ ಬಾರೀ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಬುಧವಾರ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಐಎಂಡಿ ಆರೆಂಜ್ ಅಲರ್ಟ್ ಘೋಷಿಸಿದೆ. ಅಲ್ಲದೆ ಬಲವಾದ ಗಾಳಿ ಬೀಸುವ ಸಾಧ್ಯತೆ ಇರುವುದರಿಂದ ಜನತೆ ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ.

ಬೆಳ್ತಂಗಡಿ ತಾಲೂಕಿನಲ್ಲಿ ಭಾರಿ ಮಳೆ: ಉಜಿರೆ ಗುರಿಪಳ್ಳ ಸಂಪರ್ಕ ಕಡಿತ

ಬೆಳ್ತಂಗಡಿ: ತಾಲೂಕಿನಲ್ಲಿ ಮಂಗಳವಾರ ಮಧ್ಯಾಹ್ನ ಹಾಗೂ ಬಳಿಕ ಗಾಳಿ, ಸಹಿತ ಭಾರಿ ಮಳೆಯಾಗಿದ್ದು, ಉಜಿರೆ ಹಾಗೂ ಕನ್ಯಾಡಿ–1 ಗ್ರಾಮ ವ್ಯಾಪ್ತಿಯ ಅಂಬಡಬೆಟ್ಟು ಎಂಬ ಪ್ರದೇಶದಲ್ಲಿ ಹರಿಯುವ ಹಳ್ಳಕ್ಕೆ ತಾತ್ಕಾಲಿಕವಾಗಿ ನಿರ್ಮಿಸಿದ್ದ ಸೇತುವೆ ಸಂಪರ್ಕ ಮಳೆಗೆ ಕೊಚ್ಚಿ ಹೋಗಿ ಪ್ರದೇಶದ ಜನರಿಗೆ ಉಜಿರೆ ಹಾಗೂ ಇತರೆಡೆಯ ಸಂಪರ್ಕ ಬಹುತೇಕ ಕಡಿತಗೊಂಡಿದೆ.

ಉಜಿರೆ, ನಿಡಿಗಲ್ ಮೂಲಕ ನಡ, ಇಂದಬೆಟ್ಟು, ಕೊಲ್ಲಿ, ಗುರಿಪಳ್ಳ, ಪಡ್, ಕಯ್ಯಂಗು ಮೊದಲಾದ ಪ್ರದೇಶದ ಸಾವಿರಾರು ಕುಟುಂಬಗಳಿಗೆ ಸಂಪರ್ಕ ಕಲ್ಪಿಸುವ ಅಂಬಡಬೆಟ್ಟುನೂತನಕಿರುಸೇತುವೆ 2.50 ಕೋಟಿ ರೂ. ಅನುದಾನದಲ್ಲಿ ನಿರ್ಮಾಣಗೊಳ್ಳುತ್ತಿದೆ. ಹೊಸ ಕಿರು ಸೇತುವೆಯನ್ನು ಈ ಹಿಂದೆ ಇದ್ದ ಸೇತುವೆಯನ್ನು ತೆರವುಗೊಳಿಸಿ ಕಾಮಗಾರಿ ನಡೆಸುತ್ತಿದ್ದು ಅದರ ಬದಿಯಲ್ಲಿ ಮಣ್ಣು ಹಾಕಿ ತಾತ್ಕಾಲಿಕ ರಸ್ತೆ ನಿರ್ಮಾಣ ಮಾಡಲಾಗಿತ್ತು. ಆದರೆ ಮಂಗಳವಾರ ಸಂಜೆ ಸುರಿದ ಭಾರಿ ಮಳೆಗೆ ಹಳ್ಳ ಉಕ್ಕಿ ಹರಿದು ತಾತ್ಕಾಲಿಕ ರಸ್ತೆ ಮೇಲೆ ಮೂರು ಅಡಿಯಷ್ಟು ನೀರು ಹರಿದು ಮಣ್ಣು ಕೊಚ್ಚಿ ಹೋಗಿದೆ. ಈ ವೇಳೆ ಸ್ಥಳೀಯರು ಹಾಗೂ ಪೊಲೀಸ್ ಇಲಾಖೆ ಸೇರಿ ಎರಡು ಕಡೆಗಳಿಂದ ವಾಹನಗಳು ಚಲಿಸದಂತೆ ಕ್ರಮ ಕೈಗೊಂಡಿದ್ದಾರೆ. ಮಳೆ ಇದೇ ರೀತಿ ಮುಂದುವರಿದರೆ ತಾತ್ಕಾಲಿಕ ರಸ್ತೆ ಸಂಪೂರ್ಣ ನೀರು ಪಾಲಾಗಲಿದೆ.

ಅಂಬಡಬೆಟ್ಟು ಪ್ರದೇಶದಲ್ಲಿ ಸಂಪರ್ಕ ಕಡಿತಗೊಂಡಿರುವ ಕಾರಣ ಸ್ಥಳೀಯರು ಹಾಗೂ ಶಾಲಾ ಮಕ್ಕಳು ಉಜಿರೆ ಹಾಗು ಇತರಡೆ ತೆರಲು 20 ಕಿ. ಮೀ. ಸುತ್ತಿ ಬಳಸಿ ಬರಬೇಕಿದೆ.

ಅಂಗಡಿಗಳಿಗೆ ನುಗ್ಗಿದ ನೀರು

ರಾಷ್ಟ್ರೀಯ ಹೆದ್ದಾರಿಯ ಮುಂಡಾಜೆ ಗ್ರಾಮದ ಸೋಮಂತಡ್ಕ ಪ್ರದೇಶದ ಒಳ ರಸ್ತೆಯಲ್ಲಿ ನೀರು ಹರಿದು ಕೆಲವು ಅಂಗಡಿಗಳ ಮುಂಭಾಗ ಜಲಾವೃತವಾಯಿತು. ಇಲ್ಲಿ ಮೋರಿಯೊಂದು ಬ್ಲಾಕ್ ಆಗಿದ್ದು ಮಳೆ ನೀರು ರಸ್ತೆಯಲ್ಲಿ ಹರಿದು ಅಂಗಡಿಗಳ ಮುಂಭಾಗದವರೆಗೂ ಬರಲು ಕಾರಣವಾಯಿತು.

ಮಳೆಯ ಜತೆ ಗಾಳಿ ಇದ್ದು ನೂರಾರು ಅಡಿಕೆ, ರಬ್ಬರ್ ಮರಗಳು ಮುರಿದುಬಿದ್ದಿವೆ ಗ್ರಾಮೀಣ ಭಾಗದಲ್ಲಿ ವಿದ್ಯುತ್ ಸಂಪರ್ಕ ಕೈಕೊಟ್ಟಿದೆ. ಖಾಸಗಿ ಕಂಪನಿಗಳ ಮೊಬೈಲ್ ಟವರ್‌ಗಳು ಹಲವು ಹೊತ್ತು ನಿಷ್ಕ್ರಿಯಗೊಂಡು ಗ್ರಾಹಕರು ಪರದಾಡುವಂತಾಯಿತು.

‘ಟ್ಯಾಟೋ–313’ ಮಾಸ್ಕ್ ಮ್ಯಾನ್‌ಗಳ ಕೋಟೆಗೆ ‘ಖಾಕಿ’ ಲಗ್ಗೆ: ಇಬ್ಬರ ಬಂಧನ

ಉಡುಪಿ: ರೈಲ್ವೆ ನಿಲ್ದಾಣದ ಆಸುಪಾಸಿನ ಬೀಗ ಹಾಕಿದ ಮನೆಗಳನ್ನೇ ಗುರಿಯಾಗಿಸಿಕೊಂಡು ಮುಖಕ್ಕೆ ಮಾಸ್ಕ್ ಧರಿಸಿ ಭಾರಿ ಕಳ್ಳತನ ಎಸಗುತ್ತಿದ್ದ ಕರಾವಳಿ ಮತ್ತು ಅಂತಾರಾಜ್ಯ ಖ್ಯಾತಿಯ ‘ಟ್ಯಾಟೋ – 313’ ಮುಸುಕುಧಾರಿ ಗ್ಯಾಂಗ್ ಅನ್ನು ಭೇದಿಸುವಲ್ಲಿ ಮಣಿಪಾಲ ಪೊಲೀಸರು ಯಶಸ್ವಿಯಾಗಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದ್ದು, ಅವರಿಂದ ರೂ. 7,90,000 ಮೌಲ್ಯದ ಒಟ್ಟು 60 ಗ್ರಾಂ ಚಿನ್ನಾಭರಣ ಹಾಗೂ 2 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಬೆಂಗಳೂರಿನ ಸಿಂಗಸಂದ್ರ ವಾರ್ಡ್ ನಿವಾಸಿ ದರ್ಶನ್ ಆರ್. (21) ಮತ್ತು ದಾವಣಗೆರೆ ಜಿಲ್ಲೆಯ ಬಸವನಹಾಳ ಗೊಲ್ಲರಹಟ್ಟಿ ನಿವಾಸಿ ಚಂದ್ರು (26) ಬಂಧಿತ ಆರೋಪಿಗಳು. ಗ್ಯಾಂಗ್‌ನ ಇನ್ನಿಬ್ಬರು ಆರೋಪಿಗಳ ಪತ್ತೆಗಾಗಿ ಪೊಲೀಸರು ಜಾಲ ಬೀಸಿದ್ದಾರೆ.

ಇಂದ್ರಾಳಿ ರೈಲ್ವೆ ಗೋಡೌನ್ ಬಳಿ ಸಿಕ್ಕಿಬಿದ್ದ ಕಳ್ಳರು

ಜೂನ್ 6 ರಂದು ರಾತ್ರಿ ಮಣಿಪಾಲ ಪಿಎಸ್‌ಐ (ತನಿಖೆ) ಶಂಭುಲಿಂಗಯ್ಯ ಹಾಗೂ ಅಪರಾಧ ವಿಭಾಗದ ಸಿಬ್ಬಂದಿಗಳಾದ ರವಿರಾಜ್ ಮತ್ತು ಮಂಜುನಾಥ್ ಅವರು ಇಂದ್ರಾಳಿ ರೈಲ್ವೆ ಗೋಡೌನ್ ರಸ್ತೆ ಬಳಿ ರಾತ್ರಿ ರೌಂಡ್ಸ್ ಕರ್ತವ್ಯದಲ್ಲಿದ್ದಾಗ ಇಬ್ಬರು ವ್ಯಕ್ತಿಗಳು ಅನುಮಾನಾಸ್ಪದವಾಗಿ ತಿರುಗುತ್ತಿರುವುದು ಕಂಡುಬಂದಿದೆ. ಅವರ ಬಳಿ ಇದ್ದ ಮಾರಕಾಸ್ತ್ರ ಹಾಗೂ ವಸ್ತುಗಳನ್ನು ಕಂಡು ಕೂಲಂಕಷವಾಗಿ ವಿಚಾರಣೆ ನಡೆಸಿದಾಗ, ರೈಲ್ವೆ ಹಳಿ ಹತ್ತಿರದ ಬೀಗ ಹಾಕಿದ ಮನೆಗಳ ಬಾಗಿಲು ಮುರಿದು ಕಳ್ಳತನ ಮಾಡುತ್ತಿದ್ದುದನ್ನು ಹಾಗೂ ಅಂದೂ ಸಹ ಅದೇ ಪರಿಸರದಲ್ಲಿ ಕಳ್ಳತನದ ಉದ್ದೇಶದಿಂದಲೇ ಹೊಂಚು ಹಾಕುತ್ತಿರುವುದನ್ನು ಒಪ್ಪಿಕೊಂಡಿದ್ದಾರೆ. ಬಳಿಕ ಮಣಿಪಾಲ ಪೊಲೀಸ್ ನಿರೀಕ್ಷಕ ಮಹೇಶ ಪ್ರಸಾದ್ ಅವರು ಠಾಣೆಗೆ ಕರೆತಂದು ತೀವ್ರ ವಿಚಾರಣೆ ನಡೆಸಿದಾಗ ಫೆಬ್ರವರಿ ತಿಂಗಳಲ್ಲಿ ಕುಂಜಿಬೆಟ್ಟು ಮಂಚಿಕೋಡಿಯಲ್ಲಿ ನಡೆದಿದ್ದ ಭಾರಿ ಕಳ್ಳತನ ಪ್ರಕರಣ ಬೆಳಕಿಗೆ ಬಂದಿದೆ.

ಕುಂಜಿಬೆಟ್ಟಿನಲ್ಲಿ ನಡೆದಿದ್ದ ಕಳ್ಳತನ ಮತ್ತು ಸೊತ್ತುಗಳ ವಶ

ಫೆಬ್ರವರಿ 3 ರಂದು ಕುಂಜಿಬೆಟ್ಟು ಮಂಚಿಕೋಡಿಯ ನಿವಾಸಿ ಅಮಿತ ಡ್ಯಾನಿಯಲ್ ಎಂಬವರು ಮನೆಗೆ ಬೀಗ ಹಾಕಿ ತಾಯಿ ಮನೆಗೆ ತೆರಳಿದ್ದಾಗ, ಕಳ್ಳರು ಬಾಗಿಲು ಮುರಿದು ಒಳಪ್ರವೇಶಿಸಿ ಕಳ್ಳತನ ನಡೆಸಿದ್ದರು. ಬಂಧಿತ ಆರೋಪಿಗಳು ತಾವೇ ಈ ಕೃತ್ಯ ಎಸಗಿರುವುದಾಗಿ ಒಪ್ಪಿಕೊಂಡನಂತರ,ನ್ಯಾಯಾಲಯದಿಂದ ಅವರನ್ನು ಪೊಲೀಸ್ ಕಸ್ಟಡಿಗೆ ಪಡೆದ ಅಧಿಕಾರಿಗಳು ಶಿವಮೊಗ್ಗದ ಲಾಡ್ಜ್ ಒಂದರಲ್ಲಿದ್ದ ಆರೋಪಿಗಳ ರೂಮ್ ಮೇಲೆ ದಾಳಿ ನಡೆಸಿದ್ದಾರೆ. ಈ ವೇಳೆ ಪ್ರಕರಣದಲ್ಲಿ ಕಳವಾಗಿದ್ದ ರೂ. 5,06,000 ಮೌಲ್ಯದ 39.70 ಗ್ರಾಂ ತೂಕದ 1 ಚಿನ್ನದ ಕರಿಮಣಿ ಸರ, ರೂ. 1,86,000 ಮೌಲ್ಯದ 13.30 ಗ್ರಾಂ ತೂಕದ ಚಿನ್ನದ ನೆಕ್ಲೆಸ್, ರೂ. 44,000 ಮೌಲ್ಯದ 3.15 ಗ್ರಾಂ ತೂಕದ 1 ಜೊತೆ ಚಿನ್ನದ ಕಿವಿಯೋಲೆ ಹಾಗೂ ರೂ. 54,000 ಮೌಲ್ಯದ 3.87 ಗ್ರಾಂ ತೂಕದ 1 ಚಿನ್ನದ ಚೈನ್ ಸೇರಿದಂತೆ ಒಟ್ಟಾರೆ ರೂ. 7,90,000 ಮೌಲ್ಯದ 60 ಗ್ರಾಂ ತೂಕದ ಆಭರಣಗಳನ್ನು ಒಂದೇ ಕಡೆ ವಶಪಡಿಸಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.



ಹಲವು ರಾಜ್ಯಗಳಲ್ಲಿ ಕಳ್ಳತನ ಪ್ರಕರಣ ದಾಖಲು

ಆರೋಪಿಗಳ ವಿರುದ್ಧ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಈಗಾಗಲೇ ಹಲವು ಕಳ್ಳತನ ಪ್ರಕರಣಗಳು ದಾಖಲಾಗಿವೆ. ತೀವ್ರ ವಿಚಾರಣೆ ನಡೆಸಿದ ಸಂದರ್ಭದಲ್ಲಿ, ಕಳೆದ 2025 ರ ಸೆಪ್ಟೆಂಬರ್ ತಿಂಗಳಲ್ಲಿ ಮಂಗಳೂರಿನ ಸುರತ್ಕಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲೂ ಈ ಗ್ಯಾಂಗ್ ಭಾರಿ ಕಳ್ಳತನ ನಡೆಸಿರುವುದು ಸದ್ಯದ ತನಿಖೆಯಿಂದ ಬೆಳಕಿಗೆ ಬಂದಿದೆ.

ವಿಶಿಷ್ಟ ಶೈಲಿಯ ‘ಟ್ಯಾಟೂ 313’ ಗ್ಯಾಂಗ್ ಆಪರೇಷನ್

ಬಂಧಿತ ಕಳ್ಳರು ಕೈಗಳಿಗೆ ‘ಟ್ಯಾಟೊ 313’ ಎಂದು ಹಚ್ಚೆ ಹಾಕಿಸಿಕೊಂಡು ತಮ್ಮದೇ ಆದ ಗ್ಯಾಂಗ್ ಕಟ್ಟಿಕೊಂಡಿದ್ದರು. ಇವರು ಕರ್ನಾಟಕ, ತಮಿಳುನಾಡು ಹಾಗೂ ಆಂಧ್ರಪ್ರದೇಶದ ರೈಲ್ವೆ ನಿಲ್ದಾಣಗಳ ಹತ್ತಿರವಿರುವ ಮನೆಗಳನ್ನೇ ಟಾರ್ಗೆಟ್ ಮಾಡುತ್ತಿದ್ದರು. ರಾತ್ರಿ ವೇಳೆ ಗುರುತು ಸಿಗದಂತೆ ಮುಖಕ್ಕೆ ಮಾಸ್ಕ್, ಕೈಗಳಿಗೆ ಗ್ಲೌಸ್ ಹಾಗೂ ಹೆಜ್ಜೆಯ ಸದ್ದು ಕೇಳಿಸದಂತೆ ಕಾಲಿಗೆ ಸಾಕ್ಸ್ ಧರಿಸಿ, ಕಬ್ಬಿಣದ ಬೃಹತ್ ಆಯುಧಗಳಿಂದ ಬಾಗಿಲು ಮುರಿದು ಕ್ಷಣಾರ್ಧದಲ್ಲಿ ಚಿನ್ನಾಭರಣ ದೋಚುತ್ತಿದ್ದರು.

ಜೂನ್ 15ರ ಪದವಿ ಪರೀಕ್ಷೆ ಮುಂದೂಡಿಕೆ

ಕೊಣಾಜೆ: ಮಂಗಳೂರು ವಿವಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪದವಿ ಪರೀಕ್ಷೆಗಳು ನಿಗದಿಯಾದ ವೇಳಾಪಟ್ಟಿಯಂತೆ ಜೂನ್ 8ರಿಂದ ಪ್ರಾರಂಭವಾಗಿದ್ದು ಜುಲೈ 10 ಕ್ಕೆ ಕೊನೆಗೊಳ್ಳಲಿವೆ. ಆದರೆ ಎಂಬಿಎ/ಎಂಸಿಎ, ಪ್ರವೇಶಾತಿಗೆ ಕೆಇಎ ಮೂಲಕ ಪಿಜಿಸಿಯಿಟಿ PEACU ಪರೀಕ್ಷೆಯು ಜೂನ್ 14ರಂದು ನಿಗದಿಯಾಗಿದ್ದು, ಎಲ್ಲಾ ಪರೀಕ್ಷಾ ಕೇಂದ್ರಗಳು ಬೆಂಗಳೂರಿನಲ್ಲಿಯೇ ಇರುವುದರಿಂದ ಎರಡೂ ಪರೀಕ್ಷೆಗಳನ್ನು ಏಕಕಾಲದಲ್ಲಿ ಕೈಗೊಳ್ಳುವುದು ಕಷ್ಟವಾಗಿರುವುದರಿಂದ ಕಾಲೇಜಿನ ಪ್ರಾಂಶುಪಾಲರು ಹಾಗೂ ವಿದ್ಯಾರ್ಥಿಗಳು ಮನವಿಯಂತೆ ಮೇಲಿನ ಪರೀಕ್ಷೆಗೆ ಹಾಜರಾಗಲು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಜೂ. 15ರಂದು ನಿಗದಿಯಾಗಿರುವ 6ನೇ ಸೆಮಿಸ್ಟರ್ ಬಿಕಾಂ, ಬಿಎಸ್ಸಿ, ಬಿಬಿಎ, ಬಿಸಿಎ, ಎಚ್‌ಆರ್‌ಡಿ ಪದವಿ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಬದಲಾದ ಪರೀಕ್ಷಾ ವೇಳಾಪಟ್ಟಿಯನ್ನು ಸಂಬಂಧಪಟ್ಟ ಕಾಲೇಜುಗಳಿಗೆ ತಕ್ಷಣ ಕಳುಹಿಸಿಕೊಡಲಾಗುವುದು ಎಂದು ವಿವಿ ಪರೀಕ್ಷಾಂಗ ಕುಲಸಚಿವರು ತಿಳಿಸಿದ್ದಾರೆ.

ಕಾಸರಗೋಡು ಜಿಲ್ಲೆ : ಕಡಲ್ಕೊರೆತದ ಭೀತಿಯಲ್ಲಿ ಕರಾವಳಿ ನಿವಾಸಿಗಳು


ಕಾಸರಗೋಡು: ಜಿಲ್ಲೆಯಲ್ಲಿ ಮುಂಗಾರು ಮಳೆ ತೀವ್ರಗೊಂಡಿದೆ. ಈ ಹಿನ್ನೆಲೆಯಲ್ಲಿ ಕಾಸರಗೋಡಿನ ಸಮುದ್ರ ಕಿನಾರೆಯಲ್ಲಿ ಕಡಲ್ಕೊರೆತದ ಭೀತಿ ಎದುರಾಗಿದೆ. ಮಾತ್ರವಲ್ಲದೆ ಕರಾವಳಿ ಭಾಗದ ನಿವಾಸಿಗಳು ಕಡಲಬ್ಬರಕ್ಕೆ ಹೆದರಿ ಬದುಕು ಸಾಗಿಸುವಂತಾಗಿದೆ.

ಪ್ರತೀ ವರ್ಷ ಮಳೆಗಾಲ ಆರಂಭಗೊಂಡಾಗ ಕಾಸರಗೋಡು ಜಿಲ್ಲೆಯ ಕಡಲ ತೀರದ ಜನರು ಆತಂಕದಲ್ಲಿ ದಿನಕಳೆಯಬೇಕಾದ ಪರಿಸ್ಥಿತಿಯಿದೆ. ನೆಲ್ಲಿಕುಂಜೆ, ಕಸಬಾ, ಚೇರಂಗೈ ಹಾಗೂ ಜಿಲ್ಲೆಯ ವಿವಿಧ ಕಡಪ್ಪುರಗಳಲ್ಲಿ ಕರಾವಳಿ ನಿವಾಸಿಗಳು ಸಾಕಷ್ಟು ಮುಂಜಾಗರೂಕತಾ ಕ್ರಮಗಳನ್ನು ಕೈಗೊಂಡರೂ ಸಮುದ್ರದ ಆಳೆತ್ತರದ ಅಲೆಗಳ ಅಬ್ಬರಕ್ಕೆ ಬೆದರಿ ಜೀವನ ನಡೆಸಬೇಕಾದ ದುಸ್ಥಿತಿಯಿದೆ.

ಸಮುದ್ರ ಮಟ್ಟದಿಂದ ಗಣನೀಯವಾಗಿ ಉದ್ಭವಿಸುವ ದೈತ್ಯಾಕಾರದ ಅಲೆಗಳು ಜಿಲ್ಲೆಯ ಮಂಜೇಶ್ವರ ಗ್ರಾಮ ಪಂಚಾಯತ್‌ನಿಂದ ಆರಂಭಗೊಂಡು ವಲಯಪರಂಬ ಗ್ರಾಮ ಪಂಚಾಯತ್‌ನ ವರೆಗೆ ಬೋರ್ಗರೆಯುತ್ತಾ ಮುಂದುವರಿಯುತ್ತಿವೆ. ಪ್ರತಿ ಮಳೆಗಾಲದ ಆರಂಭವು ಕರಾವಳಿ ಪ್ರದೇಶಗಳನ್ನು ಅತೀವ ದುರ್ಬಲಗೊಳಿಸುತ್ತಿರುವುದಾಗಿ ಹವಾಮಾನ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕಡಲ್ಕೊರೆತದಿಂದಾಗಿ ಕರಾವಳಿ ಭಾಗಕ್ಕೆ ಹೊಂದಿಕೊಂಡಿರುವ ಮನೆಗಳು ಕೂಡಾ ಕುಸಿತದ ಭೀತಿಗೆ ಒಳಗಾಗುತ್ತಿವೆ.

ಮರಳು ಗೋಣಿಗಳನ್ನಿಟ್ಟು ಕರಾವಳಿ ತೀರದ ನಿವಾಸಿಗಳು ಕಡಲ್ಕೊರೆತವನ್ನು ತಡೆಗಟ್ಟಲು ವಿವಿಧ ಕ್ರಮಗಳನ್ನು ಸ್ವತಹ ತಾವಾಗಿಯೇ ಕಂಡುಕೊಳ್ಳುತ್ತಾರೆ. ಆದರೆ ಈ ತಾತ್ಕಾಲಿಕ ಪ್ರತಿರೋಧಗಳನ್ನು ಲೆಕ್ಕಿಸದೆ ಸಮುದ್ರದ ಉಗ್ರ ಅಲೆಗಳು ಮನೆಗಳ ಗೋಡೆಗಳಿಗೆ ರಭಸವಾಗಿ ಅಪ್ಪಳಿಸುವ ಸ್ಥಿತಿ ಗೋಚರಿಸುತ್ತಿದೆ.

ಕರಾವಳಿ ಭಾಗದ ಸವೆತ ತಡೆಗಟ್ಟುವ ಸಲುವಾಗಿ ವೈಜ್ಞಾನಿಕ ವಿಧಾನದಲ್ಲಿ ಟೆಟ್ರೋಪ್ಯಾಡ್ (ನಾಲ್ಕು ಕಾಲುಗಳಿರುವ ವಿಶೇಷ ರಚನೆ) ಯೋಜನೆಯನ್ನು ಅಳವಡಿಸಿ ಜೈವಿಕ ಬೇಲಿಗಳನ್ನು ಸ್ಥಾಪಿಸುವುದು ಅಥವಾ ಬದಲಿ ವ್ಯವಸ್ಥೆಗಳನ್ನು ಏರ್ಪಡಿಸುವುದನ್ನು ಕಾರ್ಯಗತಗೊಳಿಸಬೇಕು. ಅದನ್ನು ನಿರ್ವಹಿಸದೆ ತಾತ್ಕಾಲಿಕ ವ್ಯವಸ್ಥೆಗಳಿಂದ ಸಮುದ್ರವನ್ನು ತಡೆಯಲಾಗದು ಎಂದು ಕರಾವಳಿ ಭಾಗದ ನಿವಾಸಿಗಳು ಹೇಳುತ್ತಿದ್ದಾರೆ.



ಕಡಲ್ಕೊರೆತವನ್ನು ತಡೆಗಟ್ಟುವುದಕ್ಕಾಗಿ ಶಾಶ್ವತ ಪರಿಹಾರ ಕ್ರಮಗಳನ್ನು ಅಳವಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಇನ್ನೂ ಸಾಧ್ಯವಾಗದಿರುವುದು ಸ್ಥಳೀಯ ನಿವಾಸಿಗಳನ್ನು ಆತಂಕಕ್ಕೆ ದೂಡುವಂತಾಗಿದೆ. ಪುನರ್ವಸತಿಗೆ ಸಂಬಂಧಪಟ್ಟ ಯಾವುದೇ ಯೋಜನೆಗಳು ಅಸ್ತಿತ್ವದಲ್ಲಿಲ್ಲ. ಮೀನು ಕಾರ್ಮಿಕರು, ಆಟೋ ಚಾಲಕರು ಸೇರಿದಂತೆ ಜನಸಾಮಾನ್ಯರು ಕಡಲ ತೀರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಮಳೆಗಾಲ ತೀವ್ರಗೊಂಡಾಗ ಇವರ ಬದುಕು ಬೀದಿಪಾಲಾಗುವ ದುಸ್ಥಿತಿ ತಲೆದೋರುತ್ತದೆ.

ಕರಾವಳಿ ಭಾಗದ ನಿವಾಸಿಗಳ ಪುನರ್ವಸತಿಗಾಗಿ ಕೇರಳ ಸರಕಾರವು ಜಾರಿಗೊಳಿಸಿದ ಪುನರ್ಗೇಹ ಮೊದಲಾದ ಯೋಜನೆಗಳು ಇನ್ನೂ ಯಶಸ್ವಿಯಾಗಿ ಅನುಷ್ಠಾನಕ್ಕೆ ಬಂದಿಲ್ಲ. ಕರಾವಳಿ ಭಾಗದ ಕುಟುಂಬಗಳ ವಿಷಯದಲ್ಲಿ ಶೀಘ್ರ ಶಾಶ್ವತ ಪರಿಹಾರ ಯೋಜನೆಗಳನ್ನು ಜಾರಿಗೊಳಿಸಬೇಕು ಎಂದು ಕಡಲ ತೀರ ಪ್ರದೇಶದ ನಿವಾಸಿಗಳು ಆಗ್ರಹಿಸುತ್ತಿದ್ದರೂ ರಾಜ್ಯ ಸರಕಾರದಿಂದ ಅಗತ್ಯದ ಯೋಜನೆಗಳು ಅನುಷ್ಠಾನಗೊಳ್ಳದಿರುವುದು ವಿಪರ್ಯಾಸವಾಗಿದೆ. ಸಮುದ್ರ ತೀರವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ತಾತ್ಕಾಲಿಕವಾಗಿರಿಸಿದ ಮರಳು ಗೋಣಿಗಳು, ಕಗ್ಗಲ್ಲುಗಳು ಸಮುದ್ರ ಪಾಲಾಗುತ್ತಿವೆ. ಮುಂಬರುವ ದಿನಗಳಲ್ಲಿ ಮಳೆ ಮತ್ತು ಗಾಳಿ ವಿಪರೀತಗೊಂಡರೆ ಕರಾವಳಿ ತೀರದ ಮನೆಗಳು ಭಾರೀ ಭೀತಿ ಎದುರಿಸಬೇಕಾಗಿದೆ.

ಜಿಲ್ಲೆಯ ವಿವಿಧೆಡೆ ಸಂಭವಿಸುತ್ತಿದೆ ಕಡಲ್ಕೊರೆತ

ಗಾಳಿ ಮಳೆ ಬಿರುಸುಕೊಂಡಂತೆ ಕಾಸರಗೋಡು ಜಿಲ್ಲೆಯ ವಿವಿಧೆಡೆ ಸಮುದ್ರದ ಅಬ್ಬರ ಕಂಡುಬರುತ್ತಿದೆ. ವಿಶೇಷವಾಗಿ ಕಣ್ವತೀರ್ಥ, ಮಂಜೇಶ್ವರ, ಮೂಸೋಡಿ, ಶಾರದಾನಗರ, ಹನುಮಾನ್‌ನಗರ, ಶಿವಾಜಿನಗರ, ಉಪ್ಪಳ, ಪೆರಿಂಗಡಿ, ಶಿರಿಯ, ಕೊಯಿಪ್ಪಾಡಿ, ಪೆರುವಾಡು, ಮೊಗ್ರಾಲ್, ನೆಲ್ಲಿಕುಂಜೆ, ಕಸಬಾ, ಚೇರಂಗೈ, ತೃಕ್ಕನ್ನಾಡು, ಕಾಞಂಗಾಡು, ವಲಿಯಪರಂಬ ಮೊದಲಾದ ಪ್ರದೇಶಗಳಲ್ಲಿ ಮುಂದಿನ ಕೆಲವೇ ದಿನಗಳಲ್ಲಿ ಕಡಲ್ಕೊರೆತ ಸಂಭವಿಸುವ ಸಾಧ್ಯತೆಯಿದೆ ಎಂದು ಕರಾವಳಿ ಭಾಗದ ನಿವಾಸಿಗಳು ಆತಂಕದಿಂದ ತಿಳಿಸುತ್ತಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತವು ಅಗತ್ಯದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಕಡಲ ತೀರದ ಕುಟುಂಬಗಳು ಒತ್ತಾಯಿಸಿವೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 27⁰ 24⁰ | ಉಡುಪಿ 27⁰ 26⁰

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಬುಧವಾರ 10, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 2
ಪುತ್ತೂರು ಟೌನ್ ಬ್ಯಾಂಕ್‌ಗೆ 5 ರಾಷ್ಟ್ರೀಯ ಪ್ರಶಸ್ತಿಗಳ ಗರಿ


ಪುಟ 6
ಅವಿಭಜಿತ ಕುಂದಾಪುರ ತಾಲೂಕಿನಲ್ಲಿ ಗರಿಗೆದರಿದ ಕೃಷಿ ಚಟುವಟಿಕೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ರಜೆಗಾಗಿ ದಡ ಸೇರಿದವು ಮೀನುಗಾರಿಕಾ ಋತು ಪೂರ್ತಿ ಕಡಲಿನಲ್ಲಿ ದುಡಿದ ಬೋಟುಗಳು!



ಒಂದೆಡೆ ಕಾಸರಗೋಡು ಜಿಲ್ಲೆಯಲ್ಲಿ ಮಳೆಯ ಆರ್ಭಟ ತೀವ್ರಗೊಳ್ಳುತ್ತಿದ್ದರೆ ಇನ್ನೊಂದೆಡೆ ಮಂಗಳವಾರ ಮಧ್ಯರಾತ್ರಿ 12 ಗಂಟೆಯಿಂದ ಮುಂದಿನ 52 ದಿನಗಳ ಕಾಲ ಯಾಂತ್ರೀಕೃತ ಮೀನುಗಾರಿಕೆ ನಿಷೇಧ ಜಾರಿಗೆ ಬಂದಿದೆ. ಮೀನುಗಾರಿಕಾ ಋತು ಪೂರ್ತಿ ಮತ್ಸ್ಯಬೇಟೆ ನಡೆಸಿದ್ದ ಯಾಂತ್ರೀಕೃತ ಬೋಟ್‌ಗಳು ದಡಕ್ಕೆ ಹಿಂದಿರುಗಿ ಸುರಕ್ಷಿತ ಸ್ಥಳಗಳಲ್ಲಿ ಲಂಗರು ಹಾಕಿ ನಿಂತಿರುವ ದೃಶ್ಯ ಈಗ ಎಲ್ಲರ ಕಣ್ಮನ ಸೆಳೆಯುತ್ತಿದೆ.

ಸುತ್ತಮುತ್ತ

ಬೆಳ್ತಂಗಡಿ ಶೆಟ್ಟಿಪಾಲು ಪರಿಸರದಲ್ಲಿ ತಡರಾತ್ರಿ ಒಂಟಿ ಸಲಗ ಪ್ರತ್ಯಕ್ಷ!

ಬೆಳ್ತಂಗಡಿ: ತಾಲೂಕಿನ ಕಡಿರುದ್ಯಾವರ ಗ್ರಾಮದ ಶೆಟ್ಟಿಪಾಲು ಪರಿಸರದಲ್ಲಿ ಸೋಮವಾರ ತಡರಾತ್ರಿ ಒಂಟಿ ಸಲಗ ಕಾಣಿಸಿಕೊಂಡಿದೆ.
ಇಲ್ಲಿನ ಕೊಡಪೊಟ್ಯ ಬಾಬು ಗೌಡ ಹಾಗೂ ವಿಶ್ವನಾಥ ಎಂಬವರ ತೋಟಕ್ಕೆ ನುಗ್ಗಿದ ಸಲಗ ಅಡಕೆ ಹಾಗೂ ತೆಂಗಿನ ಕೃಷಿಗೆ ಹಾನಿ ಉಂಟು ಮಾಡಿದೆ. ಈ ಭಾಗದಲ್ಲಿ ಆನೆಗಳ ಸಂಚಾರ ಹೆಚ್ಚಳವಾಗುತ್ತಿರುವುದು ನಾಗರಿಕರಲ್ಲಿ ಆತಂಕ ಹುಟ್ಟಿಸಿದ್ದು, ಸೂಕ್ತ ಕ್ರಮ ಕೈಗೊಳ್ಳುವಂತೆ ಆರಣ್ಯ ಇಲಾಖೆಗೆ ಆಗ್ರಹಿಸಿದ್ದಾರೆ.

ಮುಂಗಾರು ಚುರುಕು: ಕರಾವಳಿ ಕಡಲ ತೀರಕ್ಕೆ ಈಗ ಹೆಚ್ಚಿನ ಕಣ್ಗಾವಲು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಸಹಿತ ಕರಾವಳಿ ಭಾಗದಲ್ಲಿ ಮುಂಗಾರು ಚುರುಕು ಗೊಂಡಿದ್ದು, ಸತತ ಗಾಳಿ ಮಳೆಯಿಂದ ಕಡಲು ಪ್ರಕ್ಷುಬ್ಧಗೊಳ್ಳುವ ಸಾಧ್ಯತೆ ಹಿನ್ನೆಲೆಯಲ್ಲಿ ಎಲ್ಲಾ ಕಡಲ ತೀರಗಳಲ್ಲಿ ರಕ್ಷಣಾ ಸಿಬ್ಬಂದಿ ಹೆಚ್ಚಿನ ನಿಗಾ ಇರಿಸಿದ್ದಾರೆ. ಪ್ರವಾಸಿಗರು ಕಡಲ ಬದಿಗೆ ತೆರಳದಂತೆ ಎಚ್ಚರಿಕೆ ವಹಿಸಲಾಗುತ್ತಿದ್ದು, ಯಾವುದೇ ಸಂಭಾವ್ಯ ಆಪಾಯ ಎದುರಿಸಲು ಈಗ ಸಿಬ್ಬಂದಿಗಳು ಅಲರ್ಟ್ ಆಗಿದ್ದಾರೆ. ಈಗ ಗಾಳಿಯ ತೀವ್ರತೆ ಕೂಡಾ ಹೆಚ್ಚಳವಾಗಿದೆ.

ಗೂನಡ್ಕ ಪರಿಸರದಲ್ಲಿ ಮತ್ತೆ ಕಾಡಾನೆಗಳ ಹಾವಳಿ: ಕೃಷಿ ಬೆಳೆಗಳಿಗೆ ಹಾನಿ

ಮಂಗಳೂರು: ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಗೂನಡ್ಕ ಪರಿಸರದಲ್ಲಿ ಕಾಡಾನೆಗಳ ಹಾವಳಿ ಕಂಡುಬಂದಿದ್ದು, ಕೃಷಿ ಭೂಮಿಗೆ ನುಗ್ಗಿದ ಆನೆಗಳು ಅಪಾರ ಪ್ರಮಾಣದಲ್ಲಿ ಬೆಳೆ ಹಾನಿಗೆ ಕಾರಣವಾಗಿವೆ. ಗೂನಡ್ಕ ಪೆಲ್ತಡ್ಕ ಪರಿಸರದಲ್ಲಿ ಕಳೆದ ಕೆಲವು ದಿನಗಳಿಂದ ಕಾಡಾನೆಗಳು ಕೃಷಿ ಭೂಮಿಗೆ ಲಗ್ಗೆಯಿಡುತ್ತಿವೆ. ಹಿಂಡು ಹಿಂಡಾಗಿರುವ ಇವು ಇಲ್ಲಿನ ಸ್ಥಳೀಯರಲ್ಲೂ ಭಯ ಹುಟ್ಟಿಸುತ್ತಿವೆ.

ನಾಪೋಕ್ಲು ಪೆರಾಜೆ ಗ್ರಾಮ ವ್ಯಾಪ್ತಿಯಲ್ಲಿಯೂ ಕಾಡಾನೆಗಳ ಹಾವಳಿ

ನಾಪೋಕ್ಲು: ಇಲ್ಲಿನ ಪೆರಾಜೆ ಗ್ರಾಮ ವ್ಯಾಪ್ತಿಯಲ್ಲೂ ಕಾಡಾನೆ ಹಾವಳಿ ಮುಂದುವರಿದಿದೆ. ಪೆರಾಜೆ, ಚೆಂಬು, ಕುಂಡಾಡು ಗ್ರಾಮ ವ್ಯಾಪ್ತಿಯಲ್ಲಿ ಆನೆಗಳು ಸೋಮವಾರ ರಾತ್ರಿ ದಾಂಧಲೆ ನಡೆಸಿದ್ದು ತೆಂಗು, ಅಡಿಕೆ, ಬಾಳೆ ಗಿಡಗಳನ್ನು ಧ್ವಂಸಮಾಡಿವೆ.

ಉಡುಪಿಯಲ್ಲಿ ತೀವ್ರಗೊಂಡ ಮಳೆಯಾರ್ಭಟ
ಹೆಬ್ರಿಗೆ ನಂ.1 ಪಟ್ಟ!
24 ತಾಸುಗಳಲ್ಲಿ 49.2 ಮಿ.ಮೀ. ಮಳೆ

ಉಡುಪಿ: ಜಿಲ್ಲಾದ್ಯಂತ ಮುಂಗಾರು ಮಳೆಯ ಆರ್ಭಟವು ಈಗ ಮತ್ತಷ್ಟು ತೀವ್ರತೆ ಪಡೆದುಕೊಂಡಿದ್ದು, ಕಳೆದ 24 ಗಂಟೆಗಳಲ್ಲಿ ಜಿಲ್ಲೆಯ ಬಹುತೇಕ ಎಲ್ಲೆಡೆ ವ್ಯಾಪಕ ಮಳೆ ದಾಖಲಾಗಿದೆ.

35.7 ಮಿಲಿ ಮೀಟರ್ ಮಳೆ

ಒಟ್ಟಾರೆ ಸರಾಸರಿ ಮಳೆ ಪ್ರಮಾಣ 35.7 ಮಿಲಿಮೀಟರ್ ತಲುಪಿದೆ. ತಾಲೂಕು ವಾರು ವಿವರಗಳನ್ನು ಗಮನಿಸಿದಾಗ ಹೆಬ್ರಿ ವಲಯದಲ್ಲಿ ಅತ್ಯಂತ ಗರಿಷ್ಠ ಅಂದರೆ 49.2 ಮಿ.ಮೀ. ಮಳೆಯಾಗಿದೆ.
ಕುಂದಾಪುರದಲ್ಲಿ 42.3 ಮಿಲಿಮೀಟರ್, ಬ್ರಹ್ಮಾವರ ಹಾಗೂ ಬೈಂದೂರು ಭಾಗದಲ್ಲಿ ತಲಾ 37.5 ಮಿಲಿಮೀಟರ್ ಉತ್ತಮ ಮಳೆ ಸುರಿದಿದೆ. ಉಳಿದಂತೆ ಕಾರ್ಕಳದಲ್ಲಿ 25.6 ಮಿ.ಮೀ., ಉಡುಪಿಯಲ್ಲಿ 25.7 ಮಿ.ಮೀ. ಮತ್ತು ಕಾಪು ತಾಲೂಕಿನಲ್ಲಿ 20.2 ಮಿ.ಮೀ. ಮಳೆ ವರದಿಯಾಗಿದೆ. ಮಳೆ ಇನ್ನಷ್ಟು ಬಿರುಸಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಲಾಗಿದೆ.



ಮೂರು ಮನೆಗಳು ಭಾಗಶಃ ಹಾನಿ

ಉಡುಪಿ ಜಿಲ್ಲೆಯಾದ್ಯಂತ ಬೀಸಿದ ಭಾರೀ ಗಾಳಿ ಮಳೆಗೆ ಒಟ್ಟು ಮೂರು ಮನೆಗಳಿಗೆ ಭಾಗಶಃ ಹಾನಿಯಾಗಿದ್ದು, ಲಕ್ಷಾಂತರ ರೂಪಾಯಿ ನಷ್ಟ ಅಂದಾಜಿಸಲಾಗಿದೆ. ಕುಂದಾಪುರ ತಾಲೂಕಿನ ಹಳನಾಡು ಗ್ರಾಮದ ನಿವಾಸಿ ಸೀತಾ ಕೋಂ ರಾಮು ಎಂಬವರ ಮನೆಗೆ ಗಾಳಿ ಮಳೆಯಿಂದಾಗಿ ಭಾಗಶಃ ಹಾನಿಯಾಗಿದ್ದು, ಅಂದಾಜು 30,000 ರೂಪಾಯಿಗಳಷ್ಟು ನಷ್ಟ ಅಂದಾಜಿಸಲಾಗಿದೆ. ಕುಂದಾಪುರ ತಾಲೂಕಿನ ಹೊಸನಾಡು ಗ್ರಾಮದ ನಿವಾಸಿ ಲಕ್ಷ್ಮಿ ಖಾರ್ವಿ ಕೋಂ ದಿ. ಬಬಚ್ಚ ಖಾರ್ವಿ ಎಂಬವರ ಮನೆಗೂ ಭಾರಿ ಹಾನಿಯಾಗಿದ್ದು, ಸುಮಾರು 60,000 ರೂ. ಆಸ್ತಿಪಾಸ್ತಿ ನಷ್ಟ ಉಂಟಾಗಿದೆ. ಬೈಂದೂರು ತಾಲೂಕಿನ ಶಿರೂರು ಗ್ರಾಮದಲ್ಲಿನ ನಿವಾಸಿ ಬಿದೀನಾ ಅವರ ಮನೆಗೆ ಮುಂಗಾರು ಮಾರುತಗಳ ಗಾಳಿಯ ತೀವ್ರತೆಗೆ ಭಾಗಶಃ ಹಾನಿಯಾಗಿದ್ದು, ಅಂದಾಜು 60,000 ರೂಪಾಯಿಗಳಷ್ಟು ನಷ್ಟ ಸಂಭವಿಸಿದೆ ಎಂದು ಕಂದಾಯ ಇಲಾಖೆಯ ವರದಿ ತಿಳಿಸಿದೆ.

ದ.ಕ. 20.7 ಮಿ.ಮೀ.

ಕರಾವಳಿ ಜಿಲ್ಲೆಗಳಲ್ಲಿ ಮಂಗಳವಾರ ಉತ್ತಮ ಮಳೆಯಾಗಿದೆ. ದ.ಕ ಜಿಲ್ಲೆಯಲ್ಲಿ ಮಂಗಳವಾರ ಬೆಳಗ್ಗೆ 8.30ಕ್ಕೆ ಅಂತ್ಯಗೊಂಡ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಸರಾಸರಿ 20.7 ಮಿ.ಮೀ.ಮಳೆಯಾಗಿದೆ.

ಆರೆಂಜ್ ಅಲರ್ಟ್

ತ್ತಮ ಮಳೆ ಸಾಧ್ಯತೆ ಹಿನ್ನೆಲೆಯಲ್ಲಿ ಕೇಂದ್ರ ಹವಾಮಾನ ಇಲಾಖೆ ಬುಧವಾರ ದಿನದಂದು ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಿದೆ.

ಈಗ ಹಿನ್ನೀರು ಮುಕ್ತ ನೇತ್ರಾವತಿ ನದಿ
ಭಕ್ತರಿಗೆ ಉದ್ಭವ ಲಿಂಗ ದರುಶನ ಪಡೆವ ಭಾಗ್ಯ
ಸ್ವಯಂ ಪೂಜೆ ಸಲ್ಲಿಕೆಗೆ ಅವಕಾಶ



ಉಪ್ಪಿನಂಗಡಿ: ಬಿಳಿಯೂರು ಅಣೆಕಟ್ಟಿನ ಗೇಟು ತೆರೆಯಲ್ಪಟ್ಟ ಕಾರಣ ಹಿನ್ನೀರು ಮುಕ್ತವಾದ ನೇತ್ರಾವತಿ ನದಿಯಲ್ಲಿನ ಉಪ್ಪಿನಂಗಡಿಯ ಉದ್ಭವಲಿಂಗವು ಕಾಣಿಸುತ್ತಿರುವುದರಿಂದ ಭಕ್ತ ಸಮೂಹ ಹರ್ಷಗೊಂಡಿದ್ದು, ಉದ್ಭವ ಲಿಂಗಕ್ಕೆ ಸ್ವಯಂ ಪೂಜೆ ಸಲ್ಲಿಸುತ್ತಿದ್ದಾರೆ.
ಉಪ್ಪಿನಂಗಡಿಯ ಆಧ್ಯಾತ್ಮ ಕ್ಷೇತ್ರದ ಸಾಧಕ ಕೃಷ್ಣ ಶೆಣೈ ನೇತೃತ್ವದ ಭಕ್ತ ಸಮೂಹ ದಿನ ನಿತ್ಯ ಉದ್ಭವ ಲಿಂಗಕ್ಕೆ ಸ್ವಯಂ ಪೂಜೆ ಸಲ್ಲಿಸಿ ಕೃತಾರ್ಥ ಭಾವಕ್ಕೆ ಒಳಗಾಗುತ್ತಿದ್ದಾರೆ.

ಕಾಣಿಸ್ತಿದೆ ಸಂಭ್ರಮ

ಪ್ರಸಕ್ತ ನದಿಯಲ್ಲಿ ಅರ್ಧಾಂಶ ಮಟ್ಟದಲ್ಲಿ ನೀರು ಹರಿಯುತ್ತಿರುವುದರಿಂದ ಉದ್ಭವ ಲಿಂಗದ ಬಳಿಗೆ ಹೋಗಿ ಬರಲು ಅವಕಾಶವಿದೆ. ಈ ಕಾರಣಕ್ಕೆ ನದಿ ಗರ್ಭದ ಅಂತರ್ಜಲ ಆವರಿಸಲ್ಪಟ್ಟಿದ್ದರೂ ಭಕ್ತರು ತಮ್ಮ ಪೂಜೆ ಸಲ್ಲಿಸಿ ಸಂಭ್ರಮಿಸುತ್ತಿದ್ದಾರೆ.

ಕಾಸರಗೋಡು ಜಿಲ್ಲೆಯಲ್ಲಿ ಇನ್ನು 52 ದಿನಗಳ ಕಾಲ ಟ್ರೋಲಿಂಗ್ ನಿಷೇಧ ಜಾರಿ
ಬಂದರು ತಲುಪಿ ಲಂಗರು ಹಾಕಿದ ಬೋಟ್‌ಗಳು

ಕಾಸರಗೋಡು: ಜಿಲ್ಲೆಯಲ್ಲಿ ಮಂಗಳವಾರ ಮಧ್ಯರಾತ್ರಿ 12 ಗಂಟೆಯಿಂದ ಮುಂದಿನ 52 ದಿನಗಳ ಕಾಲ ಯಾಂತ್ರೀಕೃತ ಮೀನುಗಾರಿಕೆಗೆ ನಿಷೇಧ ಹೇರಲಾಗಿದ್ದು, ಮೀನುಗಾರಿಕಾ ಬೋಟ್‌ಗಳು ಒಂದೊಂದಾಗಿ ಈಗ ದಡಕ್ಕೆ ಆಗಮಿಸಿ ಸುರಕ್ಷಿತವಾಗಿ ಲಂಗರು ಹಾಕಿವೆ.

ಆದಾಯದ ಮೂಲಕ್ಕೆ ಬಿದ್ದಿದೆ ಬರೆ

ಟ್ರೋಲಿಂಗ್ ನಿಷೇಧ ಜಾರಿಯಲ್ಲಿರುವ ಕಾಲ ಮೀನು ಕಾರ್ಮಿಕರು ಕೆಲಸವಿಲ್ಲದೆ ತಮ್ಮ ಆದಾಯ ಮೂಲವನ್ನು ಕಳೆದುಕೊಳ್ಳಬೇಕಾಗಿ ಬರಲಿದೆ. ಜಿಲ್ಲೆಯ ವಿವಿಧ ಮೀನುಗಾರಿಕಾ ಕೇಂದ್ರಗಳಲ್ಲಿ ಸುಮಾರು 200ರಷ್ಟು ಯಾಂತ್ರೀಕೃತ ಮೀನುಗಾರಿಕಾ ಬೋಟ್‌ಗಳಿವೆ. ಮೀನುಗಾರಿಕೆ ಆಶ್ರಯಿಸಿ ಬದುಕು



ನಡೆಸುತ್ತಿರುವ ಬೆಸ್ತರು ಮತ್ತು ಇತರ ಕಾರ್ಮಿಕರು ಸೇರಿ ಒಟ್ಟು 16,000 ಮಂದಿ ಇದ್ದಾರೆ ಎಂದು ಅಂಕಿಅಂಶಗಳು ಹೇಳುತ್ತವೆ. ಇದಲ್ಲದೆ ಸೈಕಲ್, ಸ್ಕೂಟರ್ ಸಹಿತ ಇನ್ನಿತರ ವಾಹನಗಳಲ್ಲಿ ಮೀನು ಹೇರಿ ಮಾರಾಟ ಮಾಡುವವರ ಸಂಖ್ಯೆ ಬೇರೆಯೇ ಇದೆ. ಇವರಿಗೆಲ್ಲಾ ಸರಕಾರದ ವತಿಯಿಂದ ಉಚಿತ ರೇಷನ್ ಸಾಮಗ್ರಿ ವಿತರಿಸಬೇಕು, ಅಗತ್ಯದ ಎಲ್ಲಾ ಸವಲತ್ತುಗಳನ್ನು ಒದಗಿಸಬೇಕು ಎಂಬ ಬೇಡಿಕೆ ಈಗ ವ್ಯಾಪಕಗೊಳ್ಳತೊಡಗಿದೆ.

ಯಾಕಾಗಿ ಈ ನಿಷೇಧ?

ಮಳೆಗಾಲವು ಮೀನುಗಳ ಸಂತಾನೋತ್ಪತ್ತಿಯ ಋತುವಾಗಿದೆ. ಈ ಹಿನ್ನೆಲೆಯಲ್ಲಿ ಮೀನುಗಳ ಸಂತಾನೋತ್ಪತ್ತಿಯನ್ನು ಹೆಚ್ಚಿಸಿ ಆ ಮೂಲಕ ಮತ್ಸ್ಯ ಸಂಪತ್ತನ್ನು ವೃದ್ಧಿಗೊಳಿಸಿ ಸಂರಕ್ಷಿಸುವ ಸಲುವಾಗಿ ಪ್ರತೀ ವರ್ಷ ಈ ಅವಧಿಯಲ್ಲಿ ನಿಷೇಧವು ಜಾರಿಯಲ್ಲಿರುತ್ತದೆ.

ಕಾಸರಗೋಡಿನ ಎಲ್ಲೆಲ್ಲಿ ಎಷ್ಟೆಷ್ಟು ಬೋಟ್‌ಗಳಿವೆ?

ಮೀನುಗಾರಿಕಾ ಇಲಾಖೆಯ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 129 ಯಾಂತ್ರೀಕೃತ ಮೀನುಗಾರಿಕಾ ಬೋಟ್‌ಗಳಿವೆ. ಇದರಲ್ಲಿ ಕಾಸರಗೋಡು ಕಸಬಾ ಕಡಪ್ಪುರದಲ್ಲಿ 12, ಮಂಜೇಶ್ವರದಲ್ಲಿ 23, ಕುಂಬಳೆ ಆರಿಕ್ಕಾಡಿಯಲ್ಲಿ 4, ಹೊಸದುರ್ಗದಲ್ಲಿ 18, ತೈಕಡಪ್ಪುರದಲ್ಲಿ 22, ನೀಲೇಶ್ವರದಲ್ಲಿ 13, ಮಡಕ್ಕರದಲ್ಲಿ 30 ಮತ್ತು ಪಡನ್ನ ಕಡಪ್ಪುರದಲ್ಲಿ 7 ಯಾಂತ್ರೀಕೃತ ಬೋಟ್‌ಗಳು ಇದರಲ್ಲಿ ಒಳಗೊಂಡಿವೆ.

ಹೊರೆಯಾಗಿದೆ ಪಾಣೇರ್‌ನ ಕೃತಕ ನೆರೆ



ಮಳೆಯಿಂದಾಗಿ ಪಾಣೆಮಂಗಳೂರು ಮೇಲ್ಸೇತುವೆ ಪಕ್ಕದ ಶ್ರೀ ಕಲ್ಲುರ್ಟಿ ಸನ್ನಿಧಿ ಬಳಿಯಿಂದ ಹಳೆ ಸೇತುವೆ ಕಡೆಗೆ ಸಾಗುವ ದಾರಿ ಆರಂಭದಲ್ಲೇ ಕೃತಕ ನೆರೆ ಸೃಷ್ಟಿಯಾಗಿ ವಾಹನ ಸಂಚಾರ, ಪಾದಚಾರಿಗಳಿಗೆ ತೀವ್ರ ಸಮಸ್ಯೆ ಉಂಟಾಗುತ್ತಿದೆ.

ರಾತ್ರಿಯಾಗುತ್ತಿದ್ದಂತೆ ಕಾಡಿನಿಂದ ನಾಡಿಗಿಳಿಯುತ್ತದೆ ಪಟಲಾಂ | ಜನವಸತಿ ಪ್ರದೇಶದಲ್ಲೂ ಬಿಂದಾಸ್ ಸವಾರಿ
ಈಗ ಘಮಘಮಿಸುವ ಹಲಸಿನ ಹಣ್ಣಿನ ಮೇಲೆ ಕಾಡಾನೆ ಕಣ್ಣು!

ಸುಳ್ಯ: ಈಗಾಗಲೇ ಹತ್ತು ಹಲವು ಸಂಕಷ್ಟಗಳಲ್ಲಿ ಬಳಲುತ್ತಿರುವ ಕೃಷಿಕರಿಗೆ ಗಾಯದ ಮೇಲೆ ಬರೆ ಎಳೆದಂತೆ ಹೊಸ ಸಂಕಷ್ಟ ಎದುರಾಗಿದೆ! ತೋಟಗಳಲ್ಲಿ ಬೆಳೆದಿರುವ ಹಲಸುಗಳ ಘಮಕ್ಕೆ ಮರುಳಾಗಿ ಕಾಡಿನಿಂದ ಈಗ ಗಜಪಡೆ ಹಿಂಡು ಹಿಂಡು ನಾಡಿನ ಕಡೆಗೆ ಲಗ್ಗೆಯಿಡುತ್ತಿದೆ.

ರಾತ್ರಿಯಾಗುತ್ತಿದ್ದಂತೆಯೇ ಹಾಜರ್!

ಇಲ್ಲಿನ ಸಂಪಾಜೆ, ಮರ್ಕಂಜ ಪರಿಸರ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಗಜಪಡೆಗಳ ಹಾವಳಿ ಈಗ ಹೆಚ್ಚುತ್ತಿದ್ದು, ರಾತ್ರಿಯಾದರೆ ಸಾಕು, ಹಲಸಿನ ಹಣ್ಣಿನ ಘಮಘಮ ಪರಿಮಳ ಅರಸಿಕೊಂಡು ಇವುಗಳು ನೇರ ಜನವಸತಿ ಪ್ರದೇಶಗಳಿಗೆ ಬರುತ್ತಿವೆ. ಇಲ್ಲಿನ ಮಾಣಿ ಮೈಸೂರು ರಾಷ್ಟ್ರೀಯ ಹೆದ್ದಾರಿ ಯಲ್ಲಿ ಗಜಪಡೆಗಳು ಆರಣ್ಯದಿಂದ ಬಿಂದಾಸ್ ಆಗಿ ರಸ್ತೆ ದಾಟುವ ದೃಶ್ಯಗಳು ವಾಹನ ಸವಾರರಿಗೆ ಕಣ್ಣಿಗೆ ಬೀಳುವುದು ಇಲ್ಲೀಗ ಸಾಮಾನ್ಯವಾಗಿದೆ. ಬೇಸಗೆಯಲ್ಲಿ ಆಪಾರ ಪ್ರಮಾಣದಲ್ಲಿ ಕೃಷಿ ಬೆಳೆ ಕಳೆದುಕೊಂಡಿದ್ದ ಕೃಷಿಕರು ಈಗ ಮಳೆಗಾಲದಲ್ಲಿ ಮತ್ತೆ ಇವುಗಳ ಹಾವಳಿಗೆ ಕಂಗಾಲಾಗಿದ್ದಾರೆ. ಪದೇ ಪದೇ ಉಪಟಳ ನೀಡುತ್ತಿರುವ ನಾಡಿನ ಅತಿಥಿಗಳಿಗೆ ಶಾಶ್ವತ ಕ್ರಮ ಕೈಗೊಳ್ಳುವಂತೆ ನಾಗರಿಕರು ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಸಂಗಮ ವಿಶೇಷ



ಕಾಡಾನೆಗಳಿಂದ ರಕ್ಷಣೆಗೆ ರಾತ್ರಿಯೂ ಕರ್ತವ್ಯದಲ್ಲಿರುವ ಇಟಿಎಫ್

ಕೃಷಿಕರ ಖುಷಿಗೆ ಮುಳುವಾಗಿದೆ ಕೃಷಿಭೂಮಿಯಲ್ಲಿರುವ ಹಲಸು!

ಗಜಪಡೆಗಳ ಹೆಜ್ಜೆ ಸದ್ದಿಗೆ ಇಟಿಎಫ್ ಟೀಮ್ ಅಲರ್ಟ್

ಅರಂತೋಡು ಗ್ರಾಮದ ಕೆಲ ಅರಣ್ಯದಂಚಿನ ಪ್ರದೇಶದಲ್ಲಿ ಹೆಚ್ಚಾಗಿ ಆನೆಗಳ ಸದ್ದು ಕೇಳಿಸುತ್ತಿದೆ. ಇಟಿಎಫ್ ತಂಡ ಅಲರ್ಟ್ ಆಗಿದ್ದು, ಆನೆಗಳನ್ನು ಮತ್ತೆ ಕಾಡಿಗಟ್ಟುವ ಕೆಲಸಗಳು ಇಲ್ಲಿ ನಿರಂತರವಾಗಿ ಆಗುತ್ತಿದೆ. ಇದಲ್ಲದೆ ಗಸ್ತಿನಲ್ಲಿ ಸ್ಪೆಷಲ್ ಫೋರ್ಸ್ ತಂಡಗಳ ಜೊತೆಗೆ ಇಲಾಖಾ ಸಿಬ್ಬಂದಿಗಳು ಕೂಡಾ ಕೈ ಜೋಡಿಸುತ್ತಿದ್ದು, ಕಾಡಾನೆಗಳ ಹಾವಳಿಗೆ ಬ್ರೇಕ್ ಹಾಕುವ ಪ್ರಯತ್ನ ನಿರಂತರವಾಗಿ ಇಲ್ಲಿ ಸಾಗಿದೆ.

ಆನೆ ಬರುವ ಹಾದಿಯಲ್ಲಿ ವಿದ್ಯುತ್ ದೀಪ ಅಳವಡಿಕೆ

ಸಾಮಾನ್ಯವಾಗಿ ಆನೆಗಳು ಆಗಮಿಸುವ ಆಯ್ದ ಕೆಲಸ ಸ್ಥಳಗಳಲ್ಲಿ ವಿದ್ಯುತ್ ದೀಪ ಅಳವಡಿಸಲಾಗಿದೆ. ಈ ಭಾಗದ ಗ್ರಾಮಸ್ಥರ ನಿರಂತರ ಬೇಡಿಕೆಗೆ ಸ್ಪಂದಿಸಿದ ಸ್ಥಳೀಯ ಆಡಳಿತವು ಈ ಹೆಜ್ಜೆಯಿರಿಸಿದ್ದು, ವಿದ್ಯುತ್ ದೀಪಗಳ ಅಳವಡಿಕೆ ನಾಗರಿಕರಿಗೆ ಮಾತ್ರವಲ್ಲದೆ ಇಟಿಎಫ್‌ಗೆ ಕೂಡಾ ಸಹಕಾರಿಯಾಗುತ್ತಿದೆ.

ಎಲ್ಲಾ ಅನುದಾನದಿಂದ ಬಂಟ್ವಾಳ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ: ಶಾಸಕ ರಾಜೇಶ್ ನ್ಾಯಕ್ 3
ಬಂಟ್ವಾಳ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದ ಕುಂದುಕೊರತೆ ಸಭೆ 4
ಕಾಸರಗೋಡು ಜಿಲ್ಲಾ ಆಸ್ಪತ್ರೆಯಲ್ಲಿ ರೋಗಿಗಳಿಗೆ ಬೆಳಗ್ಗಿನ ಉಪಹಾರ ಆರಂಭ 5

ಸುತ್ತ ಮುತ್ತ

ಯುವವಾಹಿನಿ ಬಂಟ್ವಾಳ ಘಟಕ ಅಧ್ಯಕ್ಷರಾಗಿ ಆಯ್ಕೆ

ಬಂಟ್ವಾಳ: ಯುವವಾಹಿನಿ ಬಂಟ್ವಾಳ ಘಟಕದ ಅಧ್ಯಕ್ಷರಾಗಿ ಕಿರಣ್‌ರಾಜ್ ಪೂಂಜರೆಕೋಡಿ ಆಯ್ಕೆಯಾಗಿದ್ದಾರೆ. ಬಿ.ಸಿ.ರೋಡ್‌ನಲ್ಲಿ ನಡೆದ ಘಟಕದ ಮಹಾಸಭೆಯಲ್ಲಿ ನಿಕಟಪೂರ್ವ ಅಧ್ಯಕ್ಷ ದಿನೇಶ್ ಸುವರ್ಣ ರಾಯಿ ಕಾರ್ಯಕಾರಿ ಸಮಿತಿಯ ಸದಸ್ಯರ ಪಟ್ಟಿಯನ್ನು ಪ್ರಕಟಿಸಿದರು. ಪ್ರಥಮ ಉಪಾಧ್ಯಕ್ಷರಾಗಿ ನಿಕೇಶ್ ಕೋಟ್ಯಾನ್, ದ್ವಿತೀಯ ಉಪಾಧ್ಯಕ್ಷರಾಗಿ ಹರೀಶ್ ಸಾಲ್ಯಾನ್ ಅಜೆಕಲ, ಕಾರ್ಯದರ್ಶಿಯಾಗಿ ಗೀತಾ ಜಗದೀಶ್, ಜತೆ ಕಾರ್ಯದರ್ಶಿಯಾಗಿ ಧನುಷ್ ಮಧ್ವ ಹಾಗೂ ಕೋಶಾಧಿಕಾರಿಯಾಗಿ ಪ್ರಜಿತ್ ಅಮೀನ್ ಏರಮಲೆ ಆಯ್ಕೆಯಾಗಿದ್ದಾರೆ. ಆಂತರಿಕ ಲೆಕ್ಕ ಪರಿಶೋಧಕರಾಗಿ ನವೀನ್ ಪೂಜಾರಿ ಲೊರೆಟ್ಟೊ,



ವಿದ್ಯಾನಿಧಿ ನಿರ್ದೇಶಕರಾಗಿ ಯೋಗೀಶ್ ಪೂಜಾರಿ ಕಲ್ಲಡ್ಕ, ನಾರಾಯಣಗುರು ತತ್ವ ಪ್ರಚಾರ ಮತ್ತು ಅನುಷ್ಠಾನ ನಿರ್ದೇಶಕರಾಗಿ ಮಹೇಶ್ ಪೂಜಾರಿ ಬೊಳ್ಳಾಯಿ, ಕ್ರೀಡಾ ನಿರ್ದೇಶಕರಾಗಿ ವಿಕ್ರಮ್ ಶಾಂತಿ ಕೆರೆಕೋಡಿಗುತ್ತು, ಸಾಂಸ್ಕೃತಿಕ ನಿರ್ದೇಶಕರಾಗಿ ನವೀನ್ ಕುಡ್ಮೇರ್, ಪ್ರಚಾರ ನಿರ್ದೇಶಕರಾಗಿ ಬ್ರಿಜೇಶ್ ಕಂಜತ್ತೂರು, ಆರೋಗ್ಯ ನಿರ್ದೇಶಕರಾಗಿ ಶೇಖರ ಪೂಜಾರಿ ಅಗಲ್ದೋಡಿ, ಸಮಾಜ ಸೇವಾ ನಿರ್ದೇಶಕರಾಗಿ ಚಿನ್ನಾ ಕಲ್ಲಡ್ಕ, ಕಲೆ ಮತ್ತು ಸಾಹಿತ್ಯ ನಿರ್ದೇಶಕರಾಗಿ ಅಶ್ವಿನ್ ಅಮೀನ್, ವ್ಯಕ್ತಿತ್ವ ವಿಕಸನ ನಿರ್ದೇಶಕರಾಗಿ ಶೈಲೇಶ್ ಪೂಜಾರಿ ಕುಚ್ಚಿಗುಡ್ಡೆ, ಉದ್ಯೋಗ ಮತ್ತು ಭವಿಷ್ಯ ನಿರ್ಮಾಣ ನಿರ್ದೇಶಕರಾಗಿ ನವೀನ್ ಪೂಜಾರಿ ಕಾರಾಜೆ, ವಿದ್ಯಾರ್ಥಿ ಸಂಘಟನಾ ನಿರ್ದೇಶಕರಾಗಿ ಕಾವ್ಯಾ ಸೋರ್ನಾಡು ಹಾಗೂ ಮಹಿಳಾ ಸಂಘಟನೆ ನಿರ್ದೇಶಕರಾಗಿ ಸ್ನೇಹಾ ಸುರೇಶ್ ಆಯ್ಕೆಯಾಗಿದ್ದಾರೆ. ಸಂಘಟನಾ ಕಾರ್ಯದರ್ಶಿಗಳಾಗಿ ಸರಿತಾ, ಜಗನ್ನಾಥ್ ಕಲ್ಲಡ್ಕ, ಚಿಂತನ್ ರಾಜ್, ಸುನೀತಾ ಮಾರ್ನಬೈಲು, ದೀರಜ್ ಕೋಟ್ಯಾನ್ ಜಕ್ರಿಬೆಟ್ಟು, ಮಲ್ಲಿಕಾ ಜ್ಯೋತಿಗುಡ್ಡೆ, ಮನ್ವಿತ್ ಕಾಂಜಿರಕೋಡಿ ಹಾಗೂ ನಿತಿನ್ ಕೆಮ್ಮಟೆಗುಡ್ಡೆ ಆಯ್ಕೆಯಾಗಿದ್ದಾರೆ. ಆಯ್ಕೆ ಸಮಿತಿಯ ಸದಸ್ಯರಾದ ರಾಮಚಂದ್ರ ಸುವರ್ಣ, ಪ್ರೇಮನಾಥ್ ಕೆ., ನಾಗೇಶ್ ಪೊನ್ನೋಡಿ, ರಾಜೇಶ್ ಸುವರ್ಣ ಹಾಗೂ ನಾಗೇಶ್ ಪೂಜಾರಿ ನೈಬೇಲು ಆಯ್ಕೆ ಪ್ರಕ್ರಿಯೆಗೆ ಸಹಕಾರ ನೀಡಿದರು.

ತೋಕೂರು ಮಹಿಳಾ ಮಂಡಲಕ್ಕೆ ಆಯ್ಕೆ

ಮುಲ್ಕಿ: ತೋಕೂರು ಯುವಕ ಸಂಘದ ಸುವರ್ಣ ಸಭಾಂಗಣದಲ್ಲಿ ನಡೆದ ಮಹಾಸಭೆಯಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಮಹಿಳಾ ಮಂಡಲದ ಅಧ್ಯಕ್ಷರಾಗಿ ಮೇಘನ ಅಡಿಗ, ಉಪಾಧ್ಯಕ್ಷರಾಗಿ ಜಯಲಕ್ಷ್ಮಿ, ಕಾರ್ಯದರ್ಶಿಯಾಗಿ



ಮೋಹಿನಿ, ಜೊತೆ ಕಾರ್ಯದರ್ಶಿಯಾಗಿ ಶೋಭಾ ಕೋಶಾಧಿಕಾರಿಯಾಗಿ ರೇಷ್ಮಾ ಸುವರ್ಣ ಆಯ್ಕೆಯಾಗಿದ್ದಾರೆ. ನೂತನ ಸಾಂಸ್ಕೃತಿಕ ಕಾರ್ಯದರ್ಶಿಗಳು– ಜ್ಯೋತಿ ಖಾರ್ವಿ, ಪ್ರೇಮಲತಾ ಶೆಟ್ಟಿಗಾರ್, ಕ್ರೀಡಾ ಕಾರ್ಯದರ್ಶಿಗಳು– ಪ್ರಮೀಳಾ ಡಿ. ಶೆಟ್ಟಿ, ವೇದ ಶೆಟ್ಟಿಗಾರ್, ವನಿತಾ ಕೆ. ಸನಿಲ್ ಸಮಿತಿ ಸದಸ್ಯರಾಗಿ ಪ್ರಫುಲ್ ಆರ್. ಶೆಟ್ಟಿ ನೇತ್ರಾವತಿ, ಅನುಪಮಾ ಎ. ರಾವ್, ಯಶವಂತಿ, ಸರಿತ, ಆಶಾ, ನಮಿತಾ, ವಿಜಯಲಕ್ಷ್ಮೀ ಸಹನ, ಶಿಲ್ಪ ಮೇಸ್ತ, ಸಲಹಾ ಮಂಡಳಿ ಸದಸ್ಯರಾಗಿ ಯಶೋಧ ಪಿ. ರಾವ್, ವಿಪುಲ ಡಿ. ಶೆಟ್ಟಿಗಾರ್, ವಿನೋದ ಭಟ್, ವನಜ ಸಾಲ್ಯಾನ್, ಜಲಜ ಕೋಟ್ಯಾನ್, ವಿಮಲಾ ಶೆಟ್ಟಿಗಾರ್ ಆಯ್ಕೆಯಾಗಿದ್ದಾರೆ.

ಚೂರಿಪದವು ಶಾಲಾ ಮಂತ್ರಿಮಂಡಲ ರಚನೆ

ನಿಡ್ಪಳ್ಳಿ: ಚೂರಿಪದವು ದ.ಕ.ಜಿ.ಪಂ. ಹಿರಿಯ ಪ್ರಾಥಮಿಕ ಶಾಲಾ ಮಂತ್ರಿಮಂಡಲವನ್ನು ರಚಿಸಲಾಯಿತು. ಮುಖ್ಯಮಂತ್ರಿಯಾಗಿ ಶ್ರೀಜಿತ್ ಜೆ.ಕೆ., ಉಪಮುಖ್ಯಮಂತ್ರಿಯಾಗಿ ಹೈಬಾ ಫಾತಿಮ ಆಯ್ಕೆಯಾಗಿದ್ದಾರೆ. ಗೃಹಮಂತ್ರಿಯಾಗಿ ಉದಿತ್,



ಉಪ ಗೃಹಮಂತ್ರಿಯಾಗಿ ಧನ್ವಿತ್, ಸ್ವಚ್ಛತಾ ಮತ್ತು ಆರೋಗ್ಯ ಮಂತ್ರಿಯಾಗಿ ಶಾಹಿದ, ಉಪ ಮಂತ್ರಿಯಾಗಿ ಸನಹ್, ಕ್ರೀಡಾ ಮಂತ್ರಿಯಾಗಿ ಫಾತಿಮತ್ ವಫಾ, ಉಪ ಮಂತ್ರಿಯಾಗಿ ಶಹಮ, ಕೃಷಿ ಮತ್ತು ನೀರಾವರಿ ಮಂತ್ರಿಯಾಗಿ ಮುಬಶಿರ್, ಉಪ ಮಂತ್ರಿಯಾಗಿ ದೀಕ್ಷಿತ್, ಸಾಂಸ್ಕೃತಿಕ ಮತ್ತು ಶಿಕ್ಷಣ ಮಂತ್ರಿಯಾಗಿ ಮೈರುಝ, ಉಪಮಂತ್ರಿಯಾಗಿ ತೌಫಿರಾ, ಆಹಾರ ಮಂತ್ರಿಯಾಗಿ ಹರ್ಷಿತಾ, ಉಪ ಮಂತ್ರಿಯಾಗಿ ಮನ್‌ದೀಪ್, ವಾರ್ತಾಮಂತ್ರಿಯಾಗಿ ದೀಪ್ತಿ, ಉಪ ಮಂತ್ರಿಯಾಗಿ ಫಾತಿಮತ್ ಅಲ್ಫಾ, ಗ್ರಂಥಾಲಯ ಮಂತ್ರಿಯಾಗಿ ಆಯಿಷ ಅಲೀಝ, ಉಪಮಂತ್ರಿಯಾಗಿ ಸೃಜನ್ ಕೃಷ್ಣ ಆಯ್ಕೆಯಾದರು.

ದೇಶದಲ್ಲೇ ಅತ್ಯಧಿಕ ಪ್ರಶಸ್ತಿ ಪಡೆದ ಬ್ಯಾಂಕ್ | ತಂತ್ರಜ್ಞಾನ ಕ್ರಾಂತಿ, ಆಡಳಿತಾತ್ಮಕ ಶ್ರೇಷ್ಠತೆಗೆ ಜಾಗತಿಕ ಮಾನ್ಯತೆ

ಪುತ್ತೂರು ಟೌನ್ ಬ್ಯಾಂಕ್‌ಗೆ 5 ರಾಷ್ಟ್ರೀಯ ಪ್ರಶಸ್ತಿಗಳ ಗರಿ

ಪುತ್ತೂರು: ಉತ್ತರ ಪ್ರದೇಶದ ಲಕ್ನೋದಲ್ಲಿ ಇತ್ತೀಚೆಗೆ ನಡೆದ ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಪ್ರತಿಷ್ಠಿತ ರಾಷ್ಟ್ರೀಯ ಮಹಾಸಮ್ಮೇಳನದಲ್ಲಿ 'ದಿ ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್ ಲಿಮಿಟೆಡ್' ಬರೊಬ್ಬರಿ ಐದು ರಾಷ್ಟ್ರೀಯ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಳ್ಳುವ ಮೂಲಕ ದೇಶದ ಸಹಕಾರಿ ರಂಗದಲ್ಲಿ ಹೊಸ ದಾಖಲೆ ಬರೆದಿದೆ.



ದೇಶದ ಎಲ್ಲಾ ರಾಜ್ಯಗಳ ನೂರಾರು ಪಟ್ಟಣ ಸಹಕಾರಿ ಬ್ಯಾಂಕ್‌ಗಳು ಭಾಗವಹಿಸಿದ್ದ ಈ ಉನ್ನತ ಮಟ್ಟದ ರಾಷ್ಟ್ರೀಯ ಸಮ್ಮೇಳನದಲ್ಲಿ, ಅತ್ಯಧಿಕ 5 ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡ ದೇಶದ ಏಕೈಕ ಬ್ಯಾಂಕ್ ಎಂಬ ಐತಿಹಾಸಿಕ ಹೆಗ್ಗಳಿಕೆಗೆ ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್ ಪಾತ್ರವಾಗಿದೆ. ಈ ಅಪೂರ್ವ ಸಾಧನೆ ಮೂಲಕ ಬ್ಯಾಂಕ್ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿದೆ.

ಪಂಚ ರತ್ನ ಪ್ರಶಸ್ತಿಗಳ ವಿವರ

ಅತ್ಯುತ್ತಮ ಅಧ್ಯಕ್ಷ ಎನ್. ಕಿಶೋರ್ ಕೊಳತ್ತಾಯ, ಅತ್ಯುತ್ತಮ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ: ಬಿ. ಶೇಖರ್ ಶೆಟ್ಟಿ

ಅತ್ಯುತ್ತಮ ನಿರ್ದೇಶಕ: ಚಂದ್ರಶೇಖರ್ ರಾವ್ ಬಪ್ಪಳಿಗೆ, ಅತ್ಯುತ್ತಮ ಮೊಬೈಲ್ ಬ್ಯಾಂಕಿಂಗ್ ಉಪಕ್ರಮ, ಅತ್ಯುತ್ತಮ ಸಿಬಿಎಸ್ ಅನುಷ್ಠಾನಯನ್ನು ಪುತ್ತೂರು ಟೌನ್ ಬ್ಯಾಂಕ್ ಪಡೆದಿದೆ.

ಈ ಎಲ್ಲಾ ರಾಷ್ಟ್ರೀಯ ಪ್ರಶಸ್ತಿಗಳನ್ನು (ಭಾರತ್ ರತ್ನ ಸಹಕಾರಿತ್ ಸಮ್ಮಾನ) ಅಸ್ಸಾಂ ರಾಜ್ಯದ ಶಾಸಕ ಹಾಗೂ ಅಸ್ಸಾಮ್ ರಾಜ್ಯದ ಅಪೇಕ್ಷ ಬ್ಯಾಂಕ್ ಅಧ್ಯಕ್ಷ ಬಿಶ್ವಜಿತ್ ಫುಕಾನ್ ವಿತರಿಸಿದರು. ಭಾರತ್ ಸಮ್ಮಾನ್ ಸಮಿತಿಯ ಮುಖ್ಯಸ್ಥ ಡಾ. ಅನೂಪ್ ಗುಪ್ತ ಮತ್ತು ಅಭಿಷೇಕ ಶರ್ಮ ಉಪಸ್ಥಿತರಿದ್ದರು.

ಲಕ್ನೋದಲ್ಲಿ ನಡೆದ ಪ್ರಶಸ್ತಿ ವಿತರಣೆಯ ಈ ಅದ್ದೂರಿ ಸಮ್ಮೇಳನದಲ್ಲಿ ಪ್ರಶಸ್ತಿ ಪುರಸ್ಕೃತರಾದ ಬ್ಯಾಂಕಿನ ಅಧ್ಯಕ್ಷ ಎನ್. ಕಿಶೋರ್ ಕೊಳತ್ತಾಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ. ಶೇಖರ್ ಶೆಟ್ಟಿ, ನಿರ್ದೇಶಕ ಚಂದ್ರಶೇಖರ್ ರಾವ್ ಬಪ್ಪಳಿಗೆ ಅವರೊಂದಿಗೆ ಬ್ಯಾಂಕಿನ ಉಪಾಧ್ಯಕ್ಷ ಕೆ. ಶ್ರೀಧರ್ ಗೌಡ ಹಾಗೂ ನಿರ್ದೇಶಕರಾದ ರಾಜು ಶೆಟ್ಟಿ, ಶ್ರೀಧರ್ ಪಟ್ಲ, ಮಲ್ಲೇಶ್ ಕುಮಾರ್, ಹರೀಶ್ ಬಿಜತ್ರೆ, ಗಣೇಶ್ ಕೌಕ್ರಾಡಿ ಮತ್ತು ಕೆ. ವಿಶ್ವಾಸ್ ಶೆಣೈ ಅವರು ಪಾಲ್ಗೊಂಡು ಪ್ರಶಸ್ತಿ ಸ್ವೀಕರಿಸಿದರು.

ಬ್ಯಾಂಕಿನ ಈ ಶಾಧನೆಗೆ ನಿರ್ದೇಶಕರಾದ ಕಿರಣ್ ಕುಮಾರ ರೈ, ರಾಮಚಂದ್ರ ಕಾಮತ್, ಸುಜೀಂದ್ರ ಪ್ರಭು, ಸೀಮಾ ನಾಗರಾಜ್, ವೀಣಾ ಹಾಗೂ ಬ್ಯಾಂಕಿನ ಪುತ್ತೂರು ಶಾಖಾಧಿಕಾರಿ ಚಿದಂಬರ, ವಿಟ್ಲ ಶಾಖಾಧಿಕಾರಿ ಜ್ಯೋತಿ ಎನ್. ಎಸ್. ಮತ್ತು ಬ್ಯಾಂಕಿನ ಸಿಬ್ಬಂದಿ ವರ್ಗದವರು ಸಂತಸ ವ್ಯಕ್ತಪಡಿಸಿದ್ದು, ಬ್ಯಾಂಕಿನ ಈ ಮಹತ್ ಸಾಧನೆಗೆ ಕಾರಣರಾದ ಬ್ಯಾಂಕಿನ ಸರ್ವ ಸದಸ್ಯರು ಹಾಗೂ ಗ್ರಾಹಕರಿಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.

ಗ್ರಾಹಕರ ಸಹಕಾರ,ಸಿಬ್ಬಂದಿ ಶ್ರಮವೇ ಕಾರಣ

'ಬ್ಯಾಂಕು ಕಳೆದ ಮೂರು ವರ್ಷಗಳಿಂದ ವ್ಯವಹಾರದಲ್ಲಿ ದಾಖಲೆಯ ಪ್ರಗತಿ ಸಾಧಿಸಿದ್ದಲ್ಲದೆ, ತಂತ್ರಜ್ಞಾನ ಅಳವಡಿಕೆಯಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದಿರುವುದೇ ಈ ಅದ್ವಿತೀಯ ರಾಷ್ಟ್ರೀಯ ಪ್ರಶಸ್ತಿಗೆ ಕಾರಣ. ಬ್ಯಾಂಕಿನ ಗೌರವಾನ್ವಿತ ಸದಸ್ಯರು ಮತ್ತು ಗ್ರಾಹಕರು ನೀಡಿದ ನಿರಂತರ ಸಹಕಾರ, ಪ್ರೋತ್ಸಾಹ ಹಾಗೂ ಸಿಬ್ಬಂದಿ ವರ್ಗದ ಅಹರ್ನಿಶಿ ಶ್ರಮವೇ ಈ ಸಾಧನೆಯ ಹಿಂದಿನ ಶಕ್ತಿ. ಇದಕ್ಕೆ ಕಾರಣರಾದ ಪ್ರತಿಯೊಬ್ಬರಿಗೂ ಆಡಳಿತ ಮಂಡಳಿ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ ಎಂದು ಬ್ಯಾಂಕಿನ ಅಧ್ಯಕ್ಷ ಎನ್. ಕಿಶೋರ್ ಕೊಳತ್ತಾಯ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ. ಶೇಖರ್ ಶೆಟ್ಟಿ ತಿಳಿಸಿದ್ದಾರೆ.

ಪುತ್ತೂರು: ವಿಶೇಷ ಅಗತ್ಯವುಳ್ಳ ಮಕ್ಕಳ ಫಿಸಿಯೋಥೆರಪಿ ಕಟ್ಟಡದ ಉದ್ಘಾಟನೆ



ಪುತ್ತೂರು: ನಮ್ಮ ಮಕ್ಕಳನ್ನು ವರ್ಷಕ್ಕೆ ಒಮ್ಮೆಯಾದರೂ ಮಾನವೀಯ ನೆಲೆಯಲ್ಲಿ ಕೆಲಸ ಮಾಡುವ ಸಂಸ್ಥೆಗಳಿಗೆ ಕರೆದುಕೊಂಡು ಹೋಗುವ ಕಾರ್ಯ ಮಾಡಬೇಕಿದ್ದು, ಆಗ ಅವರು ಸೇವಾ ಮನೋಭಾವದ ಕುರಿತು ಆಲೋಚನೆ ಮಾಡಲು ಸಾಧ್ಯವಾಗುತ್ತದೆ. ವಿಶೇಷ ಚೇತನ ಮಕ್ಕಳ ಪೋಷಕರು ಸವಾಲನ್ನು ಎದುರಿಸುವ ಧೈರ್ಯ ಮಾಡಿ ಮಕ್ಕಳ ಸ್ವಾಭಿಮಾನದ ಬದುಕಿಗೆ ಪ್ರೋತ್ಸಾಹ ನೀಡುವ ಕಾರ್ಯ ಮಾಡಬೇಕು ಎಂದು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.

ಅವರು ಪುತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ, ಕ್ಷೇತ್ರ ಸಂಪನ್ಮೂಲ ಕೇಂದ್ರ, ಕ್ಷೇತ್ರ ಸಮನ್ವಯ ಸಂಪನ್ಮೂಲ ಕೇಂದ್ರದ ವತಿಯಿಂದ ಪುತ್ತೂರಿನ ನೆಲ್ಲಿಕಟ್ಟೆಯಲ್ಲಿ ನಿರ್ಮಾಣಗೊಂಡ ವಿಶೇಷ ಅಗತ್ಯವುಳ್ಳ ಮಕ್ಕಳ ಫಿಸಿಯೋಥೆರಫಿ ಕಟ್ಟಡ, ಮಾತಿನ ಥೆರಫಿ ಕಟ್ಟಡ, ಶೌಚಾಲಯ, ಇಂಟರ್‌ಲಾಕ್ ವ್ಯವಸ್ಥೆ ಹಾಗೂ ಮೇಲ್ಛಾವಣಿಯನ್ನು ಉದ್ಘಾಟಿಸಿ ಮಾತನಾಡಿದರು.

ಸಂಸ್ಥೆಗೆ ಲಭ್ಯ ಮೂಲಗಳಿಂದ ಅನುದಾನ ಒದಗಿಸುವ ಕಾರ್ಯ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಇದರ ರಸ್ತೆ, ಆವರಣ ಗೋಡೆ ಮೊದಲಾದ ಕೆಲಸಗಳಿಗೆ ಅನುದಾನ ನೀಡಲಾಗುವುದು ಎಂದರು.

ವೇದಿಕೆಯಲ್ಲಿ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಸಿಲ್ವಿಯಾ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ನವೀನ್ ಸ್ಟೀವನ್ ವೇಗಸ್, ತಾಲೂಕು ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಅಬ್ರಹಾಂ ಎಸ್., ಅಕ್ಷರ ದಾಸೋಹ ಸಹಾಯಕ ನಿರ್ದೇಶಕಿ ಜಲಜಾಕ್ಷಿ ಉಪಸ್ಥಿತರಿದ್ದರು. ಪುತ್ತೂರು ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಮೋನಪ್ಪ ಎಂ. ಸ್ವಾಗತಿಸಿ, ಬಿಇಟಿಆರ್‌ಟಿ ತನುಜಾ ಪ್ರಸ್ತಾವನೆಗೈದರು. ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಶಾಲಿನಿ ವಂದಿಸಿದರು.

ಕಾವಳಪಡೂರು: ಹಂಚಿಕಟ್ಟೆಯಲ್ಲಿ ಹಿಂದು ರುದ್ರಭೂಮಿ ಲೋಕಾರ್ಪಣೆ



ಬಂಟ್ವಾಳ: ಕಾವಳಪಡೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಹಂಚಿಕಟ್ಟೆ ಎಂಬಲ್ಲಿ ಗ್ರಾಮ ಪಂಚಾಯತ್ ಹಾಗೂ ಹಿಂದು ರುದ್ರಭೂಮಿ ನಿರ್ಮಾಣ ಸಮಿತಿ ಮತ್ತು ದಾನಿಗಳ ವತಿಯಿಂದ ಸುಮಾರು 15 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾದ ಹಿಂದು ರುದ್ರಭೂಮಿಯ ಲೋಕಾರ್ಪಣೆ ಮಂಗಳವಾರ ನಡೆಯಿತು.

ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಉಳಿಪ್ಪಾಡಿಗುತ್ತು ಅವರು ನೂತನ ಹಿಂದೂ ರುದ್ರಭೂಮಿಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿ, ಪಂಚಾಯತ್ ನಿಕಟಪೂರ್ವ ಆಡಳಿತ ಸಮಿತಿಯ ರುದ್ರಭೂಮಿ ನಿರ್ಮಾಣ ಕಾರ್ಯ ಶ್ಲಾಘನೀಯ. ಇದಕ್ಕೆ ಕೈಜೋಡಿಸಿದ ಎಲ್ಲರೂ ಅಭಿನಂದನೀಯರು ಎಂದು ಹೇಳಿದರು.

ಶ್ರೀ ಕ್ಷೇತ್ರ ಕಾರಿಂಜದ ಮಾಜಿ ಆಡಳಿತ ಸಮಿತಿ ಅಧ್ಯಕ್ಷ ಪಿ.ಜಿನರಾಜ ಆರಿಗ ಅವರು ಉದ್ಘಾಟಿಸಿದರು. ಕಾವಳಪಡೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಪ್ರಮೋದ್ ಕುಮಾರ್ ರೈ ಕಾಡಬೆಟ್ಟು, ನಿಕಟಪೂರ್ವ ಅಧ್ಯಕ್ಷ ಲಕ್ಷ್ಮಿ ನಾರಾಯಣ ಶರ್ಮ, ಹಿಂದೂ ರುದ್ರಭೂಮಿ ಸಮಿತಿ ಅಧ್ಯಕ್ಷ ಶೃತಾಂಜನ್ ಜೈನ್ ಆಲಂಪುರಿಗುತ್ತು, ನಿಕಟಪೂರ್ವ ಸದಸ್ಯರಾದ ಜಿನೇಂದ್ರ ಜೈನ್, ಉಮೇಶ್, ಭವಾನಿ ಶ್ರೀಧರಪೂಜಾರಿ, ಶಿವಪ್ರಸಾದ್, ಕಾವಳಮೂಡೂರು ಗ್ರಾಮ ಪಂಚಾಯತ್ ನಿಕಟಪೂರ್ವ ಅಧ್ಯಕ್ಷ ಅಜಿತ್ ಕುಮಾರ್ ಶೆಟ್ಟಿ ವಗ್ಗ ಹಾ.ಉ.ಸ. ಸಂಘದ ಅಧ್ಯಕ್ಷ ಶಿವಪ್ಪ ಗೌಡ ನಿನ್ನಿಕಲ್ಲು, ಪಂಚಾಯತ್ ಆಡಳಿತಾಧಿಕಾರಿ ನಟೇಶ್ ಕುಮಾರ್ ಪಂಚಾಯತ್ ಅಭಿವೃದ್ಧಿ ಅಧಿಕಾರಿ ರಚನ್ ಕುಮಾರ್, ಕಾರ್ಯದರ್ಶಿ ವಿಮಲಾ, ಸಿಬಂದಿ ರಾಜಶೇಖರ ಪ್ರಭು,ವಾಮನ, ದಿವಾಕರ ಗುತ್ತಿಗೆದಾರ ರಿಯಾಝ್ ಮತ್ತಿತರರು ಉಪಸ್ಥಿತರಿದ್ದರು.

ಶಕ್ತಿನಗರ ನಾಲ್ಯಪದವು ಪಿಯು ಕಾಲೇಜಿನಲ್ಲಿ ಸೌಲಭ್ಯಗಳ ಉದ್ಘಾಟನೆ



ಮಂಗಳೂರು: ಶಕ್ತಿನಗರದ ನಾಲ್ಯಪದವು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಎಂಆರ್‌ಪಿಎಲ್ ಸಿಎಸ್‌ಆರ್ ಯೋಜನೆಯಡಿಯಲ್ಲಿ ನಿರ್ಮಿಸಲಾದ ಬಾಲಕಿಯರ ಮತ್ತು ಬಾಲಕರ ಶೌಚಾಲಯಗಳು, ನೀರಿನ ಸಂಪು ಹಾಗೂ ಕುಡಿಯುವ ನೀರಿನ ಶುದ್ಧೀಕರಣ ಘಟಕಗಳ ಉದ್ಘಾಟನಾ ಸಮಾರಂಭ ಶಾಸಕ ವೇದವ್ಯಾಸ ಕಾಮತ್ ನೇತೃತ್ವದಲ್ಲಿ ನಡೆಯಿತು.

ಎಂಆರ್‌ಪಿಎಲ್ ಸಂಸ್ಥೆಯ ಸಿಎಸ್‌ಆರ್ ವಿಭಾಗದ ವ್ಯವಸ್ಥಾಪಕ ಹರೀಶ್ ರಾವ್ ಮಾತನಾಡಿ, ಸಂಸ್ಥೆಯು ಸಮುದಾಯದ ಅಭಿವೃದ್ಧಿ ಹಾಗೂ ವಿದ್ಯಾರ್ಥಿಗಳ ಆರೋಗ್ಯ–ಸ್ವಚ್ಛತೆ ಸುಧಾರಣೆಗೆ ಬದ್ಧವಾಗಿದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಜಯಾನಂದ ಎನ್. ಸುವರ್ಣ ಮಾತನಾಡಿ, ಅತ್ಯಾಧುನಿಕ ಶೌಚಾಲಯಗಳು ಮತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಒದಗಿಸಿದ ಎಂಆರ್‌ಪಿಎಲ್ ಸಂಸ್ಥೆಗೆ ಹಾಗೂ ಅದಕ್ಕೆ ವಿಶೇಷ ಪ್ರಯತ್ನ ಮಾಡಿದ ಶಾಸಕರಿಗೆ ಕೃತಜ್ಞತೆ ಸಲ್ಲಿಸಿದರು. ನಿಕಟಪೂರ್ವ ಪಾಲಿಕೆ ಸದಸ್ಯರಾದ ವನಿತಾ ಪ್ರಸಾದ್, ಶಕೀಲಾ ಕಾವಾ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ಶಾರದಾ, ಪದವು ಫ್ರೆಂಡ್ಸ್ ಕ್ಲಬ್ ಅಧ್ಯಕ್ಷ ಕುಶಾಲ್ ಕುಮಾರ್, ಸಿಬಿಸಿ ಸದಸ್ಯ ಅಶೋಕ್ ನಾಯ್ಕ್, ಎಸ್‌ಡಿಎಂಸಿ ಅಧ್ಯಕ್ಷ ಕಿಶೋರ್, ಉದ್ಯಮಿಗಳಾದ ವಿಜಯ ಶೆಣೈ, ಪ್ರಸಾದ್, ಹಿರಿಯ ಶಿಕ್ಷಕಿ ದಾಕ್ಷಾಯಿಣಿ, ಉಪನ್ಯಾಸಕಿ ಸರಳಾದೇವಿ ಇದ್ದರು. ಸರಳಾದೇವಿ ಪಿ. ನಿರೂಪಿಸಿದರು. ಪ್ರೌಢಶಾಲಾ ಮುಖ್ಯೋಪಾಧ್ಯಾಯ ಪ್ರಶಾಂತ್ ಕುಮಾರ್ ವಂದಿಸಿದರು.

ವಿಶ್ವಕರ್ಮ ಒಕ್ಕೂಟದ ಭಜನಾ ಸ್ಪರ್ಧೆ: ಕಲಾ ಪರಿಷತ್ ಯುವ ತಂಡ ಪ್ರಥಮ



ಮಂಗಳೂರು: ಅವಿಭಜಿತ ದ.ಕ. ಜಿಲ್ಲೆಯ ವಿಶ್ವಕರ್ಮ ಸಮುದಾಯದ ಕೇಂದ್ರ ಸಂಸ್ಥೆ ವಿಶ್ವಕರ್ಮ ಒಕ್ಕೂಟದ ವತಿಯಿಂದ ಕಟಪಾಡಿ ಶ್ರೀ ಕಾಳಿಕಾಂಬಾ ವಿಶ್ವಕರ್ಮೇಶ್ವರ ದೇವಸ್ಥಾನದಲ್ಲಿ ನಡೆದ ದ. ಕ., ಉಡುಪಿ, ಉ.ಕ., ಕಾಸರಗೋಡು ಜಿಲ್ಲೆಗಳ ಸಮುದಾಯದವರಿಗೆ ಜರಗಿದ ಸಾಂಪ್ರದಾಯಿಕ ಭಜನಾ ಸ್ಪರ್ಧೆ ಭಜನಾ ವೈಭವ 2026ರಲ್ಲಿ ವಿಶ್ವಕರ್ಮ ಕಲಾ ಪರಿಷತ್ ಮಂಗಳೂರು ಇದರ ಯುವ ತಂಡ ಪ್ರಥಮ ಸ್ಥಾನ ಪಡೆದು ವಿಜೇತವಾಗಿದೆ.

ಶ್ರದ್ಧಾ ಗುರುದಾಸ್, ಅಮೃತಾ ಎ. ಜಿ.ಎಸ್., ನವಮ್ ಆಚಾರ್ಯ ಮುಡಿಪು, ತೇಜಸ್ ಆಚಾರ್ಯ ಕೃಷ್ಣಾಪುರ, ಗುರು ಅಭಿಷೇಕ್, ಧೃತಿ ಹಾಗೂ ಸಾನ್ವಿಕಾ ಪ್ರಶಾಂತ್ ಅವರನ್ನೊಳಗೊಂಡ ಈ ತಂಡವು ಭಾಗವಹಿಸಿದ ಹದಿನೆಂಟು ತಂಡಗಳಲ್ಲಿ ಅಗ್ರಸ್ಥಾನವನ್ನು ಪಡೆದು ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಕೆಜಿಎಫ್ ಖ್ಯಾತಿಯ ಸಂಗೀತ ನಿರ್ದೇಶಕ ರವಿ ಬಸ್ರೂರು ಈ ತಂಡವನ್ನು ಅಭಿನಂದಿಸಿದರು. ವಿಶ್ವಕರ್ಮ ಒಕ್ಕೂಟದ ಅಧ್ಯಕ್ಷ ಮಧು ಆಚಾರ್ಯ, ಉಪಾಧ್ಯಕ್ಷ ಅಲೆವೂರು ಯೋಗೀಶ ಆಚಾರ್ಯ, ಕ್ಷೇತ್ರದ ಮೊಕ್ತೇಸರ ಕೆ. ಮುರಹರಿ ಆಚಾರ್ಯ, ವಿಶ್ವಕರ್ಮ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಡಾ. ಎಸ್. ಆರ್. ಹರೀಶ ಆಚಾರ್ಯ, ಉದ್ಯಮಿ ಪಾಂಡುರಂಗ ಆಚಾರ್ಯ ಪ್ರಶಸ್ತಿ ವಿತರಿಸಿದರು. ವಿಶ್ವಕರ್ಮ ಕಲಾ ಪರಿಷತ್ತಿನ ಅಧ್ಯಕ್ಷ ಡಾ. ಎಸ್. ಪಿ. ಗುರುದಾಸ್, ಖಜಾಂಚಿ ಎ. ಜಿ. ಸದಾಶಿವ, ಸಂಘಟನಾ ಕಾರ್ಯದರ್ಶಿಗಳಾದ ಯಜ್ಞೇಶ್ವರ ಕೃಷ್ಣಾಪುರ, ಅರ್ಚನಾ ಆಕಾಶಭವನ, ಸದಸ್ಯರಾದ ಸ್ನೇಹಾ ಗುರುದಾಸ್, ಪ್ರಶಾಂತ್ ಕೋಟೆಕಾರ್, ಸುನೀಲ್ ಟಿ. ಉಪಸ್ಥಿತರಿದ್ದರು.

ಶ್ರೀ ಸಾರಂತಾಯ ಗರೋಡಿ ಉಳ್ಳಾಯ ದೈವಸ್ಥಾನದಲ್ಲಿ ವಿದ್ಯಾರ್ಥಿಗಳಿಗೆ ಸನ್ಮಾನ



ಮುಲ್ಕಿ: ಬಿಲ್ಲವರ ಹಿತವರ್ಧಕ ಸಂಘ ಸಸಿಹಿತ್ಲು ಸಂಚಾಲಕತ್ವದ ಶ್ರೀ ಸಾರಂತಾಯ ಗರೋಡಿ ಉಳ್ಳಾಯ ದೈವಸ್ಥಾನದ ಸಭಾಂಗಣದಲ್ಲಿ ಕಾಂತಾಬಾರೆ ಬುದಾಬಾರೆ ವಿದ್ಯಾನಿಧಿ ಸಹಯೋಗದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಡಿಗ್ರಿ, ಡಿಪ್ಲೊಮಾ, ಇಂಜಿನಿಯರಿಂಗ್ ವಿಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ, ಅಶಕ್ತರಿಗೆ ಆರೋಗ್ಯ ನಿಧಿ ವಿತರಣೆ ಕಾರ್ಯಕ್ರಮ ನಡೆಯಿತು.

ಅಧ್ಯಕ್ಷತೆಯನ್ನು ಶ್ರೀ ಕ್ಷೇತ್ರದ ಕೋಶಾಧಿಕಾರಿ ಮಂಜೋಡಿ ದೇವು ಪೂಜಾರಿ ಯಾನೆ ಎಸ್. ದಯಾನಂದ ಗುರಿಕಾರರ್ ವಹಿಸಿದ್ದರು. ಬಪ್ಪನಾಡು ದೇವಸ್ಥಾನದ ಇಒ ಶ್ವೇತಾ ಪಳ್ಳಿ, ಉದ್ಯಮಿ ಜಯಂತಿ ಬಾಬು ಬಂಗೇರ, ವಿಶ್ವನಾಥ್ ಕೋಟ್ಯಾನ್, ಕ್ಷೇತ್ರದ ಅಧ್ಯಕ್ಷರು ಜಗನ್ನಾಥ ಕೋಟ್ಯಾನ್, ಉಪಾಧ್ಯಕ್ಷ ಅನಿಲ್ ಪೂಜಾರಿ, ಕಾಂತುಲಕಣ ಯಾನೆ ಪಠೇಲರ ಮನೆತನದ ಲೀಲಾಧರ ಬಂಗೇರ, ನಿರಂಜನ್ ಬಂಗೇರ, ರಮೇಶ್ ಸನಿಲ್, ಕ್ಷೇತ್ರದ ಅರ್ಚಕರಾದ ಸುರೇಶ್ ಪೂಜಾರಿ, ದಾಮೋದರ ಪೂಜಾರಿ, ಕಡವುರ ಮನೆತನದ ಹೇಮಚಂದ್ರ, ಗಂಗಾಧರ ಎ. ಸಾಲ್ಯಾನ್, ಜೀರ್ಣೋದ್ಧಾರ ಸಮಿತಿ ಮಹಿಳಾ ವಿಭಾಗದ ಅಧ್ಯಕ್ಷೆ ಪುಷ್ಪಾ ದಯಾನಂದ್, ಲೀಲಾ ವಸಂತ್ ಇದ್ದರು.

ತೃಪ್ತಿ, ಋತಿಕಾ ಸನ್ಮಾನಿತರ ಪಟ್ಟಿ ವಾಚಿಸಿದರು. ಎಸ್.ಆರ್. ಪ್ರಭಾತ್ ನಿರೂಪಿಸಿದರು. ನವೀನ್ ಕುಮಾರ್ ಸ್ವಾಗತಿಸಿದರು. ಹರೀಶ್ ಪೂಜಾರಿ ವಂದಿಸಿದರು. ಆರೋಗ್ಯ ನಿಧಿ ಉದ್ಘಾಟಿಸಲಾಯಿತು. ಗುತ್ತಿಗೆತೋಟ ರಾಜು ಇವರಿಗೆ 10,000 ರೂ. ಆರೋಗ್ಯ ನಿಧಿ ವಿತರಿಸಲಾಯಿತು. ದಾನಿಗಳಾದ ಜಯಂತಿ ಬಾಬು ಬಂಗೇರ, ವಿಶ್ವನಾಥ ಕೋಟ್ಯಾನ್, ಪೂಜಾ ಅರೇಂಜರ್ಸ್‌ನ ಜೈಕೃಷ್ಣ ಕೋಟ್ಯಾನ್ ಅವರಿಗೆ ಗೌರವ ಸನ್ಮಾನ ನಡೆಯಿತು.

ಮರೋಳಿ ಶ್ರೀರಾಮ ಭಜನಾ ಮಂದಿರ ಸಮಾಜ ಸೇವಾ ಕಾರ್ಯಕ್ರಮ



ಮಂಗಳೂರು: ಶ್ರೀರಾಮ ಭಜನಾ ಮಂದಿರದ ವತಿಯಿಂದ ಸಮಾಜ ಸೇವಾ ಕಾರ್ಯಕ್ರಮ ಜರಗಿತು.

ಶ್ರೀ ಮಹಾಲಕ್ಷ್ಮಿ ಆಟೋಮೊಬೈಲ್ ಮಾಲಕ ವೆಂಕಟೇಶ್ ರೈ, ನಿತ್ಯಾಕರುಣಾ ಎಂಟರ್‌ಪ್ರೈಸಸ್ ಮಾಲಕ ನಿತ್ಯಾ ಕರುಣಾ ನೈಕ್ , ಚರಣ್ ಶಾಂತಿ, ನಿಕಟಪೂರ್ವ ಕಾರ್ಪೊರೇಟರ್ ಕೇಶವ ಮರೋಳಿ, ಮಂದಿರದ ಅಧ್ಯಕ್ಷ ರುಕ್ಮಯ ದೇವಾಡಿಗರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮರೋಳಿ ಗ್ರಾಮದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ. 90ಕ್ಕಿಂತ ಅಧಿಕ ಅಂಕಗಳನ್ನು ಗಳಿಸಿದ ಒಟ್ಟು 11 ವಿದ್ಯಾರ್ಥಿ, ವಿದ್ಯಾರ್ಥಿನಿಯವರನ್ನು ಮಂದಿರದ ವತಿಯಿಂದ ಅಭಿನಂದಿಸಲಾಯಿತು.

ತಂದೆಯನ್ನು ಕಳೆದುಕೊಂಡ 3 ವಿದ್ಯಾರ್ಥಿಗಳಿಗೆ ಮಂದಿರದ ವತಿಯಿಂದ ವಿದ್ಯಾನಿಧಿಯಿಂದ ವಿದ್ಯಾಭ್ಯಾಸಕ್ಕಾಗಿ ಸಹಾಯಧನವನ್ನು ವಿತರಿಸಲಾಯಿತು. 2 ಪ್ರಾಥಮಿಕ ಶಾಲೆ ಹಾಗೂ ಒಂದು ಆಶ್ರಮದ ಮಕ್ಕಳಿಗೆ ಶಾಲಾ ನೋಟ್ ಪುಸ್ತಕ ಹಾಗೂ ಕೊಡೆಗಳನ್ನು ವಿತರಿಸಲಾಯಿತು. ಅಪಘಾತಕ್ಕೀಡಾಗಿ ಆಸ್ಪತ್ರೆಯ ತೀವ್ರ ನಿಗಾ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗ್ರಾಮದ ಕುಟುಂಬಕ್ಕೆ ಮಂದಿರದ ಆರೋಗ್ಯ ನಿಧಿಯಿಂದ ರೂ. 25000 ದೇಣಿಗೆಯನ್ನು ಶ್ರೀ ರಾಮ ದೇವರ ಪ್ರಸಾದದೊಂದಿಗೆ ನೀಡಲಾಯಿತು.

ವಾಸುದೇವ ಮರೋಳಿ ಸ್ವಾಗತಿಸಿದರು, ಕಿರಣ್ ಮರೋಳಿ ಪ್ರಸ್ತಾವನೆಗೈದರು. ಯಶಸ್ವಿನಿ ನಿರೂಪಿಸಿದರು. ಪ್ರಕಾಶ್ ಎಂ.ಎಸ್. ವಂದಿಸಿದರು.

ಖ್ಯಾತ ಪತ್ರಿಕೋದ್ಯಮಿ, ಕೈಗಾರಿಕೋದ್ಯಮಿ ದಿ. ವಿ.ಎಸ್. ಕುಡ್ವ ಜನ್ಮ ದಿನಾಚರಣೆ

ಪತ್ರಿಕೋದ್ಯಮ, ಕೈಗಾರಿಕೋದ್ಯಮ ಕ್ಷೇತ್ರದಲ್ಲಿ ಕುಡ್ವರ ಸಾಧನೆ ಸ್ಮರಣೆ

ಮಂಗಳೂರು: ಖ್ಯಾತ ಪತ್ರಿಕೋದ್ಯಮಿ, ನವಭಾರತ ಕನ್ನಡ ದೈನಿಕ ಪತ್ರಿಕೆಯ ಸ್ಥಾಪನಾ ಸಂಪಾದಕ ಮತ್ತು ನಗರದ ಮರೋಳಿ ಕೆನರಾ ವರ್ಕ್‌ಶಾಪ್ ಕೈಗಾರಿಕಾ ಸಂಸ್ಥೆಯ ಸ್ಥಾಪನಾಧ್ಯಕ್ಷ ದಿ. ವಿ. ಎಸ್. ಕುಡ್ವ ಅವರ 127ನೇ ವಾರ್ಷಿಕ ಜನ್ಮ ದಿನಾಚರಣೆ (ಸಂಸ್ಥಾಪಕರ ದಿನಾಚರಣೆ) ಕೆನರಾ ವರ್ಕ್‌ಶಾಪ್ ಸಂಸ್ಥೆಯ ಕೈಗಾರಿಕಾ ಸಂಕೀರ್ಣದಲ್ಲಿ ಮಂಗಳವಾರ ನಡೆಯಿತು.



ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಮತ್ತು ಆಡಳಿತ ನಿರ್ದೇಶಕ ಪ್ರೇಮನಾಥ ಕುಡ್ವ ಮಾತನಾಡಿ, ಸ್ಥಾಪಕರ ಆಡಳಿತ ಕ್ಷಮತೆ, ಕಾರ್ಯದಕ್ಷತೆ, ಕಾರ್ಯನಿರ್ವಹಣೆ, ಕರ್ತವ್ಯ ನಿಷ್ಠೆ ಮತ್ತು ಸಮಯ ಪಾಲನೆ ಮತ್ತು ಪತ್ರಿಕೋಧ್ಯಮ (ನವಭಾರತ ಕನ್ನಡ ದೈನಿಕ ಪತ್ರಿಕೆ) ಮತ್ತು ಕೈಗಾರಿಕೋದ್ಯಮ ಕ್ಷೇತ್ರದಲ್ಲಿ ಸಾಧಿಸಿದ ಗಣನೀಯ ಸಾಧನೆಯನ್ನು ಸ್ಮರಿಸಿದರು.

ಮುಖ್ಯ ಅತಿಥಿಯಾಗಿದ್ದ ದಿ.ವಿ.ಎಸ್. ಕುಡ್ವರ ಜೀವನ ಚರಿತ್ರೆ ಕೃತಿಯ ಲೇಖಕ ವಸಂತ ಮಲ್ಯ ಸ್ಥಾಪಕರಿಗೆ ಗೌರವ ಸಲ್ಲಿಸಿದರು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕೋಡಿಯಾಲ್‌ಬೈಲ್ ಶಾಖೆ ಮುಖ್ಯ ಪ್ರಬಂಧಕ ಮಿಲನ್ ಗಿರಿ, ಕೆನರಾ ಬ್ಯಾಂಕ್ ಕುಲಶೇಖರ ಶಾಖೆಯ ಪ್ರಬಂಧಕ ಅಮಲ್ ಮೋಹನ್ ಅತಿಥಿಯಾಗಿದ್ದರು. ಸಂಸ್ಥೆಯ ಹಿರಿಯ ಕಾರ್ಯನಿರ್ವಹಣಾ ಪ್ರಬಂಧಕಿ ಕಾವ್ಯ ಪಿ. ಕುಡ್ವ ಉಪಸ್ಥಿತರಿದ್ದರು. ಸಂಸ್ಥೆಯ ನಿವೃತ್ತ ಉಪಮಹಾಪ್ರಬಂಧಕ ಅಬ್ದುಲ್ ಸಲೀಂ, ಸಂಸ್ಥೆಯು ಕಳೆದ 8 ದಶಕಗಳಿಂದ ಬೆಳೆದು ಬಂದ ದಾರಿಯ ವಿವರ ನೀಡಿದರು.

ವಿ.ಎಸ್. ಕುಡ್ವ ಕಂಪ್ಯೂಟರ್ ಅಕಾಡೆಮಿಯ ಮುಖ್ಯ ತರಬೇತುದಾರ ಕೆ. ಮುಕುಂದರಾಜ ಪೈ ಅವರನ್ನು ಸನ್ಮಾನಿಸಲಾಯಿತು. ಸಿಬ್ಬಂದಿ ಪರವಾಗಿ ಸಹಾಯಕ ಮಹಾಪ್ರಬಂಧಕ ಅಕ್ಷಯ್ ಪ್ರಭು, ಹಿರಿಯ ಕಾರ್ಮಿಕರಾದ ಜಗದೀಶ್ ಸಾಲ್ಯಾನ್, ನಾಗರಾಜ್, ಕಾರ್ಮಿಕರ ಸಂಘದ ಪರವಾಗಿ ಪದಾಧಿಕಾರಿಗಳು ಸಂಸ್ಥಾಪಕರ ಮತ್ತಳಿಗೆ ಹಾರಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ಅಧಿಕಾರಿ ಕಿರಣ್ ಎಸ್. ಕುಲಾಲ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಉತ್ಪಾದನಾ ತಾಂತ್ರಿಕ ತಜ್ಞ ಸುದರ್ಶನ್ ರಾವ್ ವಂದಿಸಿದರು.

ವಿವೇಕಾನಂದ ಪಿಯು ಕಾಲೇಜಿನಲ್ಲಿ ಪ್ರಾರಂಭೋತ್ಸವ

ಗಣಪತಿ ಹವನ, ಸರಸ್ವತಿ ಪೂಜೆ

ಪುತ್ತೂರು: ವಿವೇಕಾನಂದ ಪದವಿಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಕಾಲೇಜು ಪ್ರಾರಂಭೋತ್ಸವದ ಅಂಗವಾಗಿ ಗಣಪತಿ ಹವನ ಹಾಗೂ ಸರಸ್ವತಿ ಪೂಜಾ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಶೆಕೋಡಿ ಸೂರ್ಯನಾರಾಯಣ ಭಟ್, ಹರಿಪ್ರಸಾದ್, ಪ್ರಕಾಶ್ ಹಾಗೂ ಅನಂತ ಭಟ್ ಪೂಜೆಯನ್ನು ನೆರವೇರಿಸಿಕೊಟ್ಟರು. ಈ ಸಂದರ್ಭದಲ್ಲಿ ಸಂಸ್ಥೆಯ ಆವರಣದಲ್ಲಿರುವ ನಾಗಬನದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.



ಕಾರ್ಯಕ್ರಮದಲ್ಲಿ ವಿವೇಕಾನಂದ ಪದವಿಪೂರ್ವ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ರವೀಂದ್ರ ಪಿ., ನಿರ್ದೇಶಕರಾದ ವತ್ಸಲಾ ರಾಜ್ಞಿ, ಡಾ. ಕೃಷ್ಣಪ್ರಸನ್ನ, ಪ್ರಾಂಶುಪಾಲ ದೇವಿಚರಣ್ ರೈ ಎಂ., ಉಪನ್ಯಾಸಕ, ಉಪನ್ಯಾಸಕೇತರ ವೃಂದದವರು ಹಾಗೂ ಪ್ರಥಮ ಪಿಯುಸಿ ವಿದ್ಯಾರ್ಥಿಗಳು ಪಾಲ್ಗೊಂಡರು.

ಸುತ್ತಮುತ್ತ

ನಮೋ ಆಡಳಿತಕ್ಕೆ 12 ವರ್ಷ: ಇಂದು ಸಾಮೂಹಿಕ ಪೂಜೆ

ಕುಂದಾಪುರ: ಪ್ರಧಾನಿ ನರೇಂದ್ರ ಮೋದಿ ಅವರು ಪ್ರಧಾನ ಮಂತ್ರಿಗಳಾಗಿ 12 ವರ್ಷಗಳನ್ನು ಪೂರೈಸಿದ ಹಿನ್ನಲೆಯಲ್ಲಿ ಬಿಜೆಪಿ ಕುಂದಾಪುರ ಮಂಡಲದ ವತಿಯಿಂದ ಸಾಮೂಹಿಕ ಪೂಜಾ ಕಾರ್ಯಕ್ರಮ ಕುಂದಾಪುರದ ಶ್ರೀ ಕುಂದೇಶ್ವರ ದೇವಸ್ಥಾನದಲ್ಲಿ ಜೂ.10ರಂದು ಬೆಳಿಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವೃತ್ತಿಪರ ಶಿಕ್ಷಕರ ನೇಮಕಾತಿ

ಕಾಸರಗೋಡು: ಮೊಗ್ರಾಲ್ ಜಿವಿಎಚ್‌ಎಸ್‌ಎಸ್‌ನ ವಿಎಚ್‌ಎಸ್‌ಇ ವಿಭಾಗದಲ್ಲಿ ವೃತ್ತಿಪರ ಶಿಕ್ಷಕರ (ಡಿಎನ್‌ಎಲ್) ನೇಮಕಾತಿಗಾಗಿ ಸಂದರ್ಶನವು ಜೂ.11ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ. ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್‌ನಲ್ಲಿ ಬಿ ಟೆಕ್ ವಿದ್ಯಾರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗಾಗಿ 9946985775 ಸಂಪರ್ಕಿಸಬಹುದು.

ಅರಂತೋಡು ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿ ನೇಮಕ

ಸುಳ್ಯ: ಅರಂತೋಡು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಾಗಿ ಗುತ್ತಿಗೆ ಆಧಾರದಲ್ಲಿ ಡಾ. ಮೊಹಮ್ಮದ್ ಫೈಝುಲ್ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಉಳ್ಳಾಲ ಕೋಟೆಪುರದ ಅವರು ದೇರಳಕಟ್ಟೆ ಯೇನೆಪೋಯ ಮೆಡಿಕಲ್ ಕಾಲೇಜ್‌ನಲ್ಲಿ ಎಂ.ಬಿ.ಬಿ.ಎಸ್. ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದ್ದು, ಇದೀಗ ಕರ್ತವ್ಯಕ್ಕೆ ಹಾಜರಾಗಿದ್ದಾರೆ.

ಸಿಇಟಿ ಪ್ರವೇಶ ಪ್ರಕ್ರಿಯೆ ಕುರಿತು ಮಾರ್ಗದರ್ಶನ

ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯ, ಬಂಟಕಲ್ ವತಿಯಿಂದ ಕೆಇಎ – ಸಿಇಟಿ 2026 ಪ್ರವೇಶ ಪ್ರಕ್ರಿಯೆಯ ಕುರಿತು ವಿದ್ಯಾರ್ಥಿಗಳು ಹಾಗೂ ಪೋಷಕರಿಗಾಗಿ ಜಾಗೃತಿ ಮತ್ತು ಮಾರ್ಗದರ್ಶನ ಕಾರ್ಯಕ್ರಮ ಆಯೋಜಿಸಲಾಗಿದೆ. ಆಯ್ಕೆ ನಮೂದು, ಸೀಟು ಹಂಚಿಕೆ, ಶುಲ್ಕ ಪಾವತಿ, ಹಾಗೂ ಕಾಲೇಜಿಗೆ ವರದಿ ಮಾಡುವ ಪ್ರಕ್ರಿಯೆ ಸೇರಿದಂತೆ ಸಿಇಟಿ ಪ್ರವೇಶ ಸಂಬಂಧಿತ ವಿವಿಧ ಹಂತಗಳ ಕುರಿತು ಸಮಗ್ರ ಮಾಹಿತಿ ನೀಡಲಾಗುವುದು. ಜೂ.12ಕ್ಕೆ ಬೆಳಿಗ್ಗೆ 9.30ಕ್ಕೆ ಕಾರ್ಕಳ ಕುಕ್ಕುಂದೂರು ಕ್ರಿಯೇಟಿವ್ ಪದವಿ ಪೂರ್ವ ಕಾಲೇಜು, ಜೂ.13ಕ್ಕೆ ಮಧ್ಯಾಹ್ನ 2ಕ್ಕೆ ಕುಂದಾಪುರ ಶ್ರೀ ವೆಂಕಟರಮಣ ಪದವಿ ಪೂರ್ವ ಕಾಲೇಜು, ಜೂ.18ಕ್ಕೆ ಬೆಳಿಗ್ಗೆ 9.30ಕ್ಕೆ ಉಡುಪಿ ಬಂಟಕಲ್, ಎಸ್‌ಎಂವಿಐಟಿಎಂನಲ್ಲಿ ಮಾಹಿತಿ ಶಿಬಿರ ನಡೆಯಲಿದೆ. ಕಾರ್ಯಕ್ರಮದಲ್ಲಿ ನುರಿತ ಸಂಪನ್ಮೂಲ ವ್ಯಕ್ತಿಯು ಕೆಇಎ –ಸಿಇಟಿ ಪ್ರವೇಶ ಹಾಗೂ ಕೌನ್ಸೆಲಿಂಗ್ ಪ್ರಕ್ರಿಯೆಯ ವಿವಿಧ ಅಂಶಗಳ ಕುರಿತು ವಿವರವಾದ ಮಾರ್ಗದರ್ಶನ ನೀಡಲಿದ್ದು, ವೃತ್ತಿಪರ ಹಾಗೂ ಎಂಜಿನಿಯರಿಂಗ್ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಬಯಸುವ ಎಲ್ಲಾ ಕೆಇಎ – ಸಿಇಟಿ ಅಭ್ಯರ್ಥಿಗಳು ಹಾಗೂ ಅವರ ಪೋಷಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಪ್ರಯೋಜನ ಪಡೆಯುವಂತೆ ಎಸ್‌ಎಂವಿಐಟಿಎಂ, ಬಂಟಕಲ್ ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗಳಿಗಾಗಿ – 9611615001,0820–2589183 ಸಂಪರ್ಕಿಸುವಂತೆ ಕಾಲೇಜಿನ ಪ್ರಕಟಣೆ ತಿಳಿಸಿದೆ.

ಸಂಭ್ರಮಾಚರಣೆ ಬಿಡಿ, ಸಮಸ್ಯೆಯತ್ತ ಗಮನಹರಿಸಿ: ಸಿಎಂಗೆ ಆಪ್ ಒತ್ತಾಯ

ಮಡಿಕೇರಿ: ರಾಜ್ಯದ ಸರಕಾರಿ ಶಾಲೆಗಳಲ್ಲಿ ಹೊಸ ಶೈಕ್ಷಣಿಕ ವರ್ಷ ಆರಂಭವಾಗಿದೆ. ಅನೇಕ ಸಮಸ್ಯೆಗಳು ಮತ್ತು ಕೊರತೆಗಳು ಶಾಲೆಗಳನ್ನು ಕಾಡುತ್ತಿದೆ. ನೂತನ ಮುಖ್ಯಮಂತ್ರಿಗಳು ಸಂಭ್ರಮಾಚರಣೆಯನ್ನು ಬಿಟ್ಟು ಸರಕಾರಿ ಶಾಲೆಗಳಿಗೆ ಭೇಟಿ ನೀಡಿ ಸಮಸ್ಯೆಗಳಿಗೆ



ಪರಿಹಾರ ಸೂಚಿಸಲಿ ಎಂದು ಆಮ್ ಆದ್ಮಿ ಪಾರ್ಟಿಯ ಕೊಡಗು ಜಿಲ್ಲಾಧ್ಯಕ್ಷ ಮುಕ್ಕಾಟಿರ ಅಪ್ಪಯ್ಯ ಒತ್ತಾಯಿಸಿದ್ದಾರೆ.

ಸರಕಾರಿ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯಿದ್ದು, ಶಾಲಾ ಕೊಠಡಿ, ಪೀಠೋಪಕರಣಗಳು, ಶೌಚಾಲಯ ಸಮರ್ಪಕವಾಗಿಲ್ಲ, ನಲಿ–ಕಲಿ ಪದ್ಧತಿಯಿಂದ ದ್ವಿಭಾಷ ತರಗತಿಗಳ ವ್ಯವಸ್ಥೆಗೆ ಬದಲಾವಣೆ ಮಾಡಿರುವುದಾಗಿ ದೊಡ್ಡ ಪ್ರಮಾಣದಲ್ಲಿ ಪ್ರಚಾರ ಮಾಡಿಕೊಂಡಿದ್ದರೂ, ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವಲ್ಲಿ ಸರಕಾರ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದ್ದಾರೆ. ಸರಕಾರಿ ಶಾಲೆಗಳು ದಾನಿಗಳಿಂದ ನೆರವು ಕೇಳುವ ಪರಿಸ್ಥಿತಿ ನಿರ್ಮಾಣವಾಗಿರುವುದು ದುರಂತ. ಕೆಲವು ಶಾಲೆಗಳಲ್ಲಿ ಬಿಸಿಯೂಟಕ್ಕೆ ಅಡುಗೆ ಅನಿಲದ ಕೊರತೆಯೂ ಎದುರಾಗಿರುವ ಮಾಹಿತಿ ಲಭಿಸಿದೆ. ರಾಜ್ಯದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಗೌರವಯುತ ಕಲಿಕಾ ವಾತಾವರಣ ಒದಗಿಸುವುದು ಸರಕಾರದ ಜವಾಬ್ದಾರಿಯಾಗಿದೆ. ಶೈಕ್ಷಣಿಕ ವರ್ಷ ಆರಂಭಗೊಳ್ಳುವ ಮೊದಲೇ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸದೆ ಶಿಕ್ಷಣ ಇಲಾಖೆ ನಿರ್ಲಕ್ಷ್ಯ ವಹಿಸಿದೆ. ಮಕ್ಕಳ ಭವಿಷ್ಯದೊಂದಿಗೆ ಯಾರೂ ಚೆಲ್ಲಾಟವಾಡಬಾರದು. ಈ ಬಗ್ಗೆ ಸರಕಾರ ಕೂಲಂಕುಷವಾಗಿ ಪರಿಶೀಲಿಸಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಕೊಡಗಿಗೆ ಭೇಟಿ ನೀಡಲಿ

ಕಾವೇರಿ ನಾಡು ಕೊಡಗು ಜಿಲ್ಲೆಯಲ್ಲಿ ಅನೇಕ ಸಮಸ್ಯೆಗಳಿವೆ. ವನ್ಯಜೀವಿಗಳ ದಾಳಿಯಿಂದ ಅಮಾಯಕ ಜೀವಗಳು ಬಲಿಯಾಗುತ್ತಿವೆ, ಮಳೆಗಾಲದಲ್ಲಿ ಕಷ್ಟನಷ್ಟಗಳು ಸಂಭವಿಸುತ್ತವೆ. ಆದ್ದರಿಂದ ಮುಖ್ಯಮಂತ್ರಿಗಳು ಜಿಲ್ಲೆಗೆ ಬಂದು ಅಧಿಕಾರಿಗಳ ಸಭೆ ನಡೆಸಿ ಸಮಸ್ಯೆಗಳಿಗೆ ಪರಿಹಾರ ಸೂಚಿಸಲಿ ಎಂದು ಒತ್ತಾಯಿಸಿದ್ದಾರೆ.

ಸಾಲಿಗ್ರಾಮ ಪಟ್ಟಣಪಂಚಾಯತ್‌ನಲ್ಲಿ ನಡೆದ ಸಭೆಯಲ್ಲಿ ಡಿಸಿಗೆ ಸಾಮಾಜಿಕ ಕಾರ್ಯಕರ್ತ ಪ್ರಶ್ನೆ

ಜನಸಾಮಾನ್ಯರ ಸಮಸ್ಯೆಗಳನ್ನು ಆಲಿಸುವವರು ಯಾರು?

ಕೋಟ: ಸಾಲಿಗ್ರಾಮ ಪಟ್ಟಣ ಪಂಚಾಯತ್‌ನಲ್ಲಿ ಜನಪ್ರತಿನಿಧಿಗಳ ಆಡಳಿತವಿಲ್ಲ, ಇದರಿಂದ ಜನಸಾಮಾನ್ಯರ ಸಮಸ್ಯೆ ಹಾಗೂ ಪಟ್ಟಣ ಪಂಚಾಯತ್ ಸಮಸ್ಯೆಗಳನ್ನು ಬಗೆಹರಿಸುವವರಾರು..? ನೀವಾದರೂ ಸಮಸ್ಯೆಗಳನ್ನು ಕೇಳಿ ಬಗೆಹರಿಸಿ ಎಂದು ಸಾಲಿಗ್ರಾಮದ ಸಾಮಾಜಿಕ ಕಾರ್ಯಕರ್ತ ನಾಗರಾಜ್ ಗಾಣಿಗ ಸಾರ್ವಜನಿಕರ ಪರ ಮನವಿ ಮಾಡಿದ ಘಟನೆ ಮಂಗಳವಾರ ನಡೆಯಿತು.

ಸಾಲಿಗ್ರಾಮ ಪಟ್ಟಣಪಂಚಾಯತ್‌ನ ಸಭಾಂಗಣದಲ್ಲಿ ಸ್ವಚ್ಛ ಭಾರತ್ ಯೋಜನೆಯಡಿ ಉಡುಪಿ ಜಿಲ್ಲಾ ವ್ಯಾಪ್ತಿಯ ನಗರ ಪಟ್ಟಣ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಹಾಗೂ ಜನಸಾಮಾನ್ಯರಿಗೆ ಇದರ ಬಗ್ಗೆ ಅರಿವು ಮೂಡಿಸುವ ಸಲುವಾಗಿ ವಿಶೇಷ ಸಭೆಯಲ್ಲಿ ಡಿಸಿ ಸ್ವರೂಪ ಟಿ.ಕೆ ಭಾಗವಹಿಸಿದ ಸಭೆಯಲ್ಲಿ ಈ ವಿಚಾರ ನಾಗರಾಜ್ ಗಾಣಿಗ ಪ್ರಸ್ತಾಪಿಸಿದರು.

ಸಾಲಿಗ್ರಾಮ ಪ.ಪಂ.ನಲ್ಲಿ ಸಮಸ್ಯೆಗಳು ಸಾಕಷ್ಟಿವೆ. ಅಷ್ಟಿರುವಾಗ ಸ್ವಚ್ಛ ಪಟ್ಟಣ ಪಂಚಾಯತ್ ಪರಿಕಲ್ಪನೆ ಈಡೇರಿಸಲು ಸಾಧ್ಯವೆ.? ಜನಸಾಮಾನ್ಯರಿಗೂ ಇದರ ಬಗ್ಗೆ ಮಾಹಿತಿಗಳಿಲ್ಲ, ಪಟ್ಟಣ ಪಂಚಾಯತ್ ಸಮಸ್ಯೆ



ಮೊದಲು ಬಗೆಹರಿಸಿ ಪ್ರಸ್ತುತ ಮಳೆಗಾಲದ ಸಮಸ್ಯೆ ಕಾಡುತ್ತಿದೆ. ದಾರಿದೀಪಗಳ ನಿರ್ವಹಣೆ ಸಮರ್ಪಕವಿಲ್ಲ. ಚರಂಡಿಯೊಳಗೆ ತ್ಯಾಜ್ಯದ ಕೊಂಪೆಯಾಗಿದೆ ಎಂದರು. ಈ ಬಗ್ಗೆ ಉಲ್ಲೇಖಿಸಿದ ಡಿಸಿಯವರು ಸ್ವಚ್ಛ ಪಟ್ಟಣಪಂಚಾಯತ್ ಕುರಿತು ಯೋಜನೆ ಸಿದ್ಧಪಡಿಸಿಕೊಂಡು ಬಂದಿದ್ದೇವೆ. ಈ ಸಭೆಯಲ್ಲಿ ಇತರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಇದು ಸೂಕ್ತ ವೇದಿಕೆಯಲ್ಲ.ಮುಂದಿನ ದಿನಗಳಲ್ಲಿ ಈ ಬಗ್ಗೆ ವಿಶೇಷ ಸಭೆ ಆಯೋಜಿಸಲಾಗುವುದು ಎಂದರು.

ತ್ಯಾಜ್ಯ ಕಂಡ ಕಂಡಲ್ಲಿ ಎಸೆಯುವವರಿಗೆ ದಂಡ ವಿಧಿಸುವುದೇ ಒಂದೇ ಉತ್ತರ. ಆದ್ದರಿಂದ ಜಿಲ್ಲಾವಾರು ವ್ಯಾಪ್ತಿಯಲ್ಲಿ ಕೈಗೊಳ್ಳಲಿರುವ ಅಭಿಯಾನದಲ್ಲಿ ದಂಡ ಹಾಗೂ ಸಿಸಿ ಕ್ಯಾಮರ ಕಣ್ಗಾವಲು ವ್ಯವಸ್ಥೆ ಮಾಡಬೇಕು ಎಂದು ಡಿಸಿಗೆ ಅಚ್ಚುತ್ ಪೂಜಾರಿ ಸಲಹೆ ನೀಡಿದರು.

ಸ್ವಚ್ಛತಾ ಯೋಜನೆಗೆ ಸಭೆಯಲ್ಲಿ ನೀಲನಕ್ಷೆ

ಸಾಲಿಗ್ರಾಮ ಪಟ್ಟಣಪಂಚಾಯತ್ ಅನ್ನು ಸ್ವಚ್ಛ ಪಟ್ಟಣವಾಗಿಸಲು ಆ್ಯಪ್ ಸಿದ್ಧಪಡಿಸಿ ಅದನ್ನು ಪ್ರೊಜೆಕ್ಟರ್ ಮೂಲಕ ಪಟ್ಟಣ ಪಂಚಾಯತ್ ಮಾಜಿ ಕೌನ್ಸಿಲರಗಳಿಗೆ, ಪಟ್ಟಣ ಪಂಚಾಯತ್ ಅಧಿಕಾರಿಗಳಿಗೆ ಪರದೆಯ ಮೇಲೆ ಬಿತ್ತರಿಸಿ ಮಾಹಿತಿ ನೀಡಲಾಯಿತು. ಈ ಬಗ್ಗೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಮಾತನಾಡಿ, ಈಗಾಲೇ ಜಿಲ್ಲೆಯಾದ್ಯಂತ ತ್ಯಾಜ್ಯ ಎಸೆಯುವವರಿಗೆ ದಂಡ ವಿಧಿಸಲಾಗುತ್ತಿದೆ. ಎಸ್‌ಎಲ್‌ಆರ್‌ಎಂ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರವಾಸಿಗರು ಅಥವಾ ಇತರರು ತ್ಯಾಜ್ಯ ಎಸೆದ ಮಾಹಿತಿ ಹಂಚಿಕೊಳ್ಳಲು ಆ್ಯಪ್ ಸಿದ್ಧ ಪಡಿಸಲಾಗಿದೆ. ಈ ಮೂಲಕ ತ್ಯಾಜ್ಯದ ಫೋಟೋ ಅಪ್ಲೋಡ್ ಮಾಡಿದರೆ ಪಟ್ಟಣ ಪಂಚಾಯತ್ ಅದನ್ನು ಕೌನ್ಸಿಲರ್ ಹಾಗೂ ಉಪಸ್ಥಿತಿರಿದ್ದ ನಾಗರಿಕರ ಅಭಿಪ್ರಾಯ ಕೇಳಿದರು.

ಹೊಸ ಯೋಜನೆ ಅನುಷ್ಠಾನ

ಪಟ್ಟಣ ಪಂಚಾಯತ್ ಅಭಿವೃದ್ಧಿ ಕುರಿತಂತೆ ಸಾಕಷ್ಟು ಯೋಜನೆಗಳನ್ನು ರೂಪಿಸಲಾಗಿದೆ. ಈ ಸಭೆ ತ್ಯಾಜ್ಯ ನಿರ್ವಹಣೆ ಅಥವಾ ಹೊಸ ಯೋಜನೆಯ ಅನುಷ್ಠಾನದ ಕುರಿತಂತೆ ಪಟ್ಟಣ ಪಂಚಾಯತ್ ಕರಾರುವಾಕ್ಕಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿಗಳಿಗೆ ಮುಖ್ಯಾಧಿಕಾರಿ ಅಜೇಯ್ ಭಂಡಾರ್ಕರ್ ಭರವಸೆ ನೀಡಿದರು. ಇದೇ ಸಂದರ್ಭ ಡಿಸಿಗೆ ಉತ್ತರಿಸುವ ಬರದಲ್ಲಿ ಪತ್ರಿಕಾ ಮಾಧ್ಯಮ ದವರಿಗೆ ಏಕವಚನ ಬಳಸಿದ್ದಕ್ಕೆ ಕ್ಷಮೆ ಕೇಳಿದರು.

ಪ್ಲಾಸ್ಟಿಕ್ ಕಂಪನಿಯೇ ಬ್ಯಾನ್ ಮಾಡಿ

ತ್ಯಾಜ್ಯ ಎಸೆದವರಿಗೆ ದಂಡ ಅಥವಾ ಇನ್ನಿತರ ಸಮಸ್ಯೆಗಳನ್ನು ಹೇರುವುದಕ್ಕಿಂತ ಪ್ಲಾಸ್ಟಿಕ್ ಉತ್ಪಾದನೆಯನ್ನೇ ಬಂದ್ ಮಾಡಿ ಎಂದು ಸಭೆಯಲ್ಲಿ ಜನರು ಒತ್ತಾಯಿಸಿದರು. ಈ ಬಗ್ಗೆ ಉತ್ತರಿಸಿದ ಜಿಲ್ಲಾಧಿಕಾರಿಗಳುಈ ಬಗ್ಗೆ ಈಗಾಲೇ ಹಲವು ಕ್ರಮ ಕೈಗೊಳ್ಳಲಾಗಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಪ್ರಾಜೆಕ್ಟ್ ಡೈರೆಕ್ಟರ್ ಸುಬ್ರಹ್ಮಣ್ಯ, ಮುಖ್ಯಾಧಿಕಾರಿ ಅಜೇಯ್ ಭಂಡಾರ್ಕರ್, ಮಾಜಿ ಕೌನ್ಸಿಲರ್‌ಗಳು ಅಧಿಕಾರಿ, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಸರ್ಕಾರದ ಯೋಜನೆ ಜನರಿಗೆ ತಲುಪಿಸಿ: ಸಂಸದ ಕೋಟ ಸೂಚನೆ



ಕುಂದಾಪುರ: 'ಸಮಸ್ಯೆ ಹೇಳಲು ತಾಲೂಕು ಕಚೇರಿಗೆ ಅಲೆಯುವುದು ಬೇಡ, ನಾವೇ ನಿಮ್ಮೂರಿಗೆ ಬರುತ್ತೇವೆ' ಎಂಬ ಧ್ಯೇಯದೊಂದಿಗೆ ಕುಂದಾಪುರ ವಿಧಾನಸಭಾ ಕ್ಷೇತ್ರದಾದ್ಯಂತ ಹಮ್ಮಿಕೊಂಡಿರುವ ಜನ ಸಂಪರ್ಕ ಕಾರ್ಯಕ್ರಮದ ಅಂಗವಾಗಿ ಮಡಾಮಕ್ಕಿ ಗ್ರಾಮ ಪಂಚಾಯಿತಿಗೆ ಕುಂದಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಮತ್ತು ಉಡುಪಿ–ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು ಸೋಮವಾರ ಭೇಟಿ ನೀಡಿದರು.

ಗ್ರಾ.ಪಂ. ಸಭಾಭವನದಲ್ಲಿ ನಡೆದ ಸಭೆಯಲ್ಲಿ ಗ್ರಾಮಸ್ಥರು, ಕುಡಿಯುವ ನೀರಿನ ಕೊರತೆ, ವಸತಿ ಯೋಜನೆ ವಿಳಂಬ, ಕಂದಾಯ ತೊಡಕು, ಮೆಸ್ಕಾಂ ಬಿಲ್ ಗೊಂದಲ ಹಾಗೂ ಅರಣ್ಯ ಇಲಾಖೆಯ ಭೂಮಿ ಸಮಸ್ಯೆಗಳ ಕುರಿತು ದೂರು ಸಲ್ಲಿಸಿದರು.

ಅಹವಾಲು ಸ್ವೀಕಾರ

ಪ್ರತಿಯೊಂದು ಅಹವಾಲನ್ನೂ ಗಂಭೀರವಾಗಿ ಆಲಿಸಿದ ಶಾಸಕರು, ಸ್ಥಳದಲ್ಲೇ ಸಂಬಂಧಿತ ಅಧಿಕಾರಿಗಳೊಂದಿಗೆ ಚರ್ಚಿಸಿ ತ್ವರಿತ ಪರಿಹಾರಕ್ಕೆ ಸೂಚನೆ ನೀಡಿದರು. ಸರ್ಕಾರದ ಯೋಜನೆಗಳು ಕಡತಕ್ಕೆ ಸೀಮಿತವಾಗದೆ ಅರ್ಹ ಫಲಾನುಭವಿಗಳ ಮನೆ ಬಾಗಿಲಿಗೆ ತಲುಪಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮದ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡುವುದಾಗಿ ಶಾಸಕರು ಮತ್ತು ಸಂಸದರು ಭರವಸೆ ನೀಡಿದರು.

ಹೆಬ್ರಿ ತಾಲೂಕು ಪಂಚಾಯತ್ ಇಒ ಪ್ರಶಾಂತ್ ರಾವ್, ತಹಶೀಲ್ದಾರ್ ಪ್ರದೀಪ್ ಕುರ್ಡೇಕರ್, ಪಿಡಿಒ ಹಿತಿಶ್ ಪುತ್ರನ್, ಆಡಳಿತ ಅಧಿಕಾರಿ ಜಿ.ಚಿದಾನಂದಪ್ಪ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಗ್ರಾ.ಪಂ. ನಿಕಟಪೂರ್ವ ಅಧ್ಯಕ್ಷರು, ಸದಸ್ಯರು, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಸಂಜೀವಿನಿ ಒಕ್ಕೂಟದ ಸದಸ್ಯರು ಹಾಗೂ ಗ್ರಾಮಸ್ಥರು ಸಭೆಯಲ್ಲಿ ಭಾಗವಹಿಸಿದ್ದರು.

ದುಶ್ಚಟಕ್ಕೆ ಬಲಿಯಾಗದೇ ಕಾನೂನಿನ ಅರಿವು ಮೈಗೂಡಿಸಿ: ಪುರುಷೋತ್ತಮ್



ಕಾಪು: ಯುವ ಪೀಳಿಗೆ ದುಶ್ಚಟಗಳಿಗೆ ಬಲಿಯಾಗದೇ, ಉತ್ತಮ ಮಾರ್ಗದಲ್ಲಿ ನಡೆಯಬೇಕು. ಜೊತೆಗೆ ಕಾನೂನಿನ ಅರಿವು ಬೆಳೆಸಿಕೊಳ್ಳುವುದು ಅತ್ಯಗತ್ಯ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಪುರುಷೋತ್ತಮ್ ಸಲಹೆ ನೀಡಿದರು.

ಅವರು ಮಂಗಳವಾರ ಕಾಪು ಉಳಿಯರಾಗೋಳಿ ದಂಡತೀರ್ಥ ಪಿಯು ಕಾಲೇಜಿನಲ್ಲಿ ಪೋಕ್ಸೊ ಕಾಯ್ದೆಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ವಿದ್ಯಾರ್ಥಿಗಳು ಪೋಕ್ಸೊ ಕಾಯ್ದೆಯ ಕುರಿತು ಅರಿತುಕೊಳ್ಳಬೇಕು. ಹದಿಯರೆಯದ ಮಕ್ಕಳು ಪ್ರೀತಿಯ ಬಲೆಗೆ ಬೀಳುವ ಮುನ್ನ ಎಚ್ಚರಿಕೆ ವಹಿಸಬೇಕು. ಪೋಷಕರು ಆಕೆಗಿನ್ನು 18 ತುಂಬಿಲ್ಲ ಎಂದು ದೂರು ಕೊಟ್ಟರೇ, ಪೋಕ್ಸೊ ಪ್ರಕರಣದಲ್ಲಿ ಆತ ಬಂಧನಕ್ಕೊಳಗಾಗುತ್ತಾನೆ. ಹೀಗಾಗಿ ವಿದ್ಯಾರ್ಥಿಗಳು ಹದಿಹರೆಯದ ಆಕರ್ಷಣೆಗಳಿಗೆ ಒಳಗಾಗದೇ, ಉತ್ತಮ ವಿದ್ಯಾರ್ಥಿಗಳಾಗಿ, ದೇಶ ಪ್ರೇಮವನ್ನು ಬೆಳೆಸಿಕೊಳ್ಳಿ ಎಂದು ಸಲಹೆ ನೀಡಿದರು.

ಜಾಗೃತಿ ಮೂಡಿಸಿ

ಅಶ್ಲೀಲ ಫೋಟೋ ನೋಡುವುದು ಕೂಡ ಅಪರಾಧವಾಗಿದೆ. ಆದ್ದರಿಂದ ವಿದ್ಯಾರ್ಥಿಗಳು, ಶಿಕ್ಷಕರು ಈ ಕಾಯ್ದೆಯ ಬಗ್ಗೆ ತಿಳಿದುಕೊಂಡು, ಇತರರಿಗೂ ಕಾಯ್ದೆಯ ಬಗ್ಗೆ ಜಾಗೃತಿ ಮೂಡಿಸಿ ಎಂದರು.

ಕಾಲೇಜಿನ ಸಂಚಾಲಕ ಡಾ.ಕೆ ಪ್ರಶಾಂತ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಪತ್ರಕರ್ತ ರಕ್ಷಿತ್ ಬೆಳಪು, ಪ್ರಾಥಮಿಕ ವಿಭಾಗದ ಮುಖ್ಯಸ್ಥ ಗೇಬ್ರಿಯಲ್ ಮಸ್ಕರೇನ್ಹಸ್ ಇದ್ದರು. ಪ್ರಾಂಶುಪಾಲ ನೀಲಾನಂದ ನಾಯ್ಕ್ ಸ್ವಾಗತಿಸಿ, ಶಿಕ್ಷಣ ಸಂಯೋಜಕ ಶಿವಣ್ಣ ಬಾಯರ್ ನಿರೂಪಿಸಿ, ವಂದಿಸಿದರು.

ಮೂರ್ಜೆ ಶಾಲೆಯಲ್ಲಿ ಎಲ್‌ಕೆಜಿ, ಯುಕೆಜಿ ಸ್ಮಾರ್ಟ್ ಕ್ಲಾಸ್ ಉದ್ಘಾಟನೆ



ಬಂಟ್ವಾಳ: ತಾಲೂಕಿನ ಮೂರ್ಜೆ ದ.ಕ. ಜಿ.ಪಂ. ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಲ್‌ಕೆಜಿ, ಯುಕೆಜಿ ಸ್ಮಾರ್ಟ್ ಕ್ಲಾಸ್ ಹಾಗೂ ಶೌಚಾಲಯವನ್ನು ಶಾಸಕ ರಾಜೇಶ್ ನ್ಯಾಕ್ ಉದ್ಘಾಟಿಸಿದರು. ಬಳಿಕ ಯುವ ಸ್ಪಂದನ ಪಾಮದಪದವು ವಲಯದ ವತಿಯಿಂದ ವಿದ್ಯಾರ್ಥಿಗಳಿಗೆ ಉಚಿತ ಬರಹ ಪುಸ್ತಕ ಹಾಗೂ ಶೈಕ್ಷಣಿಕ ಪರಿಕರಗಳ ವಿತರಿಸಿದರು.

ಜಿ.ಪಂ. ಮಾಜಿ ಉಪಾಧ್ಯಕ್ಷ, ಶಾಲಾ ಹಳೆಯ ವಿದ್ಯಾರ್ಥಿ ಎಂ. ತುಂಗಪ್ಪ ಬಂಗೇರ ಪ್ರಾಸ್ತವಿಕ ನುಡಿಗಳನ್ನಾಡಿದರು. ಕ್ಷೇತ್ರ ಸಂಪನ್ಮೂಲನ ಕೇಂದ್ರದ ಸಮನ್ವಯಾಧಿಕಾರಿ ವಿದ್ಯಾ, ಪಿಲಾತಬೆಟ್ಟು ಗ್ರಾ.ಪಂ. ಆಡಳಿತಾಧಿಕಾರಿ ನಾರಾಯಣ ಭಟ್, ಪ್ರಮುಖರಾದ ಜಯಾನಂದ ಪಿ., ವಕೀಲೆ ಸ್ವರ್ಣಲತಾ ಹೆಗ್ಡೆ, ಯುವ ಸ್ಪಂದನದ ಅಧ್ಯಕ್ಷ ನಿತಿನ್ ಮೂರ್ಜೆ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಹೇಮಂತ್ ಕುಮಾರ್ ಪ್ರಮುಖರಾದ ಅಬ್ದುಲ್ ಶುಕೂರು, ಉದ್ಯಮಿ ಓಂ ಪ್ರಸಾದ್, ಪಿ.ಟಿ. ಜೋಸೆಫ್, ಗ್ರಾ.ಪಂ. ಮಾಜಿ ಅಧ್ಯಕ್ಷೆ ಹರ್ಷಿಣಿ ಪುಷ್ಪಾನಂದ, ಹರಿಪ್ರಸಾದ್ ನೂಜಿದಡಿ, ಲಕ್ಷ್ಮೀ ಜೆ. ಬಂಗೇರ, ನಿವೃತ್ತ ವಿ.ಎ. ಅಣ್ಣು ಪೂಜಾರಿ, ಯಕ್ಷಗಾನ ಕಲಾವಿದ ದಿನೇಶ್ ಶೆಟ್ಟಿ ಕಾವಳಕಟ್ಟೆ ಎಸ್ ಡಿಎಂಸಿ ಅಧ್ಯಕ್ಷೆ ನಂದಿನಿ, ಸಂತೋಷ್ ಕುಮಾರ್ ಇದ್ದರು. ಮುಖ್ಯ ಶಿಕ್ಷಕಿ ಕಮಲ ಸ್ವಾಗತಿಸಿ, ಜ್ಞಾನದೀಪ ಶಿಕ್ಷಕಿ ಸುಷ್ಮಾ ವಂದಿಸಿದರು. ರಂಗಕಲಾವಿದ ಎಚ್ಕೆ ನಯನಾಡು ನಿರೂಪಿಸಿದರು.

ಈ ಸಂದರ್ಭ ನಾರಾಯಣ ಗುರು ಅಧ್ಯಯನ ಪೀಠ ಸ್ಥಾಪನೆ ಹಾಗೂ ಶಾಲೆ ದುರಸ್ತಿಯ ಬಗ್ಗೆ ಶಾಸಕರಿಗೆ ಮನವಿ ಸಲ್ಲಿಸಲಾಯಿತು.

ಕೂಟ ಮಹಾಜಗತ್ತು ಮಂಗಳೂರು ಅಂಗಸಂಸ್ಥೆಯ ವಾರ್ಷಿಕ ಮಹಾಸಭೆ



ಮಂಗಳೂರು: ಯಾವುದೇ ಸಂಘಟನೆಗಳು ಒಗ್ಗಟ್ಟಿನಿಂದ ಸಮಾಜಮುಖಿ ಚಿಂತನೆಯಿಂದ ಸಂಘಟಿತರಾಗಿ ಕೆಲಸಗಳು ಮಾಡಿದಾಗ ಸಮಾಜ ಸುಧಾರಣೆ ಸಾಧ್ಯ. ಜೊತೆಗೆ ಸ್ವಸ್ಥ ಸಮಾಜವೂ ನಿರ್ಮಾಣ ಸಾಧ್ಯ ಎಂದು ಕರ್ಣಾಟಕ ಬ್ಯಾಂಕ್ ಪ್ರಧಾನ ಕಚೇರಿಯ ಮಹಾಪ್ರಬಂಧ ನಾಗರಾಜ್ ಉಪಾಧ್ಯಾಯ ಹೇಳಿದರು.

ಅವರು ಕೂಟ ಮಹಾಜಗತ್ತು ಮಂಗಳೂರು ಅಂಗಸಂಸ್ಥೆಯು ಪಾಂಡೇಶ್ವರದ ಶ್ರೀಗುರು ನರಸಿಂಹ ಸಭಾಭವನದಲ್ಲಿ ಆಯೋಜಿಸಿದ ವಾರ್ಷಿಕ ಮಹಾಸಭೆಯ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಸಾಲಿಗ್ರಾಮ ಗುರು ನರಸಿಂಹ ದೇವಸ್ಥಾನದ ಅಧ್ಯಕ್ಷ ಪ್ರಕಾಶ್ ಕಾರಂತ್ ಶುಭ ಹಾರೈಸಿದರು. ಕೇಂದ್ರ ಸಂಸ್ಥೆ ಅಧ್ಯಕ್ಷ ಎಚ್. ಸತೀಶ್ ಹಂದೆ, ಕೇಂದ್ರ ಸಂಸ್ಥೆಗೂ, ಅಂಗಸಂಸ್ಥೆಗಳಿಗೂ ಇರುವ ಬಾಂಧವ್ಯದ ಬಗ್ಗೆ ಮಾತನಾಡಿದರು.ಬಿಲಿಯನ್ ಫೌಂಡೇಶನ್ ಅಧ್ಯಕ್ಷ ಸದಾನಂದ ಹೇರಳೆ ಪ್ರಾಸ್ತವಿಕವಾಗಿ ಮಾತನಾಡಿದರು.

ಮಂಗಳೂರು ಅಂಗಸಂಸ್ಥೆಯ ಅಧ್ಯಕ್ಷ ಶ್ರೀಧರ ಹೊಳ್ಳ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯದರ್ಶಿ ಗೋಪಾಲಕೃಷ್ಣ ಮಯ್ಯ ವಾರ್ಷಿಕ ವರದಿ ಮಂಡಿಸಿದರು. ಕೋಶಾಧಿಕಾರಿ ಪದ್ಮನಾಭ ಮಯ್ಯ ಲೆಕ್ಕಪತ್ರಗಳನ್ನು ಮಂಡಿಸಿದರು. ಉಪಾಧ್ಯಕ್ಷ ಪ್ರಭಾಕರ ಐತಾಳ್ ಸ್ವಾಗತಿಸಿ, ಕಾರ್ಯದರ್ಶಿ ರವಿಚಂದ್ರ ಹೊಳ್ಳ ನಿರೂಪಿಸಿದರು. 80 ವರ್ಷ ತುಂಬಿದ ವಯೋಮಾನ ದವರನ್ನು ಗೌರವಿಸಲಾಯಿತು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿದ ಮಕ್ಕಳಿಗೆ ಪ್ರೋತ್ಸಾಹ ಧನ ನೀಡಲಾಯಿತು. ವೇದಪಾಠದ ವಿದ್ಯಾರ್ಥಿಗಳಾದ ಅಮೃತ್ ಹೊಳ್ಳ, ನೀರಜ್ ಸೋಮಯಾಜಿ ವೇದ ಮಂತ್ರ ವಾಚಿಸಿದರು.

ಜೂ.14: ದೇಶಮಂಗಲ ಶ್ರೀ ದೇಗುಲದ ಜೀರ್ಣೋದ್ಧಾರ ವಿಜ್ಞಾಪನಾ ಪತ್ರಿಕೆ ಬಿಡುಗಡೆ

ಕಾಸರಗೋಡು: ಬೆದ್ರಡ್ಕ ದೇಶಮಂಗಲದ ಪರಮ ಪವಿತ್ರ ಶ್ರೀ ಶಂಕರನಾರಾಯಣ ಕುಟ್ಟಿಚಾತ ದೇವಸ್ಥಾನದ ಜೀರ್ಣೋದ್ಧಾರ ಮಹಾಕಾರ್ಯದ ಅಂಗವಾಗಿ ಜೀರ್ಣೋದ್ಧಾರದ ಸಮಗ್ರ ಮಾಹಿತಿ, ಯೋಜನೆಗಳು ಹಾಗೂ ಭಕ್ತಾದಿಗಳ ಸಹಭಾಗಿತ್ವದ ವಿವರಗಳನ್ನು ಒಳಗೊಂಡ ವಿಜ್ಞಾಪನಾ ಪತ್ರಿಕೆಯ ಬಿಡುಗಡೆ ಸಮಾರಂಭವು ಜೂ.14 ರಂದು ಸಂಜೆ 4 ಗಂಟೆಗೆ ಶ್ರೀ ಕ್ಷೇತ್ರದಲ್ಲಿ ನಡೆಯಲಿದೆ.



ಶ್ರೀ ಕ್ಷೇತ್ರದ ತಂತ್ರಿವರ್ಯ, ಪರಮ ಸಂರಕ್ಷಕ ಹಾಗೂ ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರ ದಿವ್ಯ ಸಾನ್ನಿಧ್ಯದಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ವಿಜ್ಞಾಪನಾ ಪತ್ರಿಕೆಯನ್ನು ಬಿಡುಗಡೆಗೊಳಿಸುವರು. ಅಧ್ಯಕ್ಷತೆಯನ್ನು ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಕೆ.ರವೀಂದ್ರ ಆಳ್ವ ಕೋಟೆ ಕುಂಜೆ ಕಂಬಾರು ವಹಿಸಲಿದ್ದಾರೆ. ದೇವಸ್ಥಾನದ ಜೀರ್ಣೋದ್ಧಾರ ಪುಣ್ಯ ಕಾರ್ಯಕ್ಕಾಗಿ ಭಕ್ತಾದಿಗಳಿಂದ ಮುಷ್ಟಿಕಾಣಿಕೆ ಸಮರ್ಪಣೆ, ದೇಣಿಗೆ ವಾಗ್ದಾನ ಹಾಗೂ ವಿವಿಧ ರೀತಿಯ ಸೇವಾ ಸಮರ್ಪಣೆಗಳು ನಡೆಯಲಿವೆ. ದೇವಾಲಯದ ಜೀರ್ಣೋದ್ಧಾರವು ಧಾರ್ಮಿಕ ಪರಂಪರೆ, ಸಂಸ್ಕೃತಿ ಹಾಗೂ ಭಕ್ತಿ ಸಂಪ್ರದಾಯದ ಸಂರಕ್ಷಣೆ ಮತ್ತು ಪುನರುಜ್ಜೀವನದ ಮಹತ್ವದ ಕಾರ್ಯವಾಗಿರುವುದರಿಂದ ಸದ್ಭಕ್ತ ಬಂಧುಗಳು, ಊರ ಪರವೂರಿನ ಎಲ್ಲಾ ಭಜನಾ ಸಂಘಗಳ ಸದಸ್ಯರು, ವಿವಿಧ ಸಂಘ ಸಂಸ್ಥೆಗಳ ಕಾರ್ಯಕರ್ತರು ಹಾಗೂ ಭಕ್ತಜನರು ಭಾಗವಹಿಸಬೇಕೆಂದು ಜೀರ್ಣೋದ್ಧಾರ ಸಮಿತಿಯು ಪ್ರಕಟಣೆಯಲ್ಲಿ ವಿನಂತಿಸಲಾಗಿದೆ.

ಆರ್ಥಿಕ ಸಹಾಯಕ್ಕಾಗಿ ಅರ್ಜಿ ಆಹ್ವಾನ

ಕಾಸರಗೋಡು: 2026–27ನೇ ಸಾಲಿನ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಪ್ರವೇಶ ಪರೀಕ್ಷಾ ತರಬೇತಿಯಲ್ಲಿ ಕನಿಷ್ಠ ಆರು ತಿಂಗಳ ಅವಧಿಗೆ ಭಾಗವಹಿಸಿದ ನಿವೃತ್ತ ಸೈನಿಕರ ಅವಲಂಬಿತರಿಗೆ ಪ್ರವೇಶ ಪರೀಕ್ಷಾ ತರಬೇತಿಗೆ ಆರ್ಥಿಕ ಸಹಾಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆದಾಯ ಮಿತಿಯಿಲ್ಲ, ಅರ್ಜಿಗಳನ್ನು ಸರ್ವಿಸ್ ಪ್ಲಸ್ ವೇದಿಕೆ ಮೂಲಕ ಕಳುಹಿಸಬೇಕು ಮತ್ತು ಎಲ್ಲಾ ಅಗತ್ಯದ ದಾಖಲೆಗಳನ್ನು ಜುಲೈ 25 ರಂದು ಅಪ್‌ಲೋಡ್ ಮಾಡಬೇಕು. ಜಿಲ್ಲಾ ಸೈನಿಕ ಕಲ್ಯಾಣ ಕಚೇರಿಗೆ ಮಾಹಿತಿ ನೀಡಬೇಕು. ಹೆಚ್ಚಿನ ವಿವರಗಳಿಗೆ 04994 256860 ಕರೆ ಮಾಡಬಹುದು.



ವಿಶ್ವ ಪರಿಸರ ದಿನದ ಪ್ರಯುಕ್ತ ಕೊಣಾಜೆಯ ಮೊಂಟೆಪದವು ಮಾಧವ ವನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸೇವಾ ಭಾರತಿ ಇದರ ಅಂಗಸಂಸ್ಥೆ ಅದಮ್ಯ ಚೇತನಾ ದಿವ್ಯಾಂಗ ಮಕ್ಕಳ ವಸತಿಯುತ ಶಾಲೆಯ ವೃಕ್ಷೋದ್ಯಾನದಲ್ಲಿ ವಿಶೇಷ ಚೇತನ ಮಕ್ಕಳಿಂದ ಗಿಡಗಳನ್ನು ನೆಡಲಾಯಿತು. ಸೇವಾ ಭಾರತಿ ಸಂಸ್ಥೆಯ ಮುಖ್ಯಕಾರ್ಯ ನಿರ್ವಾಹಕ ಪೃಥ್ವೀಪಾಲ್,ಅದಮ್ಯ ಚೇತನಾ ಶಾಲಾ ಮುಖ್ಯೋಪಾಧ್ಯಾಯಿನಿ ವರ್ಷಾ,ಶಿಕ್ಷಕ ಶಿಕ್ಷಕೇತರ ವೃಂದ, ಸ್ವಯಂಸೇವಕರು, ಮಕ್ಕಳು ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.



ರಾಜ್ಯ ಸರಕಾರದ ನೂತನ ಮಂತ್ರಿ ಮಂಡಲದಲ್ಲಿ ಆರೋಗ್ಯ ಸಚಿವರಾಗಿ ಅಧಿಕಾರ ವಹಿಸಿಕೊಂಡ ಯು. ಟಿ. ಖಾದರ್ ಅವರನ್ನು ಸಂಗೀತ ಮತ್ತು ನೃತ್ಯ ಕಲಾವಿದರ ಪರವಾಗಿ ಗೌರವಿಸಲಾಯಿತು. ವಿದ್ವಾಂಸ ಕಲೈಮಾಮಣಿ ನಾಗೇಶ್ ಬಪ್ಪನಾಡು, ಮಣಿಕೃಷ್ಣಸ್ವಾಮಿ ಅಕಾಡೆಮಿಯ ನಿತ್ಯಾನಂದ ರಾವ್, ನೃತ್ಯ ಭಾರತೀಯ ಗೀತಾ ಸರಳಾಯ, ಸಂಘಟಕ ಭರತಾಂಜಲಿಯ ಶ್ರೀಧರ ಹೊಳ್ಳ ಮೊದಲಾದವರು ಉಪಸ್ಥಿತರಿದ್ದರು.

ಅನಂತಾಡಿ- ನೆಟ್ಲ ಮುಡ್ನೂರು ಗ್ರಾಮಗಳ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ

ಎಲ್ಲಾ ಅನುದಾನದಿಂದ ಬಂಟ್ವಾಳ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ: ಶಾಸಕ ನ್ಯಾಕ್

ಬಂಟ್ವಾಳ: ತಾಲೂಕಿನ ಅನಂತಾಡಿ ಮತ್ತು ನೆಟ್ಲ ಮುಡ್ನೂರು ಗ್ರಾಮವನ್ನು ಸಂಪರ್ಕಿಸುವ ಕರಿಂಕ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ರಸ್ತೆಯನ್ನು ಸರ್ವಋತು ರಸ್ತೆಯನ್ನಾಗಿ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಶಾಸಕರ ವಿಶೇಷ ಅನುದಾನದಡಿ 40 ಲಕ್ಷ ರೂ. ಅನುದಾನ ಬಿಡುಗಡೆಯಾಗಿದ್ದು, ಇದರ ಕಾಮಗಾರಿಗೆ ಮಂಗಳವಾರ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು ಅವರು ಭೂಮಿ ಪೂಜೆ ನೆರವೇರಿಸಿದರು.



40 ಲಕ್ಷ ವೆಚ್ಚದಲ್ಲಿ ಕಾಂಕ್ರೀಟಿಕರಣ

ಬಳಿಕ ಮಾತನಾಡಿದ ಶಾಸಕರು, ಕರಿಂಕ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಅತ್ಯಂತ ಪುರಾತನ ಮತ್ತು ಬಹಳ ಪ್ರಸಿದ್ಧಿಯಾಗಿದ್ದು, ಇಲ್ಲಿಗಾಗಮಿಸುವ ಭಕ್ತರಿಗೆ ಅನುಕೂಲವಾಗುವ ಮತ್ತು ಎರಡು ಗ್ರಾಮದ ಜನರಿಗೂ ಸಹಕಾರಿಯಾಗುವ ನಿಟ್ಟಿನಲ್ಲಿ 40 ಲಕ್ಷ ವೆಚ್ಚದಲ್ಲಿ ಈ ರಸ್ತೆಗೆ ಕಾಂಕ್ರೀಟಿಕರಣಗೊಳಿಸಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಿದರು

ಕಾಮಗಾರಿಯಲ್ಲೂ ಗುಣಮಟ್ಟವನ್ನು ಕಾಯ್ದುಕೊಂಡು ಉತ್ತಮ ರಸ್ತೆಯನ್ನು ನಿರ್ಮಿಸುವ ಭರವಸೆಯನ್ನು ವ್ಯಕ್ತಪಡಿಸಿದ ಶಾಸಕ ನ್ಯಾಕ್ ಕಾಮಗಾರಿ ವೇಳೆ ಗ್ರಾಮಸ್ಥರ ಸಹಕಾರವು ಅತ್ಯಗತ್ಯವಾಗಿದ್ದು, ಜನರಿಗೂ ತೊಂದರೆಯಾಗದಂತೆ ಹೊಂದಾಣಿಕೆಯಿಂದ ಕಾರ್ಯ ನಿರ್ವಹಿಸುವಂತೆ ತಿಳಿಸಿದರಲ್ಲದೆ, ಬಂಟ್ವಾಳ ಕ್ಷೇತ್ರಕ್ಕೆ ಬರುವ ಎಲ್ಲಾ ಅನುದಾನವನ್ನು ಬಳಸಿಕೊಂಡು ಆದ್ಯತೆಯ ನೆಲೆಯಲ್ಲಿ ಕೆಲಸ ಮಾಡಿಸಿಕೊಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭ ಬಂಟ್ವಾಳ ಬಿಜೆಪಿ ಮಂಡಲದ ಅಧ್ಯಕ್ಷ ಚೆನ್ನಪ್ಪ ಆರ್.ಕೋಟ್ಯಾನ್, ಜಿಲ್ಲಾ ಕಾರ್ಯದರ್ಶಿ ದಿನೇಶ್ ಅಮ್ಟೂರು, ನೇರಳಕಟ್ಟೆ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ಅಧ್ಯಕ್ಷ ಪುಷ್ಪರಾಜ ಚೌಟ, ಉಪಾಧ್ಯಕ್ಷ ತನಿಯಪ್ಪ ಗೌಡ, ಮಂಡಲದ ಕೇತ್ರ ಕಾರ್ಯದರ್ಶಿ ಸನತ್ ಕುಮಾರ್ ರೈ, ಬಿಜೆಪಿ ಮಾಹಾ ಶಕ್ತಿ ಕೇಂದ್ರದ ಅಧ್ಯಕ್ಷ ಅರವಿಂದ ರೈ, ಕಾರ್ಯದರ್ಶಿ ನಾಗೇಶ್ ಭಂಡಾರಿ, ಗ್ರಾಮ ಪಂಚಾಯತ್ ಅಧ್ಯಕ್ಷೆ ಸುಜಾತಾ ಸುರೇಶ್, ಉಪಾಧ್ಯಕ್ಷೆ ಸಂಧ್ಯಾ ವಿಶ್ವನಾಥ, ಕರಿಂಕ ದುರ್ಗಾಪರಮೇಶ್ವರಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನರೇಂದ್ರ ರೈ ನೆಲ್ಲೊಟ್ಟು, ಬಿಜೆಪಿ ಗ್ರಾಮ ಪ್ರಮುಖರಾದ ಮಹಾಬಲ ಪೂಜಾರಿ ಬಾಕಿಲ, ನವೀನ ಆಚಾರ್ಯ, ಶಿವರಾಮ್ ಶೆಟ್ಟಿ ಕರಿಂಕ, ಧನಂಜಯ ಗೌಡ ಮೀನಾವು ಮಹಿಳಾ ಮೋರ್ಚಾ, ಉಪಾಧ್ಯಕ್ಷೆ ಗೀತಾಚಂದ್ರಶೇಖರ್ ಗೋಳಿಕಟ್ಟೆ, ಬಿಜೆಪಿ ಪ್ರಮುಖರಾದ ಜ್ಯೋತಿ ಹೆಗ್ಡೆ, ನವೀನ್ ಶೆಟ್ಟಿ, ಶಕೀಲ ಕೃಷ್ಣಪ್ಪ ಪೂಜಾರಿ, ಅಶೋಕ್ ರೈ ಎಲ್ಕಾಜೆ, ಬಾಲಕೃಷ್ಣ ನಾಯ್ಕ್, ಬಾಲಕೃಷ್ಣ ಪೂಜಾರಿ ಸಾಯಿ , ದಯಾನಂದ ಗೌಡ, ರಾಮಪ್ಪ ಗೌಡ, ಜಯರಾಮ್ ಆಚಾರಿ , ರಮೇಶ್ ಗೌಡ, ಕೃಷ್ಣಪ್ಪ ಗೌಡ, ಶಿವಾನಂದ ಶೆಟ್ಟಿ ಕುಸುಮಧರ, ಧರ್ಣಪ್ಪ ಗೌಡ,ಗಣೇಶಾನಂದ ಶೆಟ್ಟಿ ಉದಯ ಗೌಡ ಕೊಂಕನೋಡಿ, ವಸಂತ್ ರಾಜ್ ಭಟ್,ಚೇತನ್ ರೈ, ಸ್ಥಳದಾನಿಗಳಾದ ರಾಧಾ ಕೃಷ್ಣ ಭಾಗವತ್, ಕೆ.ಟಿ.ಸುವರ್ಣ ಮತ್ತಿತರರು ಉಪಸ್ಥಿತರಿದ್ದರು.

ಸುತ್ತಮುತ್ತ

ಮೂಡ್ಲಕಟ್ಟೆ ಕಾಲೇಜಿನಲ್ಲಿ ಪರಿಸರ ದಿನಾಚರಣೆ

ಕುಂದಾಪುರ : ಪರಿಸರ ಸಂರಕ್ಷಣೆ ಎನ್ನುವುದು ಕೇವಲ ಒಂದು ದಿನದ ಆಚರಣೆಯಾಗಬಾರದು. ತಂತ್ರಜ್ಞಾನ ಬೆಳೆದಂತೆಲ್ಲಾ ಪ್ರಕೃತಿಯ ಮೇಲಿನ ಒತ್ತಡ ಹೆಚ್ಚುತ್ತಿದೆ. ಭವಿಷ್ಯದ ಇಂಜಿನಿಯರ್‌ಗಳಾದ ವಿದ್ಯಾರ್ಥಿಗಳು ಪರಿಸರಸ್ನೇಹಿ ಆವಿಷ್ಕಾರಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಮತ್ತು ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಗಿಡ-ಮರಗಳನ್ನು ಬೆಳೆಸಿ ಪೋಷಿಸುವ ಜವಾಬ್ದಾರಿ ಹೊರಬೇಕು ಎಂದು ಕುಂದಾಪುರದ ಸಾಮಾಜಿಕ ಅರಣ್ಯ ವಲಯಾಧಿಕಾರಿ ತುಳಸಿ ಕರೆ ನೀಡಿದ್ದಾರೆ.

ಕುಂದಾಪುರದ ಮೂಡ್ಲಕಟ್ಟೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಜರಗಿದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಗಿಡ ನೆಡುವ ಮೂಲಕ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ.ರಾಮಕೃಷ್ಣ ಹೆಗ್ಡೆ ವಹಿಸಿದ್ದರು. ಉಪವಲಯ ಅರಣ್ಯಾಧಿಕಾರಿ ನಾಗೇಶ್ ಬಿಲ್ಲವ ಕಾರ್ಯಕ್ರಮದ ಆಯೋಜಕ ಪ್ರೊ. ಬಾಲನಾಗೇಶ್ವರ್, ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿಗಳು , ವಿದ್ಯಾರ್ಥಿಗಳು ಉಪಸ್ಥಿತರಿದ್ದು ಪರಿಸರ ರಕ್ಷಣೆಯ ಪ್ರತಿಜ್ಞಾವಿಧಿಯನ್ನು ಸ್ವೀಕರಿಸಿದರು. ಕಾಲೇಜಿನ ಆವರಣದಲ್ಲಿ ವಿದ್ಯಾರ್ಥಿಗಳಿಂದ ಸ್ವಚ್ಛತಾ ಕಾರ್ಯಕ್ರಮ ಮತ್ತು ಗಿಡ ನೆಡುವ ಹಸಿರು ಅಭಿಯಾನ ನಡೆಯಿತು.

ಬಪ್ಪಳಿಗೆ ಅಂಬಿಕಾ ಪ.ಪೂ. ವಿದ್ಯಾಲಯ: ವಿದ್ಯಾರ್ಥಿ ಸಂಘದ ಚುನಾವಣೆ

ಪುತ್ತೂರು: ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಬಪ್ಪಳಿಗೆಯ ಅಂಬಿಕಾ ಪದವಿ





ಪೂರ್ವ ವಿದ್ಯಾಲಯದಲ್ಲಿ 2026-27ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಸಂಘದ ಚುನಾವಣೆ ಪ್ರಾಂಶುಪಾಲ ಗಣೇಶ್ ಪ್ರಸಾದ್ ಡಿ.ಎಸ್. ಅವರ ಮಾರ್ಗದರ್ಶನದಲ್ಲಿ ನಡೆಯಿತು. ಅಧ್ಯಕ್ಷರಾಗಿ ಎಚ್.ವಿ. ಭವಿತ್ ಗೌಡ, ಉಪಾಧ್ಯಕ್ಷರಾಗಿ ತನ್ಮಯ್ ನಾಯಕ್, ಕಾರ್ಯದರ್ಶಿಯಾಗಿ ಇಂದೀವರ್ ಪಿ.ಪಿ. ಹಾಗೂ ಜೊತೆ ಕಾರ್ಯದರ್ಶಿಯಾಗಿ ಗಾಯನ ಗೌಡ ಎಸ್.ಎಂ. ಆಯ್ಕೆಯಾದರು.

ಈ ಸಂದರ್ಭ ಮಾತನಾಡಿದ ಕನ್ನಡ ಉಪನ್ಯಾಸಕ ಸತೀಶ್ ಇರ್ದೆ, ವ್ಯಕ್ತಿಯ ಮುಖ ಭಾವ ಮಾತ್ರವಲ್ಲ ಅವರ ಹೃದಯ ಶ್ರೀಮಂತಿಕೆಯನ್ನು ಅರಿತು ಮತವನ್ನು ಚಲಾಯಿಸಬೇಕು. ವಿದ್ಯಾರ್ಥಿ ಸಂಘದ ಚುನಾವಣೆಗಳು ವಿದ್ಯಾರ್ಥಿಗಳಲ್ಲಿ ನಾಯಕತ್ವ ಜವಾಬ್ದಾರಿ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ವಿದ್ಯಾರ್ಥಿಗಳು ಮತಗಟ್ಟೆಗೆ ಆಗಮಿಸಿ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು. ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಕಾರ್ಯದರ್ಶಿ ಹುದ್ದೆಗಳಿಗೆ ಒಟ್ಟು 9 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ವಿಜೇತ ಅಭ್ಯರ್ಥಿಗಳು ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸಿ ಕಾಲೇಜಿನ ಅಭಿವೃದ್ಧಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು. ಕಾಲೇಜಿನ ಪ್ರಾಂಶುಪಾಲರು ನೂತನ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದರು. ಚುನಾವಣಾಧಿಕಾರಿಗಳಾಗಿ ಪ್ರದೀಪ್ ಕೆ.ವೈ. ಕಾರ್ಯಕ್ರಮ ನಿರ್ವಹಿಸಿದರು.

ಮರ್ಕಂಜ ಶಾಲೆಯಲ್ಲಿ ಎಲ್‌ಕೆಜಿ, ಯುಕೆಜಿ ತರಗತಿ ಪ್ರಾರಂಭ

ಸುಳ್ಯ: ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಮೂಡ್ನೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಲ್‌ಕೆಜಿ-ಯುಕೆಜಿ ತರಗತಿಗಳ ಉದ್ಘಾಟನಾ ಸಮಾರಂಭ ನಡೆಯಿತು. ಹಲವಾರು ವರುಷಗಳ ಬೇಡಿಕೆಯನ್ನು ಪರಿಗಣಿಸಿ ಶಿಕ್ಷಣ ಇಲಾಖೆಗೆ ಮನವಿ ಸಲ್ಲಿಸಲಾಗಿತ್ತು. ಮನವಿಗೆ ಸ್ಪಂದಿಸಿದ ಇಲಾಖೆ ಕಳೆದ ಶೈಕ್ಷಣಿಕ ವರುಷದ ಮಧ್ಯಭಾಗದಲ್ಲಿ ತರಗತಿಗಳನ್ನು ಆರಂಭಿಸುವಂತೆ ಆದೇಶ ಮಾಡಿತ್ತು. ಈ ಬಾರಿ ಶೈಕ್ಷಣಿಕ ವರುಷದ ಆರಂಭದಲ್ಲಿ 20ಕ್ಕೂ ಹೆಚ್ಚು ಮಕ್ಕಳ ದಾಖಲಾತಿಯೊಂದಿಗೆ ಸೋಮವಾರ ಶಾಸಕಿ ಭಾಗೀರಥಿ ಮುರುಳ್ಯ ಉದ್ಘಾಟಿಸಿ ಶುಭ ಹಾರೈಸಿದರು.

ಈ ಸಂದರ್ಭ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ವಿಜಯಕುಮಾರ್ ಎರ್ಮೆಟ್ಟಿ, ಶಾಲಾ ಮುಖ್ಯೋಪಾಧ್ಯಾಯ ದೇವರಾಜ್, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ನವೀನ್ ನಳಿಯಾರು, ಗ್ರಾಮ ಪಂಚಾಯತ್ ನಿಕಟಪೂರ್ವ ಅಧ್ಯಕ್ಷೆ ಗೀತಾ ಹೊಸೊಳಿಕೆ, ಮಾಜಿ ಗ್ರಾ.ಪಂ. ಸದಸ್ಯ ಗೋವಿಂದ ಅಳವುಪಾರೆ ಮತ್ತಿತರರು ಉಪಸ್ಥಿತರಿದ್ದರು.

ಬಂಟ್ವಾಳ ತಾ.ಪಂ. ಸಭಾಂಗಣದಲ್ಲಿ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದ ಕುಂದುಕೊರತೆ ಸಭೆ

ವಾರಸುದಾರರು ಸಂಬಂಧವಿಲ್ಲ ಅಂದರೂ ಶವಾಗಾರದಲ್ಲಿದೆ ಶವ!

ಬಂಟ್ವಾಳ: ಮೃತರಿಗೂ ನಮಗೂ ಯಾವುದೇ ಸಂಬಂಧವಿಲ್ಲ, ಆ ವ್ಯಕ್ತಿಯನ್ನು ನಮ್ಮ ಕುಟುಂಬ, ಮನೆಯಿಂದಲೇ ಬಿಟ್ಟುಬಿಟ್ಟಿದ್ದೇವೆ ಎಂದು ವಾರಸುದಾರರೇ ಪೊಲೀಸರ ಮುಂದೆ ಹೇಳಿಕೆ ನೀಡಿದರೂ, ಕಳೆದ 6 ದಿನಗಳಿಂದ ಶವವನ್ನು ಇನ್ನು ವಿಲೇ ಮಾಡದೆ ಬಂಟ್ವಾಳ ಸರಕಾರಿ ಆಸ್ಪತ್ರೆಯ ಶವಗಾರದಲ್ಲಿರಿಸಲಾಗಿದೆ. ಇಂತಹ ವ್ಯವಸ್ಥೆಯೊಂದು ಇದೆಯೇ ಎಂದು ಮಂಗಳವಾರ ಬಂಟ್ವಾಳ ತಾ.ಪಂ. ಎಸ್ ಜಿ ಎಸ್ ವೈ ಸಭಾಂಗಣದಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಂದುಕೊರತೆ ಸಭೆಯಲ್ಲಿ ಪ್ರಶ್ನೆ ಎದುರಾಯಿತು.

ಬಂಟ್ವಾಳ ತಹಶೀಲ್ದಾರ್ ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪ.ಜಾತಿ ಮತ್ತು ಪ.ಪಂ.ದ ಸಭೆಯಲ್ಲಿ,ದಲಿತ ಮುಖಂಡ ಸತೀಶ್ ಅರಳ ಅವರು ವಿಷಯ ಪ್ರಸ್ತಾವಿಸಿ, ಪೊಳಲಿ ದೇವಸ್ಥಾನ ಪಂಪ್ ಶೆಡ್‌ನಲ್ಲಿ ಕಳೆದ ಮಂಗಳವಾರ ವ್ಯಕ್ತಿಯ ಮೃತದೇಹ ಪತ್ತೆಯಾಗಿತ್ತು. ಬಳಿಕ ಮೃತದೇಹವನ್ನು ಬಂಟ್ವಾಳ ಸರಕಾರಿ ಆಸ್ಪತ್ರೆಯ ಶವಗಾರದಲ್ಲಿರಿಸಲಾಗಿತ್ತು. ಮಾಹಿತಿ ಪಡೆದ ವ್ಯಕ್ತಿಯ ವಾರಸುದಾರರು ತನ್ನನ್ನು ಸಂಪರ್ಕಿಸಿ, ಮೃತ ವ್ಯಕ್ತಿಗೂ ನಮಗೂ ಯಾವುದೇ ಸಂಬಂಧವಿಲ್ಲ ಅವರು ಮನೆಬಿಟ್ಟು ಹಲವು ವರ್ಷಗಳೇ ಸಂದಿವೆ. ನಮ್ಮ ಕುಟುಂಬ ಮತ್ತು ಮನೆಯಿಂದ ಆ ವ್ಯಕ್ತಿಯನ್ನು ಬಿಟ್ಟು ಬಿಟ್ಟಿದ್ದೇವೆ ಎಂದು ಆತನ ಮನೆಮಂದಿ ಹೇಳಿಕೆ ನೀಡಿದ್ದು, ಪೊಲೀಸರ ಮುಂದೆಯು ತಿಳಿಸಲಾಗಿತ್ತು. ಮೃತ ವ್ಯಕ್ತಿಯ ಮನೆಯವರ ಹೇಳಿಕೆಯನ್ನಾಧರಿಸಿ ಶವವನ್ನು ಪೊಲೀಸರೇ ವಿಲೇ ಮಾಡಬಹುದಿತ್ತು. ಹೀಗಿದ್ದು ಆ ಶವವನ್ನು ಕಳೆದ ಆರು ದಿನಗಳಿಂದ ಶವಗಾರದಲ್ಲಿ ಹಾಗೆ ಇರಿಸಲಾಗಿದ್ದು, ಹೀಗೂ ಒಂದು ವ್ಯವಸ್ಥೆ ಇದೆಯೇ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ತಹಶೀಲ್ದಾರ್ ಮಂಜುನಾಥ್ ಸಭೆ ಮುಗಿದ ಕ್ಷಣ ಸಂಬಂಧಿಸಿದ ಠಾಣಾ ಪೊಲೀಸ್ ಅಧಿಕಾರಿಯನ್ನು ಸಂಪರ್ಕಿಸಿ ಶವದ ವಿಲೇಗೆ ಸೂಚಿಸಲಾಗುವುದು ಎಂದು ತಿಳಿಸಿದರು.



ಸರಕಾರಿ ಬಸ್‌ನಲ್ಲಿ 130 ಪ್ರಯಾಣಿಕರು

ಸರಕಾರಿ ಬಸ್ ಗಳಲ್ಲಿ ವಾಸ್ತವವಾಗಿ 50 ರಿಂದ 60 ಪ್ರಯಾಣಿಕರನ್ನು ತುಂಬಿಸಬಹುದು. ಆದರೆ ಧರ್ಮಸ್ಥಳ ರೂಟಿನಲ್ಲಿ ಸಂಚರಿಸುವ ಬಸ್‌ಗಳಲ್ಲಿ 130 ರಿಂದ 150 ಪ್ರಯಾಣಿಕರನ್ನು ಹೇರಿಕೊಂಡು ಸಂಚರಿಸುತ್ತಿದೆ. ಅನಾಹುತ ಸಂಭವಿಸಿದರೆ ಬಸ್ ಚಾಲಕನ ಮೇಲೆ ಪ್ರಕರಣ ದಾಖಲಾಗುತ್ತದೆ. ಖಾಸಗಿ ಬಸ್ , ಆಟೋರಿಕ್ಷಾ, ಇನ್ನಿತರ ವಾಹನಗಳನ್ನು ತಡೆದು ದಂಡ ವಸೂಲಿ ಮಾಡುವ ಪೊಲೀಸರಾಗಲೀ, ಆರ್‌ಟಿಒ ಇಲಾಖೆಯಾಗಲೀ ಓವರ್ ಲೋಡು ಹಾಕಿ ಅಪಾಯಕಾರಿಯಾಗಿ ಸಂಚರಿಸುವ ಕೆಎಸ್‌ಆರ್ ಟಿಸಿ ಬಸ್ ಮೇಲೆ ಯಾಕೆ ದಂಡ ಹಾಕುತ್ತಿಲ್ಲ ಎಂದು ವಿಶ್ವನಾಥ ಚಂಡ್ತಿಮಾರ್ ಪ್ರಶ್ನಿಸಿದರು.ಇದಕ್ಕಾಗಿ ಹೆಚ್ಚುವರಿ ಬಸ್‌ಗಳನ್ನು ಈ ರೂಟ್‌ನಲ್ಲಿ ಓಡಿಸುವಂತೆ ಆಗ್ರಹಿ ಸಿದರು. ಅದೇರೀತಿ ಸರಪಾಡಿ ರೂಟಿನಲ್ಲಿ ಪ್ರತಿ ದಿನ ರಾತ್ರಿ 8 ಗಂಟೆಯ ಬಸ್ ಸಂಚಾರವನ್ನು ನಿಲುಗಡೆಗೊಳಿಸದಂತೆಯು ಕೋರಿದರು.

ದೌರ್ಜನ್ಯ ಇನ್ನೂ ನಿಂತಿಲ್ಲ

ಬುದ್ಧಿವಂತರ ಜಿಲ್ಲೆಯೆಂದು ಪರಿಗಣಿಸಿರುವ ದ.ಕ. ಜಿಲ್ಲೆಯಲ್ಲಿ ದಲಿತರ ಮೇಲಿನ ದೌರ್ಜನ್ಯಕ್ಕೆ ಇನ್ನು ಕಡಿವಾಣ ಬಿದ್ದಿಲ್ಲ. ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ಅಧಿಕಾರಿಗಳ, ತಾಲೂಕು ಮಟ್ಟದಲ್ಲಿ ಎಸ್ಸಿ- ಎಸ್ಟಿ ಸಮುದಾಯದ ಕುಂದುಕೊರತೆ ಸಭೆಗಳು ನಡೆ ಯುತ್ತವೆ. ನಮ್ಮ ಸಮಸ್ಯೆಗಳನ್ನು ಪ್ರಸ್ತಾಪ ಮಾಡುತ್ತೇವೆ. ಆದರೆ ಅದಕ್ಕೊಂದು ಸಮರ್ಪಕ ಪರಿಹಾರ ಸಿಗುತ್ತಿಲ. ದಲಿತರ ಮೇಲಿನ ದೌರ್ಜನ್ಯಗಳು ಮಾತ್ರ ಇನ್ನು ಮುಂದುವರಿಯುತ್ತಲೇ ಇವೆ ಎಂದು ಸತೀಶ್ ಅರಳ ಕಳವಳ ವ್ಯಕ್ತಪಡಿಸಿದರು.

ಇತ್ತೀಚಿಗಿನ ದಿನಗಳಲ್ಲಿ ಜಿಲ್ಲಾ, ತಾಲೂಕುಮಟ್ಟದ ಕುಂದು ಕೊರತೆ ಸಭೆಗಳು ಕಾಟಾಚಾರಕ್ಕೆಂಬಂತೆ ನಡೆಯುತ್ತಿದೆ. ಸಮಸ್ಯೆಗೆ ಪರಿಹಾರ ಸಿಗದಿದ್ದಲ್ಲಿ ಸಭೆ ನಡೆಸಿ ಏನು ಪ್ರಯೋಜನ ಎಂದು ಅಧಿಕಾರಿಗಳ ಗಮನ ಸೆಳೆದರು. ಈ ಪ್ರಶ್ನೆಗೆ ತಹಶೀಲ್ದಾರರು ನಿರುತ್ತರರಾದರು.

ಎಸ್ಸಿ-ಎಸ್ಟಿ ವಿದ್ಯಾರ್ಥಿಗಳ ಕೊಡುಗೆ

ಬಂಟ್ವಾಳ ತಾಲೂಕಿಗೆ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 97.87 ಶೇ.ಫಲಿತಾಂಶ ಬಂದಿದ್ದು ಇದರಲ್ಲಿ ಎಸ್ಸಿ-ಎಸ್ಟಿ ಸಮುದಾಯದ ವಿದ್ಯಾರ್ಥಿಗಳು ಕೂಡ ಮುಂಚೂಣಿಯಲ್ಲಿದ್ದು, ಉತ್ತಮ ಫಲಿತಾಂಶದಲ್ಲಿ ಅವರ ಕೊಡುಗೆಯ ಇದೆ ಎಂದು ಶಿಕ್ಷಣ ಇಲಾಖಾಧಿಕಾರಿ ಸಭೆಯ ಗಮನಕ್ಕೆ ತಂದರು. ತಾಲೂಕಿನ ಎಲ್ಲಾ ಸರಕಾರಿ ಶಾಲೆಗಳಿಗೂ ಒಂದನೇ ಹಂತದಲ್ಲಿ ಸಮವಸ್ತ್ರ, ಪಠ್ಯ ಪುಸ್ತಕ ವಿತರಿಸಲಾಗಿದ್ದು, ಎರಡನೇ ಹಂತದ ಸಮವಸ್ತ್ರ, ಪಠ್ಯಪುಸ್ತಕ ವಿತರಣೆಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು. ಶಾಲೆಗಳಿಗೆ ಸರಕಾರದಿಂದ ಉಚಿತವಾಗಿಯೇ ನೀಡಲಾಗುತ್ತಿದೆ. ಹಣ ಪಡೆಯುತ್ತಿದ್ದರೆ ನಿರ್ಧಿಷ್ಟ ಶಾಲೆಯ ವಿರುದ್ಧ ಲಿಖಿತ ದೂರು ಸಲ್ಲಿಸಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ದಲಿತ ಮುಖಂಡ ವಿಶ್ವನಾಥ ಚಂಡ್ತಿಮಾರ್ ಅವರ ಪ್ರಶ್ನೆಗೆ ಅಧಿಕಾರಿ ಉತ್ತರಿಸಿದರು.

ವರ್ಷಕ್ಕೆ ಎರಡೇ ಸಭೆ

ಒಂದು ವರ್ಷಕ್ಕೆ 12 ತಿಂಗಳಿದ್ದು ಪ್ರತಿ ಮೂರು ತಿಂಗಳಿಗೊಮ್ಮೆ ಎಸ್ಸಿ-ಎಸ್ಟಿ ಸಮುದಾಯದ ಕುಂದುಕೊರತೆ ಸಭೆ ಕರೆದು ಸಮಸ್ಯೆ ಆಲಿಸಿ ಪರಿಹಾರ ನೀಡಬೇಕೆಂಬ ನಿಯಮವಿದ್ದರೂ, ಬಂಟ್ವಾಳ ತಾಲೂಕಿನಲ್ಲಿ ಮಾತ್ರ ಆರು ತಿಂಗಳಿಗೊಮ್ಮೆ ವರ್ಷಕ್ಕೆ ಎರಡೇ ಸಭೆ ನಡೆಸಲಾಗುತ್ತಿದೆ. ಅದಕ್ಕೂ ತಾಲೂಕು ಮಟ್ಟದ ಕೆಲ ಅಧಿಕಾರಿಗಳು ಗೈರು ಹಾಜರಾಗುತ್ತಾರೆ. ಹಾಗಾದರೆ ನಮ್ಮ ಸಮಸ್ಯೆಗೆ ಪರಿಹಾರ ಹೇಗೆ ಸಿಗಲು ಸಾಧ್ಯ ಎಂದು ಗಂಗಾಧರ ಪರಾರಿ ಪ್ರಶ್ನಿಸಿದರು. ಗೈರು ಹಾಜರಾದ ಅಧಿಕಾರಿಗಳಿಗೆ ಶೋಕಾಸ್ ನೋಟೀಸ್ ಜಾರಿಗೊಳಿಸುವಂತೆ ತಹಶೀಲ್ದಾರ್ ಸೂಚಿಸಿದರಲ್ಲದೆ, ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸುವುದಾಗಿ ಭರವಸೆ ನೀಡಿದರು.

ಕಳಪೆ ಕಾಮಗಾರಿ

ಬಂಟ್ವಾಳ ಬಡ್ಡಕಟ್ಟೆಯಲ್ಲಿರುವ ಹಿಂದೂ ರುದ್ರಭೂಮಿ ಸಮೀಪವೇ ಮತ್ತೊಂದು ಕಟ್ಟಡ ನಿರ್ಮಾಣವಾಗುತ್ತಿದ್ದು, ಇದು ಕಳಪೆ ಗುಣಮಟ್ಟದಿಂದ ಕೂಡಿದೆ. ಇದನ್ನು ಯಾವ ಅನುದಾನದಲ್ಲಿ ಮಾಡ ಲಾಗುತ್ತಿದೆ. ಯಾರಿಗೆ ಟೆಂಡರ್ ಆಗಿದೆ. ಕಾಮಗಾರಿಯನ್ನು ತಕ್ಷಣ ಸ್ಥಗಿತಗೊಳಿಸಿ, ಗುತ್ತಿಗೆ ದಾರನ್ನು ಕರೆಸಿ ವಿಚಾರಿಸಬೇಕು. ಈ ಸಂದರ್ಭ ತನ್ನನ್ನೂ ಆಹ್ವಾನಿಸಬೇಕು ಎಂದು ಮೋಹನ್ ಚಂಡ್ತಿಮಾರ್ ಪುರಸಭಾ ಮುಖ್ಯಾಧಿಕಾರಿಯವರ ಗಮನಸೆಳೆದರು. ನಗರೋತ್ಥಾನ ಯೋಜನೆಯ ಅನುದಾನದಿಂದ ಕಾಮಗಾರಿ ನಡೆಯುತ್ತಿರಬೇಕು ಈ ಬಗ್ಗೆ ಪರಿಶೀಲಿ ಸುವುದಾಗಿ ಮುಖ್ಯಾಧಿಕಾರಿ ತೀರ್ಥಪ್ರಸಾದ್ ಹೇಳಿದರು.

ಸರಕಾರಿ ಬಾವಿಗೆ ಬೇಲಿ

ಪಲ್ಲಮಜಲು ಬಳಿ ಸರಕಾರಿ ಬಾವಿಗೆ ಬೇಲಿ ಹಾಕಿ ಗೇಟ್ ಅಳವಡಿಸಲಾಗಿದೆ. ಪಂಪ್ ಹಾಕಿ ನೀರು ಎತ್ತಲಾಗುತ್ತಿದೆ. ಉಳ್ಳವರು ಈ ರೀತಿ ಯಾರು ಕ್ರಮಕ್ಕೆ ಮುಂದಾಗುತ್ತಿಲ್ಲ, ಬಡಪಾಯಿ ಹೀಗೆ ಮಾಡುತ್ತಿದ್ದರೆ ಅಧಿಕಾರಿಗಳು ಬಿಡುತ್ತಿದ್ದರೆ, ಇದನ್ನು ತೆರವುಗೊಳಿಸಬೇಕು ಹಾಗೂ ಇದೇ ಪರಿಸರದಲ್ಲಿ ಸರಕಾರಿ ಜಮೀನಿನಲ್ಲಿ ಮರವನ್ನು ಕಡಿದು ಹಾಕಲಾಗಿದ್ದು, ಅದನ್ನು ಅಕ್ರಮವಾಗಿ ಸಾಗಾಟಕ್ಕೆ ಯತ್ನಿಸಲಾಗುತ್ತಿದೆ. ಈ ಮರವನ್ನು ಅರಣ್ಯ ಇಲಾಖೆ ಮುಟ್ಟುಗೋಲು ಹಾಕಬೇಕು ಎಂದು ಗಂಗಾಧರ ಪರಾರಿ ಸಭೆಯ ಗಮನಸೆಳೆದರು.

ಪೀಕ್ ಅವರ್‌ನಲ್ಲಿ ಬಸ್ ಹೆಚ್ಚಿಸಿ

ತೋರಣಕಟ್ಟೆ- ಕುದ್ದುಪದವು- ವಿಟ್ಲ- ಮಂಗಳೂರಿಗೆ ತೆರಳುವ ವಿದ್ಯಾರ್ಥಿಗಳು, ಕಾರ್ಮಿಕರು ಸಹಿತ ಅನೇಕ ಮಂದಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಬೆಳಿಗ್ಗೆ ಮತ್ತೆ ಸಂಜೆಯ ಪೀಕ್ ಅವರ್‌ನಲ್ಲಿ ಕೆಎಸ್‌ಆರ್‌ಟಿಸಿ ಬಸ್ ಓಡಿಸುವಂತೆ ಕಳೆದ ಎರಡು ಸಭೆಯಲ್ಲಿಮನವಿ ಮಾಡಿದರೂ ಸ್ಪಂದಿಸಿಲ್ಲ ಎಂದು ದಲಿತ ಮುಖಂಡರೋರ್ವರು ದೂರಿದರು.

ಡಿ.ಸಿ.ಮನ್ನಾ ಜಮೀನಿನ ಕುರಿತಂತೆ ಒತ್ತುವರಿಯಾಗಿರುವುದು, ಉಳಿಕೆಯಾದವು ಸೇರಿದಂತೆ ಒಟ್ಟಾರೆ ಎಷ್ಟು ಜಮೀನು ಲಭ್ಯವಿದೆ ಸಂಪೂರ್ಣ ವಿವರವನ್ನು ಮುಂದಿನ ಸಭೆಗೆ ಮಂಡಿಸುವುದಾಗಿ ತಹಶೀಲ್ದಾರ್ ತಿಳಿಸಿದರು. ವಿವಿಧ ಇಲಾಖಾಧಿಕಾರಿಗಳು ಎಸ್ಸಿ-ಎಸ್ಟಿ ಸಮುದಾಯಕ್ಕೆ ಸರಕಾರದಿಂದ ಸಿಗುವ ಸವಲತ್ತುಗಳ ಮಾಹಿತಿ ನೀಡಿದರೆ, ಸವಲತ್ತಿನ ಕುರಿತಂತೆ ಅಧಿಕಾರಿಗಳನ್ನು ಸಂಪರ್ಕಿಸಿ ಇನ್ನಷ್ಟು ಮಾಹಿತಿ ಪಡೆದು ಅದರ ಸದುಪಯೋಗಪಡೆಯುವಂತೆ ತಹಶೀಲ್ದಾರ್ ಸೂಚಿಸಿದರು.

ತಾ.ಪ. ಇಒ ಸಚ್ಚಿನ್ ಕುಮಾರ್, ಮುಖ್ಯಾಧಿಕಾರಿ ತೀರ್ಥಪ್ರಸಾದ್ ವೇದಿಕೆಯಲ್ಲಿದ್ದರು. ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ (ಗ್ರೇಡ್ -2) ವಿನಯಕುಮಾರಿ ಸ್ವಾಗತಿಸಿ, ವಂದಿಸಿದರು.

ಜೆಇಇಯಲ್ಲಿ ವಿಶ್ರುತ್ ಕೃಷ್ಣಗೆ ರ್‍ಯಾಂಕ್: ಶಾಸಕ ಕಾಮತ್ ಸನ್ಮಾನ



ಮಂಗಳೂರು: ಜೆಇಇ ಅಡ್ವಾನ್ಸ್ 2026ರಲ್ಲಿ ಆಲ್ ಇಂಡಿಯಾ(ಎಐಆರ್) 79ನೇ ರ್‍ಯಾಂಕ್ ಮತ್ತು ಜೆಇಇ ಮೈನ್ಸ್ 2026ರಲ್ಲಿ ಆಲ್ ಇಂಡಿಯಾ 335ನೇ ರ್‍ಯಾಂಕ್‌ಗಳಿಸಿದ ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೆಂದೂರ್‌ವೆಲ್ ನಿವಾಸಿ ಬಿ.ವಿಶ್ರುತ್ ಕೃಷ್ಣ ಆರ್.ಭಟ್ ಅವರ ಮನೆಗೆ ಶಾಸಕ ವೇದವ್ಯಾಸ ಕಾಮತ್ ಅವರು ಭೇಟಿ ನೀಡಿ ಸನ್ಮಾನಿಸಿದರು.

ಸುರತ್ಕಲ್ ಎನ್‌ಐಟಿಕೆಯಲ್ಲಿ ಪ್ರಾಧ್ಯಾಪಕರಾಗಿರುವ ಡಾ.ಬಡೆಕ್ಕೈ ರಾಮಚಂದ್ರ ಭಟ್ ಮತ್ತು ಮಂಗಳೂರಿನ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಪೂರ್ಣಿಮಾ ಆರ್.ಭಟ್ ದಂಪತಿಗಳ ಪುತ್ರನಾಗಿರುವ ಈ ವಿದ್ಯಾರ್ಥಿಯು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗೆ ಟಾಪರ್ ಅಲ್ಲದೇ ಕರ್ನಾಟಕದ ಅಗ್ರ 10 ವಿದ್ಯಾರ್ಥಿಗಳಲ್ಲಿ ಒಬ್ಬರಾಗಿ ಶೈಕ್ಷಣಿಕವಾಗಿ ಅದ್ಭುತ ಸಾಧನೆಗೈದಿರುವುದು ನಮ್ಮ ಜಿಲ್ಲೆಗೆ ಹೆಮ್ಮೆಯ ಸಂಗತಿ. ಶೈಕ್ಷಣಿಕ ಹಾದಿಯಲ್ಲಿ ಈ ವಿದ್ಯಾರ್ಥಿ ಮಿತ್ರನ ಎಲ್ಲಾ ಕನಸುಗಳು ನನಸಾಗಿ ಭವಿಷ್ಯವು ಇನ್ನಷ್ಟು ಉಜ್ವಲವಾಗಲಿ, ಇನ್ನೂ ಹೆಚ್ಚಿನ ಸಾಧನೆಗಳು ಹೊರಹೊಮ್ಮುವ ಮೂಲಕ ಜಿಲ್ಲೆಯ ಕೀರ್ತಿ ಹೆಚ್ಚಲಿ ಎಂದು ಶುಭ ಹಾರೈಸಿದರು.

ಸುರತ್ಕಲ್-ಜೋಕಟ್ಟೆ-ಎಂಆರ್‌ಪಿಎಲ್ ರಸ್ತೆ ದುಃಸ್ಥಿತಿ: ವಾಹನ ಸವಾರರ ಆಕ್ರೋಶ

ಸುರತ್ಕಲ್: ಇಲ್ಲಿನ ಕಾನ , ತೋಕೂರು, ಕೊಡಿಕೆರೆ, ಜೋಕಟ್ಟೆ, ಎಂಆರ್‌ಪಿಎಲ್ ಹಾಗೂ ಎಂಎಸ್‌ಇಝೆಡ್ ಪ್ರದೇಶಗಳನ್ನು ಸಂಪರ್ಕಿಸುವ ಪ್ರಮುಖ ರಸ್ತೆಯ ದುಃಸ್ಥಿತಿ ಯಿಂದ ಸಾರ್ವಜನಿಕರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ.

ರಸ್ತೆ ತುಂಬಾ ಆಳವಾದ ಗುಂಡಿಗಳು ಉಂಟಾಗಿದ್ದು, ವಾಹನ ಸಂಚಾರ ನಿಧಾನಗೊಂಡಿದೆ. 10 ನಿಮಿಷದಲ್ಲಿ ತಲುಪಬೇಕಾದ ಸ್ಥಳಕ್ಕೆ 30 ರಿಂದ 35 ನಿಮಿಷ ಬೇಕಾಗುತ್ತಿದೆ ಎಂದು ಸ್ಥಳೀಯರು ದೂರಿದ್ದಾರೆ. ಪ್ರತಿ ದಿನ ಸಾವಿರಾರು ವಾಹನಗಳು ಈ ರಸ್ತೆಯನ್ನು ಅವಲಂಬಿಸಿದ್ದು, ಶಾಲಾ ಮಕ್ಕಳು, ಉದ್ಯೋಗಿಗಳು ಹಾಗೂ ರೋಗಿಗಳ ಸಂಚಾರಕ್ಕೂ ತೊಂದರೆಯಾಗುತ್ತಿದೆ. ಮಳೆಗಾಲದಲ್ಲಿ ಗುಂಡಿಗಳು ನೀರಿನಿಂದ ತುಂಬಿ ಅಪಘಾತದ ಅಪಾಯ ಹೆಚ್ಚುತ್ತಿದೆ.



ಇನ್ನೊಂದೆಡೆ, ರಸ್ತೆ ಬದಿಗಳಲ್ಲಿ ಕಸದ ರಾಶಿಗಳು ಹೆಚ್ಚಾಗಿದ್ದು ದುರ್ವಾಸನೆ ಹರಡುತ್ತಿದೆ. ಕಸ ಸಂಗ್ರಹ ವ್ಯವಸ್ಥೆಯ ಕೊರತೆಯಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದೆ ಎಂದು ನಾಗರಿಕರು ಆರೋಪಿಸಿದ್ದಾರೆ.

ತಾತ್ಕಾಲಿಕ ದುರಸ್ತಿ ಕಾಮಗಾರಿ ಬದಲಿಗೆ ಶಾಶ್ವತ ರಸ್ತೆ ನಿರ್ಮಾಣ ಹಾಗೂ ಕಸದ ಸಮಸ್ಯೆಗೆ ಶೀಘ್ರ ಪರಿಹಾರ ಕಲ್ಪಿಸುವಂತೆ ಸಾರ್ವಜನಿಕರು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳನ್ನು ಒತ್ತಾಯಿಸಿದ್ದಾರೆ.

ಕಾಟಿಪಳ್ಳ ಸರ್ಕಾರಿ ಶಾಲೆಯಲ್ಲಿ ಉಚಿತ ನೋಟ್ ಪುಸ್ತಕ ವಿತರಣೆ



ಮಂಗಳೂರು: ಕಾಟಿಪಳ್ಳ 5ನೇ ವಿಭಾಗ ಸರ್ಕಾರಿ ಪ್ರೌಢಶಾಲೆಯಲ್ಲಿ ಹಳೆವಿದ್ಯಾರ್ಥಿಗಳ ಸಹಯೋಗದೊಂದಿಗೆ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ ವಿತರಣಾ ಕಾರ್ಯಕ್ರಮವನ್ನು ಸೋಮವಾರ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಡಾ.ವೈ. ಭರತ್ ಶೆಟ್ಟಿ, ಸರ್ಕಾರಿ ಪ್ರೌಢಶಾಲೆಯ ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಶ್ಲಾಘಿಸಿ, ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕಗಳನ್ನು ವಿತರಿಸಲಾಯಿತು.

ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಅಭಿಯಂತರ ಹಾಗೂ ದಾನಿ ಗೋಕುಲ್ ದಾಸ್, ಹಳೇ ವಿದ್ಯಾರ್ಥಿ ಸಂಘದ ಗೌರವಾಧ್ಯಕ್ಷ ಪಿ. ಸುಧಾಕರ್ ಕಾಮತ್, ಅಶೋಕ್ ಕೃಷ್ಣಾಪುರ, ನರೇಶ್ ಅಮೀನ್, ಕರುಣಾಕರ ದೇವಾಡಿಗ, ಪ್ರಶಾಂತ್ ಆಚಾರ್ಯ, ಸತೀಶ್ ಸಾಲಿಯಾನ್, ಮೋಹನ ಮೂಲ್ಯ, ಮಾಧವ ಬಂಗೇರ, ವಿಶ್ವನಾಥ ಮೂಲ್ಯ ಹಾಗೂ ಮುಖ್ಯಶಿಕ್ಷಕರು, ಪ್ರಾಥಮಿಕ ಹಾಗೂ ಪ್ರೌಢಶಾಲಾ ಎಸ್.ಡಿ.ಎಂ.ಸಿ ಅಧ್ಯಕ್ಷರು, ಶಾಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಸ್ವಾಗತಿಸಿದರು. ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ವಂದಿಸಿದರು. ಸೌಮ್ಯ ನಾಯಕ್ ಕಾರ್ಯಕ್ರಮವನ್ನು ನಿರೂಪಿಸಿದರು.

ಬಂಟ್ವಾಳ: ಅಭಿನಂದನಾ ಕಾರ್ಯಕ್ರಮ



ಬಂಟ್ವಾಳ: ಚಿಣ್ಣರ ಲೋಕ ಮೊಕೆದ ಕಲಾವಿದೆರ್ ಸೇವಾ ಟ್ರಸ್ಟ್ ಬಂಟ್ವಾಳ ಇದರ ಆಶ್ರಯದಲ್ಲಿ ನಡೆದ ಕರಾವಳಿ ಕಲೋತ್ಸವ-2026 ತುಳು,ಬ್ಯಾರಿ,ಕೊಂಕಣಿ, ಅರೆಭಾಷೆ ಅಕಾಡೆಮಿಗಳಸಹಯೋಗದೊಂದಿಗೆನಡೆದ ಬಹು ಸಂಸ್ಕೃತಿ ಉತ್ಸವ ಕಾರ್ಯಕ್ರಮದ ಯಶಸ್ಸಿಗೆ ಕಾರಣೀಕರ್ತರಾದ ಸಂಸ್ಥೆಯ ಪದಾಧಿಕಾರಿಗಳಿಗೆ,ಸದಸ್ಯರಿಗೆ, ಆತ್ಮೀಯರಿಗೆ ಅಭಿನಂದನಾ ಕಾರ್ಯಕ್ರಮವು ಸ್ವರ್ಶಾ ಕಲಾಮಂದಿರದಲ್ಲಿ ಭಾನುವಾರ ಸಂಜೆ ನಡೆಯಿತು. ಸಂಸ್ಥೆಯ ಆಡಳಿತ ಟ್ರಸ್ಟಿ ತೇವು ತಾರನಾಥ ಕೊಟ್ಟಾರಿ,ಕರಾವಳಿ ಕಲೋತ್ಸವದ ಅಧ್ಯಕ್ಷ ಸುದರ್ಶನ್ ಜೈನ್, ಬ್ಯಾರಿ ಸಾಹಿತ್ಯ ಸಂಭ್ರಮ ಅಧ್ಯಕ್ಷ ಅಬ್ದುಲ್ ರಝಾಕ್ ಕುಕ್ಕಾಜೆ, ಗೌರವ ಸಲಹೆಗಾರ ಸರಪಾಡಿ ಅಶೋಕ್ ಶೆಟ್ಟಿ, ನಿರ್ದೇಶಕರಾದ ದೇವಪ್ಪ ಕುಲಾಲ್ ಪಂಜಿಕಲ್ಲು, ಅನಿಲ್ ಪಂಡಿತ್, ರಾಜಾ ಚೆಂಡ್ತಿಮಾರ್, ಶೋಭಾ ಶೆಟ್ಟಿ, ಫೌಜಿಯ ,ಎಚ್ಕೆ ನಯನಾಡು, ವಿಜಯ ಕುಮಾರ್ ಅಡ್ಯಾರು, ಡಾ. ರೂಪಲತ ಮತ್ತಿತರರು ಇದ್ದರು. ಸ್ಥಾಪಕಾಧ್ಯಕ್ಷ ಮೋಹನ್ ದಾಸ್ ಕೊಟ್ಟಾರಿ ಸ್ವಾಗತಿಸಿ, ಪ್ರಸ್ತಾವಿಸಿದರು.

ಸಾನಿಧ್ಯದಲ್ಲಿ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವದ ಸಂಭ್ರಮ



ಮಂಗಳೂರು: ಸಾನಿಧ್ಯದಲ್ಲಿ 2026-27ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವವನ್ನು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಅನಿಲ್ ಕುಮಾರ್ ಬೊಮ್ಮರೆಡ್ಡಿ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಸಾನಿಧ್ಯದಲ್ಲಿ ವಿಶೇಷ ಮಕ್ಕಳಿಗೆ ಅಗತ್ಯವಿರುವ ವಿಶೇಷ ಶಿಕ್ಷಣ ಹಾಗೂ ತರಬೇತಿ ದೊರಕುತ್ತಿದೆ. ಈ ವರ್ಷ ಶುಭದಾಯಕವಾಗಲಿ ಎಂದು ಹಾರೈಸಿದರು.

ಈ ಸಂದರ್ಭ ಶ್ರೀ ಗಣೇಶಾ ಸೇವಾ ಟ್ರಸ್ಟಿನ ಅಧ್ಯಕ್ಷ ಮಹಾಬಲ ಮಾರ್ಲ, ಖಜಾಂಜಿ ಜಗದೀಶ್ ಶೆಟ್ಟಿ ನಿರ್ದೇಶಕರಾದ ಉಷಾ ಶೆಟ್ಟಿ, ಮೊಹಮ್ಮದ್ ಬಶೀರ್, ಸ್ಟೀಫನ್ ಪಿಂಟೋ, ಸಲಹಾ ಸಮಿತಿಯ ಸದಸ್ಯರಾದ ಎ.ಜಿ. ಶರ್ಮಾ, ಹೆರಿಕ್ ಡಿಸೋಜಾ, ಸಂತೋಷ್ ಶೆಟ್ಟಿಕುಂಬ್ಳೆ, ವಿಶೇಷ ಮಕ್ಕಳ ಪೋಷಕರು ಹಾಗೂ ಸಾನಿಧ್ಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಕಾಸರಗೋಡು ಕೆಎಸ್‌ಆರ್‌ಟಿಸಿ ಡಿಪ್ಪೋದಲ್ಲಿ ಬೀಳ್ಕೊಡುಗೆ ಸಮಾರಂಭ



ಕಾಸರಗೋಡು: ಕೆಎಸ್‌ಆರ್‌ಟಿಸಿ ಕಾಸರಗೋಡು ಡಿಪ್ಪೋದಿಂದ ನಿವೃತ್ತರಾಗುತ್ತಿರುವ ನಿರ್ವಾಹಕರಾದ ಎ. ವಿಶ್ವನಾಥ ಮತ್ತು ಸಿ.ಎಚ್.ನಾರಾಯಣ ನಾಯ್ಕ್ ಅವರಿಗೆ ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪ್ಲಸ್‌ಟು ಉತ್ತೀರ್ಣರಾದ ಯೂನಿಯನ್‌ನ ಸದಸ್ಯರ ಮಕ್ಕಳಿಗೆ ಅಭಿನಂದನಾ ಕಾರ್ಯಕ್ರಮ ನಡೆಯಿತು.

ಕೆಪಿಸಿಸಿ ಕಾರ್ಯದರ್ಶಿ ಸೋಮಶೇಖರ ಜೆ.ಎಸ್. ಸಮಾರಂಭವನ್ನು ಉದ್ಘಾಟಿಸಿದರು. ಘಟಕದ ಅಧ್ಯಕ್ಷ ವಿ.ರಾಮಚಂದ್ರನ್ ಅಧ್ಯಕ್ಷತೆ ವಹಿಸಿದ್ದರು. ಕೆಎಸ್‌ಟಿ ಕಾರ್ಮಿಕರ ಸಂಘದ ರಾಜ್ಯ ಉಪಾಧ್ಯಕ್ಷ ಬಿಜು ಜೋನ್, ಐಎನ್‌ಟಿಯುಸಿ ಜಿಲ್ಲಾ ಉಪಾಧ್ಯಕ್ಷ ಎಂ.ವಿ.ಪದ್ಮನಾಭನ್, ಜಿಲ್ಲಾಧ್ಯಕ್ಷ ಜಲೀಲ್ ಮಲ್ಲ, ಜಿಲ್ಲಾ ಕಾರ್ಯದರ್ಶಿ ಎನ್.ಸಂತೋಷ್‌ಕುಮಾರ್, ಕಾಞಂಗಾಡು ಘಟಕದ ಅಧ್ಯಕ್ಷ ಎಸ್.ಪವಿತ್ರನ್, ಜಿಲ್ಲಾ ಕಾರ್ಯಾಧ್ಯಕ್ಷ ಪಿ.ಪಿ.ಸುಧೀರ್, ಅಜಯನ್ ಕುರ್ಮಾ, ಪಿ.ಶ್ರೀನಿವಾಸ್, ಸಿ.ಮಧು ಮೊದಲಾದವರು ಇದ್ದರು.

ಪುತ್ತೂರು ಅನುರಾಗ ವಠಾರದಲ್ಲಿ 'ಶ್ರೀಧರಾಭಿವಂದನ' ಕಾರ್ಯಕ್ರಮ | ಗಣ್ಯರಿಂದ 'ಸಿರಿಗಂಧ' ಕೃತಿ ಲೋಕಾರ್ಪಣೆ

ಜನರು ಮಾಡುವ ಸನ್ಮಾನ ಡಾ. ಎಚ್.ಜಿ. ಶ್ರೀಧರ್ ವ್ಯಕ್ತಿತ್ವದ ಸೂಚಿ: ಡಾ. ನಿರಂಜನ ವಾನಳ್ಳಿ

ಪುತ್ತೂರು: ಪುತ್ತೂರಿನಲ್ಲಿ ಎಲ್ಲಾ ಬಗೆಯ ಸಾಹಿತ್ಯ ಮತ್ತುಸಾಂಸ್ಕೃತಿಕ ಚಟುವಟಿಕೆಯಲ್ಲಿತೊಡಗಿಸಿಕೊಂಡ ಡಾ. ಎಚ್.ಜಿ. ಶ್ರೀಧರ್ ಅವರು ಒಳ್ಳೆಯದನ್ನು ಮಾಡಿರುವ ಕಾರಣ ಅಭಿನಂದಿಸಲ್ಪಡುತ್ತಿದ್ದಾರೆ. ಸಾರ್ವಜನಿಕರು ಮಾಡುವ ಈ ಸನ್ಮಾನವು ಡಾ. ಶ್ರೀಧರ್ ಅವರ ವ್ಯಕ್ತಿತ್ವದ ಸೂಚಿಯಾಗಿದೆ ಎಂದು ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದ ನಿಕಟಪೂರ್ವ ಕುಲಪತಿ ಡಾ. ನಿರಂಜನ ವಾನಳ್ಳಿ ಅಭಿಪ್ರಾಯಪಟ್ಟರು.

ಅವರು ಡಾ.ಎಚ್.ಜಿ. ಶ್ರೀಧರ್ ಶಿಷ್ಯವೃಂದ ಹಾಗೂ ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಜಂಟಿ ಆಶ್ರಯದಲ್ಲಿ ಪುತ್ತೂರಿನ ಅನುರಾಗ ವಠಾರದಲ್ಲಿ ಆಯೋಜಿಸಿದ 'ಶ್ರೀಧರಾಭಿವಂದನ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಾಟ್ಸ್‌ಆಪ್ ಯುನಿವರ್ಸಿಟಿಯ ಕಾರಣದಿಂದಾಗಿ ಈಗ ಯಾರಿಗೂ ಪುಸ್ತಕದ ಸಹವಾಸ ಬೇಡವಾಗಿದೆ. ವಿದ್ಯಾರ್ಥಿಗಳು ಮುದ್ರಿತ ಪುಸ್ತಕ ಮತ್ತು ಸಾಹಿತ್ಯಗಳನ್ನು ಓದಲು ಬಯಸುವುದಿಲ್ಲ, ಓದಿನ ಶತ್ರುತ್ವ ಎಲ್ಲೆಡೆ ನೋಡುತ್ತಿದ್ದೇವೆ. ಇವೆಲ್ಲದರ ನಡುವೆ ಈ ಕಾರ್ಯಕ್ರಮದ ಮೂಲಕ ಪುತ್ತೂರಿನಲ್ಲಿ ಕನ್ನಡದ ತೇರನ್ನು ಮುಂದಕ್ಕೆಳೆಯಲು ಯುವ ಸಮುದಾಯ ಮುಂದಾಗಿರುವುದು ಶ್ಲಾಘನೀಯವಾಗಿದೆ ಎಂದರು.



ಅಧ್ಯಕ್ಷತೆ ವಹಿಸಿದ್ದ ಮುಂಬೈ ವಿಶ್ವವಿದ್ಯಾನಿಲಯದ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ತಾಳ್ತಜೆ ವಸಂತ ಕುಮಾರ್, ಡಾ. ಶ್ರೀಧರ್ ಅವರು ಬೆಳೆಸಿದ ಯುವ ಮನಸ್ಸುಗಳು ಅವರಿಗೆ ಅಭಿನಂದನೆ ಸಲ್ಲಿಸುತ್ತಿರುವುದು ಅವರ ಕಾಯಕನಿಷ್ಠೆಗೆ ಸಾಕ್ಷಿಯಾಗಿದೆ.

> **ಈಗ ಎಲ್ಲರೂ ಪತ್ರಕರ್ತರು**
>
> ಸಾಮಾಜಿಕ ಜಾಲತಾಣಗಳಿಂದಾಗಿ ಇದೀಗ ಎಲ್ಲರೂ ಪತ್ರಕರ್ತರೇ ಆಗಿದ್ದಾರೆ. ರಾಜಧಾನಿಯಲ್ಲಿ ಪುಸ್ತಕ ಪ್ರಕಟಗೊಂಡರೆ ಅದೊಂದು ದೊಡ್ಡ ಸುದ್ದಿಯಾಗುತ್ತಿದೆ. ಆದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಪುಸ್ತಕ ಪ್ರಕಟಣೆಯಾದಾಗ ದೊಡ್ಡ ಸುದ್ದಿ ಆಗುವುದೇ ಇಲ್ಲ.
>
> • ಡಾ. ನಿರಂಜನ ವಾನಳ್ಳಿ

ವಿವೇಕಾನಂದ ಕಾಲೇಜ್‌ನಲ್ಲಿ ಕನ್ನಡ ವಿಭಾಗವನ್ನು ಬೆಳೆಸಿರುವ ಅವರ ಆಸಕ್ತಿ ಮತ್ತು ಕೈಂಕರ್ಯ ಬಹಳ ದೊಡ್ಡದಾಗಿದೆ. ಕಾಲೇಜ್‌ನ ಪ್ರಗತಿಗೆ ಅರ್ಥ ಪೂರ್ಣವಾಗಿ ದುಡಿದರು. ಅವರ ಕಾದಂಬರಿಗಳು ಹೊಸತನದ ದಾರಿಯನ್ನು ತೋರಿಸಿಕೊಟ್ಟಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಪುತ್ತೂರು ತಾಲೂಕು ಘಟಕದ ಅಧ್ಯಕ್ಷ ಪುತ್ತೂರು ಉಮೇಶ್ ನಾಯಕ್ ಮಾತನಾಡಿ, ಅತ್ಯದ್ಭುತವಾಗಿರುವ ಕೃತಿಗಳನ್ನು ಬರೆದಿರುವ ಅವರ ಕಾದಂಬರಿಗಳ ಪ್ರತಿ ಪಾತ್ರದಲ್ಲಿಯೂ ಶ್ರೀಧರ್ ಪರಕಾಯ ಪ್ರವೇಶ ಮಾಡಿದ್ದಾರೆ. ಕನ್ನಡ ಸಾರಸ್ವತ ಲೋಕಕ್ಕೆ ಅವರ ಕೊಡುಗೆ ಅಪಾರ. ಕಾಲೇಜ್‌ನ ವಿದ್ಯಾಂಗ ಕುಲಸಚಿವರಾಗಿದ್ದರೂ, ತನ್ನ ಸರಳತೆಯನ್ನು ಎಂದಿಗೂ ಅವರು ಮರೆತವರಲ್ಲ. ಪುತ್ತೂರಿನಲ್ಲಿದ್ದು ಸಾಹಿತ್ಯಕ್ಕೆ ಜ್ಞಾನ ಪೀಠ ಪ್ರಶಸ್ತಿ ಪಡೆದಿರುವ ಡಾ. ಕೋಟ ಶಿವರಾಮ ಕಾರಂತರ ಸಾಲಿಗೆ ಇದೀಗ ಅವರು ಸೇರಿಕೊಂಡಿದ್ದಾರೆ ಎಂದರು.

ಪುತ್ತೂರು ಕರ್ನಾಟಕ ಸಂಘದ ಅಧ್ಯಕ್ಷ ಬಿ. ಪುರಂದರ ಭಟ್, ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕೋಶಾಧ್ಯಕ್ಷ ಬಿ. ಐತಪ್ಪ ನಾಯ್ಕ್ ಶುಭ ಹಾರೈಸಿದರು. ಈ ಸಂದರ್ಭ ಡಾ.ಎಚ್.ಜಿ. ಶ್ರೀಧರ್ ಅವರ ಬಗೆಗಿನ 'ಸಿರಿಗಂಧ' ಕೃತಿಯನ್ನು ಲೋಕಾರ್ಪಣೆಗೊಳಿಸಲಾಯಿತು. ಕೃತಿಯ ಸಂಪಾದಕ ರಾಕೇಶ್ ಕಮ್ಮಜೆ ಕೃತಿಯ ಬಗ್ಗೆ ಮಾತನಾಡಿದರು.

ಪತ್ರಕರ್ತ ಶಿವಪ್ರಸಾದ್ ಸ್ವಾಗತಿಸಿ, ಅರುಣ್ ಕಿರಿಮಂಜೇಶ್ವರ ವಂದಿಸಿದರು. ಸುಷ್ಮಾ ಸದಾಶಿವ್ ಕಾರ್ಯಕ್ರಮ ನಿರ್ವಹಿಸಿದರು. ಪುತ್ತೂರು ವಿವೇಕಾನಂದ ಕಾಲೇಜ್‌ನ ವಿಶ್ರಾಂತ ಪ್ರಾಂಶುಪಾಲ ಡಾ. ಎಚ್. ಮಾಧವ ಭಟ್ ಅಭಿನಂದನಾ ನುಡಿಗಳನ್ನಾಡಿದರು.

ಸುತ್ತ ಮುತ್ತ

ಉಚಿತ ಪಡಿತರಕ್ಕೆ ಅರ್ಜಿ ಆಹ್ವಾನ

ಕಾಸರಗೋಡು: ಟ್ರೋಲಿಂಗ್ ನಿಷೇಧದಿಂದ ಕೆಲಸ ಕಳೆದುಕೊಂಡ ಮೀನುಗಾರಿಕಾ ದೋಣಿಗಳಲ್ಲಿ ಕಾರ್ಯ ನಿರ್ವಹಿಸುವ ಮೀನುಗಾರರಿಗೆ ಮತ್ತು ಪೀಲಿಂಗ್ ಶೆಡ್‌ಗಳಲ್ಲಿ ಕೆಲಸ ಮಾಡುವ ಮಿತ್ರ ಮೀನುಗಾರರಿಗೆ ಉಚಿತ ಪಡಿತರ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಯನ್ನು ಜೂ.15ರೊಳಗೆ ತೃಕರೀಪುರ, ಕಾಞಂಗಾಡು, ಕಾಸರಗೋಡು ಮತ್ತು ಕುಂಬಳೆ ಮತ್ಸ್ಯ ಭವನದ ಕಚೇರಿಗಳಿಗೆ ಆಧಾರ್ ಕಾರ್ಡ್ ಪ್ರತಿಯೊಂದಿಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ 04672202537 ಕರೆ ಮಾಡಬಹುದು.

ಭಾರತ ಜನಗಣತಿ 2027 ರಸಪ್ರಶ್ನೆ

ಕಾಸರಗೋಡು: ಭಾರತ ಜನಗಣತಿ 2027ರ ಭಾಗವಾಗಿ ಜಿಲ್ಲಾಡಳಿತ ಮತ್ತು ಜಿಲ್ಲಾ ಮಾಹಿತಿ ಕಚೇರಿ ಜಂಟಿಯಾಗಿ ಕಾಸರಗೋಡು ಜಿಲ್ಲೆಯ ಸರಕಾರಿ ನೌಕರರಿಗಾಗಿ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸುತ್ತಿವೆ. ಸ್ಪರ್ಧೆಯನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಉದ್ಘಾಟಿಸಲಿದ್ದಾರೆ. ಸ್ಪರ್ಧೆಯು ಜೂ.12ರಂದು ಬೆಳಗ್ಗೆ 11 ಗಂಟೆಗೆ ವಿದ್ಯಾನಗರ ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ 04994 255145 ಕರೆ ಮಾಡಬಹುದು.

ಜೂ.13ರಂದು ಕ್ಯಾಂಪ್ಕೋ ಸದಸ್ಯ ಬೆಳೆಗಾರರ ಸಭೆ

ಪೆರ್ಲ: ಕ್ಯಾಂಪ್ಕೋ ನಿಯಮಿತ ಮಂಗಳೂರು ಇದರ ಬದಿಯಡ್ಕ, ನೀರ್ಚಾಲು ಹಾಗೂ ಪೆರ್ಲ ಶಾಖೆಗಳನ್ನೊಳಗೊಂಡ ಸದಸ್ಯ ಬೆಳೆಗಾರರ ಸಭೆಯು ಪೆರ್ಲ ಇಡಿಯಡ್ಕ ಶ್ರೀ ದುರ್ಗಾಪರಮೇಶ್ವರೀ (ಉಳ್ಳಾಲ್ತಿ) ವಿಷ್ಣುಮೂರ್ತಿ ದೇವಸ್ಥಾನದ ಸಭಾಭವನದಲ್ಲಿ ಜೂ.13ರಂದು ಬೆಳಗ್ಗೆ 10.30ಕ್ಕೆ ಜರಗಲಿದೆ. ಬೆಳಗ್ಗೆ ಹಿರಿಯ ರೈತ ಸದಸ್ಯರಿಂದ ಉದ್ಘಾಟನೆ ನೆರವೇರಲಿದೆ. ಕ್ಯಾಂಪ್ಕೋ ಅಧ್ಯಕ್ಷ ಎಸ್.ಆರ್.ಸತೀಶ್ಚಂದ್ರ ಅಧ್ಯಕ್ಷತೆ ವಹಿಸುವರು. ಕ್ಯಾಂಪ್ಕೋ ಉಪಾಧ್ಯಕ್ಷ ಪದ್ಮರಾಜ ಪಟ್ಟಾಜೆ, ವ್ಯವಸ್ಥಾಪಕ ನಿರ್ದೇಶಕ ಡಾ.ಬಿ.ವಿ.ಸತ್ಯನಾರಾಯಣ, ನಿರ್ದೇಶಕ ವೆಂಕಟ್ರಮಣ ಭಟ್ ವೈ. ಉಪಸ್ಥಿತರಿರುವರು. ಸಭೆಯಲ್ಲಿ ಸದಸ್ಯ ಬೆಳೆಗಾರರು ಭಾಗವಹಿಸಬೇಕೆಂದು ಪ್ರಕಟಣೆಯಲ್ಲಿ ವಿನಂತಿಸಲಾಗಿದೆ.

ನಾಳೆ ಅಡೂರು ಹೈಯರ್ ಸೆಕೆಂಡರಿ ಶಾಲೆಯಲ್ಲಿ ಶಿಕ್ಷಕರ ನೇಮಕಾತಿ

ಕಾಸರಗೋಡು: ಅಡೂರು ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಹೈಯರ್ ಸೆಕೆಂಡರಿ ವಿಭಾಗದಲ್ಲಿ ಅರೇಬಿಕ್ ಮತ್ತು ಹಿಂದಿ ವಿಷಯಗಳಿಗೆ ಶಿಕ್ಷಕರನ್ನು ನೇಮಿಸುವ ನಿಟ್ಟಿನಲ್ಲಿ ಸಂದರ್ಶನವು ಜೂ.11ರಂದು ಬೆಳಗ್ಗೆ 10 ಗಂಟೆಗೆ ಶಾಲಾ ಕಚೇರಿಯಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9633808765 ಕರೆ ಮಾಡಬಹುದು.

ಜೂ.15ರಂದು ಶಿಕ್ಷಕರ ಹುದ್ದೆಗೆ ಸಂದರ್ಶನ

ಕಾಸರಗೋಡು: ಪೆರಿಯದಲ್ಲಿರುವ ಕಾಸರಗೋಡು ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಶಿಕ್ಷಕರ ನೇಮಕಾತಿ ನಡೆಯಲಿದೆ. ಜೂ.15ರಂದು ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಷಯಗಳಿಗೆ ಮತ್ತು ಜೂ.16ರಂದು ಗಣಿತ ಮತ್ತು ಇಂಗ್ಲಿಷ್ ವಿಷಯಗಳಿಗೆ ಸಂದರ್ಶನ ನಡೆಯಲಿದೆ. ಸಂಬಂಧಿತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಶೇಕಡಾ 55ಕ್ಕಿಂತ ಕಡಿಮೆಯಿಲ್ಲದ ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಸಂದರ್ಶನಕ್ಕೆ ಹಾಜರಾಗುವವರು ಬಯೋಡೇಟಾ, ಶೈಕ್ಷಣಿಕ ಮತ್ತು ಅನುಭವ ಪ್ರಮಾಣಪತ್ರಗಳು, ಮೂಲ ಮತ್ತು ಪ್ರತಿಗಳೊಂದಿಗೆ ಬೆಳಗ್ಗೆ 10 ಗಂಟೆಗೆ ಪಾಲಿಟೆಕ್ನಿಕ್ ಕಾಲೇಜು ಕಚೇರಿಯಲ್ಲಿ ಹಾಜರಾಗಬೇಕು. ಹೆಚ್ಚಿನ ವಿವರಗಳಿಗೆ 0467 2234020 ಕರೆ ಮಾಡಬಹುದು.

ವಿದ್ಯುತ್ ತಂತಿ, ಕಂಬದ ಬಳಿ ಫ್ಲೆಕ್ಸ್ ಅಳಡಿಸದಂತೆ ಸೂಚನೆ

ಕಾಸರಗೋಡು: ಜಿಲ್ಲೆಯಲ್ಲಿ ಕೆಎಸ್‌ಇಬಿಯ ವಿದ್ಯುತ್ ವಿತರಣಾ ಜಾಲಗಳಲ್ಲಿ ಅಥವಾ ಹತ್ತಿರ ಬ್ಯಾನರ್‌ಗಳು, ಫ್ಲೆಕ್ಸ್ ಬೋರ್ಡ್‌ಗಳು ಮತ್ತು ಹೋರ್ಡಿಂಗ್‌ಗಳನ್ನು ಅಳವಡಿಸಬಾರದು ಎಂದು ಕಾಸರಗೋಡು ವಿದ್ಯುತ್ ಸರ್ಕಲ್‌ನ ಉಪ ಮುಖ್ಯ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಸರಗೋಡು ಜಿಲ್ಲಾ ಪಂಚಾಯತ್ ನೇತೃತ್ವದಲ್ಲಿ ಮಹತ್ವದ ಜನಸ್ನೇಹಿ ಕಾರ್ಯಚಟುವಟಿಕೆಗೆ ಚಾಲನೆ

ಜಿಲ್ಲಾಸ್ಪತ್ರೆಯಲ್ಲಿ ರೋಗಿಗಳಿಗೆ ಬೆಳಗ್ಗಿನ ಉಪಹಾರ ಆರಂಭ

ಕಾಸರಗೋಡು: ಜಿಲ್ಲಾ ಪಂಚಾಯತ್‌ಯೋಜನೆಯನ್ವಯ ಕಾಞಂಗಾಡು ಚೆಮ್ಮಟ್ಟಂವಯಲ್‌ನಲ್ಲಿರುವ ಕಾಸರಗೋಡು ಜಿಲ್ಲಾಸ್ಪತ್ರೆಯಲ್ಲಿ ರೋಗಿಗಳಿಗೆ ಬೆಳಗ್ಗಿನ ಆಹಾರ ವಿತರಣೆಗೆ ಚಾಲನೆ ನೀಡಲಾಯಿತು. ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಜಿಲ್ಲಾ ಪಂಚಾಯತ್‌ವೊಂದು ಜಿಲ್ಲಾಸ್ಪತ್ರೆಯಲ್ಲಿ ದಾಖಲಾಗುವ ರೋಗಿಗಳಿಗೆ ಬೆಳಗ್ಗಿನ ಉಪಹಾರ ವಿತರಿಸುತ್ತಿದ್ದು, ಮಾದರಿ ಯೋಜನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.



ಜಿಲ್ಲೆಯ ಅಭಿವೃದ್ಧಿ ಕ್ಷೇಮ ಚಟುವಟಿಕೆಗಳನ್ನು ಜಾರಿಗೊಳಿಸುವ ಸಂಬಂಧ ವಿವಿಧ ವಲಯಗಳಲ್ಲಿ ಕಾರ್ಯಾಚರಿಸುವವರೊಂದಿಗೆ ಜಿ.ಪಂ. ಅಧ್ಯಕ್ಷ ಸಾಬು ಅಬ್ರಹಾಂ ನೇತೃತ್ವದಲ್ಲಿ ಸಲಹೆ ಸೂಚನೆಗಳನ್ನು ಸ್ವೀಕರಿಸಲಾಗಿತ್ತು. ಈ ಯೋಜನೆಯ ಆಧಾರದಲ್ಲಿ ಬೆಳಗ್ಗಿನ ಉಪಹಾರ ವ್ಯವಸ್ಥೆಯನ್ನು ಆರಂಭಿಸಲಾಗಿದೆ. ಇದಕ್ಕಾಗಿ ಜಿ.ಪಂ.ನ ಸ್ವಂತ ಫಂಡ್‌ನಿಂದ 20 ಲಕ್ಷ ರೂ. ಮೀಸಲಿಡಲಾಗಿದೆ. ವಿವಿಧ ಮಾನದಂಡಗಳ ಪ್ರಕಾರ ಕುಟುಂಬಶ್ರೀ ಘಟಕಗಳಿಂದ ಕೊಟೇಷನ್ ಆಹ್ವಾನಿಸಿ ಈ ಮಹಾತ್ವಾಕಾಂಕ್ಷೆಯ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಕಾಞಂಗಾಡು ನಗರಸಭಾ ಆಡಳಿತ ರೋಗಿಗಳಿಗೆ ಬೆಳಗ್ಗಿನ ಉಪಹಾರ ವಿತರಣೆ ಹೊಣೆಗಾರಿಕೆ ವಹಿಸಿಕೊಂಡಿದೆ. ಕಣ್ಣಿಗಿ ಕುಟುಂಬಶ್ರೀ ಘಟಕಕ್ಕೆ ದೈನಂದಿನ ಚಟುವಟಿಕೆಗಳ ಉಸ್ತುವಾರಿ ವಹಿಸಿಕೊಡಲಾಗಿದೆ. ಈ ಮೂಲಕ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರಲು ವಿವಿಧ ರೂಪುರೇಷೆಗಳನ್ನು ಸಿದ್ಧಪಡಿಸಲಾಗಿದೆ.

ಶಾಸಕರಿಂದ ಯೋಜನೆ ಉದ್ಘಾಟನೆ

ಜಿಲ್ಲಾಸ್ಪತ್ರೆಯಲ್ಲಿ ಬೆಳಗ್ಗಿನ ಉಪಹಾರ ವಿತರಣೆ ಯೋಜನೆಯನ್ನು ಕಾಞಂಗಾಡು ಶಾಸಕ ಗೋವಿಂದನ್ ಪಳ್ಳಿಕಾಪಿಲ್ ಸೋಮವಾರ ಉದ್ಘಾಟಿಸಿ ಮಾತನಾಡಿ, ಜಿ.ಪಂ. ಈ ಸಾಧನೆಯನ್ನು ಪ್ರಶಂಸಿಸಿದರು. ಮಾತ್ರವಲ್ಲದೆ ಇಂತಹ ಜನಸ್ನೇಹಿ ಯೋಜನೆ ಮೂಲಕ ಜಿ.ಪಂ. ಆಡಳಿತವು ಜನರ ವಿಶ್ವಾಸ ಗಳಿಸುವಲ್ಲಿ ಮಹತ್ವದ ಹೆಜ್ಜೆಯನ್ನಿರಿಸಿದೆ ಎಂದರು.

ಆಸ್ಪತ್ರೆಯಲ್ಲಿ ದಾಖಲಾಗುವ ನೂರರಷ್ಟು ಮಂದಿ ರೋಗಿಗಳಿಗೆ ದಿನಂಪ್ರತಿ ಯೋಜನೆಯು ಪ್ರಯೋಜನಕಾರಿಯಾಗಿದೆಯೆಂದೂ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ನೆರವು ಕಲ್ಪಿಸುವುದು ಉದ್ದೇಶ

ಜಿಲ್ಲಾಸ್ಪತ್ರೆಯಲ್ಲಿ ಬಹುತೇಕವಾಗಿ ಆರ್ಥಿಕ ಹಿಂದುಳಿದಿರುವ ರೋಗಿಗಳು ದಾಖಲಾಗುತ್ತಿದ್ದು ಅವರಿಗೆ ಸಾಧ್ಯವಿರುವಷ್ಟು ನೆರವು ಕಲ್ಪಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದು ಶಾಸಕರು ತಿಳಿಸಿದರು.

ಸಮಾರಂಭದಲ್ಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಅಧ್ಯಕ್ಷತೆ ವಹಿಸಿದ್ದರು. ಕಾಞಂಗಾಡು ನಗರಸಭಾ ಅಧ್ಯಕ್ಷ ವಿ.ವಿ.ರಮೇಶನ್, ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಕೆ.ಕೆ. ಸೋಯಾ, ಸ್ಥಾಯೀ ಸಮಿತಿ ಅಧ್ಯಕ್ಷರಾದ ಇರ್ಫಾನ ಇಕ್ಬಾಲ್, ಎಂ. ಮನು, ಕೆ.ಕೃಷ್ಣನ್, ರೀನಾ ಥೋಮಸ್, ಜಿಲ್ಲಾ ಪಂಚಾಯತ್ ಸದಸ್ಯರಾದ ಕೆ.ಸಬೀಶ್, ಡಾ.ಸರೀನಾ ಸಲಾಂ, ರಾಧಿಕಾ ಟಿ.ವಿ., ಜಿಲ್ಲಾಸ್ಪತ್ರೆ ಆರ್‌ಎಂಒ ಡಾ.ಬಿ. ಶಹರ್‌ಬಾನ, ಸೂಪರಿಂಟೆಂಡೆಂಟ್ ಲಲಿತಾಂಬಿಕಾ ಮೊದಲಾದವರು ಮಾತನಾಡಿದರು. ಜಿಲ್ಲಾಸ್ಪತ್ರೆ ಸೂಪರಿಂಟೆಂಡೆಂಟ್ ಎಂ.ಪಿ.ಜೀಜಾ ಸ್ವಾಗತಿಸಿ, ಪ್ರಿಯಾ ವಂದಿಸಿದರು.

ನೂರಾರು ರೋಗಿಗಳಿಗೆ ಯೋಜನೆ ಅನುಕೂಲ

ಕಾಞಂಗಾಡಿನಲ್ಲಿರುವ ಜಿಲ್ಲಾಸ್ಪತ್ರೆಗೆ ದೈನಂದಿನ ನೂರಾರು ಮಂದಿ ರೋಗಿಗಳು ಆಗಮಿಸಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಾತ್ರವಲ್ಲದೆ ಕೆಲವೊಂದು ಅತ್ಯಾಧುನಿಕ ಮಾದರಿಯ ಚಿಕಿತ್ಸಾ ಪದ್ಧತಿಗಳು ಈ ಆಸ್ಪತ್ರೆಯಲ್ಲಿ ಲಭ್ಯವಿದ್ದು, ರೋಗಿಗಳಿಗೆ ಪ್ರಯೋಜನವಾಗುತ್ತಿದೆ. ಜಿಲ್ಲೆಯಲ್ಲಿ ಸರಕಾರಿ ವಲಯದ ಪ್ರಮುಖ ಆಸ್ಪತ್ರೆ ಎಂಬ ಪ್ರಸಿದ್ಧಿ ಪಡೆದಿರುವ ಜಿಲ್ಲಾಸ್ಪತ್ರೆಯಲ್ಲಿ ಜನರಲ್ ಮೆಡಿಸಿನ್ ಸಹಿತ ವಿವಿಧ ರೀತಿಯ ಶಸ ಚಿಕಿತ್ಸೆಗಳು ಕೂಡಾ ರೋಗಿಗಳಿಗೆ ದೊರಕುತ್ತಿವೆ. ಜಿಲ್ಲಾ ಪಂಚಾಯತ್ ಪ್ರತೀವರ್ಷ ಜಿಲ್ಲಾಸ್ಪತ್ರೆಯ ಅಭಿವೃದ್ಧಿಗಾಗಿ ಅಗತ್ಯದ ಅನುದಾನವನ್ನು ಒದಗಿಸುತ್ತಿದ್ದು, ಈ ಮೂಲಕ ರೋಗಿಗಳಿಗೆ ಸಕಲ ವ್ಯವಸ್ಥೆಗಳನ್ನು ಒದಗಿಸುವ ಗುರಿ ಹೊಂದಲಾಗಿದೆ.

ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಯ ಕಲಾ ವೇದಿಕೆಯ ಉದ್ಘಾಟನೆ



ಕಾಸರಗೋಡು: ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆ ಕಾಸರಗೋಡು ಇವರ ವತಿಯಿಂದ ಶ್ರೀ ಗಿರಿಸದನ ಚೂರಿಪ್ಪಳ್ಳ ನೆಲ್ಲಿಕಟ್ಟೆಯಲ್ಲಿ ಸೋಮವಾರ ಪೊಟ್ಟಿಪ್ಪಲ ಆಶುಕವಿ ಕೀರ್ತಿಶೇಷ ನಾರಾಯಣ ಭಟ್ ಅವರಿಗೆ ಅವರ ಸ್ವಗೃಹದಲ್ಲಿ ನುಡಿನಮನ ಕಾರ್ಯಕ್ರಮ ಮತ್ತು ನೂತನ ಕಲಾ ವೇದಿಕೆಯ ಉದ್ಘಾಟನಾ ಸಮಾರಂಭ ಜರಗಿತು.

222ನೇ ವೈವಿಧ್ಯಮಯ ಸಾಹಿತ್ಯ ಗಾನ ನೃತ್ಯ ವೈಭವ ಕಾರ್ಯಕ್ರಮ ನಡೆಯಿತು. ಸಂಸ್ಥೆಯ ಕೋಶಾಧಿಕಾರಿ ಡಾ.ವೆಂಕಟಗಿರೀಶ್ ಉದ್ಘಾಟಿಸಿದರು. ಡಾ.ವಾಣಿಶ್ರೀ ಅವರ ಸಾಹಿತ್ಯ ಪ್ರಸ್ತುತಿಯೊಂದಿಗೆ ನಡೆದ ಈ ಕಾರ್ಯಕ್ರಮದಲ್ಲಿ ಪೊಟ್ಟಿಪ್ಪಲ ಆಶು ಕವಿ ನಾರಾಯಣ ಭಟ್‌ಗೆ ನುಡಿನಮನ ಸಲ್ಲಿಸಲಾಯಿತು.

ಅಚ್ಯುತ ಭಟ್ ಹಾಗೂ ದಿವಾಕರ ಕಾಸರಗೋಡು ಅವರು ಗಡಿನಾಡಿನಲ್ಲಿ ಕನ್ನಡ ಭಾಷೆಯ ಉಳಿವಿಗಾಗಿ ನಾರಾಯಣ ಭಟ್ ಅವರ ಹೋರಾಟ ಮತ್ತು ಸಾಧನೆಗಳನ್ನು ಶ್ಲಾಘಿಸಿದರು.

ಸಂಸ್ಥೆಯ ಸ್ಥಾಪಕಾಧ್ಯಕ್ಷೆ ಡಾ.ವಾಣಿಶ್ರೀ ಕಾಸರಗೋಡು ಮಾತನಾಡಿದರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ದಿವಾಕರ ಕಾಸರಗೋಡು ಹಾಗೂ ಭವಿತ್ ಅವರಿಂದ ಗಾನ ವೈಭವ ನಡೆಯಿತು. ಸಮಾರೋಪ ಸಮಾರಂಭದ ಉದ್ಘಾಟನೆಯಲ್ಲಿ ಕೃಷ್ಣ ಅನಂತಪುರ, ಅಚ್ಯುತ ಭಟ್, ಚಂದ್ರಾವತಿ ಮತ್ತಿತರ ಗಣ್ಯರು ದೀಪ ಬೆಳಗಿಸಿ ಉದ್ಘಾಟಿಸಿದರು. ನೃತ್ಯ ವೈಭವ ಕಾರ್ಯಕ್ರಮ ನಡೆಸಿಕೊಟ್ಟ ಲಕ್ಷ್ಮೀಶ್, ಹರ್ಷಿತ್, ಚಂದ್ರ, ಪ್ರಖ್ಯಾತ್, ಪ್ರಣಮ್ಯ ಮೊದಲಾದ ಕಲಾವಿದರಿಗೆ ಸಂಸ್ಥೆಯ ವತಿಯಿಂದ ಪುಸ್ತಕ ಹಾಗೂ ದೇವರ ಭಾವಚಿತ್ರ ಕೊಟ್ಟು ಗೌರವಿಸಲಾಯಿತು.

ಅಜಾನೂರು ಆರೋಗ್ಯ ಕೇಂದ್ರದಲ್ಲಿ ಆಧುನಿಕ ಡಯಾಲಿಸಿಸ್ ವ್ಯವಸ್ಥೆ ಆರಂಭ



ಕಾಸರಗೋಡು: ಅಜಾನೂರು ಗ್ರಾಮ ಪಂಚಾಯತ್‌ನಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ ಡಯಾಲಿಸಿಸ್ ಕೇಂದ್ರ ಕಾರ್ಯನಿರ್ವಹಿಸಲು ಪ್ರಾರಂಭಿಸಿದೆ.

ಸ್ಥಳೀಯ ಮಟ್ಟದಲ್ಲಿ ಮೂತ್ರಪಿಂಡ ರೋಗಿಗಳಿಗೆ ಗುಣಮಟ್ಟದ ವೈದ್ಯಕೀಯ ಸೇವೆಗಳನ್ನು ಒದಗಿಸುವ ಗುರಿಯೊಂದಿಗೆ ಈ ಯೋಜನೆಯನ್ನು ಜಾರಿಗೆ ತರಲಾಯಿತು. ಹಿಂದೂಸ್ತಾನ್ ಏರೋನಾಟಿಕಲ್ಸ್ ಲಿಮಿಟೆಡ್ (ಎಚ್‌ಎಎಲ್) ಸಿಎಸ್‌ಆರ್ ನಿಧಿಯಿಂದ ಮತ್ತು ಪಂಚಾಯತ್‌ನ ಸ್ವಂತ ನಿಧಿಯಿಂದ 1.10 ಕೋಟಿ ರೂ.ಗಳ ಕೊಡುಗೆಯೊಂದಿಗೆ ಈ ಯೋಜನೆ ಅನುಷ್ಠಾನಗೊಳಿಸಲಾಯಿತು.

ಡಯಾಲಿಸಿಸ್ ಉಪಕರಣಗಳಿಗೆ ಸಿಎಸ್‌ಆರ್ ನಿಧಿ ಬಳಸಲಾಗಿದೆ. ಅಜಾನೂರು ಕಡಲ ತೀರದಲ್ಲಿರುವ ಕುಟುಂಬ ಆರೋಗ್ಯ ಕೇಂದ್ರದ ಒಂದು ಭಾಗವನ್ನು ನವೀಕರಿಸುವ ಮೂಲಕ ಡಯಾಲಿಸಿಸ್ ಘಟಕವನ್ನು ಸ್ಥಾಪಿಸಲಾಯಿತು. ನಿರ್ಮಾಣ ಕಾರ್ಯವನ್ನು ನಿರ್ಮಿತಿ ಕೇಂದ್ರವು ನಡೆಸಿದೆ. ಗ್ರಾ.ಪಂ. ನಿಧಿಯಿಂದ 8 ಲಕ್ಷ ರೂ.ಗಳ ವೆಚ್ಚದಲ್ಲಿ ನವೀಕರಣ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಚಿಕಿತ್ಸೆಗಾಗಿ ದೂರದ ಸ್ಥಳಗಳಿಗೆ ಪ್ರಯಾಣಿಸಬೇಕಾಗಿದ್ದ ಮೂತ್ರಪಿಂಡ ರೋಗಿಗಳಿಗೆ ಈ ಯೋಜನೆ ಅನುಲಕೂಲವಾಇದೆ..

ರೋಗಿಗಳಿಗೆ ಸುರಕ್ಷಿತ, ಆರಾಮದಾಯಕ ವಾತಾವರಣವನ್ನು ಖಚಿತಪಡಿಸಿಕೊಳ್ಳಲು ಈ ಕೇಂದ್ರವನ್ನು ಸ್ಥಾಪಿಸಲಾಗಿದೆ. ಕೇಂದ್ರವು 8 ಡಯಾಲಿಸಿಸ್ ಹಾಸಿಗೆಗಳನ್ನು ಹೊಂದಿದೆ. ಇದರಲ್ಲಿ ಒಂದನ್ನು ತುರ್ತು ಪರಿಸ್ಥಿತಿಗಳಿಗೆ ಬ್ಯಾಕಪ್ ವ್ಯವಸ್ಥೆಯಾಗಿ ಬಳಸಲಾಗುತ್ತದೆ. ಪ್ರಸ್ತುತ 4 ರೋಗಿಗಳು ಕೇಂದ್ರದ ಸೇವೆ ಪಡೆಯುತ್ತಿದ್ದಾರೆ. ಸೇವಾ ಶುಲ್ಕವು ಪ್ರತಿ ಡಯಾಲಿಸಿಸ್‌ಗೆ 100 ರೂ. ಆಗಿದೆ.

ಮಧೂರು ಶ್ರೀ ಕಾಳಿಕಾಂಬಾ ಮಠದ ಆಡಳಿತ ಸಮಿತಿ ಮಹಾಸಭೆ

ಕಾಸರಗೋಡು: ಮಧೂರು ಶ್ರೀ ಕಾಳಿಕಾಂಬಾ ಮಠದ ಆಡಳಿತ ಸಮಿತಿ ಅಧ್ಯಕ್ಷರಾಗಿ ಎಂ. ಪುರುಷೋತ್ತಮ ಆಚಾರ್ಯ ಕಂಬಾರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಮಹಾಸಭೆಯಲ್ಲಿ ಈ ಆಯ್ಕೆ ಪ್ರಕ್ರಿಯೆ ನಡೆಯಿತು. ಉಪಾಧ್ಯಕ್ಷರಾಗಿ ಕೆ. ಜಗದೀಶ ಆಚಾರ್ಯ ಕಂಬಾರು, ಪುರುಷೋತ್ತಮ ಆಚಾರ್ಯ ನೆಕ್ರಾಜೆ, ಜನಾರ್ದನ ಆಚಾರ್ಯ ಬಜಕೂಡ್ಲು, ಸತೀಶ ಆಚಾರ್ಯ ಸೋಂಕಾಲು, ಪ್ರಧಾನ ಕಾರ್ಯದರ್ಶಿಯಾಗಿ ಎ. ನಿರಂಜನ ಆಚಾರ್ಯ ಮನ್ನಿಪ್ಪಾಡಿ, ಕಾರ್ಯದರ್ಶಿಗಳಾಗಿ ದೇವದಾಸ ಆಚಾರ್ಯ ದೇಶಮಂಗಲ, ತುಕಾರಾಮ ಆಚಾರ್ಯ ಕೆರೆಮನೆ, ಶೀತಲ್ ಆಚಾರ್ಯ ಕಾಸರಗೋಡು, ಲವ ಆಚಾರ್ಯ ಕೊಲ್ಲಂಗಾನ, ಕೋಶಾಧಿಕಾರಿಯಾಗಿ ಸುಂದರ ಆಚಾರ್ಯ ಬದಿಯಡ್ಕ ಆಯ್ಕೆಯಾದರು. ಆಂತರಿಕ ಲೆಕ್ಕ ಪರಿಶೋಧಕರಾಗಿ ಸಚಿನ್ ಆಚಾರ್ಯ ಬೋವಿಕ್ಕಾನ, ಭರತ್ ಆರ್. ಆಚಾರ್ಯ ಕಾಸರಗೋಡು, ಅರುಣ್ ರಾಜ್ ಆಚಾರ್ಯ ಮಧೂರು, ಬಾಲರಾಜ್ ಆಚಾರ್ಯ ಮಧೂರು, ಸಲಹಾ ಸಮಿತಿಯ ಅಧ್ಯಕ್ಷರಾಗಿ ವೈ. ಧರ್ಮೇಂದ್ರ ಆಚಾರ್ಯ ಮಧೂರು, ಸಂಚಾಲಕರಾಗಿ ಕೆ.ಪ್ರಭಾಕರ ಆಚಾರ್ಯ ಕೋಟೆಕಾರು, ಸಮಿತಿಯ ಸದಸ್ಯರಾಗಿ ಎನ್. ಪರಮೇಶ್ವರ ಆಚಾರ್ಯ ನೀರ್ಚಾಲು, ಜ್ಯೋತಿಷಿ ಜನಾರ್ದನ ಆಚಾರ್ಯ ಮವ್ವಾರು, ಪಿ. ಜನಾರ್ದನ ಆಚಾರ್ಯ ಕೊಲ್ಯ, ತಾರಾನಾಥ ಆಚಾರ್ಯ ಮಧೂರು, ಭವಾನಿಶಂಕರ ಆಚಾರ್ಯ ಮೂಲ್ಕಿ, ಚಂದ್ರಶೇಖರ ಆಚಾರ್ಯ ಬೋವಿಕ್ಕಾನ ನೇಮಕಗೊಂಡಿದ್ದಾರೆ.

ಕಾರ್ಯಕಾರಿ ಸಮಿತಿಗೆ ಮುರಳೀಧರ ಆಚಾರ್ಯ ಗುಡ್ಡೆಮನೆ ಪುತ್ತೂರು, ಪಿ. ಮಧುಸೂದನ ಆಚಾರ್ಯ ಕಾಸರಗೋಡು, ನಾಗೇಶ ಆಚಾರ್ಯ ಪುತ್ತಿಗೆ, ನಾರಾಯಣ ಆಚಾರ್ಯ ಕಂಬಾರು, ಬಾಲಕೃಷ್ಣ ಆಚಾರ್ಯ ಪುತ್ತಿಗೆ, ವೆಂಕಟ್ರಮಣ ಆಚಾರ್ಯ ಮೀಪುಗುರಿ, ರಾಜೇಶ್ ಆಚಾರ್ಯ ಮನ್ನಿಪ್ಪಾಡಿ, ವರಪ್ರಸಾದ್ ಆಚಾರ್ಯ ಕಂಬಾರು, ಮೌನೇಶ್ ಆಚಾರ್ಯ ಜೆ.ಪಿ. ನಗರ, ಕಾರ್ತಿಕ್ ಆಚಾರ್ಯ ನೀರ್ಚಾಲು, ಹರ್ಷ ಆಚಾರ್ಯ ಮಧೂರು, ಲೋಹಿತ್ ಆಚಾರ್ಯ ಮಧೂರು, ಲೋಕೇಶ್ ಎಂ.ಬಿ. ಆಚಾರ್ಯ ಕಂಬಾರು ಅವರನ್ನು ಕಾರ್ಯಕಾರಿ ಆಯ್ಕೆ ಮಾಡಲಾಯಿತು. ಮಠದ ವ್ಯಾಪ್ತಿಗೆ ಒಳಪಡುವ 23 ಪ್ರಾಂತ್ಯಗಳ ಪ್ರಮುಖರನ್ನು ಆರಿಸಲಾಯಿತು. ತಿಲಕೇಶ ಆಚಾರ್ಯ (ಮಧೂರು), ಯೋಗೀಶ್ ಆಚಾರ್ಯ (ಕೂಡ್ಲು), ಸುಧೀಶ್ ಆಚಾರ್ಯ (ಕಾಸರಗೋಡು), ರಘುರಾಮ ಆಚಾರ್ಯ (ಕಂಬಾರು), ಜ್ಞಾನೇಶ ಆಚಾರ್ಯ (ನೀರ್ಚಾಲು), ಸುರೇಶ್ ಆಚಾರ್ಯ ನೆಕ್ರಾಜೆ (ಬದಿಯಡ್ಕ), ಶಿವಪ್ರಸಾದ್ ಆಚಾರ್ಯ (ಮವ್ವಾರು), ಬಾಲಸುಬ್ರಹ್ಮಣ್ಯ ಆಚಾರ್ಯ (ಪುತ್ತಿಗೆ), ಯಾದವ ಆಚಾರ್ಯ (ಮಾಯಿಪ್ಪಾಡಿ), ನಾಗೇಶ ಆಚಾರ್ಯ (ಸೀತಾಂಗೋಳಿ), ಸೋಮನಾಥ ಆಚಾರ್ಯ (ಕುಂಬಳೆ), ನವೀನ್ ಚಂದ್ರ ಆಚಾರ್ಯ (ಮಂಗಲ್ಪಾಡಿ), ಗೋಪಾಲಕೃಷ್ಣ ಆಚಾರ್ಯ ದುರ್ಗಿಪಳ್ಳ (ಮಂಜೇಶ್ವರ), ಸೋಮಶೇಖರ ಆಚಾರ್ಯ (ಕೋಟೆಕಾರು), ಪ್ರಶಾಂತ್ ಆಚಾರ್ಯ (ಮಂಗಳೂರು), ಜಗದೀಶ ಆಚಾರ್ಯ ಕೋಟೂರು (ಬೋವಿಕ್ಕಾನ), ಉದಯ ಆಚಾರ್ಯ (ಮುಳ್ಳೇರಿಯ), ಮಂಜುನಾಥ ಆಚಾರ್ಯ (ಪೆರುವಾಯಿ), ಜನಾರ್ದನ ಆಚಾರ್ಯ (ಪಾಣಾಜೆ), ಯೋಗೀಶ್ ಆಚಾರ್ಯ ಮೊಟ್ಟೆತ್ತಡ್ಕ (ಪುತ್ತೂರು), ಕಿರಣ್ ಆಚಾರ್ಯ ಮೂರೂರು (ಸುಳ್ಯ), ಸೋಮನಾಥ ಆಚಾರ್ಯ (ಪೆರ್ಲ), ದಿನೇಶ್ ಆಚಾರ್ಯ (ಅಡೂರು) ನೇಮಕಗೊಂಡರು.

ಕೊಲ್ಯ ಜನಾರ್ದನ ಆಚಾರ್ಯ ಚುನಾವಣಾ ಅಧಿಕಾರಿಯಾಗಿ ಆಯ್ಕೆ ಪ್ರಕ್ರಿಯೆ ನಡೆಸಿಕೊಟ್ಟರು. ಕೆ. ಪ್ರಭಾಕರ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ಯುವಕ ಸಂಘದ ಅಧ್ಯಕ್ಷ ಮಹೇಶ್ ಆಚಾರ್ಯ ಮಧೂರು, ಮಹಿಳಾ ಸಂಘದ ಅಧ್ಯಕ್ಷೆ ಪುಷ್ಪಲತಾ ಪಿ.ಆಚಾರ್ಯ ನೆಕ್ರಾಜೆ ಇದ್ದರು. ಯೋಗೇಂದ್ರ ಆಚಾರ್ಯ ಪರಕ್ಕಿಲ ಸ್ವಾಗತಿಸಿ, ವರಪ್ರಸಾದ್ ಆಚಾರ್ಯ ವಂದಿಸಿದರು.

ಬಂದಡ್ಕ ಶಾಲೆಯಲ್ಲಿ ಪರಿಸರ ದಿನಾಚರಣೆ

ಕಾಸರಗೋಡು: ಬಂದಡ್ಕ ಜಿಎಚ್‌ಎಸ್ ಶಾಲೆಯಲ್ಲಿ ವಿಶ್ವಪರಿಸರ ದಿನಾಚರಣೆಯನ್ನು ಆಯೋಜಿಸಲಾಯಿತು.



ವಲಯ ಅರಣ್ಯಾಧಿಕಾರಿ ವಿನೋದ್ ಕುಮಾರ್ ಉದ್ಘಾಟಿಸಿದರು. ಪಿಟಿಎ ಅಧ್ಯಕ್ಷ ಪಿ.ವಿ.ಸುರೇಶ್ ಅಧ್ಯಕ್ಷತೆ ವಹಿಸಿದ್ದರು. ಈ ವರ್ಷ ಒಂದನೇ ತರಗತಿಗೆ ಪ್ರವೇಶ ಪಡೆದ ಮೊದಲ ಮಗು ಆರ್ಯವರ್ಧನ್ ಎಂ. ಮತ್ತು ಉದ್ಘಾಟಕರು ಜಂಟಿಯಾಗಿ ಶಾಲಾ ಆವರಣದಲ್ಲಿ ಗಿಡ ನೆಡುವ ಮೂಲಕ ಚಾಲನೆ ನೀಡಿದರು. ಎಸ್‌ಎಫ್‌ಒ ಬಾಬು, ಮಾಜಿ ಪಿಟಿಎ ಅಧ್ಯಕ್ಷ ರಾಧಾಕೃಷ್ಣನ್ ಕೆ., ಪ್ಲಾಟಿನಂ ಜ್ಯುಬಿಲಿ ಕಾರ್ಯಕ್ರಮದ ಸಂಚಾಲಕಿ ವಸಂತಕುಮಾರಿ ಟಿ.ಕೆ., ಎಸ್‌ಪಿಸಿ ಸಿಪಿಒ ಸಂದೀಪ್ ಬಿ.ಎಸ್., ಎನ್‌ಎಸ್‌ಎಸ್ ಸಂಯೋಜಕಿ ಸಂಧ್ಯಾ ಎಂ.ಪಿ., ಬಾಬು, ರಂಜಿತ್ ಶುಭಹಾರೈಸಿದರು. ಶಾಲಾ ಮುಖ್ಯೋಪಾಧ್ಯಾ ರಾಘವ ಎಂ.ಎನ್. ಸ್ವಾಗತಿಸಿ, ಜ್ಯೋತಿಲಕ್ಷ್ಮಿ ವಂದಿಸಿದರು.



ಮಂಜೇಶ್ವರ ತಾಲೂಕಿನ ಧರ್ಮತ್ತಡ್ಕ ಶ್ರೀ ದುರ್ಗಾಪರಮೇಶ್ವರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಎನ್‌ಎಸ್‌ಎಸ್ ಘಟಕದ ನೇತೃತ್ವದಲ್ಲಿ ವಿವಿಧ ಗಿಡಗಳನ್ನು ನೆಡಲಾಯಿತು. ಪ್ರಾಂಶುಪಾಲ ಸತೀಶ್‌ಕುಮಾರ್ ಶೆಟ್ಟಿ, ಶಾಲಾ ಮೆನೇಜರ್ ಎನ್.ಶಂಕರನಾರಾಯಣ ಭಟ್, ನಿವೃತ್ತ ಪ್ರಾಂಶುಪಾಲ ಎನ್. ರಾಮಚಂದ್ರ ಭಟ್, ಎನ್‌ಎಸ್‌ಎಸ್ ಯೋಜನಾಧಿಕಾರಿ ನಿವೇದಿತಾ ಇದ್ದರು.

ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜಿನಲ್ಲಿ ಪರಿಸರ ಸಪ್ತಾಹ ಆಚರಣೆ



ಕಾಸರಗೋಡು: ಉಕ್ಕಿನಡ್ಕದಲ್ಲಿರುವ ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜಿನಿಂದ ಪದವಿ ಪಡೆಯುವ ಮಕ್ಕಳು ಪರಿಸರ ಪ್ರಜ್ಞೆ ಹೊಂದಿರುವ ನಾಗರಿಕರಾಗಬೇಕು ಎಂದು ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಹಾಜಿ ಹೇಳಿದ್ದಾರೆ.

ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜಿನಲ್ಲಿ ಪರಿಸರ ಸಪ್ತಾಹ 2026 ಆಚರಣೆಯನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು. ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಡಾ.ಎ.ಅರುಣ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ವಿಶೇಷ ಅತಿಥಿಯಾಗಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಭಾಗವಹಿಸಿದ್ದರು. ಪರಿಸರ ಸಪ್ತಾಹ ಆಚರಣೆ ಅಂಗವಾಗಿ ಕಲ್ಲಟ್ರ ಮಾಹಿನ್ ಹಾಜಿ, ಅರ್ಜುನ್ ಪಾಂಡ್ಯನ್, ಕಾಸರಗೋಡು ಸಾಮಾಜಿಕ ಅರಣ್ಯ ಎಸಿಎಫ್ ಉದಯಸೂರ್ಯನ್, ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಎ.ಅರುಣ್‌ಕುಮಾರ್, ಬದಿಯಡ್ಕ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಮಾಹಿನ್ ಕೇಳೋಟ್ ಮುಂತಾದವರು ವೈದ್ಯಕೀಯ ಕಾಲೇಜು ಆವರಣದಲ್ಲಿ ಸಸಿಗಳನ್ನು ನೆಟ್ಟರು. ಎಣ್ಮಕಜೆ ಗ್ರಾ.ಪಂ. ಅಧ್ಯಕ್ಷೆ ಕುಸುಮಾವತಿ, ವಾರ್ಡ್ ಸದಸ್ಯೆ ಉಷಾ, ಉಪ ಜಿಲ್ಲಾಧಿಕಾರಿ ಲಿಪು ಎಸ್. ಲಾರೆನ್ಸ್, ಸಾಮಾಜಿಕ ಅರಣ್ಯ ಶ್ರೇಣಿ ಅಧಿಕಾರಿ ಗಿರೀಶ್, ನರ್ಸಿಂಗ್ ಕಾಲೇಜು ಪ್ರಾಂಶುಪಾಲೆ ಶೋಭಾ, ವೈದ್ಯಕೀಯ ಕಾಲೇಜು ಸಾರ್ಜೆಂಟ್ ಅನ್ವಾದ್ ಭಾಗವಹಿಸಿದ್ದರು. ವೈದ್ಯಕೀಯ ಕಾಲೇಜಿನ ಉಪ ಪ್ರಾಂಶುಪಾಲೆ ಟಿ.ಜಿ.ಸಿಂಧು ಸ್ವಾಗತಿಸಿ, ವೈದ್ಯಕೀಯ ಅಧೀಕ್ಷಕ ಆರ್. ಪ್ರವೀಣ್ ವಂದಿಸಿದರು. ಸಮಾರಂಭದಲ್ಲಿ ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳಿಂದ ಫ್ಲಾಶ್ ಮಾಬ್ ನಡೆಯಿತು.



ಕಾಸರಗೋಡು ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರ ನೇತೃತ್ವದಲ್ಲಿ ದೃಢ ಕಲಶಾಭಿಷೇಕವು ಮಂಗಳವಾರ ಜರಗಿತು.

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ದೃಢಕಲಶ, ಕಲಶಪೂಜೆ, ಕಲಶಾಭಿಷೇಕ

ಮಹಾರುದ್ರಯಾಗ, ವಸೋರ್ಧಾರಾಪೂರ್ವಕ ಪೂರ್ಣಾಹುತಿ

ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವವು ಇತ್ತೀಚೆಗೆ ವಿಜೃಂಭಣೆಯಿಂದ ಜರಗಿದ್ದು, ಅದರ ಅಂಗವಾಗಿ ದೃಢಕಲಶವು ಮಂಗಳವಾರ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಅವರ ನೇತೃತ್ವದಲ್ಲಿ ನೆರವೇರಿತು.



ಕಾರ್ಯಕ್ರಮದ ಪೂರ್ವಭಾವಿಯಾಗಿ ಸೋಮವಾರ ಸಂಜೆ ಪುಣ್ಯಾಹವಾಚನ, ಪ್ರಾಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತುಬಲಿ, ವಾಸ್ತು ಪುಣ್ಯಾಹಾಂತ ನಡೆಯಿತು. ಮಂಗಳವಾರ ಪ್ರಾತಃಕಾಲ ಗಣಪತಿ ಹವನ, ಕಲಶಪೂಜೆ, ಕಲಶಾಭಿಷೇಕ, ಮಹಾಪೂಜೆ ಜರಗಿತು.

ಶ್ರೀ ಕ್ಷೇತ್ರದಲ್ಲಿ ಬೆಳಗ್ಗೆ ಮಹಾಪೂಜೆಯ ನಂತರ ಶ್ರೀ ಮಹಾರುದ್ರಯಾಗ ಆರಂಭವಾಯಿತು. ವೈದಿಕ ಶ್ರೇಷ್ಠರ ನೇತೃತ್ವದಲ್ಲಿ ವೇದಘೋಷದೊಂದಿಗೆ ವಿಧವಿಧವಾದ ಆಹುತಿಯನ್ನು ನೀಡಲಾಯಿತು. 150ಕ್ಕೂ ಹೆಚ್ಚು ವೈದಿಕರಿಂದ ಶ್ರೀ ರುದ್ರ ಪಾರಾಯಣ, ಮಧ್ಯಾಹ್ನ ವಸೋರ್ಧಾರಾಪೂರ್ವಕ ಪೂರ್ಣಾಹುತಿ ನಡೆಯಿತು.

ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ದಿವ್ಯ ಉಪಸ್ಥಿತಿಯಲ್ಲಿ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಗಳು ಪ್ರಾರ್ಥನೆ ನೆರವೇರಿಸಿದರು. ಕ್ಷೇತ್ರದ ಅರ್ಚಕ ಶಿವರಾಮ ಭಟ್ ಹಾಗೂ ವೈದಿಕ ವೃಂದದವರ ವೇದಘೋಷದೊಂದಿಗೆ ಮಹಾಮಂಗಳಾರತಿ ನಡೆಯಿತು. ಸಹಸ್ರಾರು ಮಂದಿ ಭಗವದ್ಭಕ್ತರು ಪಾಲ್ಗೊಂಡು ಶ್ರೀ ದೇವರ ಪ್ರಸಾದವನ್ನು ಸ್ವೀಕರಿಸಿ ಕೃತಾರ್ಥರಾದರು. ಆಡಳಿತ ಮೊಕ್ತೇಸರ ವೆಂಕಟ್ರಮಣ ಭಟ್ ಚಂಬಲ್ತಿಮಾರು, ಆಡಳಿತ ಮಂಡಳಿ, ಸೇವಾ ಸಮಿತಿ, ಬ್ರಹ್ಮಕಲಶೋತ್ಸವ ಸಮಿತಿ ಹಾಗೂ ವಿವಿಧ ಉಪಸಮಿತಿಗಳ ನೇತೃತ್ವದಲ್ಲಿ ಕಾರ್ಯಕ್ರಮ ಸಂಪನ್ನವಾಯಿತು.

ಸೂರಂಬೈಲು ಶಾಲೆಯಲ್ಲಿ ಕಯ್ಯಾರರ ಜನ್ಮದಿನಾಚರಣೆ

ನಾಡುನುಡಿಗೆ ಸಲ್ಲಿಸಿದ ಸೇವೆಯ ಸ್ಮರಣೆ

ಕುಂಬಳೆ: ಸೂರಂಬೈಲು ಸರಕಾರಿ ಪ್ರೌಢಶಲೆಯಲ್ಲಿ ನಾಡೋಜ ಡಾ.ಕಯ್ಯಾರ ಕಿಂಞಣ್ಣ ರೈಯವರ ಜನ್ಮ ದಿನವನ್ನು ಆಚರಿಸಲಾಯಿತು. ಖ್ಯಾತ ಸಾಹಿತಿ ಜಯಶ್ರೀ ಅನಂತಪುರ ಕಾರ್ಯಕ್ರಮ ಉದ್ಘಾಟಿಸಿ, ಕಯ್ಯಾರ ಕಿಂಞಣ್ಣ ರೈಗಳು ನಾಡುನುಡಿಗೆ ಸಲ್ಲಿಸಿದ ಕೊಡುಗೆಗಳನ್ನು ವಿವರಿಸಿದರು.

ಮುಖ್ಯ ಶಿಕ್ಷಕಿ ಸುನೀತಾ ಎ. ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಶಿಕ್ಷಕಿ ದೇವಿಕಾರಾಣಿ ಕೆ.ಎಸ್. ಶುಭಾಶಂಸನೆಗೈದರು. ವಿದ್ಯಾರ್ಥಿಗಳು ಕವಿ ಕಯ್ಯಾರರಿಗೆ ಸಂಬಂಧಿಸಿದ ಗೀತೆ, ಕವನ ವಾಚನ, ಅಭಿನಯ ಗೀತೆ, ಸಮೂಹ ಗೀತೆ, ಕವಿ ಪರಿಚಯ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಕನ್ನಡ ಸಾಹಿತ್ಯ ವೇದಿಕೆಯ ಸಂಚಾಲಕಿ ಹೇಮಲತಾ ಎನ್. ಸ್ವಾಗತಿಸಿ, ಹಿರಿಯ ಶಿಕ್ಷಕಿ ಮಮತಾ ಇ.ಆರ್. ವಂದಿಸಿದರು. ಶುಭ ಕಣ್ಣೂರು ಕಾರ್ಯಕ್ರಮ ನಿರೂಪಿಸಿದರು.



■ ವಿದ್ಯಾರ್ಥಿಗಳಿಂದ ಗೀತೆ, ಕವನ ವಾಚನ, ಅಭಿನಯ ಗೀತೆ, ಸಮೂಹ ಗೀತೆ, ಕವಿ ಪರಿಚಯ ಮುಂತಾದ ವೈವಿಧ್ಯಮಯ ಕಾರ್ಯಕ್ರಮ

ಸುತ್ತಮುತ್ತ

ರೂರಲ್ ಎಜ್ಯುಕೇಶನ್ ಸೊಸೈಟಿ: ಅಧ್ಯಕ್ಷರಾಗಿ ಶ್ರೀಶ ನಾಯಕ್

ಶಿರ್ವ: ರೂರಲ್ ಎಜ್ಯುಕೇಶನ್ ಸೊಸೈಟಿ ಪಟ್ಲ ಇದರ 2026–28ನೇ ಸಾಲಿನ ನೂತನ ಅಧ್ಯಕ್ಷ ಉದ್ಯಮಿ,



ಸಾಮಾಜಿಕ ಕಾರ್ಯಕರ್ತರು, ಯುವ ನಾಯಕ ಪೆರ್ನಂಕಿಲ ಶ್ರೀಶ ನಾಯಕ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಸ್ಥೆಯ ಅಧ್ಯಕ್ಷ ಡಾ. ನಾರಾಯಣ ಶೆಣೈ ಕೆ. ಅಧ್ಯಕ್ಷತೆಯಲ್ಲಿ ವಾರ್ಷಿಕ ಮಹಾಸಭೆ ನಡೆಯಿತು.

ಬಳಿಕ 2026–28ನೇ ಸಾಲಿಗೆ 9 ಜನರನ್ನು ಒಳಗೊಂಡ ನೂತನ ಆಡಳಿತ ಮಂಡಳಿಯ ಆಯ್ಕೆ ಪ್ರಕ್ರಿಯೆ ನಡೆಯಿತು. ಅಧ್ಯಕ್ಷರಾಗಿ ಪೆರ್ನಂಕಿಲ ಶ್ರೀಶ ನಾಯಕ್, ಉಪಾಧ್ಯಕ್ಷರಾಗಿ ಡಾ. ಗೋಪಿನಾಥ್ ನಾಯಕ್ ಧರ್ಮೆಟ್ಟುಪಳ್ಳಿ, ಪ್ರಧಾನ ಕಾರ್ಯದರ್ಶಿಯಾಗಿ ಜಯರಾಜ್ ಶೆಟ್ಟಿ, ಜೊತೆ ಕಾರ್ಯದರ್ಶಿಯಾಗಿ ಅರ್ಚನಾ ನಾಯಕ್, ಕೋಶಾಧಿಕಾರಿಯಾಗಿ ಡಾ.ನಾರಾಯಣ ಶೆಣೈ ಕೆ. ಕಾರ್ಯಕಾರಿ ಸಮಿತಿ ಸದಸ್ಯರುಗಳಾಗಿ ಡಾ. ನಿರಂಜನ ಪ್ರಭು, ಮಲ್ಲಿಕಾ ಶೆಟ್ಟಿ, ನಿತ್ಯಾನಂದ ನಾಯಕ್ ನರಸಿಂಗೆ, ಉಮೇಶ ನಾಯಕ್ ಪೆರ್ನಂಕಿಲ, ವಿಶೇಷ ಸಲಹೆಗಾರರಾಗಿ ಖ್ಯಾತ ಲೆಕ್ಕಪರಿಶೋಧಕರಾದ ಗುಜ್ಜಾಡಿ ಪ್ರಭಾಕರ ನಾಯಕ್ ಆಯ್ಕೆಯಾದರು.

ಮಲ್ಲಿಗೆ ಕೃಷಿಕರಿಗೂ ಶೂನ್ಯ ಬಡ್ಡಿ ದರದಲ್ಲಿ ಸಾಲ ವಿತರಿಸಲು ಮನವಿ



ಶಿರ್ವ: ಸುವರ್ಣ ಸಂಭ್ರಮವನ್ನು ಕಂಡ ಶಿರ್ವ ಸಹಕಾರಿ ವ್ಯವಸಾಯಿಕ ಸಂಘ.ನಿ. ಶಿರ್ವ ಇದರ ಅಧ್ಯಕ್ಷ ಕುತ್ಯಾರು ಪ್ರಸಾದ್ ಶೆಟ್ಟಿ ನೇತೃತ್ವದ ನಿಯೋಗ ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಅವರನ್ನು ಭೇಟಿಯಾಗಿ ಈ ಭಾಗದ ಮಲ್ಲಿಗೆ ಕೃಷಿಕರ ಪರವಾಗಿ ಮನವಿ ಸಲ್ಲಿಸಿದರು. ಈ ಬಾರಿ ನಬಾರ್ಡ್ ಸಂಸ್ಥೆಯು ಕೃಷಿಕರಿಗಾಗಿ ಒದಗಿಸುವ ಶೂನ್ಯ ಬಡ್ಡಿ ದರದ ಎಂ.ಕೆ.ಸಿ.ಸಿ ಸಾಲದ ಮಿತಿ ನಿಗದಿಪಡಿಸಲು ವಿಧಿಸಿದ ಷರತ್ತುಗಳ ಅನ್ವಯ ಈ ಹಿಂದಿನ ಮೊತ್ತದ ಸಾಲವನ್ನು ವಿತರಿಸಲು ಸಾಧ್ಯವಾಗುತ್ತಿಲ್ಲ, ಆದ್ದರಿಂದ ಕಾರ್ಯವ್ಯಾಪ್ತಿಯ ಮಲ್ಲಿಗೆ ಕೃಷಿಕರ ಹಿತದೃಷ್ಟಿಯಿಂದ ಈ ಹಿಂದಿನಂತೆಯೇ ಸಾಲ ವಿತರಿಸಲು ಅನುಕೂಲ ಮಾಡಿಕೊಡುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಮನವರಿಕೆ ಮಾಡುವಂತೆ ವಿನಂತಿಸಿಕೊಂಡರು. ನಿಯೋಗದಲ್ಲಿ ಸಂಘದ ನಿರ್ದೇಶಕ ಹರಿಣಾಕ್ಷ ಶೆಟ್ಟಿ ಪಿಲಾರು ಇದ್ದರು.

ಶ್ರೀ ಅಂಬಾಭವಾನಿ ಗಾಲಿಮಾರಿ ದೇವಸ್ಥಾನಕ್ಕೆ ತಹಶೀಲ್ದಾರ್ ಭೇಟಿ

ಕಾರ್ಕಳ: ಶ್ರೀ ಅಂಬಾಭವಾನಿ ಗಾಲಿಮಾರಿ ದೇವಸ್ಥಾನದ ಭಕ್ತಾದಿಗಳಿಂದ ಜೂ.4ರಂದು ನಡೆದ ಪ್ರತಿಭಟನೆಯ ಬೇಡಿಕೆಯಂತೆ ಕಾರ್ಕಳ ತಹಶೀಲ್ದಾರ್ ಮತ್ತು ಪುರಸಭೆ ಮುಖ್ಯಾಧಿಕಾರಿಗಳು ಜಂಟಿಯಾಗಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭ ಸ್ಥಳೀಯರಿಂದ ಸಮಸ್ಯೆಗಳನ್ನು ಆಲಿಸಿದ ಅವರು, ಶೀಘ್ರದಲ್ಲೇ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು. ದೇವಸ್ಥಾನದ ಆಡಳಿತ ಮುಖ್ಯಸ್ಥ ರಾಜೇಶ್ ಕೋಟ್ಯಾನ್, ಅವಿನಾಶ್ ಶೆಟ್ಟಿ, ಸ್ಥಳೀಯ ಪುರಸಭಾ ಸದಸ್ಯರಾದ ಮೀನಾಕ್ಷಿ ಗಂಗಾಧರ್, ಮಾಜಿ ಪುರಸಭಾ ಸದಸ್ಯ ಸುನಿಲ್ ಕೋಟ್ಯಾನ್, ಪ್ರಕಾಶ್ ರಾವ್,ಅಧ್ಯಕ್ಷ ಬಾಲಕೃಷ್ಣ ಕಾರ್ಯದರ್ಶಿ ಅಮರ್ ಶೆಟ್ಟಿಗಾರ್, ಹಾಗೂ ಸದಸ್ಯ ಶೈಲೇಶ್, ಸಾತ್ವಿಕ್, ಅಕ್ಷಯ ಕಾಮತ್, ನೇತ್ರ, ಶಾಂತಾ, ಪ್ರತಿಭಾ ಮೊದಲಾದವರು ಉಪಸ್ಥಿತರಿದ್ದರು.

ಜೂ.12ಕ್ಕೆ ನೇರ ಸಂದರ್ಶನ

ಉಡುಪಿ: ನಗರದ ಮಣಿಪಾಲದ ಮನೋಹರ್ ಭವನ್ ಹೋಟೆಲ್ ಮುಂಭಾಗದ ಮಣಿಪಾಲ್ ಪೇಮೆಂಟ್ ಐಡೆಂಟಿಟಿ ಸೊಲ್ಯೂಷನ್ಸ್ ಲಿಮಿಟೆಡ್‌ನಲ್ಲಿ ಜೂ.12 ರಂದು ಬೆಳಗ್ಗೆ 10.30ಕ್ಕೆ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ ನಡೆಯಲಿದೆ. ಡಿಪ್ಲೋಮಾ, ಐ.ಟಿ.ಐ. ಹಾಗೂ ಇತರೆ ಪದವಿ ವಿದ್ಯಾರ್ಹತೆಯೊಂದಿಗೆ ಉತ್ತೀರ್ಣರಾದ ಅಭ್ಯರ್ಥಿಗಳು ತಮ್ಮ ಅಂಕಪಟ್ಟಿ, ಸ್ವ ವಿವರವುಳ್ಳ ರೆಸ್ಯೂಮ್/ಸಿವಿ ಹಾಗೂ ಆಧಾರ್ ಕಾರ್ಡ್‌ನೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾಧಿಕಾರಿ ಸಂಕೀರ್ಣ, ರಜತಾದ್ರಿ, ಮಣಿಪಾಲ, ಉಡುಪಿ ದೂರವಾಣಿ ಸಂಖ್ಯೆ: 8105618291, 9945856670 ಹಾಗೂ 9901472710 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಕಚೇರಿ ಪ್ರಕಟಣೆ ತಿಳಿಸಿದೆ.

ಉಡುಪಿ ತಾ.ಪಂ: ತ್ರೈಮಾಸಿಕ ಕೆಡಿಪಿ ಸಭೆ

ಉಡುಪಿ: ಅಭಿವೃದ್ಧಿ ಕಾರ್ಯಕ್ರಮದ (20 ಅಂಶ ಕಾರ್ಯಕ್ರಮ) ಪ್ರಗತಿ ಪರಿಶೀಲನಾ ಸಭೆಯು ಜೂ.15ರಂದು ಬೆಳಗ್ಗೆ 11ಕ್ಕೆ ತಾಲೂಕು ಪಂಚಾಯತ್ ಸಭಾಂಗಣದಲ್ಲಿ, ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಉಡುಪಿ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಅವಿಭಜಿತ ಕುಂದಾಪುರ ತಾಲೂಕಿನಲ್ಲಿ ಗರಿಗೆದರಿದ ಕೃಷಿ ಚಟುವಟಿಕೆ | 695 ಕ್ವಿಂ. ಬಿತ್ತನೆ ಬೀಜ ಪೂರೈಕೆ

ಈ ಬಾರಿ 12,868 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯ ಗುರಿ!

ಕುಂದಾಪುರ: ಮುಂಗಾರು ನಿಧಾನಕ್ಕೆ ಆರಂಭಗೊಂಡಿದ್ದು, ಮತ್ತೊಂದೆಡೆ ಕುಂದಾಪುರ ಭಾಗದ ರೈತರು ಮುಂಗಾರು ಹಂಗಾಮಿನ ಕೃಷಿ ಕಾರ್ಯ ಶುರು ಮಾಡಿದ್ದಾರೆ. ಕಳೆದ ಒಂದೆರಡು ದಿನಗಳಿಂದ ಬೀಜ ಬಿತ್ತನೆ ಕಾರ್ಯವನ್ನು ಆರಂಭಿಸಿದ್ದಾರೆ. ಅವಿಭಜಿತ ಕುಂದಾಪುರ ತಾಲೂಕಿನಲ್ಲಿ ಈ ಬಾರಿ ಒಟ್ಟಾರೆ 12,868 ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಕೃಷಿ ನಾಟಿ ಕಾರ್ಯದ ಗುರಿ ಹೊಂದಲಾಗಿದೆ.





ಸಂಗಮ ವಿಶೇಷ

ಕಳೆದ ವರ್ಷದ ಕುಂದಾಪುರ ಹಾಗೂ ಬೈಂದೂರು ತಾಲೂಕಿನಲ್ಲಿ ಒಟ್ಟು 13,100 ಹೆಕ್ಟೇರ್ ಪ್ರದೇಶದಲ್ಲಿ ನಾಟಿ ಮಾಡಲಾಗಿತ್ತು. ಆದರೆ ಈ ಬಾರಿ ಕುಂದಾಪುರ ಹೋಬಳಿಯಲ್ಲಿದ್ದ ಹೆಬ್ರಿ ತಾಲೂಕಿನ ಬೆಳ್ವೆ, ಮಡಾಮಕ್ಕಿ, ಶೇಡಿಮನೆ ಹಾಗೂ ಅಲ್ಬಾಡಿ ಈ 4 ಗ್ರಾಮಗಳನ್ನು ಕಾರ್ಕಳಕ್ಕೆ ಸೇರಿಸಿದ್ದರಿಂದ ಅವಿಭಜಿತ ಕುಂದಾಪುರ ತಾಲೂಕಿನಲ್ಲಿ 232 ಹೆಕ್ಟೇರ್ ಪ್ರದೇಶ ಕಡಿಮೆಯಾಗಿದೆ. ಬೈಂದೂರು ಹೋಬಳಿಯಲ್ಲಿ 4,192 ಹೆಕ್ಟೇರ್ ಪ್ರದೇಶ, ವಂಡ್ಸೆ ಹೋಬಳಿಯಲ್ಲಿ 4,076 ಹೆಕ್ಟೇರ್ ಪ್ರದೇಶ ಹಾಗೂ ಕುಂದಾಪುರ ಹೋಬಳಿಯಲ್ಲಿ 4,600 ಸೇರಿದಂತೆ ಒಟ್ಟಾರೆ 12,868 ಹೆಕ್ಟೇರ್ ಪ್ರದೇಶದಲ್ಲಿ ನಾಟಿ ಕಾರ್ಯದ ಗುರಿ ಕೃಷಿ ಇಲಾಖೆ ಹಾಕಿಕೊಂಡಿದೆ.

ಎಂಒ–4 ಬಿತ್ತನೆ ಬೀಜ ವಿತರಣೆ

ಕುಂದಾಪುರ ಹಾಗೂ ಬೈಂದೂರು ಈ ಎರಡೂ ತಾಲೂಕುಗಳ ರೈತ ಸೇವಾ ಕೇಂದ್ರಗಳಿಗೆ ಒಟ್ಟು 695 ಕ್ವಿಂಟಾಲ್ ಬಿತ್ತನೆ ಬೀಜ ಪೂರೈಕೆಯಾಗಿದ್ದು, ಈ ಪೈಕಿ ಈಗಾಗಲೇ 585 ಕ್ವಿಂಟಾಲ್ ಎಂಒ–4 ಬಿತ್ತನೆ ಬೀಜವನ್ನು ರೈತರಿಗೆ ವಿತರಿಸಲಾಗಿದೆ. ಇನ್ನು 110 ಕ್ವಿಂಟಾಲ್ ದಾಸ್ತಾನು ಇದ್ದು, ಇನ್ನು ಜಿಲ್ಲೆಗೆ ಬೀಜ ಪೂರೈಸುವ ಶಿವಮೊಗ್ಗದಲ್ಲಿಯೂ 4 ಸಾವಿರಕ್ಕೂ ಮಿಕ್ಕಿ ಬೀಜ ದಾಸ್ತಾನಿದೆ. ಅಗತ್ಯವಿದ್ದರೆ ಅಥವಾ ಬೇಡಿಕೆಯಿದ್ದರೆ ತರಿಸಿ, ವಿತರಿಸಲಾಗುವುದು ಎಂದು ಕೃಷಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

> **ಬಿತ್ತನೆ ಕಾರ್ಯ ಶುರುವಾಗಿದೆ**
>
> ಈಗಾಗಲೇ ಎಲ್ಲಾ ರೈತ ಸೇವಾ ಕೇಂದ್ರಗಳ ಮೂಲಕ ರೈತರಿಗೆ ಬಿತ್ತನೆ ಬೀಜ ವಿತರಿಸಲಾಗಿದೆ. ಬೇಕಾದಷ್ಟು ದಾಸ್ತಾನಿದೆ. ಕೊರತೆಯಿದ್ದರೆ, ಮತ್ತೆ ತರಿಸಿಕೊಡಲಾಗುವುದು. ಈ ಬಾರಿ ಯಾಂತ್ರಿಕೃತ ಕೃಷಿ ಪ್ರಾತ್ಯಕ್ಷಿಕೆ ನೀಡುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಮಳೆ ಈಗಷ್ಟೇ ಆರಂಭಗೊಂಡಿದೆ. ಬಿತ್ತನೆ ಕಾರ್ಯವೂ ಶುರುವಾಗಿದೆ
>
> • ಸತೀಶ್, ಸಹಾಯಕ ನಿರ್ದೇಶಕ (ಪ್ರಭಾರ), ಕೃಷಿ ಇಲಾಖೆ ಕುಂದಾಪುರ

ಇತ್ತೀಚಿನ ವರ್ಷಗಳಲ್ಲಿ ಯಂತ್ರ ನಾಟಿ ಎಲ್ಲಾ ಕಡೆಗಳಲ್ಲಿ ಹೆಚ್ಚಾಗುತ್ತಿದೆ. ರೈತರು ಕೂಡ ಯಾಂತ್ರಿಕೃತ ಕೃಷಿಗೆ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದಾರೆ. ಉಭಯ ತಾಲೂಕುಗಳಲ್ಲಿ ಒಟ್ಟಾರೆ 63 ಹೆಕ್ಟೇರ್ ಅಂದರೆ 163 ಎಕರೆ ಪ್ರದೇಶದಲ್ಲಿ ಯಂತ್ರ ನಾಟಿ ಗುರಿಯನ್ನು ಕೃಷಿ ಇಲಾಖೆ ಹಾಕಿಕೊಂಡಿದೆ. ಈ ಪೈಕಿ ಬೈಂದೂರು ಹೋಬಳಿಯಲ್ಲಿ 23 ಹೆಕ್ಟೇರ್, ವಂಡ್ಸೆ ಹೋಬಳಿಯಲ್ಲಿ 21 ಹೆಕ್ಟೇರ್ ಹಾಗೂ ಕುಂದಾಪುರ ಹೋಬಳಿಯಲ್ಲಿ 21 ಹೆಕ್ಟೇರ್ ಪ್ರದೇಶದಲ್ಲಿ ಯಂತ್ರ ನಾಟಿ ನಡೆಯಲಿದೆ. ಇನ್ನು ವಿವಿಧೆಡೆಗಳಲ್ಲಿ ಇಲಾಖೆಯಿಂದ ಯಾಂತ್ರಿಕೃತ ಕೃಷಿ ಬಗ್ಗೆ ಪ್ರಾತ್ಯಕ್ಷಿಕೆ ಕಾರ್ಯಕ್ರಮ ಹಮ್ಮಿಕೊಂಡಿದೆ.

> **ಹಡಿಲು ಭೂಮಿಯಲ್ಲಿ ಕೃಷಿ**
>
> ಎನ್‌.ಆರ್‌.ಎಲ್‌.ಎಂ, ಕೃಷಿ ಯಂತ್ರಧಾರೆ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಿತ ವಿವಿಧ ಸಂಘ–ಸಂಸ್ಥೆಗಳು, ಸಂಜೀವಿನಿ ಸಂಘ ಸಹಿತ ಅವಿಭಜಿತ ಕುಂದಾಪುರ ತಾಲೂಕಿನಲ್ಲಿ ಈ ಬಾರಿ 800–1000 ಎಕರೆವರೆಗಿನ ಹಡಿಲು ಭೂಮಿಗಳಲ್ಲಿ ಮತ್ತೆ ಬಿತ್ತನೆ ಕಾರ್ಯ ನಡೆಯಲಿದೆ.

ವಿಶ್ವಕರ್ಮ ಒಕ್ಕೂಟದಿಂದ ಸಾಂಪ್ರದಾಯಿಕ ಭಜನೆ ಸ್ಪರ್ಧೆಗೆ ಚಾಲನೆ

ಮನುಷ್ಯನಲ್ಲಿ ಶುದ್ಧ ಮನಸ್ಸು ಅಗತ್ಯ: ಆನೆಗುಂದಿ ಶ್ರೀ

ಕಾಪು: ಧನಕ್ಕಿಂತಲೂ ಧರ್ಮದಿಂದ ಪರಿವರ್ತನೆಗೊಂಡ ಮನಸ್ಸು ಮನುಷ್ಯನನ್ನು ವಿನೀತವಂತನನ್ನಾಗಿಸುತ್ತದೆ. ಅದು ಸುಸಂಸ್ಕೃತ ಸಮಾಜವನ್ನು ಕಟ್ಟುವಲ್ಲಿ ಭದ್ರ ಬುನಾದಿಯಾಗಲಿದೆ ಎಂದು ಪಡುಕುತ್ಯಾರು ಜಗದ್ಗುರು ಅನಂತಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಮಹಾಸ್ವಾಮೀಜಿ ಹೇಳಿದರು.



ಅವರು ಭಾನುವಾರ ಕಟಪಾಡಿ ಶ್ರೀ ಕಾಳಿಕಾಂಬಾ ವಿಶ್ವಕರ್ಮೇಶ್ವರ ದೇವಸ್ಥಾನದಲ್ಲಿ ಉಡುಪಿ ಮತ್ತು ದ.ಕ. ಜಿಲ್ಲೆಯ ವಿಶ್ವಕರ್ಮ ಸಂಘ ಸಂಸ್ಥೆಗಳ ಕೇಂದ್ರ ಸಂಸ್ಥೆ ವಿಶ್ವಕರ್ಮ ಒಕ್ಕೂಟ ರಿ. ಆಯೋಜಿಸಿದ ಸಾಂಪ್ರದಾಯಿಕ ಭಜನೆ ಸ್ಪರ್ಧೆ, ಭಜನಾ ವೈಭವ ಉದ್ಘಾಟಿಸಿ, ಆಶೀರ್ವಚನ ನೀಡಿದರು.

ಭಕ್ತಿಗಿಂತ ಶುದ್ಧ ಭಾವ ಮುಖ್ಯ

ಭಜನೆಯನ್ನು ದೇವರ ಪ್ರೀತಿಗಾಗಿ ಭಾವವನ್ನು ತುಂಬಿ ಹಾಡಿರಿ. ಆ ಮೂಲಕ ಭಗವಂತನ ಮನಸ್ಸಿನಲ್ಲಿ ಸ್ಥಾನವನ್ನು ಪಡೆಯಿರಿ. ಆ ನಿಟ್ಟಿನಲ್ಲಿ ವಿಶ್ವಕರ್ಮ ಒಕ್ಕೂಟವು ಮುಂಬರುವ ದಿನಗಳಲ್ಲಿ ಮಹಿಳೆಯರು, ಪುರುಷರು, ಹೆಣ್ಣು ಮಕ್ಕಳು, ಗಂಡು ಮಕ್ಕಳ ವಿಭಾಗಗಳಲ್ಲಿ ಸಾಂಪ್ರದಾಯಿಕ ಭಜನೆ ವೈಭವೋತ್ಸವ ಕೈಗೊಳ್ಳುವಂತಾಗಲಿ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ವಿಶ್ವಕರ್ಮ ಒಕ್ಕೂಟದ ಅಧ್ಯಕ್ಷ ಮಧು ಆಚಾರ್ಯ ಮುಲ್ಕಿ ಮಾತನಾಡಿ, ಮುಂಬರುವ ದಿನಗಳಲ್ಲಿ ರಾಜ್ಯ ಮಟ್ಟದ ಸಾಂಪ್ರದಾಯಿಕ ಭಜನಾ ವೈಭವೋತ್ಸವ ಆಯೋಜಿಸುವ ಬಗ್ಗೆ ಚಿಂತಿಸಲಾಗುವುದು ಎಂದರು.

ಕಟಪಾಡಿ ಶ್ರೀ ಕಾಳಿಕಾಂಬಾ ವಿಶ್ವಕರ್ಮೇಶ್ವರ ದೇವಸ್ಥಾನದ 2ನೇ ಮೊಕ್ತೇಸರ ಶಿಲ್ಪಿ ಬಿಳಿಯಾರು ಗಣಪತಿ ಆಚಾರ್ಯ, ಮಾಜಿ ಆಡಳಿತ ಮೊಕ್ತೇಸರ ಸದಾಶಿವ ಆಚಾರ್ಯ ಪಡುಕುತ್ಯಾರು, ಉಡುಪಿ ಭವಾನಿ ಬಿಲ್ಡರ್ಸ್‌ನ ಭವಾನಿ ನಾರಾಯಣ ಆಚಾರ್ಯ, ಎಸ್.ಕೆ. ಜಿ.ಐ. ಕೋ–ಆಪರೇಟಿವ್ ಸೊಸೈಟಿ ಮಂಗಳೂರು ಅಧ್ಯಕ್ಷ ಉಪೇಂದ್ರ ಆಚಾರ್ಯ ಮಾತನಾಡಿದರು.

> **ಭಕ್ತಿ ಜೊತೆ ಶುದ್ಧ ಭಾವ ಇರಲಿ**
>
> ಭಕ್ತಿಯಲ್ಲಿ ಪರಿಶುದ್ಧತೆ ಮುಖ್ಯ.. ಆಗ ದೇವರ ಕೃಪೆ ಒಲಿಯುತ್ತದೆ. ಭಜನೆಯಲ್ಲೂ ಹಾಗೆಯೇ ಭಕ್ತಿಯ ಜೊತೆ ಭಾವ ಮುಖ್ಯ..
>
> • ಕಾಳಹಸ್ತೇಂದ್ರ ಸರಸ್ವತೀ ಮಹಾಸ್ವಾಮೀಜಿ

ತೀರ್ಪುಗಾರ ಪ್ರಸನ್ನ ಭಟ್, ಡಾ. ಮಾತಂಗೀ, ವಿನಯಾ ಅವರನ್ನು ಅಭಿನಂದಿಸಲಾಯಿತು. ಒಕ್ಕೂಟದ ಗೌರವಾಧ್ಯಕ್ಷ ಯು.ಕೆ. ಎಸ್. ಸೀತಾರಾಮ ಆಚಾರ್ಯ, ಪ್ರಧಾನ ಕಾರ್ಯದರ್ಶಿ ಕೆ. ಮುರಳೀಧರ, ಕೋಶಾಧಿಕಾರಿ ಜನಾರ್ದನ ಎಸ್. ಆಚಾರ್ಯ, ಸಂಘಟನಾ ಕಾರ್ಯದರ್ಶಿ ಸತೀಶ್ ಆಚಾರ್ಯ, ಆಂತರಿಕ ಲೆಕ್ಕ ಪರಿಶೋಧಕ ಬಿ. ಅನಂತಯ್ಯ ಆಚಾರ್ಯ, ಹರ್ಷವರ್ಧನ್ ನಿಟ್ಟೆ, ಯೋಗೀಶ್ ಆಚಾರ್ಯ ಮುಡಿಪು, ಶರತ್ ಶರ್ಮಾ ಇದ್ದರು.

ಒಕ್ಕೂಟದ ಉಪಾಧ್ಯಕ್ಷ ಆಲೆವೂರು ಯೋಗೀಶ ಆಚಾರ್ಯ ಪ್ರಸ್ತಾವನೆಯೊಂದಿಗೆ ಸ್ವಾಗತಿಸಿದರು. ಕಾರ್ಯದರ್ಶಿ ನೇರಂಬಳ್ಳಿ ಪ್ರಕಾಶ್ ಆಚಾರ್ಯ ವಂದಿಸಿ, ಡಾ. ಪ್ರತಿಮಾ ಜಯಪ್ರಕಾಶ್ ಆಚಾರ್ಯ ಮಣಿಪಾಲ ನಿರೂಪಿಸಿದರು.

ಅಧಿಕಾರಿಗಳೊಂದಿಗೆ ಶಾಸಕ ಶಾಸಕ ಯಶ್‌ಪಾಲ್ ಸುವರ್ಣ ಭೇಟಿ, ಚರ್ಚೆ

ಮಲ್ಪೆ ಬಂದರಿನಲ್ಲಿ ಕಾಮಗಾರಿಗಳ ಪುನರಾರಂಭ

ಉಡುಪಿ: ಮಳೆಗಾಲದ ಹಿನ್ನೆಲೆಯಲ್ಲಿ ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ಮೀನುಗಾರಿಕಾ ಚಟುವಟಿಕೆಗಳು ಸ್ಥಗಿತವಾಗಿರುವ ಹಿನ್ನೆಲೆಯಲ್ಲಿ ಬಂದರಿನ ನೂತನ ಪ್ರವೇಶ ದ್ವಾರ ಹಾಗೂ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯನ್ನು ತಕ್ಷಣ ಆರಂಭಿಸುವಂತೆ ಮೀನುಗಾರಿಕೆ,ಬಂದರು ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿ 169 ಅಧಿಕಾರಿಗಳಿಗೆ ಶಾಸಕ ಯಶ್‌ಪಾಲ್ ಸುವರ್ಣ ಸೂಚನೆ ಮೇರೆಗೆ ಮಂಗಳವಾರ ಕಾಮಗಾರಿ ಪ್ರಾರಂಭಗೊಂಡಿದೆ.



ಬಂದರು ಪ್ರವೇಶ ದ್ವಾರ ಹಾಗೂ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಬಗ್ಗೆ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಸೋಮವಾರ ಭೇಟಿ ನೀಡಿದ ಶಾಸಕ ಯಶ್ ಪಾಲ್ ಸುವರ್ಣ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಪೂರಕವಾಗಿ ಗೇಟ್ ಅಗಲವನ್ನು 24 ಮೀಟರ್ ಮರುವಿನ್ಯಾಸ ಮಾಡಲಾಗಿದ್ದು, ರಾಷ್ಟ್ರೀಯ ಹೆದ್ದಾರಿ ಮಲ್ಪೆ ಬಂದರು ಸಂಪರ್ಕಿಸುವ ಭಾಗದಲ್ಲಿ ಕಿರು ಸೇತುವೆ ನಿರ್ಮಾಣವನ್ನು ವಿಸ್ತರಿಸಿ, ಗೇಟ್ ಹಾಗೂ ಕಿರು ಸೇತುವೆ ಕಾಮಗಾರಿಯನ್ನು ಏಕಕಾಲದಲ್ಲಿ ಆರಂಭಿಸಿ ಮೀನುಗಾರಿಕಾ ರಜೆ ಹಿನ್ನೆಲೆಯಲ್ಲಿ ಬಂದರಿನ ಚಟುವಟಿಕೆಗೆ ಸಮಸ್ಯೆಯಾಗದಂತೆ ಬಂದರು ಹಾಗೂ ರಾಷ್ಟ್ರೀಯ ಹೆದ್ದಾರಿ ಇಲಾಖೆ ಪೂರಕವಾಗಿ ಕೆಲಸ ಮಾಡುವಂತೆ ತಿಳಿಸಿದ್ದರು.

ಬಂದರು ಇಲಾಖೆಯ ಅಧೀನದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಅಗತ್ಯವಿರುವ ಜಾಗವನ್ನು ತಕ್ಷಣ ತೆರವು ಮಾಡಿ ಕಾಮಗಾರಿಗೆ ಅನುವು ಮಾಡಿ, ಮೆಸ್ಕಾಂ ಇಲಾಖೆಯ ಮೂಲಕ ವಿದ್ಯುತ್ ಕಂಬಗಳ ಸ್ಥಳಾಂತರ, ಬಂದರು ಪ್ರವೇಶ ಬದಲಿ ಮಾರ್ಗದ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ, ಸುಗಮ ವಾಹನ ಸಂಚಾರ ನಿಟ್ಟಿನಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜನೆಗೆ ಮಲ್ಪೆ ಪೊಲೀಸ್ ಉಪ ಹಾಗೂ ಅಧಿಕಾರಿಗಳಿಗೆ ಸೂಚಿಸಿದ್ದರು.

> **ಹಲವು ಕಾಮಗಾರಿ**
>
> ಮಂಗಳವಾರ ಬೆಳಿಗ್ಗೆಯಿಂದಲೇ ಕಾಮಗಾರಿ ಆರಂಭಗೊಂಡಿದ್ದು, ಮಲ್ಪೆ ಮೀನುಗಾರಿಕಾ ಬಂದರಿನ ಹಳೆ ಪ್ರವೇಶ ದ್ವಾರವನ್ನು ತೆರವು ಮಾಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ಈ ಸಂದರ್ಭದಲ್ಲಿ ಮಲ್ಪೆ ಮೀನುಗಾರರ ಸಂಘದ ಅಧ್ಯಕ್ಷರಾದ ಕಿಶೋರ್ ಡಿ. ಸುವರ್ಣ, ಕಾರ್ಯದರ್ಶಿ ಜಗನ್ನಾಥ ಕುಂದರ್, ಮೀನುಗಾರ ಮುಖಂಡರಾದ ರಾಮಚಂದ್ರ ಕುಂದರ್, ದಯಾನಂದ ಸುವರ್ಣ, ಕರುಣಾಕರ ಸಾಲ್ಯಾನ್, ಸುಭಾಷ್ ಮೆಂಡನ್, ಪ್ರಕಾಶ ಬಂಗೇರ, ಕೃಷ್ಣ ಕೋಟ್ಯಾನ್, ಸುರೇಶ್ ಕುಂದರ್, ಮೀನುಗಾರಿಕೆ,ಬಂದರು ಇಲಾಖೆಯ ಅಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಉಪಸ್ಥಿತರಿದ್ದರು.

ಸಂಸದ ಕೋಟ, ಶಾಸಕ ಕಿರಣ್ ಕೊಡ್ಗಿ ನೇತೃತ್ವದಲ್ಲಿ ಜನರ ಅಹವಾಲು ಸ್ವೀಕಾರ



ಕುಂದಾಪುರ: ಕುಂದಾಪುರ ವಿಧಾನಸಭಾ ಕ್ಷೇತ್ರದ ಬೆಳ್ವೆ ಗ್ರಾಮ ಪಂಚಾಯತ್ ಸಭಾ ಭವನದಲ್ಲಿ ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಹಾಗೂ ಉಡುಪಿ–ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ನೇತೃತ್ವದಲ್ಲಿ ಜನ ಸಂಪರ್ಕ ಸಭೆ ಮತ್ತು ಸಾರ್ವಜನಿಕರ ಅಹವಾಲು ಸ್ವೀಕಾರ ಕಾರ್ಯಕ್ರಮ ಸೋಮವಾರ ನಡೆಯಿತು.

ಹೆಬ್ರಿ ತಾಲೂಕು ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ್ ರಾವ್, ತಹಶೀಲ್ದಾರ್ ಪ್ರದೀಪ್ ಕುರ್ಡೇಕರ್, ಬೆಳ್ವೆ ಗ್ರಾಮ ಪಂಚಾಯಿತಿ ಪಿಡಿಒ ಸತೀಶ್ ನಾಯಕ, ಆಡಳಿತ ಅಧಿಕಾರಿ ಜಿ.ಚಿದಾನಂದಪ್ಪ ಸೇರಿದಂತೆ ತಾಲೂಕು ಪಂಚಾಯತ್ ಅಧಿಕಾರಿಗಳು, ನಿಕಟಪೂರ್ವ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ವಿವಿಧ ಇಲಾಖಾಧಿಕಾರಿಗಳು ಭಾಗವಹಿಸಿದ್ದರು. ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಸಂಜೀವಿನಿ ಮಹಿಳಾ ಸಂಘದ ಸದಸ್ಯರು, ಶಾಸಕರ ಆಪ್ತ ಕಾರ್ಯದರ್ಶಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ಸಾರ್ವಜನಿಕರು ರಸ್ತೆ, ಕುಡಿಯುವ ನೀರು, ವಸತಿ ಯೋಜನೆ, ಕಂದಾಯ, ಮೆಸ್ಕಾಂ ಹಾಗೂ ಅರಣ್ಯ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಶಾಸಕರ ಗಮನ ಸೆಳೆದರು. ಅಹವಾಲುಗಳನ್ನು ಸ್ವೀಕರಿಸಿದ ಶಾಸಕ ಕಿರಣ್ ಕೊಡ್ಗಿ ಸ್ಥಳದಲ್ಲಿಯೇ ಅಧಿಕಾರಿಗಳೊಂದಿಗೆ ಚರ್ಚಿಸಿ ಪರಿಹಾರಕ್ಕೆ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಸರ್ಕಾರದ ಯೋಜನೆಗಳು ಜನರಿಗೆ ವೇಗವಾಗಿ ತಲುಪುವಂತೆ ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕು ಎಂದು ಸೂಚಿಸಿದರು. ಗ್ರಾಮದ ಮೂಲ ಸೌಕರ್ಯ ಅಭಿವೃದ್ಧಿಗೆ ಒತ್ತು ನೀಡುವುದಾಗಿ ಶಾಸಕರು ಹಾಗೂ ಸಂಸದರು ಈ ಸಂದರ್ಭದಲ್ಲಿ ತಿಳಿಸಿದರು.

ಸರ್ಕಾರದ ಜನವಿರೋಧಿ ನೀತಿ ಜನರ ಮುಂದಿಡಬೇಕು: ಶಾಸಕ ಸುನೀಲ್ ಕರೆ



ಕಾರ್ಕಳ: ಬಿಜೆಪಿ ಕಾರ್ಯಕರ್ತರು ರಾಜ್ಯ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ಜನರಿಗೆ ಪರಿಣಾಮಕಾರಿಯಾಗಿ ತಲುಪಿಸುವ ಮೂಲಕ ಪಕ್ಷ ಸಂಘಟನೆಗೆ ಹೆಚ್ಚಿನ ಬಲ ತುಂಬಬೇಕು ಎಂದು ಶಾಸಕ ಹಾಗೂ ಮಾಜಿ ಸಚಿವ ವಿ. ಸುನೀಲ್ ಕುಮಾರ್ ಹೇಳಿದರು.

ಅವರು ಹೊಸ್ಮಾರಿನ ಶ್ರೀ ಭಗವತಿ ಕಾಂಪ್ಲೆಕ್ಸ್‌ನಲ್ಲಿ ನಡೆದ ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ಬೂತ್ ಕಾರ್ಯಕರ್ತರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಮುಂಬರುವ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಕಾರ್ಯಕ್ರಮದಲ್ಲಿ ಕಾರ್ಯಕರ್ತರ ಜವಾಬ್ದಾರಿ ಹಾಗೂ ಕರ್ತವ್ಯಗಳ ಬಗ್ಗೆ ಕೂಲಂಕುಷ ಮಾಹಿತಿ ನೀಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಗಳನ್ನು ಜನರ ಮುಂದಿಡಬೇಕು ಜೊತೆಗೆ ಪಕ್ಷದ ಬಲವರ್ಧನೆಗಾಗಿ ಪ್ರತಿಯೊಬ್ಬ ಕಾರ್ಯಕರ್ತರು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಹಾಗೂ ಪಕ್ಷ ಸಂಘಟನೆಯ ಮಹತ್ವದ ಕುರಿತು ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡಿದರು.

ಸಭೆಯನ್ನು ಕ್ಷೇತ್ರ ಅಧ್ಯಕ್ಷ ನವೀನ್ ನಾಯಕ್ ಉದ್ಘಾಟಿಸಿ ಮಾತನಾಡಿ, ಬಿಜೆಪಿ ಕಾರ್ಯಕರ್ತರು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ಜನರ ಮುಂದೆ ತಂದು ಪಕ್ಷದ ಬೆಳವಣಿಗೆಗೆ ಶ್ರಮಿಸಬೇಕು ಎಂದರು. ಉಪಾಧ್ಯಕ್ಷ ಜಯವರ್ಮ ಜೈನ್ ಮಾಪಾಲು, ಮಂಡಲ ಪ್ರಧಾನ ಕಾರ್ಯದರ್ಶಿ ಬೋಳ ಸತೀಶ್, ಜಿ.ಪಂ. ಮಾಜಿ ಸದಸ್ಯೆ ದಿವ್ಯ ಗಿರೀಶ್ ಅಮೀನ್, ತಾಲೂಕು ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ವಿನುತಾ ಆಚಾರ್ಯ ಹಾಗೂ ತಾ.ಪಂ. ಮಾಜಿ ಸದಸ್ಯೆ ಮಂಜುಳ ವಿಶ್ವನಾಥ್ ಪಕ್ಷದ ಪ್ರಮುಖರು, ಕಾರ್ಯಕರ್ತರು ಉಪಸ್ಥಿತರಿದ್ದರು.



ವಿಕಲಚೇತನ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ ಉಡುಪಿ ಜಿಲ್ಲೆ ಮತ್ತು ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ವಿಕಲಚೇತನ ಫಲಾನುಭವಿಗಳಿಗೆ ಮಂಜೂರಾದ ಶ್ರವಣ ಸಾಧನವನ್ನು ಮಂಗಳವಾರ ಕಚೇರಿಯಲ್ಲಿ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ವಿತರಿಸಿದರು. ಪೆರ್ಡೂರು ಗ್ರಾ.ಪಂ.ನ ವಿಠಲ ಪೂಜಾರಿ, ಕಟಪಾಡಿ ಗ್ರಾ.ಪಂವ ಅಖಿಲೇಶ್ ಸೇರಿದಂತೆ ಒಟ್ಟು 2 ಫಲಾನುಭವಿಗಳಿಗೆ ಶ್ರವಣ ಸಾಧನವನ್ನು ವಿತರಿಸಲಾಯಿತು.



ಕೋಟ ಇಲ್ಲಿನ ಸಾಲಿಗ್ರಾಮ ಪಟ್ಟಣಪಂಚಾಯತ್‌ನ ಘನತ್ಯಾಜ್ಯ ನಿರ್ವಹಣಾ ಘಟಕಕ್ಕೆ ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಭೇಟಿ ನೀಡಿ ಪರಿಶೀಲಿಸಿದರು. ಪಟ್ಟಣಪಂಚಾಯತ್ ಮುಖ್ಯಾಧಿಕಾರಿ ಅಜೇಯ್ ಭಂಡಾರ್ಕರ್ ಅವರು ಘಟಕದ ಕಾರ್ಯ ನಿರ್ವಹಣೆ ಬಗ್ಗೆ ಮಾಹಿತಿ ಒದಗಿಸಿದರು. ಮಾಜಿ ಕೌನ್ಸಿಲರ್‌ಗಳು ಮತ್ತು ಅಧಿಕಾರಿ ವರ್ಗ ಸಿಬ್ಬಂದಿಗಳು ಈ ಸಂದರ್ಭ ಉಪಸ್ಥಿತರಿದ್ದರು.

ರಾಜಪುರ ಸಾರಸ್ವತ ಕೋ ಆಪರೇಟಿವ್ ಸೊಸೈಟಿಗೆ ಸಹಕಾರ ಭಾರತಿ ಸಂಘಟನಾ ಕಾರ್ಯದರ್ಶಿ ಪಾಚ್ಪೋರೆ ಭೇಟಿ

ಪ್ರಾಮಾಣಿಕ ಸೇವೆಯಿಂದ ಸಹಕಾರಿ ಕ್ಷೇತ್ರದಲ್ಲಿ ಶುದ್ಧತೆ, ಬದ್ಧತೆ, ಆಧುನಿಕತೆಗೆ ಬಲ

ಕಾರ್ಕಳ: ಕಾರ್ಕಳದ ಪ್ರತಿಷ್ಠಿತ ರಾಜಪುರ ಸಾರಸ್ವತ ಕೋ ಆಪರೇಟಿವ್ ಸೊಸೈಟಿಗೆ ಸೋಮವಾರ ಭೇಟಿ ನೀಡಿದ ಸಹಕಾರ ಭಾರತಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂಜಯ ಪಾಚ್ಪೋರೆ ಅವರನ್ನು ಸಂಘದ ಸಭಾಂಗಣದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಬಳಿಕ ಅವರು ಸಂಸ್ಥೆಯ 'ಸಹಕಾರ ಸಿಂಧೂರ ಕಟ್ಟಡ'ದ ಆಧುನಿಕ ವ್ಯವಸ್ಥೆಗಳನ್ನು ವೀಕ್ಷಿಸಿ ಸಂಜಯ ಪಾಚ್ಪೋರೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಸಂದರ್ಭ ಶೀಘ್ರದಲ್ಲೇ ಕಟ್ಟಡದಲ್ಲಿ ಪ್ರಾರಂಭಗೊಳ್ಳಲಿರುವ ಮಲ್ಟಿಪ್ಲೆಕ್ಸ್ ಥಿಯೇಟರ್‌ನಲ್ಲಿ ಹಿಂದಿ ಸಿನಿಮಾ 'ದುರಂಧರ್' ವೀಕ್ಷಿಸಿದರು.



ಬಳಿಕ ಮಾತನಾಡಿದ ಅವರು, ಸಹಕಾರಿ ಕ್ಷೇತ್ರಕ್ಕೆ ಸಂಸ್ಕಾರಯುತ, ಪ್ರಾಮಾಣಿಕ ವ್ಯಕ್ತಿಗಳು ಹೆಚ್ಚು ತೊಡಗಿಕೊಂಡಾಗ, ಸಹಕಾರಿ ಕ್ಷೇತ್ರದ ಶುದ್ಧತೆ ಬದ್ಧತೆ ಮತ್ತು ಆಧುನಿಕತೆಗೆ ಹೆಚ್ಚಿನ ಬಲ ಸಿಕ್ಕಂತಾಗುತ್ತದೆ ಎಂದು ಸಂಜಯ ಪಾಚ್ಪೋರೆ ಹೇಳಿದರು.

ಸಂಸ್ಥೆಯ ಅಧ್ಯಕ್ಷ ಕಡಾರಿ ರವೀಂದ್ರ ಪ್ರಭು ಉಪಸ್ಥಿತರಿದ್ದರು. ಸಹಕಾರ ಭಾರತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಾಣೂರು ನರಸಿಂಹ ಕಾಮತ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಉಡುಪಿ ಜಿಲ್ಲಾಧ್ಯಕ್ಷ ಆತ್ರಾಡಿ ದಿನೇಶ್ ಹೆಗ್ಡೆ, ರಾಜ್ಯ ಹಾಲು ಪ್ರಕೋಷ್ಠದ ಸಂಚಾಲಕ ಬೋಳ ಸದಾಶಿವ ಶೆಟ್ಟಿ, ರಾಜ್ಯ ಮಹಿಳಾ ಪ್ರಮುಖ್ ವಿದ್ಯಾ ಪೈ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕುಕ್ಕೆಹಳ್ಳಿ ಸುದೇಶ್ ನಾಯಕ್, ಸಂಘಟನಾ ಕಾರ್ಯದರ್ಶಿ, ವಿಜೇತ ನಾಯಕ್ ಬೆಳ್ಳಿರ್ಪಾಡಿ, ಸರ್ಕಾರ ಭಾರತೀಯ ಜಿಲ್ಲೆ ಮತ್ತು ತಾಲೂಕು ಪದಾಧಿಕಾರಿಗಳು,ಉಡುಪಿ ಜಿಲ್ಲೆಯ ವಿವಿಧ ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಸಿಬ್ಬಂದಿಗಳು ಇದ್ದರು. ಸಹಕಾರ ಭಾರತಿಯ ಕಾರ್ಕಳ ತಾಲೂಕು ಅಧ್ಯಕ್ಷರು ಹಾಗೂ ರಾಜಾಪುರ ಸರಸ್ವತ ಸಹಕಾರಿ ಸಂಸ್ಥೆಯ ಉಪಾಧ್ಯಕ್ಷ ನೀರೆ ರವೀಂದ್ರ ನಾಯಕ್ ನಿರೂಪಿಸಿ, ವಂದಿಸಿದರು.

> **ಆಂದೋಲನ**
>
> ದೇಶದ ಎಲ್ಲಾ ರಾಜ್ಯಗಳಲ್ಲಿ ಸಕ್ರಿಯ ರಾಜ್ಯ ಘಟಕ ಜೊತೆಗೆ ದೇಶಾದ್ಯಂತ 700ಕ್ಕೂ ಹೆಚ್ಚಿನ ಜಿಲ್ಲೆಗಳಲ್ಲಿ ಸಹಕಾರ ಭಾರತಿ ಸಂಘಟನೆ ಬಲವಾಗಿ ವಿಸ್ತರಣೆಗೊಳ್ಳುತ್ತಿದೆ. ಮುಂದೆ ಕೇಂದ್ರ ಸರಕಾರದ ನೂತನ ಸಹಕಾರ ನೀತಿ, ಕಾಯ್ದೆ ಅನುಗುಣವಾಗಿ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳುವುದರ ಜೊತೆಗೆ, ಸಹಕಾರಿ ವ್ಯವಸ್ಥೆಯ ಲೋಪ ಸರಿಪಡಿಸಲು ಸಹಕಾರಿ ಆಂದೋಲನ ರೂಪಿಸಲಾಗುವುದು.
>
> • ಸಂಜಯ ಪಾಚ್ಪೋರೆ